ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ಮೇ

2013

ಸಂಪರ್ಕಿಸಿ: KARUNADUEXAMS.COM

## ರಾಜ್ಯ

**"ವಿಶ್ವ ಪರಂಪರಿಕ ತಾಣ ಹಂಪಿ"ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ : ಯುನೆಸ್ಕೋ**

ವಿಶ್ವ ಪರಂಪರಿಕ ತಾಣವಾದ ವಿಜಯ ನಗರ ಸಾಮ್ರಾಜ್ಯದ ರಾಜಧಾನಿ "ಹಂಪಿ" ಸಂರಕ್ಷಣೆಯಲ್ಲಿ ಸರ್ಕಾರ ನಿರ್ಲಕ್ಯ ತೋರಿದೆ ಎಂದು ಯುನೆಸ್ಕೋ ಹೇಳಿದೆ. ಹಂಪಿ ನಿರ್ವಹಣೆ ಬಗ್ಗೆ "ವಿಶ್ವ ಪರಂಪರೆ ಸಮಿತಿ" ಸೂಕ್ಷ್ಮವಾಗಿ ಗಮನಿಸಿದ್ದು, 2005 ರಲ್ಲಿ ಪ್ರಾರಂಭಿಸಲಾದ "ಹಂಪಿ ನಿರ್ವಹಣೆ ಯೋಜನೆ"ಯ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬಕ್ಕೆ ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

- ವಿಶ್ವ ಪರಂಪರೆಯ ತಾಣ ಎನಿಸಿರುವ ಹಂಪಿಯ ಸೂಕ್ತ ನಿರ್ವಹಣೆಗೆ ಸರ್ಕಾರ ಅಲ್ಲಿನ ಸ್ಥಳೀಯರೊಂದಿಗೆ ಕೈಜೋಡಿಸುವಂತೆ ಸಮಿತಿ ಸೂಚಿಸಿದೆ.
- ವಿಜಯನಗರ ಸಾಮ್ರಾಜ್ಯ ವೈಭವದ ಮೆರಗನ್ನು ಬಿಂಬಿಸುತ್ತಿರುವ "ಹಂಪಿ"ಯನ್ನು 1986 ರಲ್ಲಿ ಯುನೆಸ್ಕೊದ "ವಿಶ್ವ ಪರಂಪರಿಕ ತಾಣ" ಪಟ್ಟಿಯಲ್ಲಿ ಸೇರಿಸಲಾಯಿತು. ಕರ್ನಾಟಕದದಿಂದ ವಿಶ್ವ ಪರಂಪರಿಕ ತಾಣಕ್ಕೆ ಸೇರ್ಪಡೆಗೊಂಡ ಸ್ಥಳ "ಹಂಪಿ" ಎಂಬುದು ವಿಶೇಷ.
- "ಹಂಪಿ"ಯ ಸಂರಕ್ಷಣೆಗೆ ಯುನೆಸ್ಕೊ ಇದುವರೆಗೂ 1,00,000 ಡಾಲರ್ ನ್ನು ವ್ಯಹಿಸಿದೆ.
- ಹಂಪಿಯಲ್ಲಿನ ಸ್ಮಾರಕಗಳ ಕಳಪೆ ನಿರ್ವಹಣೆ, ಸಂಚಾರ ನಿಯಮದ ಕೊರತೆ ಮತ್ತು ಸೇತುವೆಗಳ ನಿರ್ಮಾಣ ಬಗ್ಗೆ ಆಕ್ಷೇಪಗಳ ಕೂಗು ಕೇಳಿ ಬಂದ ಕಾರಣ ಈ ಐತಿಹಾಸಿಕ ಪ್ರದೇಶವನ್ನು ಯುನೆಸ್ಕೊ 1999 ರಲ್ಲಿ "ಅಳಿವಿನಂಚಿನ ಪಟ್ಟಿ"ಗೆ ಸೇರಿಸಿತು. ಅಲ್ಲಿಂದೀಚೆಗೆ ಯುನೆಸ್ಕೊ ತಂಡ ಹಂಪಿಯ ಸಂರಕ್ಷಣಾ ಕ್ರಮಗಳ ಬಗ್ಗೆ ನಿಯಮಿತವಾಗಿ ವಿಮರ್ಶಿಸುತ್ತಾ ಬಂದಿದೆ.

**ರಾಜ್ಯದ 22 ನೇ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕಾರ**

ಕರ್ನಾಟಕ 22 ನೇ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಪಕ್ಷದ ದುರೀಣ ಸಿದ್ದರಾಮಯ್ಯ ನವರು ರಾಜ್ಯಪಾಲ ಭಾರಧ್ವಜ್ ರವರಿಂದ ಪ್ರಮಾಣ ವಚನ ಸ್ವೀಕರಿಸಿದರು. ಈ ಸಂಭ್ರಮದ ಕ್ಷಣಕ್ಕೆ ನಾಡಿನ ಪ್ರಮುಖ ಗಣ್ಯರು ಸೇರಿದಂತೆ ಅಪಾರ ಸಂಖ್ಯೆ ಅಭಿಮಾನ ಬಳಗ ಸಾಕ್ಷಿಯಾಯಿತು. 35 ವರ್ಷಗಳ ರಾಜಕೀಯ ಜೀವನದಲ್ಲಿ ಅನೇಕ ಏಳು ಬೀಳುಗಳನ್ನು ಕಂಡಿರುವ ಸಿದ್ದರಾಮಯ್ಯನವರು, ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೂಲಕ ತಮ್ಮ ಬಹುದಿನದ ಕನಸನ್ನು ನನಸು ಮಾಡಿಕೊಂಡಿದ್ದಾರೆ.

ಸಿದ್ದರಾಮಯ್ಯರವರ ರಾಜಕೀಯ ಜೀವನ:

- ಸಿದ್ದರಾಮಯ್ಯನವರು ಮೈಸೂರಿನ ಸಿದ್ದರಾಮನಹುಂಡಿ ಎಂಬ ಹಳ್ಳಿಯವರು. ಮೈಸೂರಿನಲ್ಲೇ ಶಿಕ್ಷಣ ಪಡೆದು ಅಲ್ಲಿಯೇ ವಕೀಲ ವೃತ್ತಿಯನ್ನು ಆರಂಭಿಸಿದರು.
- 1978 ರಲ್ಲಿ ಮೈಸೂರು ತಾಲ್ಲೂಕ್ ಬೋರ್ಡ್ ನ ಸದಸ್ಯರಾಗಿ ರಾಜಕೀಯ ವೃತ್ತಿಗೆ ಪಾದಾರ್ಪಣೆ.
- 1983 ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ "ಭಾರತೀಯ ಲೋಕದಳ ಪಕ್ಷ"ದಿಂದ ಗೆಲುವು.
- 1985 ರಲ್ಲಿ ಜನತಾ ಪಕ್ಷದಿಂದ ಗೆಲುವು, ರಾಮಕೃಷ್ಣ ಹೆಗ್ಗಡೆ ಸಚಿವ ಸಂಪುಟದಲ್ಲಿ "ಪಶುಸಂಗೋಪನಾ ಸಚಿವರಾಗಿ ಸೇವೆ".

- 1989 ರಲ್ಲಿ ಸೋಲು ಕಂಡು ಮತ್ತೆ 1994 ರಲ್ಲಿ ಪುನರ್ ಆಯ್ಕೆ.
- ಮತ್ತೇ 1994 ರಲ್ಲಿ ಸೋಲು ಆದರೆ 2004 ರಲ್ಲಿ ಚುನಾವಣೆಯಲ್ಲಿ ಗೆಲುವು. ಆಗ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಸಮ್ಮಿಶ್ರ ಸರ್ಕಾರವಾದ ಧರ್ಮಸಿಂಗ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹುದ್ದೆಗೆ ಆಯ್ಕೆ.
- ಜೆಡಿಎಸ್ ರಾಷ್ಟ್ರಧ್ಯಕ್ಷ ಎಚ್.ಡಿ.ದೇವೆಗೌಡ ಮತ್ತು ಸಿದ್ದರಾಮಯ್ಯ ರವರ ನಡುವೆ ರಾಜಕೀಯ ವಿರಸ. ಜೆಡಿಎಸ್ ನಿಂದ ಉಚ್ಛಾಟನೆ. ಆನಂತರ ಕಾಂಗ್ರೆಸ್ ಸೇರ್ಪಡೆ.
- ಒಟ್ಟು ಏಳು ಬಾರಿ ರಾಜ್ಯ ಬಜೆಟ್ ಮಂಡಿಸಿದ ಕೀರ್ತಿ ಸಿದ್ದರಾಮಯ್ಯರವರದು.

ಖಾತೆ ತೆರೆದ ಸಿದ್ದು:

- ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಸಿದ್ದರಾಮಯ್ಯರವರು ಕಾಂಗ್ರೆಸ್ ಪಕ್ಷ ಚುನಾವಣೆ ವೇಳೆ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವ ಪ್ರಯತ್ನ ಮಾಡಿದರು.
- ಬಿಪಿಎಲ್ ಕಾರ್ಡದಾರರಿಗೆ ರೂ.1 ರಂತೆ 30 ಕೆ.ಜಿ ಅಕ್ಕಿ, ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನ 4 ಕ್ಕೆ ಏರಿಕೆ, ವಸತಿ ಯೋಜನೆಗಳ ಸಹಾಯಧನದಲ್ಲಿ ಹೆಚ್ಚಳ, ಪರಿಷ್ಟಿಟ ಜಾತಿ, ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಬಡ್ಡಿ ಮನ್ನಾದಂತಹ ಯೋಜನೆಗಳನ್ನು ಘೋಷಿಸಿದರು.

**ಜುಲೈ ನಿಂದ ಬ್ಯಾಟರಿ ಚಾಲಿತ "ಬಿಎಂಟಿಸಿ" ಬಸ್ಸುಗಳು**

ಏರುತ್ತಿರುವ ಇಂಧನ ದರ ಮತ್ತು ಚಿಂತೆಗೀಡುಮಾಡಿರುವ ಪರಿಸರ ಮಾಲಿನ್ಯದಿಂದ ಹೊರಬರಲು "ಬೆಂಗಳೂರು ಮಹಾನಗರ ಪಾಲಿಕೆ ಸಾರಿಗೆ ಸಂಸ್ಥೆ (ಬಿಎಂಟಿಸಿ)" ಬ್ಯಾಟರಿ ಚಾಲಿತ ಬಸ್ಸುಗಳನ್ನು ರಸ್ತೆಗಿಳಿಸಲು ಸಜ್ಜಾಗಿದೆ. ಈ ಸಂಬಂಧ ಬಿಎಂಟಿಸಿ ಖಾಸಗಿ ಸಂಸ್ಥೆಯೊಂದರ ಜೊತೆ ಒಪ್ಪಂದವನ್ನು ಮಾಡಿಕೊಂಡಿದೆ.

- ಇದೇ ಜುಲೈ 2013 ರಿಂದ "ಬ್ಯಾಟರಿ ಚಾಲಿತ ಬಸ್ಸ್ ಗಳು" ಬೆಂಗಳೂರಿನ ಶಾಂತಿ ನಗರ ಡಿಪೋ ನಿಂದ ಮೂರು ತಿಂಗಳ ಕಾಲ ಪ್ರಾಯೋಗಿಕ ಸಂಚಾರ ಆರಂಭಿಸಲಿವೆ.
- ಬ್ಯಾಟರಿ ಚಾಲಿತ ಬಸ್ಸ್ ಗಳನ್ನು ರಸ್ತೆಗಳಿಸುವ ಸಲುವಾಗಿ "ಬಿಎಂಟಿಸಿ"ಯು "ಯುತೋಫಿಯಾ ಆಟೋಮೆಷನ್ ಅಂಡ್ ಕಂಟ್ರೋಲ್" ಎಂಬ ಖಾಸಗಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.
- ಒಪ್ಪಂದದ ಪ್ರಕಾರ K-9 ಹೆಸರಿನ ಬ್ಯಾಟರಿ ಚಾಲಿತ ಬಸ್ಸ್ ಗಳು ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಸಂಚರಿಸಲಿವೆ. ಈ ಬಸ್ಸ್ ಗಳ ಬೆಲೆ ಸುಮಾರು 2 ಕೋಟಿ ಎಂದು ಹೇಳಲಾಗಿದೆ.
- K-9 ಬಸ್ಸ್ ಗಳ ಬ್ಯಾಟರಿಯನ್ನು ಒಮ್ಮೆ ಚಾರ್ಜ್ ಮಾಡಿದರೆ ಸುಮಾರು 250 ಕಿ.ಮೀ ತನಕ ಸಂಚಾರ ಮಾಡಬಹುದಾಗಿದೆ. ಬ್ಯಾಟರಿಯನ್ನು ಚಾರ್ಜ್ ಮಾಡಲು 3 ರಿಂದ 6 ಗಂಟೆ ಬೇಕು. 33+1 ಆಸನಗಳ ಸಾಮರ್ಥ್ಯವಿರುವ ಈ ಬಸ್ಸ್ ಗಳು 90 ಕಿ.ಮೀ/ಗಂಟೆ ವೇಗದಲ್ಲಿ ಚಲಿಸಲಿವೆ.
- ಈಗಾಗಲೇ ಚೀನಾ, ಆಸ್ಟ್ರೇಲಿಯಾ, ನೆದರ್ ಲ್ಯಾಂಡ್ ನಲ್ಲಿ ಈ ಮಾದರಿಯ ಬಸ್ಸ್ ಗಳು ಸೇವೆಯನ್ನು ನೀಡುತ್ತಿದ್ದು, ಬೆಂಗಳೂರಿನಲ್ಲೂ ಯಶಸ್ವಿಯಾಗಲಿವೆ ಎಂಬ ವಿಶ್ವಾಸವನ್ನು ಬಿಎಂಟಿಸಿ ಹೊಂದಿದೆ.

**ಕರ್ನಾಟಕ ರಾಜ್ಯದ ಜನಸಂಖ್ಯೆ 6.10 ಕೋಟಿ**

2011 ರಲ್ಲಿ ನಡೆದ ಜನಗಣತಿಯ ಅಂತಿಮ ಅಂಕಿ ಅಂಶಗಳನ್ನು ರಾಜ್ಯ ಜನಗಣತಿ ನಿರ್ವಹಣಾ ನಿರ್ದೇಶಕ ಅನಿಲ್ ಕುಮಾರ್ ರವರು ಇತ್ತೀಚೆಗೆ ಬಿಡುಗಡೆಗೊಳಿಸಿದ್ದು, ರಾಜ್ಯದ ಜನಸಂಖ್ಯೆ ಈಗ 6.10 ಕೋಟಿ. ರಾಜ್ಯದಲ್ಲಿ ಅತ್ಯಧಿಕ ಜನಸಂಖ್ಯೆಯನ್ನು ಹೊಂದಿರುವ ನಗರಗಳಲ್ಲಿ ರಾಜಧಾನಿ ಬೆಂಗಳೂರಿನದ್ದೇ ಸಿಂಹಪಾಲು. 2011 ರ ಜನಗಣತಿಯ ಮುಖ್ಯ ಮಾಹಿತಿ ಇಲ್ಲಿದೆ.

- 2011 ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ 6,10,95,297 ರಷ್ಟಿದೆ. ಇದರಲ್ಲಿ 3,09,65,657 ಪುರುಷರು ಮತ್ತು 3,01,28,640 ಮಹಿಳೆಯರಿದ್ದಾರೆ. ದಶಕದ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ದರ ಶೇ 15.60 ರಷ್ಟು ಕಂಡು ಬಂದಿದೆ.
- 96.21 ಲಕ್ಷ ಜನಸಂಖ್ಯೆಯನ್ನು ಹೊಂದುವ ಮೂಲಕ ಬೆಂಗಳೂರು ರಾಜ್ಯದಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಜತೆಗೆ ಜನ ಸಾಂದ್ರತೆಯಲ್ಲೂ ಮುಂದಿದೆ. ಬೆಂಗಳೂರಿನಲ್ಲಿ ಜನಸಾಂದ್ರತೆ ಪ್ರಮಾಣ 4,381 ಇದೆ. ಜನಸಾಂದ್ರತೆಯಲ್ಲಿ ಕೊಡಗು (135) ಕೊನೆಯ ಸ್ಥಾನದಲ್ಲಿದೆ.
- ರಾಜ್ಯದ ಸರಾಸರಿ ಜನಸಾಂದ್ರತೆ 319 ಇದೆ. 2001 ರಲ್ಲಿ 276 ದಾಖಲಾಗಿತ್ತು.
- ಗ್ರಾಮೀಣ ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ದರ ಶೇ 7.40 ಇದ್ದರೆ, ನಗರ ಪ್ರದೇಶದಲ್ಲಿ ಶೇ 31.54 ರಷ್ಟಿದೆ.

**"ಲಿಂಗಾನುಪಾತ (Sex Ratio)":**

- 2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಪ್ರತಿ 1000 ಪುರುಷರಿಗೆ 973 ಮಹಿಳೆಯರಿದ್ದಾರೆ. ಈ ಅನುಪಾತ 2001 ರಲ್ಲಿ 965 ಇತ್ತು. ಲಿಂಗಾನುಪಾತದಲ್ಲಿ ಸ್ವಲ್ಪ ಏರಿಕೆ ಕಂಡು ಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಲಿಂಗಾನುಪಾತ 979 ಇದ್ದರೆ, ನಗರ ಪ್ರದೇಶದಲ್ಲಿ 963 ಇದೆ.
- ಲಿಂಗಾನುಪಾತದಲ್ಲಿ ಉಡುಪಿ ಮೊದಲ ಸ್ಥಾನದಲ್ಲಿದೆ. ಉಡುಪಿಯಲ್ಲಿ ಪ್ರತಿ ಸಾವಿರ ಪುರುಷರಿಗೆ 1,094 ಮಹಿಳೆಯರಿದ್ದಾರೆ. ಆದರೆ 2001 ಜನಗಣತಿಗೆ ಹೋಲಿಸಿದರೆ ಈ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇನ್ನು ಲಿಂಗಾನುಪಾತದಲ್ಲಿ ಬೆಂಗಳೂರು ಕೊನೆ ಸ್ಥಾನದಲ್ಲಿದೆ. ಬೆಂಗಳೂರಿನಲ್ಲಿ ಪ್ರತಿ 1000 ಪುರುಷರಿಗೆ 916 ಮಹಿಳೆಯರಿದ್ದಾರೆ.

**"ಮಕ್ಕಳ ಲಿಂಗಾನುಪಾತ":**

- 2011 ರ ಜನಗಣತಿಯಂತೆ ರಾಜ್ಯ ಮಕ್ಕಳ ಲಿಂಗಾನುಪಾತದಲ್ಲಿ ಎರಡು ಅಂಕಗಳಷ್ಟು ಏರಿಕೆಯಾಗಿದೆ. ರಾಜ್ಯದಲ್ಲಿ ಪ್ರತಿ 1000 ಗಂಡು ಮಕ್ಕಳಿಗೆ 948 ಹೆಣ್ಣು ಮಕ್ಕಳಿದ್ದಾರೆ. ಮಕ್ಕಳ ಲಿಂಗಾನುಪಾತದಲ್ಲಿ ಕೊಡಗು (978) ಪ್ರಥಮ ಸ್ಥಾನದಲ್ಲಿದೆ. ವಿಜಾಪುರ (931) ಕೊನೆಯ ಸ್ಥಾನದಲ್ಲಿದೆ. ರಾಜ್ಯದ 20 ಜಿಲ್ಲೆಯಲ್ಲಿ ಮಕ್ಕಳ ಲಿಂಗಾನುಪಾತದಲ್ಲಿ ಏರಿಕೆಯಾಗಿದ್ದಾರೆ, 9 ಜಿಲ್ಲೆಗಳಲ್ಲಿ ಇಳಿಕೆಯಾಗಿದೆ. ಉಡುಪಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

**"ಸಾಕ್ಷರತೆ ಪ್ರಮಾಣ (Literacy Rate)":**

- ಸಾಕ್ಷರತೆ ಪ್ರಮಾಣದಲ್ಲಿ ಕಳೆದ ಜನಗಣತಿಗೆ ಹೋಲಿಸಿದರೆ ಶೇ 8.8 ರಷ್ಟು ಪ್ರಗತಿ ಸಾಧಿಸಲಾಗಿದೆ. ರಾಜ್ಯದ ಸಾಕ್ಷರತಾ ಪ್ರಮಾಣ ಶೇ 75.4 ರಷ್ಟಿದೆ. 2001 ರಲ್ಲಿ ಶೇ 66.6 ಆಗಿತ್ತು.
- ಪುರುಷರ ಸಾಕ್ಷರತಾ ಪ್ರಮಾಣ ಶೇ 82.5 ರಷ್ಟಿದ್ದರೆ, ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ 68.1 ರಷ್ಟಿದೆ.

- ಸಾಕ್ಷರತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೊದಲ ಸ್ಥಾನದಲ್ಲಿದೆ (ಶೇ 88.57). ಯಾದಗಿರಿ ಶೇ 51.83 ಸಾಕ್ಷರತೆ ಸಾಧಿಸುವ ಮೂಲಕ ಕೊನೆಯ ಸ್ಥಾನದಲ್ಲಿದೆ.

**ಇತರೆ:**

- ದುಡಿಯುವ ವರ್ಗದಲ್ಲಿ ಶೇ 23.6 ರಷ್ಟು ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಸನ ಜಿಲ್ಲೆ ಅತಿ ಹೆಚ್ಚು ಕೃಷಿ ಕಾರ್ಮಿಕರನ್ನು ಹೊಂದಿದ್ದರೆ, ಬೆಂಗಳೂರು ಕೊನೆಯ ಸ್ಥಾನದಲ್ಲಿದೆ.
- ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯಲ್ಲಿ ಶೇ 22.66 ರಷ್ಟು ಹೆಚ್ಚಳವಾಗಿದೆ.

ಕರುನಾಡು ಎಗ್ಸಾಮ್ಸ್

## ರಾಷ್ಟ್ರೀಯ

**ರಾಮಸೇತುವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿಸಿ: ಸುಪ್ರೀಂ ಗೆ ತಮಿಳುನಾಡು ಮನವಿ**

ವಿವಾದಿತ ಸೇತುಸಮುದ್ರಂ ಯೋಜನೆಯನ್ನು ಕೈಬಿಟ್ಟು, ರಾಮಸೇತು ಪ್ರದೇಶವನ್ನು "ರಾಷ್ಟ್ರೀಯ ಸ್ಮಾರಕ" ವನ್ನಾಗಿ ಘೋಷಿಸುವಂತೆ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಗೆ ಮನವಿ ಮಾಡಿದೆ. ಈ ಯೋಜನೆಯಲ್ಲಿ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿದೇ ಎಂದು ತಮಿಳುನಾಡು ತನ್ನ ವರದಿಯಲ್ಲಿ ತಿಳಿಸಿದೆ. ಆದರೆ ಮನವಿಯನ್ನು ಆಲಿಸಿದ ನ್ಯಾ.ಎಚ್.ಎಲ್. ದತ್ತು ರವರನ್ನು ಒಳಗೊಂಡ ಪೀಠ ವಿಚಾರಣೆಯನ್ನು ಆಗಸ್ಟ್ ತಿಂಗಳಿಗೆ ಮುಂದೂಡಿದೆ.

**ರಾಮಸೇತು:**

- ರಾಮಸೇತು, ಆಡಂಬ್ರಿಡ್ಜ್ ಅಥವಾ ರಾಮ ಬ್ರಿಡ್ಜ್ ಎಂದು ಕರೆಯಲಾಗುವ ಈ ಸೇತುವೆಯೂ ತಮಿಳುನಾಡಿನ ದಕ್ಷಿಣ ಪೂರ್ವ ಕರಾವಳಿ ತೀರಾ ಪ್ರದೇಶದಲ್ಲಿರುವ **"ಪಂಬನ್ ದ್ವೀಪ (ರಾಮೇಶ್ವರಂ ದ್ವೀಪ) ಮತ್ತು ಮನ್ನಾರ್ ದ್ವೀಪ"** ಪ್ರದೇಶಗಳ ನಡುವೆ ನೆಲೆಗೊಂಡಿದೆ. ಹಿಂದೂ ಪುರಾಣದ ಪ್ರಕಾರ ಈ ಸೇತುವೆಯನ್ನು ಹಿಂದೂಗಳ ಆರಾಧ ದೈವ ಶ್ರೀರಾಮನು ತನ್ನ ವಾನರ ಸೇನೆಯ ನೆರವಿನಿಂದ ಕಟ್ಟಿದನು ಎಂಬ ಪ್ರತೀತಿ ಇದೆ. ಆದರೆ ಇದನ್ನು ಬೆಂಬಲಿಸಲು ಸಾಕಷ್ಟು ಪುರಾವೆಗಳು ಇಲ್ಲ.
- ಸುಣ್ಣದ ಕಲ್ಲುಗಳಿಂದ ರಚನೆಗೊಂಡಿರುವ ಈ ಸೇತುವೆಯೂ 30 ಕಿ.ಮೀ ಉದ್ದವಿದ್ದೂ, **"ಗಲ್ಫ್ ಆಫ್ ಮನ್ನಾರ್ ಮತ್ತು ಪಾಕ್ ಕೊಲ್ಲಿ" ಗಳನ್ನು ಬೇರ್ಪಡಿಸಿದೆ.** ಈ ಭಾಗದಲ್ಲಿ ಸಮುದ್ರ ಆಳ ಸರಾಸರಿ 30 ಅಡಿಗಳಿಷ್ಟು ಇರುವ ಕಾರಣ ಈ ಪ್ರದೇಶದಲ್ಲಿ ಹಡಗು ಸಂಚಾರ ಕಷ್ಟ.

**ಸೇತುಸಮುದ್ರಂ ಯೋಜನೆ:**

- ಭಾರತ - ಶ್ರೀಲಂಕಾ ದೇಶಗಳ ನಡುವೆ ಇರುವ "ಗಲ್ಫ್ ಆಫ್ ಮನ್ನಾರ್" ಮತ್ತು "ಪಾಕ್ ಕೊಲ್ಲಿ"ಗಳ ನಡುವೆ ಹಡಗು ಸಂಚಾರ ಮಾರ್ಗವನ್ನು ನಿರ್ಮಿಸಿ ಈ ಎರಡು ಪ್ರದೇಶಗಳನ್ನು ಸಂಪರ್ಕಿಸಲು ಕೇಂದ್ರ ಸರ್ಕಾರ ಕೈಗೆತ್ತಿಕೊಂಡಿರುವ ಯೋಜನೆಯೇ ಸೇತು ಸಮುದ್ರಂ. ಈ ಯೋಜನೆ ಪ್ರಾರಂಭವಾಗಿ ಅನೇಕ ವರ್ಷಗಳು ಕಳೆದಿವೆ. ಆದರೆ ಒಂದಲ್ಲ ಒಂದು ವಿವಾದದಿಂದ ನೆನೆಗುದಿಗೆ ಬಿದ್ದಿರುವುದು ವಿಪರ್ಯಾಸ.
- ಈ ಯೋಜನೆಯಡಿ ಸುಮಾರು 83 ಕಿ.ಮೀ ಉದ್ದದ ಹಡಗು ಸಂಚಾರ ಮಾರ್ಗವನ್ನು ಸಮುದ್ರದ ಆಳದಲ್ಲಿ ನಿರ್ಮಿಸುವುದಾಗಿದೆ. ಯೋಜನೆಯ ಈ ಉದ್ದೇಶ ಈಡೇರಬೇಕೆಂದರೆ "ರಾಮಸೇತು" ವನ್ನು ಧ್ವಂಸ ಮಾಡಲೇಬೇಕು. ರಾಮಸೇತುವನ್ನು ಒಡೆಯುವ ಸರ್ಕಾರದ ನಿರ್ಧಾರವೇ ಈಗ ವಿವಾದಕ್ಕೆ ಎಡೆಮಾಡಿಕೊಟ್ಟಿರುವುದು.

**ಯೋಜನೆಯ ಅನುಕೂಲಗಳೇನು?**

- ಈ ಯೋಜನೆ ಕಾರ್ಯಗತವಾದರೆ, ಭಾರತ ಮತ್ತು ಇತರೆ ದೇಶಗಳ ನಡುವೆ ಸಂಚಾರ ನಡೆಸುತ್ತಿರುವ ಹಡುಗಗಳ ಸಂಚರಿಸುವ ದೂರ ಸಾಕಷ್ಟು ಕಡಿಮೆಯಾಗಲಿದೆ. ಇದರಿಂದ ಪ್ರಯಾಣದ ಅವಧಿ ಮತ್ತು ಸರಕು ಸಾಗಣೆಕೆಗೆ ತಗಲುವ ವೆಚ್ಚದಲ್ಲಿ ಸಾಕಷ್ಟು ಉಳಿತಾಯವಾಗಲಿದೆ. ಸದ್ಯ ಪರಿಸ್ಥಿತಿಯಲ್ಲಿ ಈ ಪ್ರದೇಶದಲ್ಲಿ ಸಮುದ್ರ ಆಳ ಕಡಿಮೆ ಇರುವ ಕಾರಣ ಹಡಗು ಸಂಚಾರಕ್ಕೆ ಯೋಗ್ಯವಾಗಿಲ್ಲ. ಆದ್ದರಿಂದ ಹಡಗುಗಳು ಈ ಪ್ರದೇಶವನ್ನು ಸುತ್ತುಹಾಕಿ ಸಂಚರಿಸುವುದರಿಂದ ಅನಗತ್ಯವಾಗಿ ವಿಳಂಬವಾಗುತ್ತಿದೆ. ಜತೆಗೆ ಸಂಚಾರ ನಿರ್ವಹಣೆ ವೆಚ್ಚ ಕೂಡ ಜಾಸ್ತಿ.

- ಸೇತು ಸಮುದ್ರಂ ಯೋಜನೆ ಪೂರ್ಣಗೊಂಡರೆ ಸುಮಾರು 630 ಕಿ.ಮೀಯಷ್ಟು ಹಡಗು ಸಂಚಾರ ಕಡಿಮೆಯಾಗಲಿದೆ.

**ಪಚೌರಿ ಸಮಿತಿ:**

- ಸೇತುಸಮುದ್ರಂ ಯೋಜನೆ ನಿರ್ಮಾಣಕ್ಕೆ ಹಲವು ವರ್ಗಗಳಿಂದ ವ್ಯಾಪಕ ವಿರೋಧ ವ್ಯಕ್ತವಾದ ಕಾರಣ ಪ್ರಧಾನಿ ಮನಮೋಹನ್ ಸಿಂಗ್ ರವರು 2008 ರಲ್ಲಿ ಆರ್.ಕೆ.ಪಚೌರಿ ನೇತೃತ್ವದಲ್ಲಿ ಆರು ಜನ ಸದಸ್ಯರ ಸಮಿತಿಯನ್ನು ನೇಮಿಸಿದರು. ರಾಮಸೇತುಗೆ ಚ್ಯುತಿ ಬಾರದೇ ಪರ್ಯಾಯ ಮಾರ್ಗದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಲು ಸಮಿತಿಗೆ ಸೂಚಿಸಲಾಗಿತ್ತು.
- ಆರ್.ಕೆ.ಪಚೌರಿ ಸಮಿತಿಯೂ 2013 ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ಯೋಜನೆಯೂ ಆರ್ಥಿಕವಾಗಿ ಮತ್ತು ಸಾಗರ ಜೀವವೈವಿಧ್ಯತೆಯ ದೃಷ್ಟಿಯಿಂದ ಕಾರ್ಯಸಾಧುವಲ್ಲ ಎಂದು ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಿತ್ತು.

**ತಮಿಳುನಾಡಿನ ನಿಲುವೇನು?**

- ತಮಿಳುನಾಡು ರಾಜ್ಯ ಸರ್ಕಾರ ಆರ್.ಕೆ.ಪಚೌರಿ ಸಮಿತಿಯ ವರದಿಯನ್ನು ಬೆಂಬಲಿಸುತ್ತಿದೆ. ಪ್ರಮುಖವಾಗಿ ಈ ಭಾಗದಲ್ಲಿ ಸಾಗರ ಜೀವವೈವಿಧ್ಯತೆಯ ಮೇಲೆ ಈ ಯೋಜನೆಯಿಂದಾಗುವ ದುಷ್ಪರಿಣಾಮದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ.
- ರಾಮಸೇತು ಪ್ರದೇಶ ಮೀನುಗಾರಿಕೆ ಹೆಸರುವಾಸಿ, ಸರ್ಕಾರದ ಈ ಯೋಜನೆಯಿಂದ ಮೀನುಗಾರಿಕೆ ನಂಬಿ ಜೀವನ ನಡೆಸುತ್ತಿರುವ ಸಾವಿರಾರು ಕುಟುಂಬಗಳು ಯೋಜನೆಗೆ ಬಲಿಯಾಗಲಿವೆ.
- "ಸಾಗರ ಜೀವವೈವಿಧ್ಯತೆಯ ಹಾಟ್ ಸ್ಪಾಟ್" ಎನಿಸಿರುವ "ಗಲ್ಫ್ ಆಫ್ ಮನ್ನರ್ ಮೆರೈನ್ ನ್ಯಾಷನಲ್ ಪಾರ್ಕ್" ಈ ಪ್ರದೇಶಕ್ಕೆ ಹೊಂದಿಕೊಂಡತೆ ಇದೆ. ಸೇತುಸಮುದ್ರಂ ಯೋಜನೆ ಇದಕ್ಕೂ ಮುಳುವಾಗಲಿದೆ. ಅಷ್ಟೇ ಅಲ್ಲ, ಹವಳಗಳ ಮೇಲೂ ವ್ಯತಿರಿಕ್ತ ಪರಿಣಾಮ ಉಂಟುಮಾಡಲಿದೆ.

**ಸರ್ಕಾರ ಏನು ಹೇಳುತ್ತದೆ?**

- ಸೇತು ಸಮುದ್ರಂ ಯೋಜನೆಯನ್ನು ಮಾಡಿಯೇ ತೀರುವ ಅಭಿಲಾಷೆಯನ್ನು ಸರ್ಕಾರ ಹೊಂದಿದೆ. ಈ ಯೋಜನೆಗೆ ತಗಲುವ ವೆಚ್ಚ ಬರೋಬ್ಬರಿ 25000 ಕೋಟಿಗಳು ಎಂದು ಅಂದಾಜಿಸಲಾಗಿದೆ. ಸರ್ಕಾರದ ವರದಿಯ ಪ್ರಕಾರ ಜೂನ್ 30, 2012 ರ ವೇಳೆಗೆ 829.29 ಕೋಟಿಯನ್ನು ಈಗಾಗಲೇ ವ್ಯಯಿಸಲಾಗಿದ್ದು, ಯೋಜನೆ ನಿಂತರೆ ಇಷ್ಟು ದೊಡ್ಡ ಮೊತ್ತದ ಹಣ ನೀರು ಪಾಲು ಆಗಲಿದೆ. ಆದ್ದರಿಂದ ಯೋಜನೆಯನ್ನು ಕಾರ್ಯಗತ ಮಾಡಲೇಬೇಕು ಎನ್ನುವ ನಿಲುವು ತಳಿದಿದೆ.

**ಆಗಸ್ಟ್ ವೇಳೆಗೆ ದೇಶದ "ಮೊದಲ ಸೀಮೆ ಎಣ್ಣೆ ಬಳಕೆ ಮುಕ್ತ ರಾಜ್ಯವಾಗಲಿರುವ ದೆಹಲಿ"**

ರಾಷ್ಟ್ರದ ರಾಜಧಾನಿ ನವದೆಹಲಿ ಶೀಘ್ರದಲ್ಲಿ "ದೇಶದ ಮೊದಲ ಸೀಮೆ ಎಣ್ಣೆ ಬಳಕೆ ಮುಕ್ತ" ರಾಜ್ಯವೆಂಬ ಖ್ಯಾತಿಯನ್ನು ಹೊಂದಲಿದೆ. ದೆಹಲಿ ಸರ್ಕಾರ ಜಾರಿಗೆ ತಂದಿರುವ "ಸೀಮೆಎಣ್ಣೆ ಮುಕ್ತ ದೆಹಲಿ (Kerosene Free Dehli)" ಯೋಜನೆಯಡಿ ಆಗಸ್ಟ್ ವೇಳೆಗೆ ಎಲ್ಲಾ ಕುಟುಂಬಗಳಿಗೂ LPG ಸೌಲಭ್ಯವನ್ನು ಒದಗಿಸಲಾಗುವುದು. ಈಗಾಗಲೇ 1.1 ಲಕ್ಷ ಕುಟುಂಬಗಳನ್ನು ಈ

ಯೋಜನೆಯಡಿ ತರಲಾಗಿದ್ದೂ, ಬಾಕಿ ಇರುವ 2.5 ಲಕ್ಷ ಕುಟುಂಬಗಳಿಗೆ ಆಗಸ್ಟ್ ವೇಳೆಗೆ LPG ಸೌಕರ್ಯ ನೀಡುವ ಗುರಿಯನ್ನು ದೆಹಲಿ ಹೊಂದಿದೆ.

**"ಸೀಮೆಎಣ್ಣೆ ಮುಕ್ತ ದೆಹಲಿ" ಯೋಜನೆ:**

- ಕಳೆದ ವರ್ಷ ಬಜೆಟ್ ನಲ್ಲಿ ದೆಹಲಿಯ ಮುಖ್ಯಮಂತ್ರಿಗಳಾದ ಶೀಲಾ ದೀಕ್ಷಿತ್ ರವರು ಈ ಯೋಜನೆಗೆ ಚಾಲನೆ ನೀಡಿದ್ದರು.
- ಈ ಯೋಜನೆಯಡಿ ದೆಹಲಿಯ 3,56,395 ಕುಟುಂಬಗಳಿಗೆ LPG ಸಿಲಿಂಡರ್, ರೆಗ್ಯೂಲೇಟರ್, ಐಎಸ್ಐ ಮಾರ್ಕ್ ಹೊಂದಿರುವ ಗ್ಯಾಸ್ ಸ್ಟೋವ್, ರಬ್ಬರ್ ಟ್ಯೂಬ್ ಮತ್ತು ಬರ್ನರ್ ಗಳನ್ನು ಉಚಿತವಾಗಿ ನೀಡಲಾಗುವುದು.
- ಬಿಪಿಎಲ್ (ಬಡತನ ರೇಖೆಗಿಂತ ಕೆಳಗಿರುವ), ಅಂತ್ಯದೋಯ ಅನ್ನ ಯೋಜನೆ (ಎಎವೈ) ಮತ್ತು ಜುಗ್ಗಿ ರೇಷನ್ ಕಾರ್ಡ್ ಹೊಂದಿರುವವರು ಮಾತ್ರ ಈ ಯೋಜನೆ ಸೌಲಭ್ಯವನ್ನು ಉಚಿತವಾಗಿ ಪಡೆಯಲು ಅರ್ಹರು.
- ಹಂತಹಂತವಾಗಿ ಸೀಮೆಎಣ್ಣೆ ಬಳಕೆಯನ್ನು ತಗ್ಗಿಸಿ, ಸಂಪೂರ್ಣವಾಗಿ LPG ಬಳಕೆ ಮಾಡಲು ಉತ್ತೇಜನ ಮಾಡುವುದು ಈ ಯೋಜನೆಯ ಉದ್ದೇಶ.

**ಮೇ 1: ಮಹಾರಾಷ್ಟ್ರ ಮತ್ತು ಗುಜರಾತ್ ದಿವಸ್**

ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಮೇ 1 ರಂದು ರಾಜ್ಯದಿನವನ್ನು ಸಂಭ್ರಮದಿಂದ ಆಚರಿಸಿಕೊಂಡವು. 1960, ಮೇ 1 ರಂದು ಅಂದಿನ "ಬಾಂಬೆ ರಾಜ್ಯ"ವನ್ನು ವಿಭಜಿಸುವ ಮೂಲಕ ಮಹಾರಾಷ್ಟ್ರ ಮತ್ತು ಗುಜರಾತ್ ಪ್ರತ್ಯೇಕ ರಾಜ್ಯಗಳಾಗಿ ಉದಯಿಸಿದವು. ಆಗಾಗಿ ಮೇ 1 ರಂದು ಮಹಾರಾಷ್ಟ್ರದಲ್ಲಿ ಮಹಾರಾಷ್ಟ್ರ ದಿವಸ್ ಮತ್ತು ಗುಜರಾತ್ ನಲ್ಲಿ ಗುಜರಾತ್ ದಿವಸ್ ಎಂದು ಆಚರಿಸಲಾಗುತ್ತದೆ. ಈ ದಿನದಂದು ಎರಡು ರಾಜ್ಯಗಳಲ್ಲಿ ಸಾರ್ವತಿಕ ರಜೆಯನ್ನು ನೀಡಲಾಗಿದೆ.

**ಹಿನ್ನೆಲೆ:**

ರಾಜ್ಯ ಪುನರ್ ವಿಂಗಡಣಾ ಕಾಯಿದೆ 1956 (State Reorganisation Act 1956) ರ ಅನ್ವಯ ಗುಜರಾತಿ, ಮರಾಠಿ, ಕಚ್ ಮತ್ತು ಕೊಂಕಣಿ ಭಾಷೆಗಳನ್ನು ಮಾತನಾಡುವ ಪ್ರಾಂತ್ಯಗಳನ್ನು ಒಗ್ಗೂಡಿಸಿ "ಬಾಂಬೆ ರಾಜ್ಯ"ವನ್ನು ರಚಿಸಲಾಯಿತು. ಆದರೆ ಈ ಒಗ್ಗಟ್ಟು ಬಹುಕಾಲ ಉಳಿಯಲಿಲ್ಲ. "ಕೇಶುರಾವ್ ಜೆಧ್ದಿ" ರವರ ನೇತೃತ್ವದಲ್ಲಿ ಸ್ಥಾಪನೆಗೊಂಡ "ಸಂಯುಕ್ತ ಮಹಾರಾಷ್ಟ್ರ ಸಮಿತಿ" ಮರಾಠಿ ಭಾಷಿಕರಿಗೆ ಪ್ರತ್ಯೇಕ ರಾಜ್ಯವನ್ನು ರಚಿಸುವಂತೆ ಹೋರಾಟವನ್ನು ನಡೆಸಿದರೆ, ಗುಜರಾತಿ ಭಾಷೆ ಮಾತನಾಡುವವರಿಗಾಗಿಯೇ ಪ್ರತ್ಯೇಕ ರಾಜ್ಯವನ್ನು ರಚಿಸುವಂತೆ ಗುಜರಾತ್ ನಲ್ಲಿಯೂ ಹೋರಾಟ ತೀವ್ರವಾಯಿತು. ಸಮಸ್ಯೆಯ ತೀವ್ರತೆಯನ್ನು ಮನಗೊಂಡ ಸರ್ಕಾರ 1960,ಏಪ್ರಿಲ್ 25 ರಂದು "ಬಾಂಬೆ ರಾಜ್ಯ ಪುನರ್ ವಿಂಗಡಣಾ ಕಾಯಿದೆ-1960" ನ್ನು ಜಾರಿಗೊಳಿಸಿತು. ಈ ಕಾಯಿದೆಯಡಿ ಗುಜರಾತ್ ಮತ್ತು ಮಹಾರಾಷ್ಟ್ರ ಭಾರತದ ಎರಡು ಹೊಸ ರಾಜ್ಯಗಳಾಗಿ ಜನ್ಮ ತಾಳಿದವು.

**ಮುಂಬೈ ಮೆಟ್ರೋ ರೈಲಿಗೆ ಪ್ರಾಯೋಗಿಕ ಚಾಲನೆ:**

ಮಹಾರಾಷ್ಟ್ರ ಮುಖ್ಯಮಂತ್ರಿ "ಪೃಥ್ವಿರಾಜ್ ಚವ್ಹಾಣ್" ರವರು ಮುಂಬೈ ಮೆಟ್ರೋ ರೈಲಿನ ಪ್ರಾಯೋಗಿಕ ಪರೀಕ್ಷೆಗೆ ಮಹಾರಾಷ್ಟ್ರ ದಿನದಂದು ಚಾಲನೆ ನೀಡಿದರು. ಸೆಪ್ಟೆಂಬರ್ ವೇಳೆಗೆ ಸಾರ್ವಜನಿಕ ಸೇವೆಗೆ ಮುಂಬೈ ಲಭ್ಯವಿರುವುದಾಗಿ ಅವರು ಇದೇ ವೇಳೆ ತಿಳಿಸಿದರು.

ಮಹಾರಾಷ್ಟ್ರ ಕೈಗಾರಿಕ ನೀತಿ-2013:

**<u>ªÀÄÄA¨ÉÊ ªÉÄmÉÆæÃ gÉÊ®ÄUÉ ¥ÁæAiÉÆÃVPÀ ZÁ®£É:</u>** ಮಹಾರಾಷ್ಟ್ರ ರಾಜ್ಯಪಾಲ "ಶಂಕರ್ ನಾರಾಯಣ್" ರವರು ಮಹಾರಾಷ್ಟ್ರ ದಿವಸ್ ನಂದು ಮಹಾರಾಷ್ಟ್ರ ಕೈಗಾರಿಕ ನೀತಿ -2013 ನ್ನು ಬಿಡುಗಡೆಗೊಳಿಸಿದರು. ಈ ನೀತಿಯಡಿ 500000 ಕೋಟಿ ಬಂಡವಾಳ ಹೂಡಿಕೆ ಆಕರ್ಷಣೆಯ ಗುರಿಯನ್ನು ಮಹಾರಾಷ್ಟ್ರ ಹೊಂದಿದ್ದು, ಸುಮಾರು 20 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಅಲ್ಲದೇ ಕೈಗಾರಿಕ ವಲಯದಲ್ಲಿ ಶೇ.12 ರಷ್ಟು ಪ್ರಗತಿಯನ್ನು ಕಾಣುವ ಆಶಾಯ ಹೊಂದಲಾಗಿದೆ.

<u>ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ</u>

ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಬಡ ಜನರ ಆರೋಗ್ಯ ಸ್ಥಿತಿಯನ್ನು ಉತ್ತಮಪಡಿಸುವ ಗುರಿ ಹೊಂದಿರುವ "ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ (National Urban Health Mission)" ಕ್ಕೆ ಕೇಂದ್ರ ಸಚಿವ ಸಂಪುಟ ಅಂಗೀಕಾರ ನೀಡಿದೆ. ನಗರ ಪ್ರದೇಶಗಳಲ್ಲಿ ವಾಸವಾಗಿರುವ ಕಡುಬಡವರು ಅದರಲ್ಲೂ ಕೊಳಚೆ ನಿವಾಸಿಗಳ ಆರೋಗ್ಯ ಕಾಳಜಿ ಸೇರಿದಂತೆ ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ ತಗ್ಗಿಸುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ.

"ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ":

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ 2005 ರಲ್ಲಿ ಜಾರಿಗೊಳಿಸಿರುವ "ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ (National Health Mission)" ದಡಿ ಈ ಯೋಜನೆ ಕಾರ್ಯನಿರ್ವಹಿಸಲಿದೆ.
- <u>ಐವತ್ತು ಸಾವಿರಕ್ಕೂ</u> ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ 779 ನಗರ ಮತ್ತು ಪಟ್ಟಣಗಳಲ್ಲಿ ಈ ಯೋಜನೆ ಜಾರಿಗೊಳ್ಳಲಿದೆ. 7.75 ಕೋಟಿ ಜನಗಳು ಈ ಯೋಜನೆಯ ಉಪಯೋಗ ಪಡೆದುಕೊಳ್ಳಲಿದ್ದಾರೆ
- 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ.22,507 ಕೋಟಿಯನ್ನು ಈ ಯೋಜನೆಯ ಅನುಷ್ಠಾನಕ್ಕೆ ನಿಗದಿಪಡಿಸಲಾಗಿದೆ.
- ಪಟ್ಟಣಗಳಲ್ಲಿ ಪ್ರತಿ 50-60 ಸಾವಿರ ಜನರಿಗೆ ಒಂದು "ಪ್ರಾಥಮಿಕ ಆರೋಗ್ಯ ಕೇಂದ್ರ", ನಗರದಲ್ಲಿ ಐದರಿಂದ ಆರು ಪ್ರದೇಶಗಳಿಗೆ ಒಂದು "ನಗರ ಸಮುದಾಯ ಆರೋಗ್ಯ ಕೇಂದ್ರ" ಮತ್ತು ಹತ್ತು ಸಾವಿರ ಮಂದಿಗೆ ಒಂದರಂತೆ "ಸಹಾಯಕ ನರ್ಸಿಂಗ್ ಮಿಡ್ ವೈವ್ಸ್ (Auxiliary Nursing Midwives)" ಕೇಂದ್ರಗಳನ್ನು ಸ್ಥಾಪಿಸಲಾಗುವುದು.

<u>"ಅರೆ ಸೇನಾ ಪಡೆಗಳ (Para military Force)"ಉನ್ನತೀಕರಣಕ್ಕೆ ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ</u>

ಕೇಂದ್ರ ಅರೆ ಸೇನಾ ಪಡೆಗಳ ಆಧುನೀಕರಣಕ್ಕೆ ರೂ.11,000 ಕೋಟಿ ಪ್ರಸ್ತಾವನೆಗೆ ಪ್ರಧಾನಿ ಮನಮೋಹನ್ ಸಿಂಗ್ ಅಧ್ಯಕ್ಷತೆಯ ಭದ್ರತೆ ಮೇಲಿನ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಕಳೆದ ವರ್ಷವೇ ಈ ಯೋಜನೆಯನ್ನು ಪ್ರಸ್ತಾಪಿಸಲಾಗಿತ್ತು, ಆದರೆ ಅನಮೋದನೆ ದೊರೆತಿರಲಿಲ್ಲ. ಲಡಾಖ್ ಪ್ರಾಂತ್ಯದಲ್ಲಿ ಚೀನಾ ಪಡೆಗಳ ಅತಿಕ್ರಮಣದಿಂದ ಎಚ್ಚೆತ್ತುಕೊಂಡಿರುವ ಸರ್ಕಾರ ಈ ಮಹತ್ವದ ಯೋಜನೆಗೆ ಈಗ ಅಸ್ತು ಎಂದಿದೆ. ಪ್ರಸ್ತಕ ಸಾಲಿನಿಂದ ಮುಂದಿನ ಐದು ವರ್ಷಗಳ ವರೆಗೆ ಈ ಯೋಜನೆ ಜಾರಿಯಲ್ಲಿ ಇರಲಿದೆ. "ಇಂಡೋ ಟಿಬೆಟಿಯನ್ ಬಾರ್ಡರ್ ಪೊಲಿಸ್ (ITBP)" ಸೇರಿದಂತೆ ಇತರೆ ಎಲ್ಲಾ ಅರೆ ಸೇನಾ ಪಡೆಗಳಿಗೂ ಈ ಯೋಜನೆಯ ಅನುಕೂಲ ಪಡೆಯಲಿವೆ.

**ಯೋಜನೆಯಡಿ ಬರಲಿರುವ ಅರೆ ಸೇನಾ ಪಡೆಗಳು**:

- "ಸೆಂಟ್ರಲ್ ರಿಸರ್ವ್ ಪೊಲಿಸ್ ಫೋರ್ಸ್ (CRPF)", "ಬಾರ್ಡರ್ ಸೆಕ್ಯೂರಿಟಿ ಫೋರ್ಸ್ (BSF)", "ಇಂಡೋ ಟಿಬೆಟಿಯನ್ ಬಾರ್ಡರ್ ಪೊಲಿಸ್ (ITBP)", "ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್ (CISF)", "ಸಶಸ್ತ್ರ ಸೀಮಾ ಬಲ (SSB)" "ನ್ಯಾಷನಲ್ ಸೆಕ್ಯೂರಿಟಿ ಗಾರ್ಡ್ (NSG)" ಮತ್ತು "ಅಸ್ಸಾಂ ರೈಫಲ್ಸ್".

ಯೋಜನೆಯ ಉಪಯೋಗ?

- ಭಾರತಕ್ಕೆ ಅಪಾಯ ತಂದೊಡ್ಡ ಬಹುದಾದ ಪ್ರಮುಖ ರಾಷ್ಟ್ರಗಳೆಂದರೆ ಚೀನಾ ಮತ್ತು ಪಾಕಿಸ್ತಾನ. ಈ ಎರಡೂ ದೇಶಗಳೂ ಶಸ್ತಾಸ್ತ್ರ ಆಧುನೀಕರಣಕ್ಕೆ ತುಡಿಯುತ್ತಿರುವುದು ಗೊತ್ತಿರುವ ವಿಷಯ. ಅದರಲ್ಲೂ ಲಡಖ್ ಪ್ರದೇಶದಲ್ಲಿ ಚೀನಾದ ಅತಿಕ್ರಮಣ ಭಾರತಕ್ಕ ಎಚ್ಚರಿಕೆ ಗಂಟೆ. ಆಗಾಗಿ ಅರೆ ಸೇನಾ ಪಡೆಗಳ ಆಧುನೀಕರಣ ಅತಿ ಅವಶ್ಯಕ. ಈ ಯೋಜನೆಯಡಿ ಸೇನಾ ಪಡೆಗಳಿಗೆ ಬಲ ತುಂಬುವ ಸಲುವಾಗಿ ಆತ್ಯಾಧುನಿಕ ಶಸ್ತಾಸ್ತ್ರಗಳು, ರಾತ್ರಿ ವೇಳೆ ಕಾರ್ಯಚರಣೆ ನಡೆಸಲು ಅನುಕೂಲವಾಗುವ ಉಪಕರಣಗಳು (Night Vision Devices), ಗಸ್ತು ಕಾರ್ಯಾಚರಣೆ ವಾಹನಗಳು ಮತ್ತಿತ್ತರ ಮೂಲಸೌಕರ್ಯಗಳನ್ನು ಸೇನಾ ಪಡೆಗಳಿಗೆ ಒದಗಿಸುವ ಮೂಲಕ ಸೇನಾ ಪಡೆಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುಗವುದು.

ಅರೆ ಸೇನಾ ಪಡೆಗಳ ಬಳಕೆ:

- ಸೆಂಟ್ರಲ್ ರಿಸರ್ವ್ ಪೊಲಿಸ್ ಫೋರ್ಸ್: ನಕ್ಸಲ್ ಚಟುವಟಿಕ ನಿಗ್ರಹ, ಭಯೋತ್ಪಾದನೆ ವಿರುದ್ದದ ಕಾರ್ಯಾಚರಣೆ, ಅಂತರಿಕ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆಗೆ ಬಳಸಿಕೊಳ್ಳಾಗುತ್ತಿದೆ.
- ಬಾರ್ಡರ್ ಸೆಕ್ಯೂರಿಟಿ ಫೋರ್ಸ್: ಭಾರತ-ಪಾಕ್ ಮತ್ತು ಭಾರತ-ಬಾಂಗ್ಲ ಗಡಿ ಕಾಯುವಿಕೆ ಜತೆಗೆ ಅಂತರಿಕ ಭದ್ರತೆ.
- ಸಶಸ್ತ್ರ ಸೀಮಾ ಬಲ: ಭಾರತ-ನೇಪಾಳ ಮತ್ತು ಭಾರತ-ಭೂತಾನ್ ಗಡಿ ಕಾವಲು.
- ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್: ವಿಮಾನ ನಿಲ್ದಾಣಗಳು, ಏರೋ ಸ್ಪೇಸ್ ಮತ್ತು ಅಣು ಘಟಕಗಳ ಕಾವಲು.
- ಅಸ್ಸಾಂ ರೈಫಲ್ಸ್: ಭಾರತ-ಮಯಾನ್ಮಾರ್ ಗಡಿ ಪ್ರದೇಶ.
- ನ್ಯಾಷನಲ್ ಸೆಕ್ಯೂರಿಟಿ ಗಾರ್ಡ್: ವಿಶೇಷ ಭಯೋತ್ಪಾದನಾ ನಿಗ್ರಹ ದಳ.

**ಭಾರತ ಚಿತ್ರರಂಗಕ್ಕೆ ನೂರು ವರ್ಷದ ಸಂಭ್ರಮ**

ಮೇ.3, 2013 ರಂದು ಭಾರತ ಚಿತ್ರರಂಗಕ್ಕೆ ನೂರು ವರ್ಷಗಳ ಆಚರಣೆಯ ಸಂಕ್ರಮಣ ದಿನ. ಈ ದಿನಕ್ಕೆ ಸರಿಯಾಗಿ "ರಾಜಾ ಹರಿಶ್ಚಂದ್ರ" ಚಿತ್ರ ತೆರೆಕಂಡು ನೂರು ವರ್ಷ ತುಂಬಿದೆ. ಭಾರತೀಯ ಸಿನಿಮಾವೆಂದರೇ ಕೇವಲ ಒಂದೇ ಭಾಷೆಗೆ ಸೀಮಿತವಾದುದ್ದಲ್ಲ, ಇದು ವಿಶಿಷ್ಟವಾದ ಪರಿಕಲ್ಪನೆ. ಇದರಲ್ಲಿ ಕನ್ನಡ, ತೆಲುಗು, ತಮಿಳು, ಮರಾಠಿ ಹೀಗೆ ಹಲವು ಭಾಷೆಗಳ ಚಿತ್ರಧಾರೆಗಳಿವೆ. ಈ ವಿಭಿನ್ನ ಭಾಷೆ ಮತ್ತು ಬೆಳ್ಳಿಬಿಂಬಗಳೆಲ್ಲ ಸೇರಿ "ಭಾರತೀಯ ಸಿನಮಾ ಆಗಿದೆ. ಭಾರತ ಚಿತ್ರರಂಗ ನಡೆದು ಬಂದ ಹಾದಿಯ ಕಿರಿಯ ಮಾಹಿತಿ ಇಲ್ಲಿದೆ.

- ಅಂದು 28ನೇ ಡಿಸೆಂಬರ್ 1985. ಪ್ಯಾರಿಸ್ ನಲ್ಲಿ ಲೂಮಿಯೇರ್ ಸಹೋದರರು ಪ್ರಪ್ರಥಮವಾಗಿ ಸಿನಿಮಾಟೋಗ್ರಾಫ್ ನ್ನು ಪ್ರದರ್ಶನ ಮಾಡಿದರು. ಅದೊಂದು ಅದ್ಭುತ ಅವಿಷ್ಕಾರ. ಅದೇ ವಿಶ್ವ ಸಿನಿಮಾದ ಹುಟ್ಟುಹಬ್ಬ.
- ಈ ಪ್ರದರ್ಶನದ ಮೂರು ತಿಂಗಳ ನಂತರ ಅಂದರೇ 23 ನೇ ಏಪ್ರಿಲ್,1896 ರಲ್ಲಿ ಎಡಿಸನ್ ನ ವಿಟಾಸ್ಕೋಪ್ ಅಮೆರಿಕಾದ ಪ್ರೇಕ್ಷಕರಿಗಾಗಿ ನ್ಯೂಯಾರ್ಕ್ ಸಿಟಿಯಲ್ಲಿ ಪ್ರದರ್ಶನ ಕಂಡಿತು.
- ಇದಾದ ಮೂರು ತಿಂಗಳ ಬಳಿಕ ಮುಂಬೈನ ಮ್ಯೂಸಿಯಂ ಪ್ರದೇಶದಲ್ಲಿರುವ ವ್ಯಾಟನ್ಸ್ ಹೋಟೆಲ್ ನಲ್ಲಿ ಲೂಮಿಯೇರ್ ಪರವಾಗಿ ಫ್ರಾನ್ಸ್ ನಿಂದ ಆಗಮಿಸಿದ ಏಜೆಂಟರು ಪ್ರಪ್ರಥಮ ಪ್ರದರ್ಶನ ಏರ್ಪಡಿಸಿದರು. ಈ ಸುವರ್ಣ ಘಳಿಗೆಯೇ ಭಾರತದಲ್ಲೆ ಚಿತ್ರ ನಿರ್ಮಾಣದ ಮೊಳಕೆ ಹೊಡೆಯಲು ಸ್ಪೂರ್ತಿಯಾಯಿತು.
- ತದನಂತರ ಒಂದರ ಮೇಲೊಂದು ಅವಿಷ್ಕಾರ ಭಾರತ ಚಿತ್ರರಂಗಕ್ಕೆ ಭದ್ರ ಬುನಾದಿಯಾಕಲು ಸಹಕಾರಿಯಾಯಿತು. ವಿದೇಶಗಳಿಂದ ಬಂದ ಕ್ಯಾಮೆರಗಳು ನೋಡುಗರನ್ನು ನಿಬ್ಬೆರಗಾಗಿಸುವಂತೆ ಮಾಡಿತು.
- ಕ್ಯಾಮರ ಮಾರಾಟದಲ್ಲಿ ಆಸಕ್ತಿ ತಳೆದಿದ್ದ "ಸಾವೆದಾದ (ಎಚ್.ಎಸ್.ಬಟವಾಡೇಕರ್)" ರವರು ಮೊಟ್ಟಮೊದಲಿಗೆ ಚಲಿಸುವ ಕಿರುಚಿತ್ರವನ್ನು ರಚಿಸಿದ ಭಾರತೀಯ ಎಂಬ ದಾಖಲೆ ಬರೆದರು.
- ಅದಾಗಲೇ ಅನೇಕ ವಿದೇಶಿ ಚಿತ್ರಗಳು ತೆರೆಕಾಣಲು ಸಜ್ಜಾಗಿದ್ದವು. "ಲೈಫ್ ಆಫ್ ಕ್ರೈಸ್ಟ್" ನಿಂದ ಸ್ಪೂರ್ತಿ ಪಡೆದ "ದಾದಾ ಸಾಹೇಬ್ ಪಾಲ್ಕೆ" ರವರು ರಾಜಾ ಹರಿಶ್ಚಂದ್ರ ಚಿತ್ರವನ್ನು ಮೇ, 3, 1913 ರಂದು ತಯಾರಿಸಿ ಬಿಡುಗಡೆ ಮಾಡುವ ಮೂಲಕ ಭಾರತದಲ್ಲಿ ಸಿನಿಮಾ ನಿರ್ಮಾಣಗಳ ಖಾತೆ ತೆರೆದುಕೊಂಡಿತು. ದಾದಾ ಸಾಹೇಬ್ ಪಾಲ್ಕೆ ರವರು ಭಾರತ ಚಿತ್ರರಂಗದ "ಪಿತಾಮಹ" ಎನಿಸಿದರು.
- 14 ನೇ ಮಾರ್ಚ್, 1931 ರಲ್ಲಿ ಭಾರತದ ಮೊಟ್ಟ ಮೊದಲ ವಾಕ್ ಚಿತ್ರ "ಆಲಂ ಅರ" ತೆರೆಕಂಡಿತು. ಹೀಗೆ ಪ್ರಾರಂಭವಾದ ಭಾರತದ ಚಿತ್ರರಂಗ ಇಂದು ಅತಿ ಹೆಚ್ಚು ಸಿನಿಮಾಗಳನ್ನು ತಯಾರಿಸುವ ಶ್ರೀಮಂತ ರಾಷ್ಟ್ರ.

**ತಮಿಳುನಾಡು: ಹೊಸದಾಗಿ ನಾಲ್ಕು "ವನ್ಯಜೀವಿ ಅಭಯಾರಣ್ಯ" ಸ್ಥಾಪನೆ**

ತಮಿಳುನಾಡಿನಲ್ಲಿ ಹೊಸದಾಗಿ ನಾಲ್ಕು "ವನ್ಯಜೀವಿ ಅಭಯಾರಣ್ಯ (Wildlife Sanctuaries)" ನ್ನು ಸ್ಥಾಪಿಸಲು ಸರ್ಕಾರ ನಿರ್ಣಯ ಕೈಗೊಂಡಿರುವುದಾಗಿ ಮುಖ್ಯಮಂತ್ರಿ ಜಯಲಲಿತಾ ಹೇಳಿದ್ದಾರೆ. ತಮಿಳುನಾಡಿನಲ್ಲಿ ಈಗಾಗಲೇ 10 ವನ್ಯಜೀವಿ ಅಭಯಾರಣ್ಯಗಳಿದ್ದು ಈ ನಾಲ್ಕು ವನ್ಯಜೀವಿ ಅಭಯಾರಣ್ಯಗಳು ಅಸ್ಥಿತ್ವಕ್ಕೆ ಬಂದರೆ ರಾಜ್ಯದಲ್ಲಿರುವ ಒಟ್ಟು ವನ್ಯಜೀವಿ ಅಭಯಾರಣ್ಯ ಗಳ ಸಂಖ್ಯೆ 14 ಕ್ಕೆ ಏರಲಿದೆ.

ಯಾವುವು?

- ಕಾವೇರಿ ವನ್ಯಜೀವಿ ಅಭಯಾರಣ್ಯ: ದರ್ಮಪುರಿ ಮತ್ತು ಕೃಷ್ಣಗಿರಿ ಜಿಲ್ಲೆಗಳ ಅರಣ್ಯ ಪ್ರದೇಶಗಳನ್ನು ಒಗ್ಗೂಡುಸಿ ಸ್ಥಾಪಿಸಲಾಗುವುದು.
- ಗಂಗೈಕೊಂಡೇನ್ ವನ್ಯಜೀವಿ ಅಭಯಾರಣ್ಯ: ತಿರುಣ್ ವೆಲಿ ಜಿಲ್ಲೆ, ಚುಕ್ಕೆ ಜಿಂಕೆಗಳಿಗೆ ಈ ಪ್ರದೇಶ ಹೆಸರುವಾಸಿ.
- ಕೊಡಿಯಕ್ಕರೈ ವನ್ಯಜೀವಿ ಅಭಯಾರಣ್ಯ: ತಂಜಾವೂರು, ನಾಗಪಟ್ಟಿಣಂ ಮತ್ತು ತಿರುವರೂರು ಜಿಲ್ಲೆಗಳ ಅರಣ್ಯ ಪ್ರದೇಶ ಒಳಗೊಂಡಿರಲಿದೆ.

- ಕೊಡೈಕೆನಾಲ್ ವನ್ಯಜೀವಿ ಅಭಯಾರಣ್ಯ: ದಿಂಡಿಗುಲ್ ಮತ್ತು ಥೇಣಿ ಜಿಲ್ಲೆಗಳನ್ನು ಒಳಗೊಂಡಿರಲಿದೆ.

**ಆಂಧ್ರಪ್ರದೇಶ "ರಾಜ್ಯ ಭದ್ರತಾ ಆಯೋಗ" ರಚನೆ**

ಆಂಧ್ರಪ್ರದೇಶ ಸರ್ಕಾರ ಗೃಹ ಸಚಿವರಾದ "ಸಬಿತಾ ರೆಡ್ಡಿ" ರವರ ನೇತೃತ್ವದಲ್ಲಿ "ರಾಜ್ಯ ಭದ್ರತಾ ಆಯೋಗ"ವನ್ನು ಇತ್ತೀಚೆಗೆ ಸ್ಥಾಪಿಸಿತು. ಸಾರ್ವಜನಿಕ ಭದ್ರತಾ ಮೇಲ್ವಿಚಾರಣೆ ಮತ್ತು ವ್ಯವಸ್ಥೆಯಲ್ಲಿನ ಕೊರತೆಗಳನ್ನು ಸರಿಪಡಿಸಲು ನಿಯಮಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಈ ಆಯೋಗ ಕ್ರಮವಹಿಸಲಿದೆ. ಕೇಂದ್ರ ಭದ್ರತಾ ಆಯೋಗದ ಮಾದರಿಯಲ್ಲೇ ಈ ಆಯೋಗವು ಕಾರ್ಯನಿರ್ವಹಿಸಲಿರುವುದಾಗಿ ಆಂಧ್ರಪ್ರದೇಶ ಮುಖ್ಯಮಂತ್ರಿ "ಕಿರಣ್ ಕುಮಾರ್ ರೆಡ್ಡಿ" ರವರು ಹೇಳಿದ್ದಾರೆ. ರಾಜ್ಯಗಳಲ್ಲಿ ಭದ್ರತಾ ಆಯೋಗವನ್ನು ರಚಿಸಲು ಸೂಚಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

ಆಯೋಗದ ಬಗ್ಗೆ:

- ಗೃಹ ಸಚಿವರಾದ ಸಬೀತಾ ರೆಡ್ಡಿಯವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಉಳಿದಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ ಮತ್ತು ಹೈಕೋರ್ಟ್ ನ ಒಬ್ಬ ನ್ಯಾಯಾಧೀಶರು ಈ ಆಯೋಗದ ಸದಸ್ಯರಾಗಿರಲ್ಲಿದ್ದಾರೆ. ರಾಜ್ಯ ಪೊಲಿಸ್ ಮಹಾ ನಿರ್ದೇಶಕರು ಈ ಆಯೋಗದ ಸಂಚಾಲಕ ಮತ್ತು ಕಾರ್ಯದರ್ಶಿಗಳಾಗಿ ಇರಲಿದ್ದಾರೆ.
- ಪೊಲಿಸ್ ಕಾರ್ಯದಕ್ಷತೆ ಹೆಚ್ಚಿಸಲು ವಿಶಾಲವಾದ ಮಾರ್ಗಸೂಚಿಗಳನ್ನು ಮತ್ತು ಉತ್ತಮ ಆಡಳಿತ ನಡೆಸುವ ಸಲುವಾಗಿ ಸಲಹೆಗಳನ್ನು ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.
- 2009 ರಲ್ಲಿ ರಚಿಸಲಾದ "ಆಂಧ್ರಪ್ರದೇಶ ಸಾರ್ವಜನಿಕ ಸುರಕ್ಷತೆ ಸಲಹೆ ಸಮಿತಿ" ಯನ್ನು ಈ ಆಯೋಗದೊಂದಿಗೆ ವಿಲೀನಗೊಳಿಸಲಾಗುವುದು.
- ಆಂಧ್ರಪ್ರದೇಶದಲ್ಲಿ ಭಯೋತ್ಪಾದನೆ ನಿಗ್ರಹಕ್ಕೆ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ "OCTOPUS (Organisation for Counter Terrorism Operations)"ನ್ನು ಈ ಆಯೋಗದಡಿ ತರಲಾಗುವುದು.

**ನವಿಲುಗರಿ ಮಾರಾಟ, ಖರೀದಿಗೆ ನಿಷೇಧ ಹೇರಿದ ಕೇಂದ್ರ ಸರ್ಕಾರ**

ನಶಿಸುತ್ತಿರುವ ರಾಷ್ಟ್ರೀಯ ಪಕ್ಷಿ ನವಿಲು ಸಂತತಿ ಉಳಿವಿಗೆ ಮುಂದಾಗಿರುವ ಕೇಂದ್ರ ಸರ್ಕಾರ, ನವಿಲುಗರಿಗಳ ಮಾರಾಟ ಮತ್ತು ಖರೀದಿಗೆ ನಿಷೇಧ ಹೇರಲು ನಿರ್ಧರಿಸಿದೆ. ನೋಡಲು ಆಕರ್ಷಕವಾಗಿರುವ ನವಿಲುಗರಿಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರಿ ಬೇಡಿಕೆ ಇರುವ ಕಾರಣ ನವಿಲುಗಳ ಮಾರಣಹೋಮ ಎಗ್ಗಿಲ್ಲದೇ ಸಾಗಿದೆ.

- ದೇಶದಲ್ಲಿ ರಾಷ್ಟ್ರ ಪಕ್ಷಿ ನವಿಲುಗಳು ಎಷ್ಟಿವೇ ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇಲ್ಲದಿದ್ದರೂ, ಇತ್ತೀಚಿನ ದಿನಗಳಲ್ಲಿ ಅವುಗಳ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿವೆ ಎಂದು ಹೇಳಲಾಗಿದೆ.
- "ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್"-1991 ರಲ್ಲಿ ನಡೆಸಲಾದ ಸಮೀಕ್ಷೆಯ ಪ್ರಕಾರ ಸ್ವಾತಂತ್ರ ಪೂರ್ವದಲ್ಲಿದ್ದ ನವಿಲುಗಳ ಸಂಖ್ಯೆಯಲ್ಲಿ ಅರ್ಧದಷ್ಟು ಕಡಿಮೆಯಾಗಿದೆ. ಚೆಂದದ ನವಿಲುಗರಿಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ

ಭಾರಿ ಬೇಡಿಕೆ ಇರುವುದರಿಂದ ನವಿಲುಗಳ ಬೇಟೆ ಉದ್ಯಮವಾಗಿರುವುದೇ ಅವುಗಳ ಸಂತತಿ ನಶಿಸಲು ಪ್ರಮುಖ ಕಾರಣವಾಗಿದೆ.

**ವನ್ಯಜೀವಿ ಸಂರಕ್ಷಣಾ ಕಾಯಿದೆ-1972**

- ವನ್ಯಜೀವಿ ಸಂರಕ್ಷಣಾ ಕಾಯಿದೆ-1972 ರ ಅಡಿಯಲ್ಲಿ ನವಿಲುಗರಿ ಮಾರಾಟ ಮತ್ತು ಖರೀದಿಗೆ ಅನುಮತಿ ನೀಡಲಾಗಿದೆ. ಆದರೆ ಸ್ವಾಭಾವಿಕವಾಗಿ ಉದುರಿರುವ ಗರಿಗಳನ್ನು ಮಾತ್ರ ಮಾರಾಟ ಮಾಡಬಹುದು.
- ಆದರೆ ಈ ಕಾಯಿದೆಯಲ್ಲಿರುವ ಲೋಪವನ್ನೆ ಬಳಸಿಕೊಂಡು ನವಿಲುಗಳನ್ನು ಹತ್ಯೆಮಾಡಿ ಅವುಗಳ ಗರಿಗಳನ್ನು ಅಕ್ರಮವಾಗಿ ಮಾರಾಟ ಮಾಡುಲಾಗುತ್ತಿದೆ. ಈ ಕಾಯಿದೆಯಲ್ಲಿರುವ ನ್ಯೂನತೆಯನ್ನು ಮನಗೊಂಡಿರುವ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ವನ್ಯಜೀವಿ ಸಂರಕ್ಷಣಾ ಕಾಯಿದೆ-1972 ಕ್ಕೆ ತಿದ್ದುಪಡಿ ತರಲು ಚಿಂತಿಸಿದೆ.
- ಈ ಕಾಯಿದೆ ತಿದ್ದುಪಡಿ ಮಾಡಿ ಕಾನೂನು ಜಾರಿಗೆ ಬಂದರೆ ನವಿಲುಗಳ ಅಂಗಗಳ ಮಾರಾಟ, ಖರೀದಿಯನ್ನು ಅಪರಾಧವೆಂದು ಪರಿಗಣಿಸಲಾಗುವುದು. ತಪ್ಪಿತಸ್ಥರಿಗೆ 2 ವರ್ಷ ಶಿಕ್ಷೆ ವಿಧಿಸಲಾಗುವುದು.

**"ಕಛ್ ತೀವು (Kachchatheevu)ದ್ವೀಪ" ಪ್ರದೇಶ ವಾಪಸ್: ತಮಿಳುನಾಡು ವಿಧಾನಸಭೆಯಲ್ಲಿ ನಿರ್ಣಯ**

"ಕಛ್ ತೀವು" ದ್ವೀಪ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ತಮಿಳುನಾಡು ಮೀನುಗಾರರ ಮೇಲೆ ಶ್ರೀಲಂಕಾ ನೌಕದಳ ನಡೆಸುತ್ತಿರುವ ದಾಳಿಯನ್ನು ಗಂಭೀರವಾಗಿ ಪರಿಗಣಿಸಿರುವ ತಮಿಳುನಾಡು ಸರ್ಕಾರ, ಈ ಪ್ರದೇಶವನ್ನು ಕೇಂದ್ರ ಸರ್ಕಾರ ವಾಪಸ್ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದೆ. ಈ ಸಂಬಂಧ ತಮಿಳುನಾಡು ವಿಧಾನಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗಿದೆ. ಜಯಲಲಿತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಎರಡನೇ ಬಾರಿ ಕೈಗೊಳ್ಳುತ್ತಿರುವ ನಿರ್ಣಯ ಇದಾಗಿದೆ.

- ಕಳೆದ ಎರಡು ತಿಂಗಳಲ್ಲಿ ಶ್ರೀಲಂಕಾವು 7 ಬಾರಿ ತಮಿಳುನಾಡು ಮೀನುಗಾರರ ಮೇಲೆ ದಾಳಿ ನಡೆಸಿದೆ. 30 ಮೀನುಗಾರರನ್ನು ಬಂಧಿಸಲಾಗಿದೆ. ತಮಿಳರ ಮೇಲೆ ಶ್ರೀಲಂಕಾ ನಡೆಸುತ್ತಿರುವ ದೌರ್ಜನ್ಯವನ್ನು ಹತ್ತಿಕ್ಕಲು ಇದನ್ನು ಬಿಟ್ಟು ಬೇರೆ ಮಾರ್ಗವಿಲ್ಲ ಆದ್ದರಿಂದ ಕಛ್ ತೀವು ದ್ವೀಪವನ್ನು ಕೇಂದ್ರ ವಾಪಸ್ ವಶಕ್ಕೆ ಪಡೆದುಕೊಳ್ಳಬೇಕು ಎಂದು ಜಯಲಲಿತಾ ಆಗ್ರಹಿಸಿದ್ದಾರೆ.

**"ಕಛ್ ತೀವು ದ್ವೀಪ ಪ್ರದೇಶ":**

- ಭಾರತ ಮತ್ತು ಶ್ರೀಲಂಕಾ ರಾಷ್ಟ್ರಗಳ ನಡುವೆ ಇರುವ ಸಣ್ಣ ದ್ವೀಪ ಪ್ರದೇಶವೇ "ಕಛ್ ತೀವ್". ಕ್ಯಾಥೋಲಿಕ್ ರೋಮನ್ ಕ್ರೈಸ್ತರೇ ಇಲ್ಲಿ ಹೆಚ್ಚಾಗಿ ನೆಲೆಗೊಂಡಿರುವ ಇದರ ವಿಸ್ತೀರ್ಣ 285 ಎಕರೆ. ಬ್ರಿಟಿಷ್ ಆಳ್ವಿಕೆಗೆ ಭಾರತ ಮತ್ತು ಶ್ರೀಲಂಕಾ ಎರಡು ದೇಶಗಳ ಆಳ್ವಿಕೆಗೆ ಇದು ಒಳಪಟ್ಟಿತ್ತು. 1947 ರಲ್ಲಿ ಭಾರತ ಸ್ವಾತಂತ್ರ ಹೊಂದಿದ ಬಳಿಕ ಈ ದ್ವೀಪ ಪ್ರದೇಶದ ಮೇಲೆ ಸ್ವಾಯುತ್ತತೆಯನ್ನು ಪಡೆಯಲು ಯತ್ನಿಸಿತ್ತಾದರೂ, ಭಾರತದ ನಿಲುವನ್ನು ಶ್ರೀಲಂಕಾ ಒಪ್ಪಲಿಲ್ಲ. ಅಂದಿನಿಂದ ಉಭಯ ದೇಶಗಳ ನಡುವೆ ಈ ದ್ವೀಪ ವಿವಾದಿತ ಪ್ರದೇಶವಾಗಿ ಉಳಿಯಿತು.
- 1974 ರಲ್ಲಿ ಅಂದಿನ ಪ್ರಧಾನಿಯಾದ ಇಂದಿರಾ ಗಾಂಧಿ ರವರು ಈ ದ್ವೀಪ ಪ್ರದೇಶವನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು ಶ್ರೀಲಂಕಾಗೆ ಹಸ್ತಾಂತರಿಸಿದರು. ಗಾಂಧಿ ರವರ ಈ ನಿರ್ಣಯದಿಂದ ವಿವಾದಕ್ಕೆ ತಾತ್ಕಲಿಕ ತೆರೆ ಬಿದ್ದಿತ್ತಾದರೂ, ತೀವ್ರ ವಿರೋಧ ವ್ಯಕ್ತವಾಯಿತು. ಸಂಸತ್ತಿನಲ್ಲಿ ನಿರ್ಣಯ ಕೈಗೊಳ್ಳಲದೇ ಏಕಾಏಕಿ ಶ್ರೀಲಂಕಾಕ್ಕೆ ಈ

ದ್ವೀಪ ಪ್ರದೇಶವನ್ನು ಹಸ್ತಾಂತರಿಸಿದ ಇಂದಿರಾ ಗಾಂಧಿ ರವರ ನಿರ್ಣಯವನ್ನು ಸುಪ್ರೀಂಕೋರ್ಟ್ ನಲ್ಲಿ ಪ್ರಶ್ನಿಸಲಾಯಿತು.

- 1974 ರಲ್ಲಿ ಮಾಡಿಕೊಳ್ಳಲಾದ ಒಪ್ಪಂದದ ಪ್ರಕಾರ ಭಾರತದ ಮೀನುಗಾರರಿಗೆ ಈ ಪ್ರದೇಶದಲ್ಲಿ ಮೀನು ಹಿಡಿಯಲು ಅವಕಾಶ ನೀಡಲಾಗಿಲ್ಲ. ಆದರೆ ಮೀನುಗಾರರು ಇಲ್ಲಿ ಬಲೆಗಳನ್ನು ಒಣಗಿಸಿಕೊಳ್ಳಬಹುದು ಮತ್ತು ಚರ್ಚ್ ಗೆ ಬೇಟಿ ನೀಡಬಹುದು.
- ಆದರೆ 1976 ರಲ್ಲಿ "ಯುನೈಟೆಡ್ ನೇಷನ್ ಕನ್ವೆನ್ ಷನ್ ಆನ್ ಲಾ ಆಫ್ ದಿ ಸಿ (United Nations Convention on the Law of Sea)"ಡಿಯಲ್ಲಿ ಮಾಡಿಕೊಳ್ಳಲಾದ ಅಂತರರಾಷ್ಟ್ರೀಯ ಕಡಲ ಗಡಿ ರೇಖೆ (International Maritime Boundry Line) ಒಪ್ಪಂದ ಅನ್ವಯ 1974 ರಲ್ಲಿ ಭಾರತ-ಶ್ರೀಲಂಕಾ ಮಾಡಿಕೊಂಡಿದ್ದ ಒಪ್ಪಂದವನ್ನು ಅನೂರ್ಜಿತಗೊಳಿಸಲಾಯಿತು. 1976 ಒಪ್ಪಂದ ಪ್ರಕಾರ ಭಾರತೀಯ ಮೀನುಗಾರರು ಚರ್ಚ್ ಬೇಟಿ ಮತ್ತು ಮೀನು ಬಲೆಯನ್ನು ಒಣಗಿಸಿಕೊಳ್ಳಲು ಈ ಪ್ರದೇಶವನ್ನು ಬಳಸಿಕೊಳ್ಳುವುದರ ಮೇಲೆ ಸಂಪೂರ್ಣ ನಿಷೇಧ ಹೇರಲಾಯಿತು.
- ಶ್ರೀಲಂಕಾ 1974 ರ ಒಪ್ಪಂದಕ್ಕೆ ಬದ್ದವಾಗಿರಬೇಕು ಎಂದು 2009 ರಲ್ಲಿ ತಮಿಳುನಾಡು ಸರ್ಕಾರ ಹೇಳುವ ಮೂಲಕ ಮತ್ತೆ ವಿವಾದ ಭುಗಿಲೆದ್ದಿತ್ತು. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಉಭಯ ದೇಶಗಳು ಅನೇಕ ಸುತ್ತಿನ ಮಾತುಕತೆ ಮುಂದಾದರು. ಅನಂತರ ಶ್ರೀಲಂಕಾದ ಜಾಫ್ನ ಲೈನ್ ತನಕ ಭಾರತದ ಮೀನುಗಾರರಿಗೆ ಪ್ರವೇಶವನ್ನು ನೀಡಲು ಶ್ರೀಲಂಕಾ ಒಪ್ಪಿಕೊಂಡಿತು.
- ಅನುಮತಿ ದೊರೆತ ಮೇಲೆ ತಮಿಳುನಾಡು ಮೀನುಗಾರರು ಶ್ರೀಲಂಕಾ ಕಡಲ ಪ್ರದೇಶದತ್ತ ನುಸುಳುವುದು ವಿಪರೀತವಾಯಿತು. ಇದನ್ನು ಅರಿತ ಶ್ರೀಲಂಕಾ 1974 ರ ಒಪ್ಪಂದದ ಮೇಲೆ ಭಾರತದ ಸುಪ್ರೀಂ ಕೋರ್ಟ್ ಗೆ ಯಾವುದೇ ಹಕ್ಕಿಲ್ಲ ಎಂದು ತಮಿಳುನಾಡಿಗೆ ನೋಟಿಸ್ ಜಾರಿ ಮಾಡಿತು. ಅಲ್ಲದೇ ಈ ಪ್ರದೇಶದಲ್ಲಿ ಅತಿಕ್ರಮಣ ಮಾಡುವ ಭಾರತದ ಮೀನುಗಾರರ ಹತ್ಯೆ ಮಾಡಲು ಶ್ರೀಲಂಕಾ ಹಿಂಜರಿಯಲಿಲ್ಲ.
- 2011 ರಲ್ಲಿ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಜಯಲಲಿತಾ ರವರು ಭಾರತ ಮತ್ತು ಶ್ರೀಲಂಕಾ ನಡುವೆ 1974 ಮತ್ತು 1976 ರಲ್ಲಿ ನಡೆದ ಒಪ್ಪಂದ ಕಾನೂನು ಬಾಹಿರವೆಂದು ಘೋಷಿಸಿ "ಕಛ್ ತೀವು" ಪ್ರದೇಶವನ್ನು ಭಾರತದ ವಶಕ್ಕೆ ಪಡೆಯಲು ಆದೇಶಿಸುವಂತೆ ಸುಪ್ರೀಂಕೋರ್ಟ್ ಗೆ ಅರ್ಜಿ ಸಲ್ಲಿಸಿದರು. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ "ಬೆರುಬೆರಿ ಪ್ರಕರಣ"ವನ್ನು ನಿದರ್ಶನವಾಗಿಟ್ಟುಕೊಂಡು ಸರ್ಕಾರದ ಈ ಕ್ರಮ ಕಾನೂನು ಬಾಹಿರ ಎಂದಿತು. ದೇಶದ ಯಾವುದೇ ಪ್ರದೇಶವನ್ನು ಹಸ್ತಾಂತರಿಸುವ ಮುನ್ನ ಸಂಸತ್ತಿನ ಎರಡು ಸದನದ ಅಂಗೀಕಾರ ಪಡೆಯಬೇಕು ಎಂದು ತೀರ್ಪು ನೀಡಿತು.

**ಭಾರತದಲ್ಲಿ 861.66 ಮಿಲಿಯನ್ ಮೊಬೈಲ್ ಬಳಕೆದಾರರು**

ಭಾರತದಲ್ಲಿ ಮೊಬೈಲ್ ಬಳಕೆದಾರರ ಅಂಕಿ-ಅಂಶಗಳನ್ನು "ಭಾರತೀಯ ದೂರ ಸಂಪರ್ಕ ಪ್ರಾಧಿಕಾರ (TRAI)" ಬಿಡುಗಡೆ ಮಾಡಿದ್ದು, ದೇಶದಲ್ಲಿ ಒಟ್ಟು 86.16 ಕೋಟಿ ಮೊಬೈಲ್ ಬಳಕೆದಾರರಿದ್ದಾರೆ. ಈ ಮೂಲಕ ಜಗತ್ತಿನಲ್ಲಿಯೇ ಅತಿ ಹೆಚ್ಚು ಮೊಬೈಲ್ ಬಳಕೆ ಮಾಡುವ ದೇಶಗಳ ಪೈಕಿ ಭಾರತ ಎರಡನೇ ಸ್ಥಾನ ಪಡೆದುಕೊಂಡಿದೆ.

**ವಿವರಣೆ:**

- ದೇಶದಲ್ಲಿ ಅತಿ ಹೆಚ್ಚು ಮೊಬೈಲ್ ಬಳಕೆದಾರರನ್ನು ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಉತ್ತರಪ್ರದೇಶದಲ್ಲಿ 12.10 ಕೋಟಿ ಮೊಬೈಲ್ ಬಳಕೆದಾರರು ಇರುವುದಾಗಿ ಹೇಳಲಾಗಿದೆ.
- ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಬಿಹಾರ ಕ್ರಮವಾಗಿ ನಂತರದ ಸ್ಥಾನದಲ್ಲಿವೆ. ತಮಿಳುನಾಡನಲ್ಲಿ 7.10 ಕೋಟಿ, ಮಹಾರಾಷ್ಟ್ರದಲ್ಲಿ 6.7 ಕೋಟಿ, ಆಂಧ್ರಪ್ರದೇಶದಲ್ಲಿ 6.4 ಕೋಟಿ ಮತ್ತು ಬಿಹಾರದಲ್ಲಿ 6 ಕೋಟಿ ಮೊಬೈಲ್ ಚಂದಾದರು ಇದ್ದಾರೆ.
- ಮೊಬೈಲ್ ಬಳಕೆಯಲ್ಲಿ ಕರ್ನಾಟಕ 6 ನೇ ಸ್ಥಾನದಲ್ಲಿದೆ. ಕರ್ನಾಟಕ 5.245 ಕೋಟಿ ಮೊಬೈಲ್ ಬಳಕೆದಾರರನ್ನು ಹೊಂದಿದೆ.
- ಸ್ಥಿರ ಮತ್ತು ಮೊಬೈಲ್ ಎರಡನ್ನೂ ಸೇರಿಸಿ ಭಾರತದಲ್ಲಿ ದೂರವಾಣಿ ಬಳಕೆದಾರರ ಸಂಖ್ಯೆ 80.92 ಕೋಟಿ. 2012 ರ ಜೂನ್ ನಲ್ಲಿ ದೇಶದ ದೂರವಾಣಿ ಬಳಕೆದಾರರ ಸಂಖ್ಯೆ 96.56 ಕೋಟಿ ಮುಟ್ಟುವ ಮೂಲಕ ದಾಖಲೆ ಬರೆದಿತ್ತು.
- ಮೊಬೈಲ್ ಬಳಕೆಯಲ್ಲಿ ಮೊದಲ 5 ರಾಜ್ಯಗಳಲ್ಲಿ ಇಡೀ ರಾಷ್ಟ್ರದ ಬಳಕೆದಾರರ ಬಹುತೇಕ ಅರ್ಧದಷ್ಟಿದ್ದಾರೆ.

**ಕೂಡಂಕುಲಂ ಅಣು ಸ್ಥಾವರಕ್ಕೆ ಆರಂಭಕ್ಕೆ ಸುಪ್ರೀಂ ಕೋರ್ಟ್ ಒಪ್ಪಿಗೆ**

ತಮಿಳುನಾಡಿನ ಕೂಡಂಕುಲಂ ಅಣು ವಿದ್ಯುತ್ ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದಂತೆ ನಡೆಸುತ್ತಿರುವ ಕಾರ್ಯಾಚರಣೆಯನ್ನು ಮುಂದುವರೆಸಲು ಸುಪ್ರೀಂಕೋರ್ಟ್ ಒಪ್ಪಿಗೆ ಸೂಚಿಸಿದೆ.ಇದರೊಂದಿಗೆ ಈ ಸ್ಥಾವರಕ್ಕೆ ಎದುರಾಗಿದ್ದ ದೊಡ್ಡ ವಿಘ್ನವೊಂದು ದೂರವಾಗಿದೆ.

- ಸ್ಥಾವರದಲ್ಲಿ ಕೆಲ ಉಪಕರಣಗಳು ದೋಷಪೂರಿತವಾಗಿವೆ. ಹೀಗಾಗಿ ಅವುಗಳನ್ನು ಸರಿಪಡಿಸಿದ ಹೊರತೂ ಘಟಕದಲ್ಲಿ ವಿದ್ಯುತ್ ಉತ್ಪಾದನೆಗೆ ಅನುಮತಿ ನೀಡಬಾರದು ಎಂದು ಸಲ್ಲಿಸಲಾಗಿದ್ದ ಅರ್ಜಿಯ ಕುರಿತು ಸೋಮವಾರ ತೀರ್ಪು ನೀಡಿದ ಸುಪ್ರೀಂಕೋರ್ಟ್, ಸ್ಥಾವರದ ಸುರಕ್ಷತೆ, ಭದ್ರತೆ, ಪರಿಸರ ಸಂರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಇದರಿಂದ ಸಾರ್ವಜನಿಕರಿಗೆ ಲಾಭವಾಗಲಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

**ಕೂಡಂಕೂಲಂ ಅಣು ವಿದ್ಯುತ್ ಘಟಕ**:

- ತಮಿಳುನಾಡಿನ "ತಿರುಣ್ ವೆಲಿ" ಜಿಲ್ಲೆಯ ಕೂಡಂಕೂಲಂ ನಲ್ಲಿ ಈ ಅಣು ವಿದ್ಯುತ್ ಘಟಕವನ್ನು "ರಷ್ಯಾ"ದ ಸಹಯೋಗದೊಂದಿಗೆ ಸ್ಥಾಪಿಸಲಾಗುತ್ತಿದೆ. 2002 ರಲ್ಲಿ ಕಾಮಗಾರಿ ಆರಂಭವಾಯಿತು. ಆದರೆ ಈ ಘಟಕದ ನಿರ್ಮಾಣಕ್ಕೆ ತೀವ್ರ ಪ್ರತಿಭಟನೆ ನಡೆಯುತ್ತಿರುವ ಕಾರಣ ಇದುವರೆಗೂ ಕಾರ್ಯರಂಭವಾಗಿಲ್ಲ.

**ನವಜಾತ ಶಿಶು ಮತ್ತು ಜನ್ಮ ನೀಡುವ ತಾಯಿ ಸುರಕ್ಷತೆಯಲ್ಲಿ ಭಾರತಕ್ಕೆ 147 ನೇ ಸ್ಥಾನ**

ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ ತಗ್ಗಿಸಲು ಸರ್ಕಾರ ಎಷ್ಟೆಲ್ಲಾ ಕಸರತ್ತು ನಡೆಸಿದರು ಸಾಧನೆ ಮಾತ್ರ ತೃಪ್ತಿಕರವಲ್ಲ. ಭಾರತದಲ್ಲಿ ಹುಟ್ಟುವ ಪ್ರತಿ ಮೂರರಲ್ಲಿ ಒಂದು ಮಗು ಹುಟ್ಟಿದ ದಿನದಂದೇ ಅಸುನೀಗುತ್ತಿದೆ ಎಂಬ

ಆಘಾತಕಾರಿ ಅಂಶವನ್ನು "ಸೇವ್ ದಿ ಚಿಲ್ಡ್ರನ್" ಸ್ವಯಂ ಸೇವಾ ಸಂಸ್ಥೆ ಹೊರತಂದಿರುವ "ಸ್ಟೇಫ್ ಆಫ್ ವರ್ಲ್ಡ್ಸ್ ಮದರ್ಸ್-2013" ಎಂಬ ವರದಿಯಲ್ಲಿ ಹೊರಗೆಡವಿದೆ.

- ರಾಷ್ಟ್ರದಲ್ಲಿ ಪ್ರತಿ ವರ್ಷ 3,09,000 ಶಿಶುಗಳು ಹುಟ್ಟಿದ ದಿನದಂದೇ ಸಾವಿಗೀಡಾಗುತ್ತಿವೆ. ಹುಟ್ಟಿದ ದಿನದಂದೇ ಶಿಶುಗಳು ಅತ್ಯಧಿಕವಾಗಿ ಸಾವನ್ನಪ್ಪುವ 10 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಪಾಕಿಸ್ತಾನ ಮೂರನೇ ಸ್ಥಾನದಲ್ಲಿ, ಬಾಂಗ್ಲದೇಶ ಏಳನೇ ಸ್ಥಾನದಲ್ಲಿ ಮತ್ತು ಆಫ್ಘಾನಿಸ್ತಾನ ಒಂಬತ್ತನೇ ಸ್ಥಾನದಲ್ಲಿದೆ.
- ರಾಷ್ಟ್ರದಲ್ಲಿ ಪ್ರತಿ ವರ್ಷ 56,000 ತಾಯಂದಿರು ಸಾವಿಗೀಡಾಗುತ್ತಿದ್ದು, ಇದು ಕೂಡ ಜಗತ್ತಿನಲ್ಲೇ ಅತ್ಯಧಿಕವಾಗಿದೆ.
- 176 ರಾಷ್ಟ್ರಗಳಲ್ಲಿ ಕ್ರೋಢಿಕರಿಸಲಾದ ಅಂಕಿ ಅಂಶಗಳ ಪೈಕಿ ಭಾರತಕ್ಕೆ 142 ನೇ ಸ್ಥಾನ ಲಭಿಸಿದೆ. ಚೀನಾ (68) ಮತ್ತು ಪಾಕಿಸ್ತಾನಕ್ಕಿಂತ (139) ಲೂ ಭಾರತ ಕಳಪೆ ಸಾಧನೆ ತೋರಿದೆ.
- ತಾಯಂದಿರ ಸುರಕ್ಷತೆಯಲ್ಲಿ "ಫಿನ್ ಲ್ಯಾಂಡ್" ನಂ.1 ಸ್ಥಾನದಲ್ಲಿದೆ. "ಸ್ವೀಡನ್", "ನಾರ್ವೆ" ಮತ್ತು "ಐಸ್ ಲ್ಯಾಂಡ್" ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ಫಿನ್ ಲ್ಯಾಂಡ್ ನಲ್ಲಿ 12,200 ತಾಯಂದಿರಗೆ ಕೇವಲ ಒಬ್ಬರು ಸಾವನ್ನಪ್ಪುತ್ತಿದ್ದಾರೆ.
- ಈ ಪಟ್ಟಿಯಲ್ಲಿ "ರಿಪಬ್ಲಿಕ್ ಆಫ್ ಕಾಂಗೋ" ಕಡೆ ಸ್ಥಾನದಲ್ಲಿದೆ. ಕಾಂಗೋದಲ್ಲಿ ಪ್ರತಿ 30 ತಾಯಂದಿರಲ್ಲಿ ಒಬ್ಬರು ಮತ್ತು 7 ಮಕ್ಕಳಲಲ್ಲಿ ಒಂದು ಮಗು ಅಸುನೀಗುತ್ತಿದ್ದಾರೆ.
- ತಾಯಂದಿರ ಆರೋಗ್ಯ, ಶಿಶು ಮರಣ ಪ್ರಮಾಣ, ಶಿಕ್ಷಣ, ಆದಾಯ ಮತ್ತು ರಾಜಕೀಯ ಸ್ಥಾನಮಾನವನ್ನು ಮಾನದಂಡಗಳಾಗಿಟ್ಟುಕೊಂಡು ಪಟ್ಟಿಯನ್ನು ತಯಾರಿಸಲಾಗಿದೆ.

**NRLM ಯೋಜನೆಯಡಿ ಸ್ವ-ಸಹಾಯ ಗುಂಪುಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ**

ಸ್ವ-ಸಹಾಯ ಗುಂಪುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಸಲುವಾಗಿ "ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಯೋಜನೆ (National Rural Livelihood Mission)"ಗೆ ಮಹತ್ವದ ಬದಲಾವಣೆ ತರಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಗ್ರಾಮೀಣ ಭಾಗದಲ್ಲಿ ಬಡತನ ನಿರ್ಮೂಲನೆ ಮಾಡುವ ಮೂಲಕ ಮಹಿಳೆಯರ ಸಬಲೀಕರಣ ಗುರಿಯನ್ನು ಹೊಂದಿರುವ ಈ ಯೋಜನೆಯಡಿ ಸ್ವ-ಸಹಾಯ ಗುಂಪುಗಳಿಗೆ ಶೇ.7 ರಷ್ಟು ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು.

- ಸರಿಸುಮಾರು 25 ಲಕ್ಷ ಸ್ವ-ಸಹಾಯ ಗುಂಪುಗಳಿಗೆ ಶೇ.7 ರಷ್ಟು ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಪ್ರತಿ ಸ್ವ-ಸಹಾಯಗಳು 3 ಲಕ್ಷಗಳ ವರೆಗೆ ಸಾಲವನ್ನು ಪಡೆಯಬಹುದಾಗಿದೆ.
- ಮೊದಲ ಹಂತದಲ್ಲಿ ಈ ಯೋಜನೆಯನ್ನು 150 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು. ಇದರಲ್ಲಿ ನಕ್ಸಲ್ ಪೀಡಿತಕ್ಕೆ ಒಳಗಾಗಿರುವ 82 ಜಿಲ್ಲೆಗಳು ಒಳಗೊಂಡಿರಲಿವೆ. ಈ ಯೋಜನೆಗೆ ತಗಲುವ ವೆಚ್ಚವನ್ನು 75:25 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸಲಿವೆ.
- ಪ್ರಸ್ತುತ ಸ್ವ-ಸಹಾಯ ಸಂಘಗಳು ಶೇ.11.5 ರಿಂದ 14 ರಷ್ಟು ಬಡ್ಡಿ ದರದಲ್ಲಿ ಸಾಲವನ್ನು ಪಡೆಯುತ್ತಿವೆ. 2013-14 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 1650 ಕೋಟಿ ತಗಲಬಹುದು ಎಂದು ಅಂದಾಜಿಸಲಾಗಿದೆ. ಇದರಲ್ಲಿ ರೂ.1400 ಕೋಟಿಯನ್ನು ಕೇಂದ್ರ ಸರ್ಕಾರ ಮತ್ತು ರೂ.250 ಕೋಟಿಯನ್ನು ರಾಜ್ಯ ಸರ್ಕಾರಗಳು ಭರಿಸಲಿವೆ.

**"ಅಜೀವಿಕ-"ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಯೋಜನೆ"**

- ಕೇಂದ್ರ ಗ್ರಾಮೀಣಭಿವೃದ್ಧಿ ಸಚಿವಾಲಯ ಈ ಯೋಜನೆಯನ್ನು 2011 ರಲ್ಲಿ ಪ್ರಾರಂಭಿಸಿತು. ಈ ಯೋಜನೆ ಅನುಷ್ಠಾನಕ್ಕೆ ವಿಶ್ವಬ್ಯಾಂಕ್ ನೆರವು ನೀಡಿದೆ.
- ಗ್ರಾಮೀಣ ಭಾಗದ ಕುಟುಂಬಗಳ ವರಮಾನವನ್ನು ಉತ್ತಮಗೊಳಿಸಿ ಬಡತನವನ್ನು ನಿರ್ಮೂಲನೆ ಮಾಡುವುದು ಈ ಯೋಜನೆಯ ಮುಖ್ಯ ಗುರಿ.

**ಪಶ್ಚಿಮ ಬಂಗಾಳ ಮತ್ತು ಆಂಧ್ರ ಪ್ರದೇಶದಲ್ಲಿ ಪ್ರಮುಖ ಬಂದರುಗಳ ನಿರ್ಮಾಣಕ್ಕೆ CCEA ಒಪ್ಪಿಗೆ**

ಪಶ್ಚಿಮ ಬಂಗಾಳ ಮತ್ತು ಆಂಧ್ರಪ್ರದೇಶದಲ್ಲಿ ಎರಡು ಪ್ರಮುಖ ಬಂದರು (Major Ports) ನಿರ್ಮಾಣ ಕುರಿತಾಗಿ ಬಂದರು ಸಚಿವಾಲಯ ಸಲ್ಲಿಸಿದ್ದ ಪ್ರಸ್ತಾವನೆಗೆ "ಆರ್ಥಿಕ ವ್ಯವಹಾರಗಳ ಮೇಲಿನ ಕೇಂದ್ರ ಸಚಿವ ಸಂಪುಟ (Cabinet Committee on Economic Affairs)" ಒಪ್ಪಿಗೆ ಸೂಚಿಸಿದೆ. ಈ ಎರಡು ಬಂದರುಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು. ಆದರೆ ಪರಿಸರ ಸಚಿವಾಲಯದಿಂದ ತಾತ್ವಿಕ ಒಪ್ಪಗೆ ಪಡೆಯದ ಹೊರತು ಕಾಮಗಾರಿಯನ್ನು ಆರಂಭಿಸಬಾರದು ಎಂದು ಸೂಚಿಸಲಾಗಿದೆ. ಜತೆಗೆ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳಿಗೆ ಅನುಗುಣವಾಗಿ, ರಾಜ್ಯ ಸರ್ಕಾರಗಳ ಸಂಯೋಜನೆಯೊಂದಿಗೆ ಈ ಬಂದರುಗಳನ್ನು ಸ್ಥಾಪಿಸುವುದು ಎಂದು ಸಚಿವ ಸಂಪುಟ ತಿಳಿಸಿದೆ.

**ಎಲ್ಲೆಲ್ಲಿ:**

- ಪಶ್ಚಿಮ ಬಂಗಾಳದ **"ಸಾಗರ್ ದ್ವೀಪ"** ಮತ್ತು ಆಂಧ್ರ ಪ್ರದೇಶದ **"ದುಗರಾಜಪಟ್ಟಣಂ"** ಬಳಿ ನಿರ್ಮಿಸಲು ಉದ್ದೇಶಿಸಲಾಗಿದೆ.

**ಅನುಕೂಲಗಳು:**

**ಪಶ್ಚಿಮ ಬಂಗಾಳದ "ಸಾಗರ್ ದ್ವೀಪ್"**

- ಸದ್ಯ ಕೊಲ್ಕತ್ತಾದಲ್ಲಿ "ಕೊಲ್ಕತ್ತಾ ಡಾಕ್" ಮತ್ತು "ಹಲ್ದೀಯಾ ಡಾಕ್" ಎರಡು ಬಂದರುಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಈ ಎರಡು ಪ್ರದೇಶಗಳು ಹವಾಮಾನ ವೈಪರೀತ್ಯಕ್ಕೆ ತುತ್ತಾಗುವುದು ಸರ್ವೇ ಸಾಮಾನ್ಯವಾಗಿದೆ. ಹೂಗ್ಲಿ ನದಿಯಲ್ಲಿ ಹೂಳು ತುಂಬಿಕೊಂಡಾಗ ದೊಡ್ಡ ಗಾತ್ರದ ಹಡಗುಗಳ ಸಂಚಾರಕ್ಕೆ ತೊಂದರೆಯಾಗುವ ಕಾರಣ ಬೇರೊಂದು ಬಂದರಿನ ಅವಶ್ಯಕತೆ ಇತ್ತು.
- "ಸಾಗರ್ ದ್ವೀಪ" ಆಳವಾಗಿ ಇರುವ ಕಾರಣ ದೊಡ್ಡ ಗಾತ್ರದ ಹಡಗುಗಳ ಸಂಚಾರಕ್ಕೆ ಇದು ಅನುಕೂಲವಾಗಲಿದೆ.

**ಆಂಧ್ರಪ್ರದೇಶ "ದುಗರಾಜಪಟ್ಟಣಂ"**

- ಆಂಧ್ರಪ್ರದೇಶದ ಆರ್ಥಿಕ ಬೆಳವಣಿಗೆಗೆ ಈ ಬಂದರು ಅಪಾರ ಕೊಡುಗೆ ನೀಡಲಿದೆ ಎನ್ನಲಾಗಿದೆ. ವಿಶಾಖಪಟ್ಟಣಂ ನ ಸುತ್ತಮುತ್ತಲಿನ ಪ್ರದೇಶದಲ್ಲಿ ಕೈಗಾರಿಕ ವಲಯ ಗಣನೀಯ ಬೆಳವಣಿಗೆ ಕಾಣುತ್ತಿದ್ದು, ದುಗರಾಜಪಟ್ಟಣಂ ಬಂದರು ಕೈಗಾರಿಕೆಗಳ ಅಭಿವೃದ್ಧಿ ಸಹಕಾರಿ ಎನಿಸಲಿದೆ.

**ಬುಡಕಟ್ಟು ಅರಣ್ಯ ನಿವಾಸಿಗಳ ಸಬಲೀಕರಣ ಯೋಜನೆಗೆ ಚಾಲನೆ**

ಬುಡಕಟ್ಟು ಅರಣ್ಯ ನಿವಾಸಿಗಳನ್ನು ಆರ್ಥಿಕವಾಗಿ ಸಧೃಡಗೊಳಿಸಿಲು "ರಾಷ್ಟ್ರೀಯ ಪರಿಶಿಷ್ಠ ಪಂಗಡ ಹಣಕಾಸು ಮತ್ತು ಅಭಿವೃದ್ಧಿ ಮಂಡಳಿ (National Schedule Tribes Finance and Development Corporation (NSFDC)) ಜಾರಿಗೆ ತಂದಿರುವ "ಬುಡಕಟ್ಟು ಅರಣ್ಯ ನಿವಾಸಿಗಳ ಸಬಲೀಕರಣ ಯೋಜನೆ (Tribal Forest Dwellers Empowerment Scheme)" ಗೆ ಕೇಂದ್ರ ಬುಡಕಟ್ಟು ವ್ಯವಹಾರ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ.ವಿ.ಕಿಶೋರ್ ಚಂದ್ರ ದಿಯೋ ರವರು ಇತ್ತೀಚೆಗೆ ಚಾಲನೆ ನೀಡಿದರು. ಇದೇ ವೇಳೆ ಬುಡಕಟ್ಟು ಪಂಗಡಗಳಿಗಾಗಿ ಸರ್ಕಾರ ಜಾರಿಗೊಳಿಸಿರುವ ಇತರೆ ಯೋಜನೆಗಳನ್ನು ಪ್ರಚಾರ ಪಡಿಸುವ ಸಲುವಾಗಿ NSFDC ಮತ್ತು All India Radio ನಡುವೆ ಒಡಂಬಡಿಕೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- ಅರಣ್ಯ ಹಕ್ಕು ಕಾಯಿದೆ (Forest Right Act)-2006 ಮತ್ತು ಅರಣ್ಯ ನಿವಾಸಿಗಳಿಗಾಗಿ ಈ ಮುಂಚೆಯಿಂದಲೂ ಜಾರಿಯಲ್ಲಿರುವ ಯೋಜನೆಗಳಡಿಯಲ್ಲಿ ಹಣಕಾಸಿನ ನೆರವನ್ನು ಒದಿಸಲಾಗುವುದು. ಈ ಮೂಲಕ ಬುಡಕಟ್ಟು ಅರಣ್ಯ ನಿವಾಸಿಗಳ ಜೀವನ ಮಟ್ಟವನ್ನು ಸುಧಾರಿಸುವುದು ಈ ಯೋಜನೆಯ ಉದ್ದೇಶ.
- ಪ್ರಸುತ್ತ ಜಾರಿಯಲ್ಲಿರುವ ಅರಣ್ಯ ಹಕ್ಕು ಕಾಯಿದೆ-2006 ರ ಅಡಿಯಲ್ಲಿ ಪರಿಶಿಷ್ಠ ಪಂಗಡ ಮತ್ತಿತ್ತರೆ ಪಂಗಡಗಳ ಅರಣ್ಯ ನಿವಾಸಿಗಳಿಗೆ ಅರಣ್ಯ ಭೂಮಿಯನ್ನು ಹೊಂದುವ ಮತ್ತು ವ್ಯವಸಾಯಕ್ಕೆ ಬಳಸಿಕೊಳ್ಳುವ ಹಕ್ಕನ್ನು ನೀಡಲಾಗಿದೆ. ಆದರೆ ಸಾಕಷ್ಟು ಬುಡಕಟ್ಟು ಜನಾಂಗಗಳು ಇಂದು ಆರ್ಥಿಕವಾಗಿ ಹಿಂದುಳಿದಿದ್ದು, ಜೀವನಾಧಾರಕ್ಕೆ ಸಾಗುವಳಿ ಭೂಮಿಯನ್ನು ಬಳಸಿಕೊಳ್ಳುವಲ್ಲಿ ವಿಫಲವಾಗಿವೆ.
- ಹೊಸದಾಗಿ ಜಾರಿಗೊಳಿಸಿರುವ ಈ ಯೋಜನೆಯಡಿ ಬುಡಕಟ್ಟು ಅರಣ್ಯ ನಿವಾಸಿಗಳಿಗೆ ಅರಿವು, ಮಾರುಕಟ್ಟೆ ವ್ಯವಸ್ಥೆಗೆ ಸಂಬಂಧಿಸಿದಂತೆ ಸಹಾತ ಮತ್ತು ತರಭೇತಿ ನೀಡಲಾಗುವುದು. ಈ ಯೋಜನೆಯಡಿ ಫಲಾನುಭವಿಗಳಿಗೆ ವಾರ್ಷಿಕವಾಗಿ ಶೇ.6 ರಷ್ಟು ಬಡ್ಡಿದರದಲ್ಲಿ ಆರ್ಥಿಕ ಸಹಾಯವನ್ನು ಒದಗಿಸಲಾಗುವುದು.

**"ಕೇರ್ನ್-ವೇದಾಂತ" ಒಪ್ಪಂದ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಸುಪ್ರೀಂಕೋರ್ಟ್**

ಕೇರ್ನ್-ವೇದಾಂತ" ಕಂಪನಿಗಳ ನಡುವೆ ಸಹಿಹಾಕಲಾಗಿದ್ದ 8.5 ಬಿಲಿಯನ್ ಡಾಲರ್ ಒಪ್ಪಂದದ ಮಾನ್ಯತೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜಿಕ ಹಿತಾಸಕ್ತಿ ಅರ್ಜಿಯನ್ನು ಮೇ.8, 2013 ರಂದು ಸುಪ್ರೀಂಕೋರ್ಟ್ ವಜಾಗೊಳಿಸಿತು. ನ್ಯಾಯಮೂರ್ತಿ ಕೆ.ಎಸ್. ರಾಧಕೃಷ್ಣನ್ ಮತ್ತು ದೀಪಕ್ ಮಿಶ್ರಾ ರವರನ್ನು ಒಳಗೊಂಡ ಪೀಠ ಈ ಮಹತ್ವದ ತೀರ್ಪನ್ನು ನೀಡಿದೆ. ಕೇಂದ್ರ ಸರ್ಕಾರ ಮತ್ತು ONGC ಸೂಕ್ಷವಾಗಿ ಗಮನಿಸದ ಮೇಲೆ ಈ ನಿರ್ಣಯವನ್ನು ಕೈಗೊಳ್ಳಲಾಗಿರುವ ಕಾರಣ ಈ ಒಪ್ಪಂದದಲ್ಲಿ ಕೋರ್ಟ್ ಮಧ್ಯಸ್ಥಿಕೆ ವಹಿಸುವುದಿಲ್ಲ ಎಂದು ಹೇಳಿದೆ.

**ಹಿನ್ನಲೆ**:

- ಕೇರ್ನ್-ವೇದಾಂತ ನಡುವೆ ಸಹಿಹಾಕಲಾಗಿರುವ 8.5 ಬಿಲಿಯನ್ ಡಾಲರ್ ಒಪ್ಪಂದದಲ್ಲಿ ಷರತ್ತನ್ನು ಉಲ್ಲಂಘಿಸಲಾಗಿದೆ ಎಂದು ಬೆಂಗಳೂರು ಮೂಲದ ಅರುಣ್ ಕುಮಾರ್ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದರು. ಷರತ್ತಿನ ಅನ್ವಯ ಯು.ಕೆ ಮೂಲದ ಕೇರ್ನ್ ಕಂಪನಿ ತನ್ನ ಪಾಲನ್ನು ವೇದಾಂತ ಕಂಪನಿಗೆ ಮಾರುವ ಮುನ್ನ ONGC ಗೆ

ಮಾರಬೇಕಿತ್ತು. ಆದರೆ ಷರತ್ತು ಉಲ್ಲಂಘನೆ ಆಗಿದ್ದರೂ ಕೇಂದ್ರ ಸರ್ಕಾರ ಮತ್ತು ONGC ಸುಮ್ಮನಿರುವುದನ್ನು ಪ್ರಶ್ನಿಸಿ ಸುಪ್ರೀಂಕೋರ್ಟಿನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ಯು.ಕೆ ಮೂಲದ ಕೆರ್ನ್ ಸಂಸ್ಥೆ ಸಮೂಹದ ಅಂಗ ಸಂಸ್ಥೆಯಾಗಿರುವ "ಕೆರ್ನ್ ಎನರ್ಜಿ" ರಾಜಸ್ಥಾನದಲ್ಲಿ ತೈಲ ಕಂಪನಿಯ ಒಡೆತನವನ್ನು ಹೊಂದಿದೆ. ಜೂನ್ 16, 2010 ರಂದು ಕೆರ್ನ್ ಎನರ್ಜಿ ತನ್ನ ಪ್ರಮುಖ ಪಾಲನ್ನು ಯು.ಕೆ ಮೂಲದ ವೇದಾಂತ ಕಂಪನಿಗೆ 8.5 ಬಿಲಿಯನ್ ಡಾಲರ್ ಒಪ್ಪಂದಕ್ಕೆ ಮಾರಾಟ ಮಾಡಿತ್ತು. ಆದರೆ ಕೆರ್ನ್ ಎನರ್ಜಿಯ ಪಾಲುದಾರಿಕೆ ಸಂಸ್ಥೆಯಾದ ONGC ಗೆ ಈ ಪಾಲನ್ನು ಮೊದಲು ಮಾರಬೇಕಿತ್ತು ಎಂಬುದು ಅರ್ಜಿದಾರರ ವಾದವಾಗಿತ್ತು.

**ರಾಜಸ್ಥಾನದ ಆರು ಕೋಟೆಗಳಿಗೆ ಯುನೆಸ್ಕೋ "ವಿಶ್ವ ಪರಂಪರಿಕ ತಾಣ (World Heritage Site)" ಮಾನ್ಯತೆ**

ರಜಪೂತರ ಆಳ್ವಿಕೆಯ ಸೊಬಗನ್ನು ಬಣ್ಣಿಸುವ ರಾಜಸ್ತಾನದ ಆರು ಕೋಟೆಗಳಿಗೆ ಯುನೆಸ್ಕೋದ "ವಿಶ್ವ ಪರಂಪರಿಕ ತಾಣ"ದ ಮಾನ್ಯತೆ ಲಭಿಸಿದೆ. "ರಾಜಸ್ತಾನದ ಆರು ಕೋಟೆಗಳನ್ನು ವಿಶ್ವ ಪರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಗೊಳಿಸುವಂತೆ ಕೇಂದ್ರ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗೆ ಯುನೆಸ್ಕೊ ಹಸಿರು ನಿಶಾನೆ ತೋರಿರುವುದಾಗಿ ಕೇಂದ್ರ ಸಂಸ್ಕೃತಿ ಸಚಿವೆ "ಚಂದ್ರೇಶ್ ಕುಮಾರಿ ಕಠೋಚ್" ರವರು ಹೇಳಿದ್ದಾರೆ.

- ರಾಜಸ್ತಾನದ ಚಿತ್ತರಗರ್, ಕುಂಬಳಗರ್, ರಣತಂಭೋರ್, ಜೈಸ್ಲಮರ್, ಅಂಬೆರ್ ಮತ್ತು ಗಗ್ರಾನ್ ಕೋಟೆಗಳೆ ಯುನೆಸ್ಕೊ ವಿಶ್ವ ಪರಂಪರಿಕ ತಾಣ ಪಟ್ಟಿಗೆ ಸೇರ್ಪಡೆಗೊಂಡಿರುವ ತಾಣಗಳು.
- ಅರಾವಳಿ ಪರ್ವತ ಸಾಲಿನಲ್ಲಿ ಕಟ್ಟಲಾಗಿರುವ ಈ ಕೋಟೆಗಳು ರಾಜಸ್ತಾನದ ಚಿತ್ತರಗರ್, ರಾಜಸ್ಮಂಡ್, ಜೈಪುರ, ಸವಾಯಿ ಮಾದೋಪುರ್, ಜೈಸ್ಲಮರ್ ಮತ್ತು ಜಲವಾರ ಜಿಲ್ಲೆಗಳಲ್ಲಿವೆ.
- ರಜಪೂತ ರಾಜರು ಈ ಕೋಟೆಗಳನ್ನು ಕ್ರಿ.ಶ 8 ನೇ ಶತಮಾನದಿಂದ-19 ನೇ ಶತಮಾನದ ಅವಧಿಯಲ್ಲಿ ನಿರ್ಮಿಸಿರುವುದಾಗಿ ಇತಿಹಾಸದಲ್ಲಿ ಹೇಳಲಾಗಿದೆ. ರಜಪೂತರ ಆಳ್ವಿಕೆ, ಕಲೆ ಮತ್ತು ಸೇನಾ ಕೌಶಲ್ಯಕ್ಕೆ ಈ ಕೋಟೆಗಳು ಕನ್ನಡಿ ಹಿಡಿದಂತಿವೆ. ಇವುಗಳ ಸೇರ್ಪಡೆಯಿಂದಾಗಿ ಇದೇ ಮೊದಲ ಬಾರಿಗೆ ರಾಜಸ್ತಾನದ ಐತಿಹಾಸಿಕ ತಾಣಗಳು "ವಿಶ್ವ ಪರಂಪರಿಕ ತಾಣ" ಪಟ್ಟಿ"ಯಲ್ಲಿ ಸ್ಥಾನ ಪಡಿದಿದೆ.
- ಕಳೆದ ಎರಡು ವರ್ಷಗಳಿಂದ ಸರ್ಕಾರ ವಿಶ್ವ ಪರಂಪರಿಕ ತಾಣ ಪಟ್ಟಿಯಲ್ಲಿ ಈ ಕೋಟೆಗಳನ್ನು ಸೇರ್ಪಡೆಗೊಳಿಸಲು ಪ್ರಯತ್ನಿಸುತ್ತಿತ್ತು. ಆದರೆ ಕೆಲವು ಕಾರಣಗಳಿಂದ ಯುನೆಸ್ಕೊ ಸರ್ಕಾರದ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು.
- ಭಾರತದಲ್ಲಿ ಪ್ರಸ್ತುತ 29 ವಿಶ್ವ ಪರಂಪರಿಕ ತಾಣಗಳಿವೆ. ಅವುಗಳಲ್ಲಿ 23 ಸಂಸ್ಕೃತಿ ವಿಭಾಗದಲ್ಲಿ ಮತ್ತು ಉಳಿದ 6 ಸ್ವಾಭಾವಿಕ ವಿಭಾಗದಲ್ಲಿವೆ. ಕಳೆದ ವರ್ಷ "ಪಶ್ಚಿಮ ಘಟ್ಟ"ಕ್ಕೆ ವಿಶ್ವ ಪರಂಪರಿಕ ತಾಣದ ಮಾನ್ಯತೆ ನೀಡಲಾಗಿದೆ.

**"ದಿ ಗ್ರೇಟ್ ಹಿಮಾಲಯನ್ ರಾಷ್ಟ್ರೀಯ ಉದ್ಯಾನ":**

- ಇದೇ ವೇಳೆ ಜೀವವೈವಿಧ್ಯತೆಯಿಂದ ಕೂಡಿರುವ ಹಿಮಾಚಲ ಪ್ರದೇಶದ "ದಿ ಗ್ರೇಟ್ ಹಿಮಾಲಯನ್ ನ್ಯಾಷನಲ್ ಪಾರ್ಕ್" ನ್ನು "ವಿಶ್ವ ಪರಂಪರಿಕ ಪಟ್ಟಿ"ಗೆ ಸೇರಿಸುವಂತೆ ಭಾರತ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಯುನೆಸ್ಕೊ ತಿರಸ್ಕರಿಸಿದೆ. ಪರಿಸರ ಸಂರಕ್ಷಣೆಗೆ ಸಂಬಂಧಪಟ್ಟ ಕೆಲವು ವಿಚಾರಗಳಲ್ಲಿ ಯುನೆಸ್ಕೊ ಅಸಮಾಧಾನ ವ್ಯಕ್ತಪಡಿಸಿರುವ ಕಾರಣ ತಿರಸ್ಕೃತಗೊಂಡಿದೆ.

- ಅಸ್ಸಾಂ ನ "**ಮಜುಲಿ**" ನದಿ ದ್ವೀಪ ಪ್ರದೇಶ ಸಹ ಪ್ರಸ್ತಾವನೆಯ ಹಂತದಲ್ಲಿದೆ.

**ಸಿಬಿಐ ನಲ್ಲಿ ಸರ್ಕಾರದ ಹಸ್ತಕ್ಷೇಪ ಮುಕ್ತಿಗೊಳಿಸಲು: ಸಮಿತಿ ರಚನೆ:**

ಕೇಂದ್ರ ತನಿಖಾ ದಳವನ್ನು ಬಾಹ್ಯ ಪ್ರಭಾವಗಳು ಮತ್ತು ಒತ್ತಡದಿಂದ ದೂರವಿಟ್ಟು, ಸ್ವಾತಂತ್ರವಾಗಿ ಕಾರ್ಯನಿರ್ವಹಿಸಲು ಮಾರ್ಗದರ್ಶಿ ಸೂತ್ರಗಳನ್ನು ಶಿಫಾರಸ್ಸು ಮಾಡಲು ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿದೆ. ಬಾಹ್ಯಪ್ರಭಾವಗಳು ಮತ್ತು ಒತ್ತಡಗಳಿಂದ "ಸಿಬಿಐ" ನ್ನು ಮುಕ್ತಗೊಳಿಸಲು ಕಾನೂನು ರಚನೆ ಮಾಡಬೇಕೆಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದ ಹಿನ್ನಲೆಯಲ್ಲಿ ಸರ್ಕಾರ ಹಿರಿಯ ಸಚಿವರನ್ನು ಒಳಗೊಂಡ ಸಮಿತಿಯನ್ನು ರಚಿಸಿದೆ.

**ಸಮಿತಿಯ ಬಗ್ಗೆ:**

- ಪ್ರಧಾನಿ ಮನಮೋಹನ್ ಸಿಂಗ್ ರವರು ರಚಿಸಿರುವ ಈ ಸಮಿತಿಯಲ್ಲಿ ಹಣಕಾಸು ಸಚಿವ ಪಿ.ಚಿದಂಬರಂ ರವರು ಅಧ್ಯಕ್ಷತೆ ವಹಿಸಿಕೊಂಡಿದ್ದಾರೆ. ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್, ದೂರಸಂಪರ್ಕ ಸಚಿವ ಕಪಿಲ್ ಸಿಬಲ್, ಮಾಹಿತಿ ಮತ್ತು ಪ್ರಸಾರ ಸಚಿವ ಮನೀಶ್ ತಿವಾರಿ ಮತ್ತು ರಾಜ್ಯ ಖಾತೆ ಸಚಿವ ವಿ.ನಾರಾಯಣಸ್ವಾಮಿ ಈ ಸಮಿತಿಯ ಇತರೆ ಸದಸ್ಯರು.
- "ಸಿಬಿಐ" ಗೆ ಹೆಚ್ಚಿನ ಸ್ವಾಯುತ್ತತೆ ಮತ್ತು ರಾಜಕೀಯದ ಹಸ್ತಕ್ಷೇಪದಿಂದ ವಿಮುಕ್ತಿಗೊಳಿಸು ಮೂಲಕ ಸ್ವಾತಂತ್ರವಾಗಿ ಕೆಲಸ ಮಾಡಲು ಈ ಸಮಿತಿ ಸಲಹೆಗಳನ್ನು ಶಿಫಾರಸ್ಸು ಮಾಡಲಿದೆ.

**ಹಿನ್ನೆಲೆ:**

- ಸಿಬಿಐ ಯನ್ನು ತಮ್ಮದೇ ಸಂಕುಚಿತ ಸ್ವಾರ್ಥಗಳಿಗೆ ಅಸ್ತ್ರವಾಗಿ ಕೇಂದ್ರದ ವಿವಿಧ ಸರ್ಕಾರಗಳು ಬಳಸಿಕೊಳ್ಳುತ್ತಲೇ ಬಂದಿವೆ. ಇತ್ತೀಚೆಗೆ ಸಿಬಿಐ ಸಿದ್ದಪಡಿಸಿದ ಕಲ್ಲಿದ್ದಲು ಹಗರಣದ ವರದಿಯನ್ನು ಸುಪ್ರೀಂಕೋರ್ಟ್ ಗೆ ಸಲ್ಲಿಸುವ ಮುನ್ನವೇ ಕಾನೂನು ಸಚಿವ ಅಶ್ವನಿ ಕುಮಾರ್ ನೋಡಿದ್ದಲ್ಲದೇ, ವರದಿಯನ್ನು ತಿದ್ದಿರುವ ಕ್ರಮವೇ ನಮ್ಮ ಕಣ್ಣೆದುರಿಗೆ ಇರುವ ಸಾಕ್ಷಿ. ಸಿಬಿಐ ನಲ್ಲಿ ಸರ್ಕಾರದ ಹಸ್ತಕ್ಷೇಪದಿಂದ ಕೆರಳಿರುವ ಸುಪ್ರೀಂಕೋರ್ಟ್, ಸಿಬಿಐ ಹಲವು ಮಾಲೀಕರನ್ನು ಹೊಂದಿರುವ "ಪಂಜರದ ಗಿಳಿ" ಸಿಬಿಐ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿತ್ತು.
- ಹೀಗಾಗಿ ಬಾಹ್ಯಪ್ರಭಾವಗಳು ಮತ್ತು ರಾಜಕೀಯ ಒತ್ತಡಗಳಿಂದ ಸಿಬಿಐನ್ನು ಮುಕ್ತಿಗೊಳಿಸಿ, ನಿಷ್ಪಪಕ್ಷವಾಗಿ ಕೆಲಸ ನಿರ್ವಹಿಸಲು ಅನುಕೂಲ ಮಾಡಿಕೊಡುವಂತ ಕಾನೂನು ಜುಲೈ 10 ರೊಳಗೆ ರಚಿಸಬೇಕು ಎಂದು ಸರ್ಕಾರಕ್ಕೆ ಕೋರ್ಟ್ ಗಡುವು ನೀಡಿದೆ.
- ಕೇಂದ್ರ ಜಾಗೃತಿ ದಳ (ಸಿವಿಸಿ)ಗೆ ಶಾಸನಬದ್ದ ಸ್ಥಾನಮಾನ ನೀಡಿ ಸಿಬಿಐನ್ನು ಅದಕ್ಕೆ ಹಸ್ತಾಂತರಿಸಬೇಕು ಎಂಬ ಸಲಹೆಯನ್ನು ಕೋರ್ಟ್ ನೀಡಿದೆ.

**ನೌಕಾಪಡೆಗೆ ಮಿಗ್ 29 ಯುದ್ಧವಿಮಾನ ಸೇರ್ಪಡೆ**

ಹೊಸ ತಲೆಮಾರಿನ ಯುದ್ಧವಿಮಾನ "ಮಿಗ್-29 ಕೆ" ಯನ್ನು ಇತ್ತೀಚೆಗೆ ಗೋವಾದ "ಐಎನ್ಎಸ್ ಹಂಸ"ದಲ್ಲಿ ರಕ್ಷಣಾ ಸಚಿವ ಎ.ಕೆ. ಅಂಟನಿ ರವರ ಸಮ್ಮುಖದಲ್ಲಿ ನೌಕಾಪಡೆಗೆ ಸೇರ್ಪಡೆಗೊಳಿಸಲಾಯಿತು. ಮಿಗ್-29ಕೆ ಯಂತಹ ಆಧುನಿಕ ತಂತ್ರಜ್ಞಾನದ ಯುದ್ಧವಿಮಾನಗಳ ಸೇರ್ಪಡೆಯಿಂದ ಭಾರತ ರಕ್ಷಣಾ ಸಾಮರ್ಥ್ಯ ಹೆಚ್ಚಲಿದೆ ಎಂದು ಅಂಟನಿ ಹೇಳಿದರು.

**ಮಿಗ್-29ಕೆ**

- ಪ್ರಸ್ತಕ ಸಾಲಿನ ಉತ್ತರಾರ್ಧದಲ್ಲಿ ರಷ್ಯಾ ಸಹಾಯದಿಂದ ನೌಕಾಪಡೆಗೆ ಸೇರಿಕೊಳ್ಳಲಿರುವ "ಐಎನ್ಎಸ್ ವಿಕ್ರಮಾಧಿತ್ಯ"ದಲ್ಲಿ ಈ ಯುದ್ಧ ವಿಮಾನಗಳನ್ನು ನಿಯೋಜಿಸಲಾಗುವುದು.
- ಮಿಗ್-29ಕೆ ಯುದ್ಧವಿಮಾನಗಳನ್ನು ಭಾರತದ ಬೇಡಿಕೆಗೆ ತಕ್ಕಂತೆ ರಷ್ಯಾ ಸಿದ್ದಪಡಿಸಿದೆ. ಎರಡನೇ ಸ್ಕ್ವಾಡ್ರನ್ ಗಳನ್ನು 2015 ರ ವೇಳೆಗೆ ರಷ್ಯಾ ಪೂರೈಸಲಿದೆ.
- "ಇಂಡಿಯನ್ ನಾವಲ್ ಏರ್ ಸ್ಕ್ವಾಡ್ರನ್ಸ್ 303 (INAS-303)" ಅಥವಾ "ಬ್ಲಾಕ್ ಪಾಂಥರ್ಸ್" ಎಂದು ಕರೆಯಲಾಗುವ ಮಿಗ್-29ಕೆ ವಿಮಾನಗಳು ಆರಂಭದಲ್ಲಿ ಒಂದು ಆಸನದ 16 ಮತ್ತು ಎರಡು ಆಸನದ 4 ವಿಮಾನಗಳು (ಮಿಗ್-29KUB) ಕಾರ್ಯನಿರ್ವಹಿಸಲಿವೆ.
- ಪ್ರಸ್ತುತ ನೌಕಾಪಡೆಯಲ್ಲಿ "ಸೀ ಹ್ಯಾರೀರ್ (Sea Harrier)" ಯುದ್ಧವಿಮಾನಗಳು ಕಾರ್ಯನಿರ್ವಹಿಸುತ್ತಿದ್ದು, ಮಿಗ್-29ಕೆ ವಿಮಾನಗಳು ಇವುಗಳ ಸ್ಥಾನವನ್ನು ತುಂಬಲಿವೆ.
- "ಸೀ ಹ್ಯಾರೀರ್" ಯುದ್ಧವಿಮಾನಗಳಿಗಿಂತಲೂ ಮಿಗ್-29ಕೆ ವಿಮಾನಗಳು ಭಾರವಾಗಿದ್ದು, ಹೆಚ್ಚು ಕಾರ್ಯ ದಕ್ಷತೆಯಿಂದ ಕೂಡಿವೆ. ಅಲ್ಲದೇ ಗಾಳಿಯಲ್ಲೇ ಇಂಧನವನ್ನು ತುಂಬಿಸಬಹುದಾಗಿರುವ ಕಾರಣ ದೀರ್ಘ ಸಮಯದ ವರೆಗೆ ಕಾರ್ಯನಿರ್ವಹಿಸಲಿವೆ.'

**ಅತಿಸಾರದಿಂದ ಭಾರತದಲ್ಲಿ ಪ್ರತಿ ವರ್ಷ 1 ಲಕ್ಷ ಮಕ್ಕಳು ಸಾವು**

ಭಾರತದಲ್ಲಿ ಪ್ರತಿ ವರ್ಷ 11 ತಿಂಗಳಿಗಿಂತ ಕಡಿಮೆ ವಯಸ್ಸಿನ 1 ಲಕ್ಷ ಮಕ್ಕಳು ಅತಿಸಾರ (Diarrheal) ಕಾಯಿಲೆಗೆ ಬಲಿಯಾಗುತ್ತಿರುವುದಾಗಿ ಬ್ರಿಟಿಷ್ ಜರ್ನಲ್ "ಲ್ಯಾಂಸೆಟ್" ನಲ್ಲಿ ಪ್ರಕಟವಾಗಿದೆ. ನ್ಯೂಮೋನಿಯಾ ದ ನಂತರ ಮಕ್ಕಳನ್ನು ಬಲಿತೆಗೆದುಕೊಳ್ಳುತ್ತಿರುವ ಎರಡನೇ ಮಾರಣಾಂತಿಕ ಕಾಯಿಲೆ "ಅತಿಸಾರ".

- "ದಿ ಗ್ಲೋಬಲ್ ಎಂಟರಿಕ್ ಮಲ್ಟಿಸೆಂಟರ್ ಸ್ಟಡಿ (The Global Enteric Multicentre Study)" ಅಭಿವೃದ್ಧಿ ದೇಶಗಳಲ್ಲಿ ಅತಿಸಾರದ ಬಗ್ಗೆ ಕೈಗೊಂಡಿರುವ ಅಧ್ಯಯನದಿಂದ ಈ ಅಂಶ ಬೆಳಕಿಗೆ ಬಂದಿದೆ.
- GEMS ಮತ್ತು ಮೆರಿಲ್ಯಾಂಡ್ ವಿಶ್ವವಿದ್ಯಾಲಯ ನಡೆಸಿರುವ ಸಮೀಕ್ಷೆಯ ಪ್ರಕಾರ "ರೊಟೊವೈರಸ್ (Rotovirus)" ಸಂಬಂಧಿತ ಅತಿಸಾರಕ್ಕೆ ಹೆಚ್ಚಾಗಿ ಮಕ್ಕಳು ಬಲಿಯಾಗುತ್ತಿವೆ.
- ವಿಶ್ವ ಆಯೋಗ್ಯ ಸಂಸ್ಥೆಯ ಪ್ರಕಾರ "ದಿನದಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ಬಾರಿ ದ್ರವ ರೂಪದಲ್ಲಿ ಭೇದಿಯಾಗುವ ಸ್ಥಿತಿ"ಯನ್ನು ಅತಿಸಾರ ಎನ್ನಲಾಗುತ್ತದೆ. ಅತಿಸಾರದಿಂದ ದೇಹದ ನೀರಿನ ಪ್ರಮಾಣ ವಿಪರೀತ ಕಡಿಮೆಯಾಗುತ್ತದೆ. ದೇಹದಲ್ಲಿ ಎಲೆಕ್ಟ್ರೊಲೈಟ್ ಗಳ ಅಸಮಾನತೆ ಸಹ ಉಂಟಾಗುತ್ತದೆ.

- ಸೂಕ್ತ ಸಮಯದಲ್ಲಿ ಅಗತ್ಯವಿರುವ ಚಿಕಿತ್ಸೆ ನೀಡದಿದ್ದರೆ, ಜೀವವನ್ನೇ ತೆರೆಬೇಕಾಗುತ್ತದೆ.

**ಭಾರತ-ಅಮೆರಿಕಾ ಇಂಧನ ಪಾಲುದಾರಿಕೆ ಸಮ್ಮೇಳನ-2013**

4 ನೇ ಭಾರತ-ಅಮೆರಿಕಾ "ಇಂಧನ ಪಾಲುದಾರಿಕೆ ಸಮ್ಮೇಳನ(Energy Partnership Summit)" ವನ್ನು ಮೇ 13-14 ರಂದು ಅಮೆರಿಕಾದ ವಾಷಿಂಗ್ಟನ್ ನಲ್ಲಿ ಆಯೋಜಿಸಲಾಗಿತ್ತು. ಕೇಂದ್ರ ನವೀಕರಿಸಬಹುದಾದ ಇಂಧನ ಖಾತೆ ಸಚಿವ ಫಾರಕ್ ಅಬ್ದುಲ್ಲಾ, ರಾಜ್ಯ ಇಂಧನ ಖಾತೆ ಸಚಿವ "ಪಲ್ಲಂ ರಾಜು", ಅಮೆರಿಕಾ ಇಂಧನ ಕಾರ್ಯದರ್ಶಿ "ಡೆನಿಯಲ್ ಪೊನಮನ್" ಮತ್ತು TERI ಯ ನಿರ್ದೇಶಕ ರಾಜೇಂದ್ರ ಪಚೌರಿ ಸೇರಿದಂತೆ ಇಂಧನ ತಜ್ಞರು, ಉದ್ಯಮಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

**ಚರ್ಚಿಸಲಾದ ವಿಷಯಗಳು:**

- ಇಂಧನ ಭದ್ರತೆ, ಸುಸ್ಥಿರ ಅಭಿವೃದ್ಧಿ ಮತ್ತು ಶುದ್ದ ಇಂಧನ ಅಭಿವೃದ್ದಿಗಾಗಿ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಬಗ್ಗೆ ಉಭಯ ದೇಶಗಳ ಪ್ರತಿನಿಧಿಗಳ ಆಳವಾಗಿ ಚರ್ಚಿಸಿದರು.
- ಪಳೆಯುಳಿಕೆ ಇಂಧನದ ಮೇಲಿನ ಅವಲಂಭನೆಯನ್ನು ತಪ್ಪಿಸಲು, ನವೀಕರಿಸಬಹುದಾದ ಇಂಧನಗಳ ಸದ್ಬಳಕೆಗೆ ತಂತ್ರಜ್ಞಾನ ಅಭಿವೃದ್ಧಿ ಮತ್ತು ಪರಸ್ಪರ ವಿನಿಮಯಕ್ಕೆ ಭಾರತ-ಅಮೆರಿಕಾ ಬದ್ದವಿರುವುದಾಗಿ ಸಮ್ಮೇಳನದಲ್ಲಿ ತಿಳಿಸಲಾಯಿತು.
- ಇಂಧನ ಭದ್ರತೆಗೆ ಸಂಬಂಧಿಸಿದಂತೆ ಭಾರತ-ಅಮೆರಿಕಾ ದೇಶಗಳ ನಡುವೆ ಏರ್ಪಟ್ಟಿರುವ ದ್ವಿಪಕ್ಷೀಯ ಒಪ್ಪಂದದಿಂದಾಗಿ ಭವಿಷ್ಯತ್ ನಲ್ಲಿ ಎದುರಾಗಬಹುದಾದ ಇಂಧನ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು ಈ ಸಮ್ಮೇಳನ ನಿರ್ಣಯ ಮಾಡಲಾಯಿತು.
- ಉಭಯ ದೇಶಗಳಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನೆಗಾಗಿ ಪರಸ್ಪರ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಉದ್ಯಮಿಗಳನ್ನು ಪ್ರೇರೆಪಿಸುವ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಲಾಯಿತು.

**ಇಂಧನ ಪಾಲುದಾರಿಕೆ ಸಮ್ಮೇಳನ**

- ಭಾರತ-ಅಮೆರಿಕಾ ಇಂಧನ ಪಾಲುದಾರಿಕೆ ಸಮ್ಮೇಳವನ್ನು **"TERI (The Energy and Research Institute)" ಅಮೆರಿಕಾದ "ಯಾಲೆ (Yale) ವಿಶ್ವವಿದ್ಯಾಲಯದ**" ಸಹಯೋಗದೊಂದಿಗೆ ಆಯೋಜಿಸುತ್ತಿದೆ.
- 2010 ರಲ್ಲಿ ಈ ಸಮ್ಮೇಳನವನ್ನು "ವಾಷಿಂಗ್ ಟನ್" ನಲ್ಲಿ ಪ್ರಥಮ ಬಾರಿಗೆ ನಡೆಸಲಾಗಿತ್ತು.

**"(Lighting a Billion Lives)" ಯೋಜನೆ**

- "Lighting a Billion Lives": TERI ಉತ್ತರ ಅಮೆರಿಕಾ ಮತ್ತು TERI ಭಾರತ ಜಂಟಿಯಾಗಿ ಕೈಗೊಂಡಿರುವ ಮಹತ್ವದ ಕಾರ್ಯಕ್ರಮ.
- ಈ ಕಾರ್ಯಕ್ರಮವೂ "ಭಾರತ ಸೇರಿದಂತೆ ಜಗತ್ತಿನ ಇತರೆ ದೇಶಗಳ ಗ್ರಾಮೀಣ ಭಾಗಗಳಿಗೆ ಸೌರ ದೀಪ ಮತ್ತು ಸೌರ ಒಲೆ ಸೌಲಭ್ಯವನ್ನು ಕಲ್ಪಿಸುವ ಮೂಲಕ ವಿದ್ಯುತ್ ಅವಲಂಭನೆಯನ್ನು ತಗ್ಗಿಸುವ ಮಹತ್ವದ ಗುರಿಯನ್ನು ಹೊಂದಿದೆ. ಅಲ್ಲದೇ ಗ್ರಾಮೀಣ ಭಾಗದ ಜನರ ಆರೋಗ್ಯ ಮತ್ತು ಪರಿಸರ ಸಂರಕ್ಷಣೆ ಕಾಳಜಿ ಬಗ್ಗೆ ಕಾಳಜಿ ವಹಿಸಿ ಆರಂಭಮಾಡಲಾಗಿದೆ.

- ಗ್ರಾಮೀಣ ಭಾಗದಲ್ಲಿ ಇಂದಿಗೂ ಸಗಣಿ, ಸೌದೆಯನ್ನು ಇಂಧನದ ಮೂಲವಾಗಿ ಬಳಸಲಾಗುತ್ತಿದೆ. ಇದರಿಂದ ಜನರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುವುದಲ್ಲದೇ, ಪರಿಸರಕ್ಕೂ ಹಾನಿಯಾಗಲಿದೆ ಈ ನಿಟ್ಟಿನಲ್ಲಿ ಸೌರ ದೀಪ ಮತ್ತು ಒಲೆಗಳನ್ನು ಪೂರೈಕೆ ಮಾಡಲಾಗುತ್ತಿದೆ.
- ಈ ಕಾರ್ಯಕ್ರಮವನ್ನು 2007 ರಲ್ಲಿ ನಡೆದ "ಕ್ಲಿಂಟನ್ ಗ್ಲೋಬಲ್ ಇನ್ ಷಿಯೇಟಿವ್" ವಾರ್ಷಿಕ ಸಭೆಯಲ್ಲಿ ಕೈಗೊಳ್ಳಲಾದ ತಿರ್ಮಾನದಂತೆ ಅನುಷ್ಠಾನಗೊಳಿಸಲಾಗಿದೆ.

**ರಾಜ್ಯಗಳ ಹಿಂದುಳಿದಿರುವಿಕೆ: ತಜ್ಞರ ಸಮಿತಿ ರಚಿಸಿದ ಕೇಂದ್ರ ಸರ್ಕಾರ**

ರಾಜ್ಯಗಳ ಹಿಂದುಳಿದಿರುವಿಕೆ ಕುರಿತಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ 6 ಜನ ಸದಸ್ಯರ ತಜ್ಞರ ತಂಡವನ್ನು ರಚಿಸಿದೆ. ಮುಖ್ಯ ಆರ್ಥಿಕ ಸಲಹೆಗಾರ "ರಘುರಾಮ್ ಜಿ ರಂಜನ್" ರವರ ನೇತೃತ್ವದಲ್ಲಿ ಈ ತಂಡ ಅಧ್ಯಯನ ನಡೆಸಲಿದೆ.

- "ಬಿಹಾರ" ರಾಜ್ಯ ಹಿಂದುಳಿದಿದ್ದು, ವಿಶೇಷ ಸ್ಥಾನಮಾನ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿದ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಈ ಸಮಿತಿಯನ್ನು ರಚಿಸಿದೆ
- ರಾಜ್ಯಗಳ ತಲಾ ಆದಾಯ, ಮಾನವ ಅಭಿವೃದ್ಧಿ ಸೂಚ್ಯಂಕ, ಪ್ರಕೃತಿ ವಿಕೋಪ ಮುಂತಾದ ಮಾನದಂಡಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಈ ತಂಡ ಅಧ್ಯಯನ ನಡೆಸಲಿದೆ. ಈ ಅಧ್ಯಯನದ ವರದಿಯ ಮೇಲೆ ರಾಜ್ಯಗಳ ಹಿಂದುಳಿದಿರುವಿಕೆ ಸೂಚ್ಯಂಕವನ್ನು ಸಿದ್ಧಪಡಿಸಲಾಗುವುದು.
- "ಶೈಬಲ್ ಗುಪ್ತಾ", "ಭಾರತ್ ರಾಮಸ್ವಾಮಿ", "ನಜೀಬ್ ಜಂಗ್", "ನೀರಜ ಜಿ ಜಯಲ್" ಮತ್ತು "ತುಹೀನ್ ಪಾಂಡೆ" ಈ ಸಮಿತಿಯ ಇತರೆ ಸದಸ್ಯರಗಳು.
- 60 ದಿನದೊಳಗೆ ತನ್ನ ಅಧ್ಯಯನ ವರದಿಯನ್ನು ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಗಿದೆ.
- ಸದ್ಯ "ಜನ ಸಾಂದ್ರತೆ", "ಗಡಿ ರೇಖೆಗಳ ಉದ್ದ" ಮತ್ತು "ಭೂ ಪ್ರದೇಶ"ವನ್ನು ಮಾನದಂಡವಾಗಿಟ್ಟುಕೊಂಡು ರಾಜ್ಯಗಳ ಹಿಂದುಳಿದಿರುವಿಕೆಯನ್ನು ಗುರುತಿಸಲಾಗುತ್ತಿದೆ.

**ಶೀಘ್ರವೇ ಔಷಧಿ ದರ ಶೇ.80 ರಷ್ಟು ಇಳಿಕೆ**

ರೋಗಿಗಳಿಗೆ ವರದಾನವಾಗುವ ಜೀವ ರಕ್ಷಕ ಔಷಧಿಗಳ ಬೆಲೆಯಲ್ಲಿ ಶೀಘ್ರವೇ ಇಳಿಕೆ ಕಾಣಲಿದೆ. ಔಷಧ ನಿಯಂತ್ರಣಾ ಆದೇಶ ಪ್ರಕಾರ ಜೀವ ರಕ್ಷಕ ಔಷಧಿಗಳು ಸೇರಿದಂತೆ ಸುಮಾರು 348 ಔಷಧಿಗಳ ಬೆಲೆಯಲ್ಲಿ ಶೇ.80 ರಷ್ಟು ಇಳಿಕೆಯಾಗಲಿದೆ. ಇದರಲ್ಲಿ ಕ್ಯಾನ್ಸರ್, ಸೋಂಕು ನಿವಾರಕ ಔಷಧಿಗಳು ಸೇರಿರಲಿವೆ.

- ನೂತನ ಔಷಧ ನಿಯಂತ್ರಣ ಆದೇಶ (New Drug Control Order)ವನ್ನು ಕೇಂದ್ರ ಔಷಧೀಯ ಇಲಾಖೆ ಹೊರಡಿಸಿದ್ದು, ಈ ಆದೇಶ ಮೇ.15, 2013 ರಿಂದ ಜಾರಿಯಾಗಿದೆ. ಈ ಹಿಂದೆ 1995 ರಲ್ಲಿ ಜಾರಿಗೊಳಿಸಲಾಗಿದ್ದ ಆದೇಶವನ್ನು ಪರಿಷ್ಕರಿಸಿ ಈ ನೂತನ ಆದೇಶವನ್ನು ಜಾರಿಗೊಳಿಸಲಾಗಿದೆ.

- ಇದರಿಂದ "ರಾಷ್ಟ್ರೀಯ ಔಷಧ ಬೆಲೆ ನೀತಿ-2012 (National Pharmaceutical Pricing Policy)" ನೆರವಾಗಲಿದ್ದು, ಜೀವ ರಕ್ಷಕ ಸೇರಿದಂತೆ 348 ಔಷಧಗಳ ಬೆಲೆಯಲ್ಲಿ ಇಳಿಕೆಯಾಗಲಿದೆ.
- 1995 ರ ಆದೇಶದಡಿ ಕೇವಲ 74 ಔಷಧಗಳನ್ನು ಮಾತ್ರ ನಿಯಂತ್ರಣಕ್ಕೆ ಒಳಪಡಿಸಲಾಗಿತ್ತು.
- "ರಾಷ್ಟ್ರೀಯ ಔಷಧ ಬೆಲೆ ನೀತಿ-2012" ನ್ನು ಕೇಂದ್ರ ಸಚಿವ ಸಂಪುಟ ನವೆಂಬರ್ 22, 2012 ರಂದು ಅನುಮೋದಿಸಿ, ಡಿಸೆಂಬರ್ 7, 2012 ರಲ್ಲಿ ಪ್ರಕಟಿಸಲಾಗಿತ್ತು. "ರಾಷ್ಟ್ರೀಯ ಅಗತ್ಯ ಔಷಧ"ಗಳ ಪಟ್ಟಿಯಲ್ಲಿ ಪರಿಗಣಿಸಲಾಗಿರುವ ಎಲ್ಲಾ ಔಷಧಗಳು ಈ ನೀತಿಯಡಿ ತರಲಾಗಿದೆ.

**"ಅಣ್ಣಮಲೈ ವಿಶ್ವವಿದ್ಯಾಲಯ ಮಸೂದೆ-2013" ಕ್ಕೆ ಅಂಗೀಕಾರ**

ಅಣ್ಣಮಲೈ ವಿಶ್ವವಿದ್ಯಾಲಯವನ್ನು ಸಂಪೂರ್ಣವಾಗಿ ಸರ್ಕಾರದ ಹಿಡಿತಕ್ಕೆ ತರಲು ಅವಕಾಶ ಕಲ್ಪಿಸುವ "ಅಣ್ಣಮಲೈ ವಿಶ್ವವಿದ್ಯಾಲಯ" ಮಸೂದೆ-2013 ತಮಿಳುನಾಡು ವಿಧಾನ ಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿದೆ. ಈ ಮಸೂದೆಯ ಅನ್ವಯ ಇನ್ನು ಮುಂದೆ ಅಣ್ಣಮಲೈ ವಿವಿ ಸರ್ಕಾರದ ಆಡಳಿತಕ್ಕೆ ಒಳಪಡಲಿದೆ.

- ದೇಶದ ಮೊದಲ ಖಾಸಗಿ ವಿಶ್ವವಿದ್ಯಾಲಯ ಎನಿಸಿದ್ದ "ಅಣ್ಣಮಲೈ ವಿಶ್ವವಿದ್ಯಾಲಯ" ಇದುವರೆಗೂ ಇದರ ಸಂಸ್ಥಾಪಕರಾದ "ಅಣ್ಣಮಲೈ ಚೆಟ್ಟಿಯಾರ್" ಕುಟುಂಬ ಸದಸ್ಯರ ನಿಯಂತ್ರಣದಲ್ಲಿತ್ತು. ಈ ಮಸೂದೆಯ ಪ್ರಕಾರ ಖಾಸಗಿ ಆಡಳಿತ ಕೊನೆಗೊಳ್ಳಲಿದ್ದು, ಸರ್ಕಾರದ ಮಡಿಲಿಗೆ ಬೀಳಲಿದೆ.
- ಈ ಮಸೂದೆಯಿಂದ 84 ವರ್ಷಗಳಿಂದ ಜಾರಿಯಲ್ಲಿದ್ದ "ಅಣ್ಣಮಲೈ ವಿಶ್ವವಿದ್ಯಾಲಯ ಕಾಯಿದೆ-1929" ರದ್ದಾಗಲಿದೆ.
- 2013 ರ ಮಸೂದೆಯ ಪ್ರಕಾರ ರಾಜ್ಯಪಾಲರು ವಿಶ್ವವಿದ್ಯಾಲಯ ಕುಲಪತಿಗಳಾಗಿ ಮುಂದುವರೆಯಲ್ಲಿದ್ದಾರೆ. ಆದರೆ ಉಪ-ಕುಲಪತಿ ಹುದ್ದೆ ಉನ್ನತ ಶಿಕ್ಷಣ ಸಚಿವರ ಕೈಸೇರಲಿದೆ. ಇದುವರೆಗೂ ಉಪ-ಕುಲಪತಿಗಳ ಹುದ್ದೆ ಚೆಟ್ಟಿಯಾರ್ ಕುಟುಂಬ ಸದಸ್ಯರಿಗೆ ಮೀಸಲಾಗಿತ್ತು.

**" ಇಂದಿರಾ ಆವಾಸ್ ಯೋಜನೆ" ಹೊಸ ಮಾರ್ಗಸೂಚಿ ಪ್ರಕಟಿಸಿದ ಕೇಂದ್ರ**

ಗ್ರಾಮೀಣ ಭಾಗದ ಬಡ ಜನರಿಗೆ ವಸತಿ ಸೌಕರ್ಯ ಕಲ್ಪಿಸುವ "ಇಂದಿರಾ ಆವಾಸ್ ಯೋಜನೆ"ಯ ಮಾರ್ಗಸೂಚಿಯಲ್ಲಿ ಪ್ರಮುಖ ಬದಲಾವಣೆ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಹೊಸ ಮಾರ್ಗಸೂಚಿ ಅನ್ವಯ ಫಲಾನುಭವಿಗಳ ಕಡ್ಡಾಯವಾಗಿ ಶೌಚಾಲಯ ನಿರ್ಮಾಣ ಸೇರಿದಂತೆ ಮನೆ ನಿರ್ಮಾಣಕ್ಕೆ ನೀಡಲಾಗುವ ಸಹಾಯ ಧನವನ್ನು ಹೆಚ್ಚಿಸಲಾಗಿದೆ.

ಮಾರ್ಗಸೂಚಿಯಲ್ಲಿ ಏನಿದೆ?

- ಹೊಸ ಮಾರ್ಗಸೂಚಿಯ ಪ್ರಕಾರ ಯೋಜನೆಯಡಿ ಆಯ್ಕೆಯಾಗುವ ಫಲಾನುಭವಿಗಳು ಕಡ್ಡಾಯವಾಗಿ ಶೌಚಾಲಯವನ್ನು ನಿರ್ಮಿಸಿಕೊಳ್ಳಬೇಕು. ಶೌಚಾಲಯ ನಿರ್ಮಾಣಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು "ಭಾರತ ನಿರ್ಮಲ್ ಅಭಿಯಾನ"ದಡಿ ಪಡೆಯಬಹುದಾಗಿದೆ. ಅಂಕಿ ಅಂಶಗಳ ಪ್ರಕಾರ "ಇಂದಿರಾ ಆವಾಸ್ ಯೋಜನೆ"ಯಡಿ ನಿರ್ಮಿಸಲಾಗಿರುವ ಶೇ.21 ರಷ್ಟು ಮನೆಗಳು ಮಾತ್ರ ಶೌಚಾಲಯಗಳನ್ನು ಹೊಂದಿವೆ ಎಂದು ಹೇಳಲಾಗಿದೆ.

ಶೌಚಾಲಯ ನಿರ್ಮಿಸದೇ ಇದ್ದಲ್ಲಿ ಈ ಯೋಜನೆಯಡಿ ನೀಡಲಾಗುವ ಕೊನೆಯ ಕಂತಿನ ಹಣವನ್ನು ತಡೆಹಿಡಿಯಲಾಗುವುದು.

- ಇದೇ ವೇಳೆ ಯೋಜನೆಯಡಿ ಮನೆ ನಿರ್ಮಾಣಕ್ಕೆ ನೀಡಲಾಗುವ ಸಹಾಯ ಧನವನ್ನು ಹೆಚ್ಚಿಸಲಾಗಿದೆ. ಈ ಮುಂಚೆ ಸಮತಟ್ಟಾದ ಪ್ರದೇಶದಲ್ಲಿ ಘಟಕ ನಿರ್ಮಾಣ ಒಂದಕ್ಕೆ ರೂ.45,000 ಗಳನ್ನು ಸಹಾಯ ಧನವನ್ನಾಗಿ ನೀಡಲಾಗುತ್ತಿತ್ತು. ಹೊಸ ಮಾರ್ಗಸೂಚಿಯ ಅನ್ವಯ ಸಹಾಯ ಧನವನ್ನು ರೂ.70,000 ಕ್ಕೆ ಏರಿಸಲಾಗಿದೆ. ಗುಡ್ಡಗಾಡು ಮತ್ತು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮನೆ ನಿರ್ಮಾಣಕ್ಕೆ ನೀಡಲಾಗುತ್ತಿದ್ದ ರೂ.48,500 ಸಹಾಯ ಧನವನ್ನು ರೂ, 75,000 ಕ್ಕೆ ಹೆಚ್ಚಿಸಲಾಗಿದೆ. ನಿವೇಶನ ರಹಿತರಿಗೆ ನಿವೇಶನ ಖರೀದಿಗಾಗಿ ನೀಡಲಾಗುತ್ತಿದ್ದ ರೂ 10,000 ಸಹಾಯ ಧನವನ್ನು ಸಹ ಹೆಚ್ಚಿಸಲಾಗಿದ್ದು, ಹೊಸ ಆದೇಶದ ಪ್ರಕಾರ ರೂ 20,000 ಕ್ಕೆ ಹೆಚ್ಚಳ ಮಾಡಲಾಗಿದೆ.
- 2014-15 ನೇ ಸಾಲಿನಿಂದ ಯೋಜನೆಯ ಅನುದಾನವನ್ನು ನೇರವಾಗಿ ರಾಜ್ಯಗಳ ಸಂಕುಚಿತ ನಿಧಿಗೆ ವರ್ಗಾಯಿಸಲಾಗುವುದು. ಹೀಗೆ ಜಮೆಗೊಂಡ ಅನುದಾನವನ್ನು ರಾಜ್ಯಗಳು ಕನಿಷ್ಠ 15 ದಿನದೊಳಗೆ ಜಿಲ್ಲೆಗಳಿಗೆ ವರ್ಗಾಯಿಸಬೇಕು. ವರ್ಗಾವಣೆಯಲ್ಲಿ ವಿಳಂಬವಾದರೆ ದಂಡವನ್ನು ವಿಧಿಸಲಾಗುವುದು.
- ಇದುವರೆಗೂ ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡುವಾಗ ಪರಿಶಿಷ್ಠ ಜಾತಿ/ಪಂಗಡಗಳಿಗೆ ಶೇ.60 ರಷ್ಟು ಮತ್ತು ಅಲ್ಪಸಂಖ್ಯಾತರಿಗೆ ಶೇ.15 ರಷ್ಟು ಮೀಸಲಿಡಲಾಗುತ್ತಿತ್ತು. ಆದರೆ ಈ ಮೀಸಲಾತಿಯಲ್ಲಿ ಈಗ ಅಲ್ಪ ಬದಲಾವಣೆ ಮಾಡಲಾಗಿದೆ. ಜೀತ ವಿಮುಕ್ತಿದಾರರಿಗೆ, ಮಾಜಿ ಸೇನಾ ಯೋಧರಿಗೆ ಪ್ರಾಶಸ್ತ್ಯ ನೀಡಲಾಗಿದೆ.

**"ಇಂದಿರಾ ಆವಾಸ್ ಯೋಜನಾ":**

- ಗ್ರಾಮೀಣ ಭಾಗದ ಬಡಜನರಿಗೆ ವಸತಿ ಸೌಕರ್ಯವನ್ನು ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರ ಈ ಯೋಜನೆಯನ್ನು 1996 ರಿಂದ ಜಾರಿಗೊಳಿಸಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಯಲಯದಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ BPL ಕಾರ್ಡ್ ಹೊಂದಿರುವ SC/ST, ಅಲ್ಪಸಂಖ್ಯಾತ, ಜೀತ ಮುಕ್ತಿ ಕುಟುಂಬ ಮತ್ತು ಇತರೆ ಬಡ ಕುಟುಂಬಗಳಿಗೆ ಹೊಸ ಮನೆ ನಿರ್ಮಾಣ ಮತ್ತು ಕಚ್ಚಾ ಮನೆಗಳ ದುರಸ್ಥಿಗೆ ಸಹಾಯ ಧನವನ್ನು ನೀಡಲಾಗುವುದು.
- ಇದೊಂದು ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರ 75:25 ಅನುಪಾತದಲ್ಲಿ ವೆಚ್ಚವನ್ನು ಭರಿಸುತ್ತಿವೆ. ಈಶಾನ್ಯ ರಾಜ್ಯಗಳಿಗೆ ಈ ಅನುಪಾತ 90:10 ರಷ್ಟಿದೆ.
- 2013-14 ನೇ ಸಾಲಿನ ಬಜೆಟ್ ನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ 15,184 ಕೋಟಿಯನ್ನು ಮೀಸಲಿಡಲಾಗಿದೆ. ಕಳೆದ ಬಜೆಟ್ ನಲ್ಲಿ ರೂ 11,075 ಕೋಟಿಯನ್ನು ಮೀಸಲಿಡಲಾಗಿತ್ತು.

**"ಗಾಂಧಿ ಪಾರಂಪರಿಕ ತಾಣ ಮಿಷನ್" ಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ**

ರಾಷ್ಟ್ರಪಿತಾ ಮಹಾತ್ಮ ಗಾಂಧಿಯವರು ಒಡನಾಟ ಹೊಂದಿದ್ದ ದೇಶದ ಪ್ರಮುಖ ಸ್ಥಳಗಳ ಸಂರಕ್ಷಣೆ ಮತ್ತು ಪುನರ್ ಸ್ಥಾಪಿಸುವ ಉದ್ದೇಶ ಹೊಂದಿರುವ "ಗಾಂಧಿ ಪಾರಂಪರಿಕ ತಾಣ ಮಿಷನ್ (Ghandi Heritage Site Mission)"ಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ.

- "ಗಾಂಧೀಜಿರವರು ಬಳಸಿದ್ದರು ಎನ್ನಲಾದ ವಸ್ತುಗಳನ್ನು ಗುರುತಿಸುವುದು, ಮಾಹಿತಿ ಕಲೆ ಹಾಕುವುದು ಹಾಗೂ ಅವುಗಳ ನಿರ್ವಹಣೆ ಮತ್ತು ನಿಯೋಜನೆಯನ್ನು ಈ ಮಿಷನ್ ನಡೆಸಲಿದೆ. ಅಲ್ಲದೇ, ನಿರ್ವಹಣೆಗಾಗಿ ಮಾರ್ಗಸೂಚಿ, ಮ್ಯೂಸಿಯಂ ನಿರ್ಮಾಣ ಮತ್ತು ಸರಿಯಾದ ದಾಖಲೀಕರಣ ಮುಂತಾದವುಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ.
- ಹೀಗೆ ಸಂಗ್ರಹಿಸಲಾದ ಮಾಹಿತಿಯನ್ನು ಡಿಜಿಟಲೀಕರಣಗೊಳಿಸುವುದು ಅಂದರೆ ಆಡಿಯೋ, ವಿಡಿಯೋ ಸಿಡಿಗಳಾಗಿ ಪರಿವರ್ತಿಸುವುದು, ಮುದ್ರಣಗಳನ್ನು ಹೊರತರುವ ಮೂಲಕ ಸಂರಕ್ಷಿಸುವ ಉದ್ದೇಶವನ್ನು ಈ ಮಿಷನ್ ನಿರ್ವಹಿಸಲಿದೆ.
- ಗಾಂಧಿ ಪಾರಂಪರಿಕ ತಾಣ ಸಮಿತಿ ಗುರುತಿಸಿರುವ ಗಾಂಧಿ ವಂಶಜರಿಗೆ ಸಂಬಂಧಿಸಿದ 39 ಪ್ರಮುಖ ಸ್ಥಳಗಳು ಸೇರಿದಂತೆ ಇತರೆ ಸುಮಾರು 2000 ತಾಣಗಳನ್ನು ಈ ಮಿಷನ್ ಅಡಿ ಸಂರಕ್ಷಿಸಲು ಕ್ರಮಕೈಗೊಳ್ಳಲಾಗುವುದು.

**ಗಾಂಧಿ ಪರಂಪರಿಕ ತಾಣ ಸಮಿತಿ:**

- ಭಾರತ ಸರ್ಕಾರ ಏಪ್ರಿಲ್, 2006 ರಲ್ಲಿ ಗಾಂಧಿ ಪಾರಂಪರಿಕ ಸಮಿತಿಯನ್ನು ರಚಿಸಿತು. ಮಹಾತ್ಮ ಗಾಂಧಿಯವರ ಮೊಮ್ಮಗ ಹಾಗೂ ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ "ಗೋಪಾಲ್ ಕೃಷ್ಣನ್ ಗಾಂಧಿ" ಈ ಸಮಿತಿಯ ಅಧ್ಯಕ್ಷರಾಗಿದ್ದರು. ಹಿರಿಯ ಗಾಂಧಿವಾದಿಗಳಾದ ಶ್ರೀಮತಿ ನಿರ್ಮಲ ದೇಶಪಾಂಡೆ, ಶ್ರೀ.ಬಿ.ಆರ್.ನಂದಾ, ಶ್ರೀ.ನರೈನ್ ದೇಸಾಯಿ ಮತ್ತು ಇತಿಹಾಸಕಾರ ರಾಮಚಂದ್ರ ಗುಹಾ ಸಮಿತಿಯ ಸದಸ್ಯರಾಗಿದ್ದರು.
- ಈ ಸಮಿತಿಯ ತನ್ನ ವರದಿಯನ್ನು 2008 ರಲ್ಲಿ ಸರ್ಕಾರಕ್ಕೆ ಸಲ್ಲಿಸಿತ್ತು. ಸಬರಮತಿ ಆಶ್ರಮದಲ್ಲಿ "ಗಾಂಧಿ ಪಾರಂಪರಿಕ ತಾಣ ಪೋರ್ಟಲ್"" ಮತ್ತು ಐದು ವಲಯಗಳಲ್ಲಿ ಗಾಂಧಿ ಪರಂಪರಿಕ ತಾಣ ಮಿಷನ್ ಸ್ಥಾಪಿಸುವಂತೆ ಶಿಫಾರಸ್ಸು ಮಾಡಿತ್ತು.
- ಸಬರ ಮತಿ ಆಶ್ರಮದಲ್ಲಿ ಗಾಂಧಿಯವರಿಗೆ ಸೇರಿದ 34,111 ಪತ್ರಗಳು ಮತ್ತು ಅವೀಸ್ಮರಣೀಯ ಫೋಟೊಗಳನ್ನು ಒಳಗೊಂಡಿದೆ. ಇವುಗಳು ಸೇರಿದಂತೆ ವಿದೇಶದಲ್ಲಿರುವ ಗಾಂಧೀಜಿಗೆ ಸಂಬಂಧಿಸಿದ ಮಾಹಿತಿಗಳನ್ನು ಕ್ರೋಢಿಕರಿಸಿ ದಾಖಲೀಕರಣ ಮಾಡಿ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಸಂರಕ್ಷಿಸಲಾಗಿದೆ.
- ಗಾಂಧಿ ಪಾರಂಪರಿಕ ತಾಣ ಮಿಷನ್ ಅಡಿ 1869 ರಲ್ಲಿ ಗಾಂಧಿ ಹುಟ್ಟಿದಾಗಿನಿಂದ 1948 ರಲ್ಲಿ ನಿಧನರಾಗುವ ತನಕ ಒಡನಾಟ ಹೊಂದಿರುವ ಪ್ರಮುಖ ಸ್ಥಳಗಳನ್ನು ಸಂರಕ್ಷಿಸಲಾಗುವುದು. ಗುಜರಾತ್ ನ ಪೋರಬಂದರ್, ಪುಣೆಯ ಯರವಾಡ ಜೈಲು, ತಿಲಕ್ ಘಾಟ್ ಇತ್ಯಾದಿ ಒಳಗೊಂಡಂತೆ ಯು.ಕೆ, ಸಿಲೋನ್, ಮಾರಿಷಸ್, ಬರ್ಮಾ, ಪಾಕಿಸ್ತಾನ ಮತ್ತಿತ್ತರ ದೇಶಗಳಿಗೆ ಗಾಂಧೀಜಿ ಭೇಟಿ ನೀಡಿದ್ದ ದೇಶಗಳಲ್ಲೂ ಸಂರಕ್ಷಣೆಗೆ ಕ್ರಮವಹಿಸಲಾಗುವುದು.

**ಕರಾವಳಿ ತೀರಾ ಗಸ್ತು ನೌಕೆ "ವೈಭವ್" ಕಾರ್ಯರಂಭ**

ಭಾರತ ಕರಾವಳಿ ಭದ್ರತಾಪಡೆಯ ಗಸ್ತು ನೌಕೆ "ವೈಭವ್" ಗೆ ವೈಸ್ ಅಡ್ಮಿರಲ್ "ಅನುರಾಗ್ ಜಿ ತಪ್ಲಿಯಾಲ್" ರವರು ಟೂಟಿಕೊರಿನ್ ನಲ್ಲಿ ಚಾಲನೆ ನೀಡಿದರು. 90 ಮೀಟರ್ ಉದ್ದವಿರುವ "ವೈಭವ್" ನ್ನು M/s GSL ಕಂಪನಿ ಸ್ವದೇಶಿ ತಂತ್ರಜ್ಞಾನವನ್ನು ಬಳಸಿ ವಿನ್ಯಾಸ ಮಾಡಿದೆ.

**"ವೈಭವ್":**

- ಅತ್ಯಾಧುನಿಕ ತಂತ್ರಜ್ಞಾನವುಳ್ಳ ಗಸ್ತು ನೌಕೆಯಾಗಿದ್ದು, ಸುಮಾರು 1940 ಟನ್ ತೂಕವನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ. ಎರಡು ಡಿಸೇಲ್ ಎಂಜಿನ್ ಹೊಂದಿರುವ "ವೈಭವ್" ಗಸ್ತು ನೌಕೆಯ ಸರಾಸರಿ ವೇಗ 26 ನಾಟ್ಸ್. ಸತತವಾಗಿ 15 ದಿನಗಳ ಕಾಲ ಸಮುದ್ರದಲ್ಲೇ ಇದ್ದು ಕಾರ್ಯನಿರ್ವಹಿಸುವ ಶಕ್ತಿಯನ್ನು ಹೊಂದಿದೆ.
- ನಾವೀನ್ಯ ತಂತ್ರಜ್ಞಾನಗಳಿಂದ ಕೂಡಿರುವ "ವೈಭವ್" ನಲ್ಲಿ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ "ಇಂಟೆಗ್ರೇಟೆಡ್ ಬ್ರಿಡ್ಜ್ ಸಿಸ್ಟಮ್", "ಇಂಟೆಗ್ರೇಟೆಡ್ ಮೆಷಿನರಿ ಕಂಟ್ರೋಲ್ ಸಿಸ್ಟಮ್", "ಪವರ್ ಮ್ಯಾನಜ್ ಮೆಂಟ್ ಸಿಸ್ಟಮ್" ಮತ್ತು ಸ್ವದೇಶಿ ನಿರ್ಮಿತ "ನಾವಲ್ ಗನ್" ನ್ನು ಅಳವಡಿಸಲಾಗಿದೆ.
- ಶೋಧನೆ ಮತ್ತು ರಕ್ಷಣಾ ನೆರವಿಗಾಗಿ ಒಂದು ಹೆಲಿಕ್ಯಾಪ್ಟರ್ ಮತ್ತು ಐದು "ಹೈ ಸ್ಪೀಡ್" ಹಡಗುಗಳನ್ನು ಒತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿರುವ ವೈಭವ್, ಸಮುದ್ರದಲ್ಲಿ ತೈಲ ಸೋರಿಕೆಯ ತಡೆಯಲು ಸಹಾಯವಾಗಲಿದೆ.

**ಮೇ 21: ಭಯೋತ್ಪಾದನೆ ವಿರೋಧಿ ದಿನ**

ಪ್ರತಿ ವರ್ಷ ಭಯೋತ್ಪಾದನೆ ವಿರೋಧಿ ದಿನವನ್ನು ಮೇ 21 ರಂದು ರಾಷ್ಟ್ರವ್ಯಾಪ್ತಿ ಆಚರಿಸಲಾಗುತ್ತದೆ. ಭಯೋತ್ಪಾದನೆ ಮತ್ತು ಹಿಂಸಾಚಾರದಂತಹ ಹೀನಾ ಕೃತ್ಯಗಳಿಂದ ದೇಶದ ಬೆಳವಣಿಗೆಯ ಮೇಲೆ ಆಗುವ ಮಾರಕ ಪರಿಣಾಮಗಳ ಬಗ್ಗೆ ದೇಶದ ವಿವಿಧ ವರ್ಗದ ಜನರಲ್ಲಿ ಜಾಗೃತಿ ಮೂಡಿಸಿ "ಶಾಂತಿ ಮತ್ತು ಸಾಮರಸ್ಯ" ವನ್ನು ಉತ್ತೇಜಿಸುವುದು ಈ ದಿನದ ಮುಖ್ಯ ಉದ್ದೇಶ.

- ಭಾರತದ ಮಾಜಿ ಪ್ರಧಾನಿ ಮಂತ್ರಿಗಳಾದ "ರಾಜೀವ್ ಗಾಂಧಿ" ರವರು ಭಯೋತ್ಪಾದಕರಿಂದ ಹತ್ಯೆಯಾದ ದಿನವನ್ನು ಭಯೋತ್ಪಾದನೆ ವಿರೋಧಿ ದಿನವೆಂದು ಭಾರತದಲ್ಲಿ ಆಚರಿಸಲಾಗುತ್ತದೆ.
- ತಮಿಳುನಾಡಿನ ಶ್ರೀಪೆರಂಬೂರುವಿನಲ್ಲಿ ಮೇ 21, 1991 ರಂದು ರಾಜೀವ್ ಗಾಂಧಿರವರನ್ನು LTTE ಉಗ್ರರು ಮಾನವ ಬಾಂಬ್ ಸ್ಫೋಟಿಸುವ ಮೂಲಕ ಹತ್ಯೆಗೈದಿದ್ದರು.

**ಚೀನಾ ಪ್ರಧಾನಿ "ಲಿ ಕೆಕೆಯಾಂಗ್" ಭಾರತ ಭೇಟಿ**

ಚೀನಾ ಪ್ರಧಾನಿ "ಲಿ ಕೆಕೆಯಾಂಗ್" ರವರು ಮೂರು ದಿನಗಳ ಕಾಲ ಭಾರತಕ್ಕೆ ಭೇಟಿ ನೀಡಿದ್ದರು. ಉಭಯ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳು ದೂರಮಾಡುವಲ್ಲಿ ಈ ಭೇಟಿ ಮಹತ್ವದ ಪಾತ್ರವಹಿಸಲಿದೆ ಎಂದು ಊಹಿಸಲಾಗಿದೆ. ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಕೆಕೆಯಾಂಗ್ ನಡುವೆ ನಡೆದ ಮಾತುಕತೆ ಫಲಪ್ರದವಾಗಿದ್ದು, ಶೀಘ್ರದಲ್ಲೇ ಗಡಿ ವಿವಾದ ಪರಿಹರಿಸುವ ಪ್ರಮಾಣವನ್ನು ಎರಡು ರಾಷ್ಟ್ರಗಳ ನಾಯಕರು ಮಾಡಿದ್ದಾರೆ. ಉಭಯ ರಾಷ್ಟ್ರಗಳು ಸಾಮರಸ್ಯಕ್ಕೆ ಬದ್ಧ, ವ್ಯಾಪಾರ ಉತ್ತೇಜನ, ಬ್ರಹ್ಮಪುತ್ರಾ ನದಿ ನೀರು ಹಂಚಿಕೆ ಮುಂತಾದ ವಿಷಯ ಕುರಿತಂತೆ ಪ್ರಮುಖವಾದ ಎಂಟು ಒಪ್ಪಂದಗಳಿಗೆ ಇದೇ ವೇಳೆ ಸಹಿ ಹಾಕಲಾಯಿತು.

**ಸಹಿಹಾಕಲಾದ ಒಪ್ಪಂದಗಳ ಬಗ್ಗೆ:**

- ಮಾನಸಸರೋವರ ಕೈಲಾಸಕ್ಕೆ ಬರುವ ಭಕ್ತಾಧಿಗಳಿಗೆ ಮತ್ತಷ್ಟು ಸೌಲಭ್ಯಗಳನ್ನು ಒದಗಿಸುವುದಾಗಿ ಚೀನಾ ಹೇಳಿದೆ. ಪ್ರತಿ ವರ್ಷ ಮೇ ಮತ್ತು ಸೆಪ್ಟೆಂಬರ್ ನಲ್ಲಿ ಕೈಲಾಸ ಯಾತ್ರೆಯನ್ನು ಕೈಗೊಳ್ಳುವ ಸಲುವಾಗಿ ಎರಡೂ ದೇಶಗಳು ಒಪ್ಪಂದ ಮಾಡಿಕೊಂಡವು.
- ಉಭಯ ದೇಶಗಳ ನಡುವೆ ವ್ಯಾಪಾರ ವಹಿವಾಟನ್ನು ವೃದ್ದಿಸುವ ಕುರಿತಾಗಿ "ಸೇವಾ ವಲಯ ಉತ್ತೇಜನ ಕಾರ್ಯಪಡೆ", "ಆರ್ಥಿಕ ಮತ್ತು ವ್ಯಾಪಾರ ಸಹಕಾರ ಯೋಜನೆ ಕಾರ್ಯಪಡೆ" ಮತ್ತು "ವ್ಯಾಪಾರ ಅಂಕಿ ಅಂಶಗಳ ವಿಶ್ಲೇಷಣೆ" ಕಾರ್ಯಪಡೆಗಳ ರಚನೆಗೆ ಸಹಿ ಹಾಕಿದವು.
- ಬ್ರಹ್ಮಪುತ್ರ ನದಿಯ ಮೇಲೆ ಚೀನಾ ನಿರ್ಮಿಸುತ್ತಿರುವ ಅಣೆಕಟ್ಟುಗಳಿಗೆ ಭಾರತ ಅಸಮಾಧಾನ ಹೊರಹಾಕಿದ ಹಿನ್ನಲೆಯಲ್ಲಿ ನದಿ ನೀರಿನ ವಿವರಗಳನ್ನು ಭಾರತದೊಂದಿಗೆ ಹಂಚಿಕೊಳ್ಳಲು ಚೀನಾ ಸಮ್ಮತಿ ಸೂಚಿಸಿದೆ. ಈ ಒಪ್ಪಂದದಿಂದ ಬ್ರಹ್ಮಪುತ್ರ ನದಿ ನೀರಿನ ಮಟ್ಟ, ಒಳ ಹರಿವಿನ ಪ್ರಮಾಣವನ್ನು ಚೀನಾ ಪ್ರತಿ ವರ್ಷ ಜೂನ್ 1 ರಿಂದ ಅಕ್ಟೋಬರ್ 15 ರವರೆಗೆ ದಿನಕ್ಕೆ ಎರಡು ಬಾರಿಯಂತೇ ಭಾರತಕ್ಕೆ ಮಾಹಿತಿ ನೀಡಲಿದೆ.
- ಕೃಷಿ ಕ್ಷೇತ್ರದಲ್ಲಿ ನೀರಿನ ಸದ್ಬಳಕೆ ಕುರಿತಾದ ತಂತ್ರಜ್ಞಾನವನ್ನು ದ್ವಿಪಕ್ಷೀಯ ಸಹಕಾರದ ಮೂಲಕ ಅಭಿವೃದ್ಧಿಪಡಿಸಲು ಭಾರತದ ಜಲಸಂಪನ್ಮೂಲ ಸಚಿವಾಲಯ ಮತ್ತು ಚೀನಾದ "ರಾಷ್ಟ್ರೀಯ ಅಭಿವೃದ್ಧಿ ಮತ್ತು ಸುಧಾರಣಾ ಆಯೋಗ"ದ ನಡುವೆ ಒಡಂಬಡಿಕೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.
- ಉಭಯ ದೇಶಗಳ ನಡುವೆ ವ್ಯಾಪಾರ ವಹಿವಾಟನ್ನು ಪ್ರೋತ್ಸಾಹಿಸುವುದು, ಎಮ್ಮೆ ಮಾಂಸ ಮತ್ತು ಮೀನು ಉತ್ಪನ್ನಗಳ ಸುರಕ್ಷತೆ ಮೇಲೆ ವಿಧಿಸಲಾಗಿರುವ ಮಾನದಂಡಗಳನ್ನು ಪಾಲಿಸಲು ಸಹಿ ಹಾಕಿದವು. ಕಾಲು ಬಾಯಿ ರೋಗದ ಹಿನ್ನಲೆಯಲ್ಲಿ ಭಾರತದಿಂದ ಎಮ್ಮೆ ಮಾಂಸದ ಆಮದಿನ ಮೇಲೆ ಚೀನಾ ನಿಷೇಧ ಹೇರಿತ್ತು. ಪ್ರಸ್ತುತ ಭಾರತದಲ್ಲಿ ಉತ್ಪಾದಿಸಲಾಗುವ ಎಮ್ಮೆ ಮಾಂಸ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುರಕ್ಷತೆಯ ಗುಣಮಟ್ಟ ಕಾಯ್ದುಕೊಂಡಿದೆ.
- ಚೀನಾ ಮತ್ತು ಭಾರತಕ್ಕೆ ಸಂಬಂಧಿಸಿದ ಸಮಕಾಲೀನ ಪುಸ್ತಕಗಳನ್ನು ಹೊರತರುವ ಸಲುವಾಗಿ ಕಾರ್ಯಪಡೆಯನ್ನು ಸ್ಥಾಪಿಸಲು ಸಹಿ ಹಾಕಲಾಯಿತು. ಈ ಕಾರ್ಯಪಡೆಯು ಮುಂದಿನ ಐದು ವರ್ಷಗಳ ತನಕ ವರ್ಷಕ್ಕೆ 25 ಪುಸ್ತಕಗಳನ್ನು ಹೊರತರಲಿದೆ.
- ಉಭಯ ದೇಶಗಳ ನಡುವೆ ಅವಳಿ ನಗರಗಳನ್ನು ಗುರುತಿಸಿ, ಅವುಗಳ ಸಮಗ್ರ ಅಭಿವೃದ್ಧಿ ಶ್ರಮಿಸಲು ಒಪ್ಪಂದಕ್ಕೆ ಸಹಿಹಾಕಲಾಯಿತು.

**2014 ಭಾರತ-ಚೀನಾ ಸ್ನೇಹಪೂರ್ವ ವರ್ಷ:**

- 2014 ಭಾರತ-ಚೀನಾ ಸ್ನೇಹಪೂರ್ವ ವರ್ಷವೆಂದು ಚೀನಾದ ಲಿ ಘೋಷಿಸಿದ್ದಾರೆ. ಉಭಯ ದೇಶಗಳ ನಡುವೆ ಪರಸ್ಪರ ಸ್ನೇಹ ಮನೋಭಾವದ ಮೂಲಕ ಶಾಂತಿ ಸುವ್ಯವಸ್ಥೆಯನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶ. ಚೀನಾದ ಮಾರುಕಟ್ಟೆಯಲ್ಲಿ ಭಾರತದ ಉತ್ಪನ್ನಗಳಿಗೆ ಅವಕಾಶ ಮತ್ತು ಭಾರತದಲ್ಲಿ ಚೀನಾ ಬಂಡವಾಳ ಹೂಡಲು ಈ ಬೆಳವಣಿಗೆ ಸಹಕಾರಿಯಾಗುವುದಾಗಿ ಲಿ ಹೇಳಿದ್ದಾರೆ.
- 2012-13 ರಲ್ಲಿ 67.8 ಬಿಲಿಯನ್ ಡಾಲರ್ ನಷ್ಟಿರುವ ವಹಿವಾಟನ್ನು, 2015 ರ ವೇಳೆಗೆ 100 ಬಿಲಿಯನ್ ಡಾಲರ್ ಗೆ ಹೆಚ್ಚಿಸಲು ಉಭಯ ರಾಷ್ಟ್ರಗಳು ಸಮ್ಮತಿಸಿವೆ.

**ಆತುರದ ಒಪ್ಪಂದ**:

- ಲಿ ರವರ ಭಾರತ ಭೇಟಿ ಮೇಲ್ನೋಟಕ್ಕೆ ಫಲಪ್ರದವೆನಿಸಿದೆ. ಆದರೆ ವಾಸ್ತವಿಕವಾಗಿ ಇದೊಂದು ಗಡಿಬಿಡಿ ಒಪ್ಪಂದ ಎನ್ನಲಾಗಿದೆ. ಭಾರತ ಮತ್ತು ಚೀನಾ ನಡುವೆ ಅನೇಕ ವರ್ಷಗಳಿಂದ ಕಾಡುತ್ತಿರುವ ಗಡಿ ಸಮಸ್ಯೆ, ಲಡಖ್ ನಲ್ಲಿ ಚೀನಾ ಸೇನೆಯ ನುಸುಳುವಿಕೆಯ ಬಗ್ಗೆ ಯಾವುದೇ ಒಪ್ಪಂದವಾಗಿಲ್ಲ.

**ಡಾ. ದ್ವಾರಕನಾಥ್ ಕೊಟ್ನಿಸ್: ಕಿರು ಮಾಹಿತಿ**

ಭಾರತ ಪ್ರವಾಸದಲ್ಲಿದ್ದ ಚೀನಾದ ಪ್ರಧಾನಿ "ಲಿ ಕೆಕೆಯಾಂಗ್" ರವರು ಮುಂಬೈನಲ್ಲಿರುವ ಡಾ.ದ್ವಾರಕನಾಥ್ ಕೊಟ್ನಿಸ್ ರವರ ಕುಟುಂಬಸ್ಥರನ್ನು ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು. ಲಿ ರವರು ಡಾ.ಕೊಟ್ನಿಸ್ ರವರ ಸಮಾಧಿಗೆ ತೆರಳಿ ಪುಷ್ಪಾರ್ಪಣೆ ಮಾಡಿ ಕೊಟ್ನಿಸ್ ರವರ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದರು. ಚೀನಾದ ಯಾರೇ ಗಣ್ಯ ವ್ಯಕ್ತಿಗಳು ಭಾರತಕ್ಕೆ ಆಗಮಿಸಿದರೆ ಡಾ.ಕೊಟ್ನಿಸ್ ರವರಿಗೆ ನಮನ ಸಲ್ಲಿಸುವುದು ಸಂಪ್ರದಾಯವಾಗಿದೆ. ಅಂದಹಾಗೇ ಡಾ.ಕೊಟ್ನಿಸ್ ರವರ ಬಗ್ಗೆ ಕಿರು ಮಾಹಿತಿ ಇಲ್ಲಿದೆ.

- ಡಾ.ಕೊಟ್ನಿಸ್ ರವರು ಮಹಾರಾಷ್ಟ್ರದ ಸೋಲಾಪುರದವರು. ಎರಡನೇ ಸಿನೊ-ಜಪಾನ್ ಯುದ್ದದ (1937-45) ವೇಳೆ ಗಾಯಗೊಂಡ ಚೀನಾದ ಸೈನಿಕರಿಗೆ ಚಿಕಿತ್ಸೆ ನೀಡಲು ಭಾರತ ಕಳುಹಿಸಿದ ಐದು ಜನ ವೈದ್ಯರ ತಂಡದಲ್ಲಿ ಡಾ.ಕೊಟ್ನಿಸ್ ಸಹ ಒಬ್ಬರು. ಅಂದು ಅವರು ನೀಡಿದ ನಿಸ್ವಾರ್ಥ ಸೇವೆಯಿಂದ ಇಂದಿಗೂ ಚೀನಾ ಜನರ ಮನದಲ್ಲಿ ಕೊಟ್ನಿಸ್ ಅಮರರಾಗಿ ಉಳಿದಿದ್ದಾರೆ.

ಹಿನ್ನಲೆ:

- 1937 ರಲ್ಲಿ ಜಪಾನ್ ಚೀನಾದ ಮೇಲೆ ದಾಳಿ ನಡೆಸಿದಾಗ ಚೀನಾದ ಅಂದಿನ ಕಮ್ಯೂನಿಷ್ಟ್ ಜನರಲ್ ಆದ "ಝೂಹು ಡಿ" ರವರು ಜವಹಾರ್ ಲಾಲ್ ನೆಹರೂ ರವರಿಗೆ ವೈದ್ಯರನ್ನು ಕಳುಹಿಸಿಕೊಡುವಂತೆ ಮನವಿ ಇತ್ತರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ನ ಅಧ್ಯಕ್ಷರಾಗಿದ್ದ "ಸುಭಾಷ್ ಚಂದ್ರ ಭೋಸ್" ರವರು ಐದು ಜನ ವೈದ್ಯರ ತಂಡವನ್ನು ಚೀನಾಕ್ಕೆ ಕಳುಹಿಸಿಕೊಡಲು ಏರ್ಪಾಟು ಮಾಡಿದರು. ಸೆಪ್ಟೆಂಬರ್, 1938 ರಲ್ಲಿ ಕಳುಹಿಸಿಕೊಡಲಾದ ವೈದ್ಯರ ತಂಡವನ್ನು ಭಾರತ ಕಳುಹಿಸಿಕೊಟ್ಟಿತು. ಈ ತಂಡದಲ್ಲಿ ಡಾ.ದ್ವಾರಕನಾಥ್ ಕೊಟ್ನಿಸ್ ಸಹ ಒಬ್ಬರಾಗಿದ್ದರು.
- ಡಾ. ಕೊಟ್ನಿಸ್ ರವರು 5 ವರ್ಷಗಳ ಕಾಲ ಚೀನಾದಲ್ಲಿ ಉಳಿದುಕೊಂಡು, ಸಂಚಾರಿ ಆಸ್ಪತ್ರೆಗಳ ಮೂಲಕ ಗಾಯಾಳು ಸೈನಿಕರಿಗೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದರು. ದುರಾದೃಷ್ಟವಶಾದ್ ಡಾ.ಕೊಟ್ನಿಸ್ ರವರು 1942 ರಲ್ಲಿ ತಮ್ಮ 32 ನೇ ವರ್ಷದಲ್ಲಿಯೇ ಮರಣರಾದರು. ಉಳಿದೆಲ್ಲಾ ವೈದ್ಯರು ಭಾರತಕ್ಕೆ ಸುರಕ್ಷಿತವಾಗಿ ಮರಳಿದರು.
- ಡಾ.ಕೊಟ್ನಿಸ್ ರವರ ಕುರಿತಾಗಿ ಖ್ಯಾತ ನಿರ್ದೇಶಕ ವಿ.ಶಾಂತರಾಮ್ ರವರು "ಡಾ.ಕೊಟ್ನಿಸ್ ಕಿ ಅಮರ್ ಕಹಾನಿ" ಎಂಬ ಚಿತ್ರ ನಿರ್ಮಿಸುವ ಮೂಲಕ ತೆರೆಯ ಮೇಲೆ ಜೀವಂತವಾಗಿರಿಸಿದ್ದಾರೆ. ಕೊಟ್ನಿಸ್ ರವರ ನೆನಪಿಗಾಗಿ ಚೀನಾದಲ್ಲಿ ಒಂದು ಮೆಮೊರಿಯಲ್ ಸಹ ಸ್ಥಾಪಿಸಲಾಗಿದೆ.

**"ಜನನಿ ಸುರಕ್ಷಾ ಯೋಜನೆ": ಫಲಾನುಭವಿ ವಯೋಮಿತಿ ಸಡಿಲಿಕೆ**

ತಾಯಂದಿರ ಮತ್ತು ಶಿಶು ಮರಣ ಪ್ರಮಾಣವನ್ನು ತಗ್ಗಿಸುವ ಸಲುವಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ "ಜನನಿ ಸುರಕ್ಷಾ ಯೋಜನೆ"ಯಡಿ ನೆರವು ಪಡೆಯಲು ಈ ಹಿಂದೆ ಇದ್ದ ವಯಸ್ಸಿನ ಮಿತಿಯನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಡಿಲಗೊಳಿಸಿದೆ. ಸರ್ಕಾರದ ಈ ಅರ್ಥಪೂರ್ಣ ನಿರ್ಧಾರದಿಂದ ಯೋಜನೆಯಡಿ ನೆರವು ಪಡೆಯುವ ತಾಯಂದಿರ ಸಂಖ್ಯೆ ಮತ್ತಷ್ಟು ವಿಸ್ತಾರಗೊಳ್ಳಲಿದೆ.

- ಹೊಸ ಮಾರ್ಗಸೂಚಿಯ ಪ್ರಕಾರ "ಬಿಪಿಎಲ್" ವರ್ಗದಡಿ ಬರುವ ಎಲ್ಲಾ ಮಹಿಳೆಯರು ಯೋಜನೆಯಡಿ ನೆರವು ಪಡೆಯಲು ಅರ್ಹರು. ಅಲ್ಲದೇ ಈವರೆಗೂ ಇದ್ದ ವಯಸ್ಸಿನ ಮಿತಿಯನ್ನು ತೆಗೆದುಹಾಕಲಾಗಿದೆ. ಹಾಗೂ ಎರಡು ಮಕ್ಕಳಿಗೆ ಮಾತ್ರ ಅನ್ವಯವಾಗುತ್ತಿದ್ದ ಯೋಜನೆಯ ನಿಯಮವನ್ನು ಸಹ ಸಡಿಲಗೊಳಿಸಲಾಗಿದೆ.

**ಪ್ರಸುತ್ತ ಇದ್ದ ನಿಯಮವೇನು?**

- ಸದ್ಯ 19 ವರ್ಷ ತುಂಬಿರುವ ಮಹಿಳೆಯರು ಮಾತ್ರ ಈ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳಲು ಅರ್ಹರಾಗಿದ್ದರು. ಜತೆಗೆ ಎರಡು ಮಕ್ಕಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತಿತ್ತು.

**ಬದಲಾವಣೆ ಏಕೆ?**

- ಸರ್ಕಾರದ ಮಟ್ಟಿಗೆ ಹೇಳುವುದಾದರೆ "ಜನನಿ ಸುರಕ್ಷಾ ಯೋಜನೆ" ಒಂದು ಯಶಸ್ವಿ ಯೋಜನೆ. ಈಗಾಗಲೇ ಹೇಳಿದಂತೆ ಈ ಯೋಜನೆಯಡಿ ನೆರವು ಪಡೆಯುವ ಮಹಿಳೆಯ ಮಯಸ್ಸು 19 ವರ್ಷ ಆಗಿರಬೇಕು. ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ 14-15 ವರ್ಷ ವಯಸ್ಸಿನವರಲ್ಲಿ ತಾಯಂದಿರ ಮರಣ ಅಧಿಕವಾಗಿದೆ. ಆದ್ದರಿಂದ ಎಲ್ಲಾ ವಯಸ್ಸಿನ ತಾಯಂದಿರನ್ನು ಈ ಯೋಜನೆಯಡಿ ತಂದು ಗುರಿ ಮುಟ್ಟುವ ಸಲುವಾಗಿ ಈ ಬದಲಾವಣೆ ತರಲಾಗಿದೆ.

**ಜನನಿ ಸುರಕ್ಷಾ ಯೋಜನೆ:**

- ಸಾಂಸ್ಥಿಕ ಹೆರಿಗೆ (Institutional Deliveries)ಯನ್ನು ಪ್ರೋತ್ಸಾಹಿಸಿ ತಾಯಂದರಿ ಮತ್ತು ನವಜಾತ ಶಿಶುಗಳ ಮರಣ ಪ್ರಮಾಣವನ್ನು ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಯೋಜನೆಯನ್ನು 2005 ರಲ್ಲಿ ಜಾರಿಗೊಳಿಸಿತು. ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಆಸ್ಪತ್ರೆಯಲ್ಲಿ ಹೆರಿಗೆಯಾಗುವ ಮಹಿಳೆಯರಿಗೆ ಆರ್ಥಿಕ ಸಹಾಯವನ್ನು ಈ ಯೋಜನೆಯಡಿ ನೀಡಲಾಗುವುದು.
- ಆರೋಗ್ಯ ಸ್ಥಿತಿ ಸುಧಾರಣೆಯಲ್ಲಿ ಹಿಂದೆಬಿದ್ದಿರುವ ರಾಜ್ಯಗಳಾದ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ, ಚತ್ತಿಸ್ ಘರ್, ಉತ್ತರಖಂಡ್ ಮತ್ತು ಜಾರ್ಖಂಡ್ ಗಳಲ್ಲಿ ಗ್ರಾಮೀಣ ಪ್ರದೇಶದ ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರ ಅನುಮೋದಿತ ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಯಾದರೆ ರೂ.1400 ನ್ನು ತಾಯಂದಿರಿಗೆ ಮತ್ತು ರೂ 600 ನ್ನು ಆಶಾ ಕಾರ್ಯಕರ್ತೆಯರಿಗೆ ನೀಡಲಾಗುವುದು. ನಗರ ಪ್ರದೇಶದ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಯಾದರೆ ರೂ 1000 ನ್ನು ತಾಯಂದಿರಿಗೆ ಮತ್ತು ರೂ 400 ನ್ನು ಆಶಾ ಕಾರ್ಯಕರ್ತೆಯರಿಗೆ ನೀಡಲಾಗುವುದು.
- ಆರೋಗ್ಯ ವಲಯದಲ್ಲಿ ಉತ್ತಮ ಸಾಧನೆ ಮಾಡಿರುವ ರಾಜ್ಯಗಳಾದ ಕೇರಳ, ಕರ್ನಾಟಕ, ತಮಿಳುನಾಡು ಹಾಗೂ ಉಳಿದ ರಾಜ್ಯಗಳಲ್ಲಿ ಗ್ರಾಮೀಣ ಭಾಗದಲ್ಲಿ ರೂ 700ನ್ನು ತಾಯಂದಿರಿಗೆ ಮತ್ತು ರೂ 600 ಆಶಾ ಕಾರ್ಯಕರ್ತೆಯರಿಗೆ ಹಾಗೂ ನಗರ ಪ್ರದೇಶದಲ್ಲಿ ರೂ 600 ನ್ನು ತಾಯಂದಿರಿಗೆ ಮತ್ತು ರೂ 400 ನ್ನು ಆಶಾ ಕಾರ್ಯಕರ್ತೆಯರಿಗೆ ನೀಡಲಾಗುತ್ತಿದೆ.

**ನವದೆಹಲಿಯಲ್ಲಿ ಕ್ರೀಡಾ ಸಚಿವರುಗಳ ಸಭೆ: ಒಂದು ನೋಟ**

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕ್ರೀಡಾ ಸಚಿವರುಗಳ ಎರಡು ದಿನಗಳ ಸಭೆಯನ್ನು ನವದೆಹಲಿಯಲ್ಲಿ ಇತ್ತೀಚೆಗೆ ಆಯೋಜಿಸಲಾಗಿತ್ತು. ಕ್ರಿಕೆಟ್ ಅಲ್ಲದೇ ಎಲ್ಲಾ ಕ್ರೀಡೆಗಳನ್ನು ಪ್ರೋತ್ಸಾಹಿಸಿ, ಅತ್ಯುತ್ತಮ ಕ್ರೀಡಾಪಟುಗಳನ್ನು ದೇಶದಾದ್ಯಂತ ತಯಾರು ಮಾಡಿ ಒಲಿಂಪಿಕ್ಸ್ ನಲ್ಲಿ ಸಾಧನೆ ಮರೆಯುವ ಬಗ್ಗೆ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಆಳವಾಗಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ಮಾಹಿತಿಗಳ ವಿವರ ಇಲ್ಲಿದೆ.

**INSTAL ಯೋಜನೆ**: ಇನಸ್ಟಾಲ್ ಎಂದರೆ "ಐಡೆಂಟಿಫಿಕೇಷನ್ ಅಂಡ್ ನರ್ಚರಿಂಗ್ ಆಫ್ ಸ್ಪೋರ್ಟ್ ಟ್ಯಾಲೆಂಟ್" ಎಂದರ್ಥ. ಈ ಉದ್ದೇಶಿತ ಯೋಜನೆಯಡಿ ಪ್ರತಿ ಜಿಲ್ಲೆಗಳಲ್ಲಿ ಕ್ರೀಡಾ ತರಭೇತಿಗಾಗಿಯೇ ಶಾಲೆಯೊಂದನ್ನು ತೆರೆಯಲಾಗುವುದು. 6-10 ವರ್ಷ ವಯಸ್ಸಿನ 100 ಮಕ್ಕಳಿಗೆ ಉಚಿತ ತರಬೇತಿ, ಶಿಕ್ಷಣ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಿಲಾಗುವುದು. ಈ ನೂರು ಮಕ್ಕಳನ್ನು "PYKKA (ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ)" ಸ್ಪರ್ಧೆಯ ಮೂಲಕ ಆರಿಸಲಾಗುವುದು. ಆಯ್ಕೆಯಾದ 100 ಮಕ್ಕಳಿಗೆ ವಿಶೇಷ ಊಟ, ಸ್ಪೋರ್ಟ್ ಕಿಟ್, ಹಾಸ್ಟೆಲ್ ಸೌಲಭ್ಯ, ಶಾಲೆಯ ವೆಚ್ಚ ಜತೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದಲ್ಲಿ ಸರ್ಕಾರಿ ಹುದ್ದೆಯನ್ನು ಕ್ರೀಡಾ ಕೋಟಾದಡಿ ನೀಡಲಾಗುವುದು.

**ಸೆಂಟರ್ಸ್ ಆಫ್ ಎಕ್ಸಲೆನ್ಸ್ (COX):** ಕ್ರೀಡಾ ಕೌಶಲ್ಯವನ್ನು ಹೆಚ್ಚಿಸುವ ಸಲುವಾಗಿ "ಭಾರತ ಕ್ರೀಡಾ ಪ್ರಾಧಿಕಾರ" ವೂ ದೇಶದಾದ್ಯಂತ 25 "ಸೆಂಟರ್ ಆಫ್ ಎಕ್ಸಲೆನ್ಸ್" ಗಳನ್ನು ಸ್ಥಾಪಿಸಲಿದೆ. ಪ್ರತಿ ಕೇಂದ್ರಗಳು 3 ರಿಂದ 4 ಕ್ರೀಡೆಗಳಲ್ಲಿ ಪರಿಣಿತಿ ಹೊಂದರಲಿವೆ. ಈ ಕೇಂದ್ರಗಳ ಸ್ಥಾಪನೆಗೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳು ನಿವೇಶನ ಒದಗಿಸಲಿವೆ. ನ್ಯಾಷನಲ್ ಸ್ಪೋರ್ಟ್ ಮೆಡಿಸಿನ್ ಮತ್ತು ನ್ಯಾಷನಲ್ ಸ್ಪೋರ್ಟ್ ಕೋಚಿಂಗ್ ಸಂಸ್ಥೆಗಳನ್ನು ನಿರ್ಮಿಸಲು ಚಿಂತನೆ ನಡೆಸಲಾಗಿದೆ.

**NSSDS:** NSSDS ಎಂದರೆ "ನ್ಯಾಷನಲ್ ಸರ್ವೀಸ್ ಅಂಡ್ ಸ್ಕಿಲ್ ಡೆವಲಫ್ ಮೆಂಟ್ ಸ್ಕೀಮ್". ಪ್ರಸ್ತುತ ಜಾರಿಯಲ್ಲಿರುವ "ನ್ಯಾಷನಲ್ ಸರ್ವೀಸ್ ಸ್ಕೀಮ್ (NSS)" ಬದಲಿಗೆ NSSDS ನ್ನು ಜಾರಿಗೊಳಿಸಲಾಗುವುದು. ವಿಧ್ಯಾರ್ಥಿಗಳಲ್ಲಿ ಸಾಮಾಜಿಕ ಸೇವೆಯ ಜೊತೆಗೆ ಉದ್ಯೋಗವಕಾಶ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದ ಇದರ ಮುಖ್ಯ ಉದ್ದೇಶ.

**ಅಲ್ಪಸಂಖ್ಯಾತರ ವಿಶ್ವವಿದ್ಯಾಲಯ ಸ್ಥಾಪನೆಗೆ "ಥೊರಟ್" ಸಮಿತಿ ನಕಾರ**

ಕರ್ನಾಟಕದ ಶ್ರೀರಂಗಪಟ್ಟಣ ಸೇರಿದಂತೆ ದೇಶದ ಇತರೆಡೆ ಐದು ಅಲ್ಪಸಂಖ್ಯಾತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮುಂದಾಗಿದ್ದ "ಅಲ್ಪಸಂಖ್ಯಾತ ವ್ಯವಹಾರ ಸಚಿವಾಲಯ"ದ ನಿರ್ಣಯಕ್ಕೆ ಹಿನ್ನಡೆಯಾಗಿದೆ. ಅಲ್ಪಸಂಖ್ಯಾತ ವಿಶ್ವವಿದ್ಯಾಲಯಗಳ ಸ್ಥಾಪನೆ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ "ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ" ಅಧ್ಯಕ್ಷ "ಪ್ರೊ.ಸುಖದೇವ್ ಥೊರಟ್" ರವರ ನೇತೃತ್ವದ ಸಮಿತಿ ಸಚಿವಾಲಯದ ನಿರ್ಣಯ ಸಮಂಜಸವಲ್ಲ ಎಂದಿದೆ.

**ಸಮಿತಿ ಬಗ್ಗೆ**:

- ಅಲ್ಪಸಂಖ್ಯಾತರಿಗೆ ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ದೇಶದ ಐದು ಕಡೆ ನಿರ್ಮಿಸಲು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರ ಸಚಿವಾಲಯ" ಪ್ರೊ.ಸುಖದೇವ್ ಥೊರಟ್" ಅಧ್ಯಕ್ಷತೆಯಲ್ಲಿ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿತ್ತು. ಹೊಸ ವಿವಿಗಳ ಸ್ವರೂಪ, ಪಠ್ಯಕ್ರಮ ಹಾಗೂ ಯಾವ ಸ್ಥಳಗಳಲ್ಲಿ ಸ್ಥಾಪನೆ ಮಾಡಬೇಕು ಎಂಬ ಅಂಶಗಳ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಗಿತ್ತು.

**ಸಮಿತಿಯ ವರದಿಯಲ್ಲಿ ಏನಿದೆ?**

- ಈ ಬಗ್ಗೆ ಅಧ್ಯಯನ ನಡೆಸಿರುವ ಸಮಿತಿಯು "ಅಲ್ಪಸಂಖ್ಯಾತರಿಗೆ ಪ್ರತ್ಯೇಕ ವಿವಿಯನ್ನು ಸ್ಥಾಪಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ ಎಂದಿದೆ. ಆದರೆ ಅಲ್ಪಸಂಖ್ಯಾತ ವಿವಿಯ ಬದಲು "ಕೇಂದ್ರಿಯ ವಿಶ್ವವಿದ್ಯಾಲಯ"ವನ್ನು ಸ್ಥಾಪಿಸಿ, ಅಲ್ಲಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಆದ್ಯತೆಯ ಮೇಲೆ ಕೊಡಬಹುದು ಎಂದಿದೆ.

**"ಕಲ್ಲಿದ್ದಲು ಸ್ವತಂತ್ರ ನಿಯಂತ್ರಣ ಪ್ರಾಧಿಕಾರ" ಸ್ಥಾಪನೆಗೆ ಸಚಿವರ ಸಮಿತಿ ನಿರ್ಧಾರ**

ಕಲ್ಲಿದ್ದಲ ಬೆಲೆ ನಿರ್ಧಾರ, ಪೂರೈಕೆ ಮತ್ತು ಗುಣಮಟ್ಟ ಪರಿಶೀಲನೆಗಾಗಿ "ಸ್ವತಂತ್ರ ನಿಯಂತ್ರಣ ಪ್ರಾಧಿಕಾರ (Independent Coal Regulatory Authority)" ಸ್ಥಾಪನೆಗೆ ಸಚಿವರ ಸಮಿತಿ ಒಪ್ಪಿಗೆ ಸೂಚಿಸಿದೆ. ಈ ಸಂಬಂಧ ಕಲ್ಲಿದ್ದಲು ನಿಯಂತ್ರಣ ಪ್ರಾಧಿಕಾರ ಮಸೂದೆಗೆ ಮುಂದಿನ 10 ದಿನದೊಳಗೆ ಸಚಿವ ಸಂಪುಟದ ಅನುಮತಿ ಪಡೆಯುವ ವಿಶ್ವಾಸವನ್ನು ಇಂಧನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ

- ಕೇಂದ್ರ ವಿತ್ತ ಸಚಿವ ಪಿ.ಚಿದಂಬರಂ ರವರು ಸಮಿತಿಯ ಅಧ್ಯಕ್ಷರಾಗಿದ್ದರು. ಪರಿಸರ ಮತ್ತು ಅರಣ್ಯ ಖಾತೆ ಸಚಿವೆ ಜಯಂತಿ ನಟರಾಜನ್, ಕಲ್ಲಿದ್ದಲು ಸಚಿವ ಶ್ರಿಪ್ರಕಾಶ್ ಜೈಸ್ವಾಲ್ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ "ಮೊಂಟೆಕ್ ಸಿಂಗ್ ಅಹ್ಲುವಾಲಿಯಾ" ರವರು ಸಚಿವ ಸಮಿತಿ ಇತರೆ ಸದಸ್ಯರೆನಿಸಿದ್ದರು.
- ಪ್ರಸ್ತಾಪಿತ ಪ್ರಾಧಿಕಾರವು ಕಲ್ಲಿದ್ದಲ ಬೆಲೆ ನಿರ್ಧಾರ, ಪೂರೈಕೆ ಮತ್ತು ಗುಣಮಟ್ಟವನ್ನು ನಿರ್ಧರಿಸಲಿದೆ. ಈ ಪ್ರಾಧಿಕಾರವೂ ಪ್ರತಿಯೊಬ್ಬರ ಹಿತಾಸಕ್ತಿಯನ್ನು ಕಾಪಾಡಲಿದೆ. ಅಲ್ಲದೇ ದೇಶದಲ್ಲಿ ಕಲ್ಲಿದ್ದಲ ಬೇಡಿಕೆ ಮತ್ತು ಪೂರೈಕೆಯನ್ನು ನಿಯಂತ್ರಿಸಲಿದೆ.

ಹಿನ್ನಲೆ:

- ದೇಶದ ಉಷ್ಣ ವಿದ್ಯುತ ಘಟಕಗಳ ಕಾರ್ಯಾಚರಣೆಗೆ "ಕೋಲ್ ಇಂಡಿಯಾ ಲಿಮಿಟೆಡ್ (CIL)" ಕಲ್ಲಿದ್ದಲ್ಲನ್ನು ಪೂರೈಸುವ ಜವಾಬ್ದಾರಿಯನ್ನು ಹೊತ್ತಿದೆ. ಆದರೆ CIL ಕಳಪೆ ಗುಣಮಟ್ಟದ ಕಲ್ಲಿದ್ದಲ್ಲನ್ನು ಸರಬರಾಜು ಮಾಡುತ್ತಿರುವುದಾಗಿ "ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಶನ್" ಇತ್ತೀಚೆಗೆ ದೂರಿತ್ತು. ಅಲ್ಲದೇ CIL ಗೆ ನೀಡಬೇಕಿದ್ದ ಬಾಕಿ ಮೊತ್ತ ರೂ 1000 ಕೋಟಿಯನ್ನು ತಡೆಹಿಡಿದಿತ್ತು. ಈ ವಿವಾದ ತಾರಕಕ್ಕೇರುವ ಮೂಲಕ ಗಣ್ಯರ ಗಮನ ಸೆಳೆದಿತ್ತು. ಆಗಾಗಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು "ಕಲ್ಲಿದ್ದಲು ಸ್ವತಂತ್ರ ನಿಯಂತ್ರಣ ಪ್ರಾಧಿಕಾರ"ವನ್ನು ಸ್ಥಾಪಿಸುವ ಕೂಗು ಕೇಳಿಬಂದಿದ್ದು, ಇದರ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನು ಸಚಿವರ ಸಮಿತಿಗೆ ರವಾನಿಸಲಾಗಿತ್ತು.

**ಮೇ 30: ಹಿಂದಿ ಪತ್ರಿಕೋದ್ಯಮ ದಿನ**

ಹಿಂದಿ ಪತ್ರಿಕೋದ್ಯಮ ದಿನವನ್ನು ಪ್ರತಿ ವರ್ಷ ಮೇ 30 ರಂದು ದೇಶದಾದ್ಯಂತ ಆಚರಿಸಲಾಗುತ್ತದೆ. ಹಿಂದಿಯ ಮೊದಲ ವಾರ್ತಾ ಪತ್ರಿಕೆ "ಉದಾಂತ್ ಮಾರ್ತಂಡ್" ಈ ದಿನದಂದು 1826 ಪ್ರಥಮ ಬಾರಿಗೆ ಮುದ್ರಣಗೊಂಡಿತು. ಆದ್ದರಿಂದ ಮೇ 30 ನ್ನು "ಹಿಂದಿ ಪತ್ರಿಕೋದ್ಯಮ ದಿನವನ್ನಾಗಿ ಆಚರಿಸಲಾಗುತ್ತಿದೆ.

- ಮೊದಲ ಹಿಂದಿ ಪತ್ರಿಕೆ "ಉದಾಂತ್ ಮಾರ್ತಂಡ್" ನ್ನು ಮಧ್ಯಪ್ರದೇಶ ಮೂಲದ "ಜುಗಲ್ ಕಿಶೋರ್ ಶುಕ್ಲಾ" ಎನ್ನುವವರು ಪ್ರಾರಂಭಿಸಿದರು. ಭಾರತ ಪ್ರಜಾಪ್ರಭುತ್ವದಲ್ಲಿ ಪತ್ರಿಕೋದ್ಯಮ ನಾಲ್ಕನೇ ಆಧಾರ ಸ್ತಂಭವಾಗಿ ಗುರುತಿಸಿಕೊಳ್ಳಲು ಶುಕ್ಲಾ ಕಾರಣವೆನಿಸಿದರು.
- "ಉದಾಂತ್ ಮಾರ್ತಂಡ್" ಪತ್ರಿಕೆಯೂ ಕೊಲ್ಕತ್ತಾದಲ್ಲಿ ಮೇ 30, 1826 ರಲ್ಲಿ ಮೊದಲ ಮುದ್ರಣ ಕಂಡು ಇಂದಿಗೆ 187 ವರ್ಷ ತುಂಬಿದೆ.

ಕರುನಾಡು ಎಕ್ಸಾಮ್ಸ್

## ಅಂತರರಾಷ್ಟ್ರೀಯ

**ಬಾಂಗ್ಲದೇಶದ ಮೊದಲ ಮಹಿಳಾ ಸ್ಪೀಕರ್: "ಶಿರಿನ್ ಶರ್ಮಿನ್ ಚೌಧರಿ"**

ಬಾಂಗ್ಲದೇಶದ ಪ್ರಥಮ ಮಹಿಳಾ ಸ್ಪೀಕರ್ ಆಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ "ಶಿರಿನ್ ಶರ್ಮಿನ್ ಚೌಧರಿ" ರವರ ಆಯ್ಕೆ ಬಹುತೇಕ ಅಂತಿಮಗೊಂಡಿದೆ. ಬಾಂಗ್ಲದ ಆಡಳಿತ ರೂಢ ಪಕ್ಷವಾದ "ಹವಾಮಿ ಲೀಗ್ ಪಕ್ಷ" ಶಿರಿನ್ ರವರನ್ನು ಸ್ಪೀಕರ್ ಹುದ್ದೆಗೆ ಶಿಫಾರಸ್ಸು ಮಾಡಿದೆ. ಆದರೆ ಬಾಂಗ್ಲದ ವಿರೋಧ ಪಕ್ಷವಾದ "ಬಾಂಗ್ಲದೇಶ್ ನ್ಯಾಷನಲ್ ಪಾರ್ಟಿ (BNP)" ಸಂಸತ್ತನ್ನು ಬಹಿಷ್ಕರಿಸಿದ್ದು, ಯಾರ ಹೆಸರನ್ನು ಸ್ಪೀಕರ್ ಹುದ್ದೆಗೆ ಶಿಫಾರಸ್ಸು ಮಾಡದ ಕಾರಣ ಶಿರಿನ್ ರವರ ಗೆಲುವಿನ ಹಾದಿ ಸುಗಮವೆನಿಸಿದೆ. ಆಕಸ್ಮಾತ್ ಶಿಫಾರಸ್ಸು ಮಾಡಿದರೂ ಸಹ, "ಹವಾಮಿ ಲೀಗ್ ಪಾರ್ಟಿ"ಯ ಸಂಖ್ಯಾ ಬಲ ಅಧಿಕವಾಗಿರುವ ಕಾರಣ  ಶಿರಿನ್ ರವರಿಗೆ ಗೆಲುವು ನಿಶ್ಚಯವಾಗಿದೆ.

- ಈ ಹಿಂದೆ ಸ್ಪೀಕರ್ ಆಗಿದ್ದ "ಅಬ್ದುಲ್ ರಹೀಮ್" ರವರು ಇತ್ತೀಚೆಗೆ ಬಾಂಗ್ಲದ 20 ನೇ ಅಧ್ಯಕ್ಷರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಈ ಹುದ್ದೆ ತೆರವಾಗಿತ್ತು. ಬಳಿಕ ಡೆಪ್ಯೂಟಿ ಸ್ಪೀಕರ್ "ಶೇಕವತ್ ಅಲಿ" ರವರು ಹಂಗಾಮಿ ಸ್ಪೀಕರ್ ಆಗಿ ಅಧಿಕಾರವಹಿಸಿಕೊಂಡಿದ್ದರು.
- ಬಾಂಗ್ಲದೇಶದ ಸಂವಿಧಾನದ ಪ್ರಕಾರ ಸ್ಪೀಕರ್ ಹುದ್ದೆ ತೆರವಾದ ಏಳು ದಿನದೊಳಗೆ ಈ ಸ್ಥಾನಕ್ಕೆ ಮತ್ತೊಬ್ಬರನ್ನು ಆಯ್ಕೆಮಾಡಬೇಕು.
- ಸ್ಪೀಕರ್ ಆಗಿ ಶರ್ಮಿನ್ ರವರು ಅಧಿಕಾರವಹಿಸಿಕೊಂಡರೆ, ಬಾಂಗ್ಲದ ಅತ್ಯುನ್ನತ ಸ್ಥಾನಗಳಲ್ಲಿ ಮಹಿಳೆಯರದೇ ದರ್ಬಾರ್ ಆಗಲಿದೆ. ಪ್ರಧಾನಿ ಯಾಗಿ "ಶೇಕ್ ಹಸೀನಾ" ರವರು, ವಿರೋಧ ಪಕ್ಷದ ನಾಯಕಿಯಾಗಿ "ಖಲೇದಾ ಜಿಯಾ" ರವರು ಮತ್ತು ಸಂಸತ್ತಿನ ಉಪ ನಾಯಕಿಯಾಗಿ "ಸೈಯದ್ ಸಜೇದ ಚೌಧರಿ" ರವರು ಅತ್ಯುನ್ನತ ಸ್ಥಾನವನ್ನು ಅಲಂಕರಿಸಿರುವ ಮಹಿಳೆಯರು. ಅಷ್ಟೇ ಅಲ್ಲ, ಭಾರತ, ಬಾಂಗ್ಲ ಮತ್ತು ಪಾಕ್ ದೇಶಗಳ ಸ್ಪೀಕರ್ ಗಳೆಲ್ಲರೂ ಮಹಿಳೆಯರೇ ಆಗಲಿರುವುದು ಮತ್ತೊಂದು ವಿಶೇಷ. ಭಾರತದಲ್ಲಿ ಮೀನಾ ಕುಮಾರಿ ಮತ್ತು ಪಾಕಿಸ್ತಾನದಲ್ಲಿ ಡಾ.ಫಾಹ್ಮಿದ ಮಿರ್ಝಾ ರವರು ಸ್ಪೀಕರ್ ಗಳಾಗಿ ಈಗಾಗಲೇ ಸೇವೆ ಸಲ್ಲಿಸುತ್ತಿದ್ದಾರೆ.

ಶಿರಿನ್ ಶರ್ಮಿನ್ ಚೌಧರಿ:

- ಅಕ್ಟೋಬರ್ 6, 1966 ರಲ್ಲಿ ಢಾಕಾದಲ್ಲಿ ಜನನ. ಇವರ ತಂದೆ "ರಫಿಕುಲ್ಲಾ ಚೌಧರಿ" ರವರು ಬಾಂಗ್ಲದ ಮಾಜಿ ಪ್ರಧಾನಿ "ಬಾಗಬಂಧು ಶೇಕ್ ಮುಜಿಬರ್ ರೆಹಮಾನ್" ರವರ ಆಪ್ತ ಕಾರ್ಯದರ್ಶಿಗಳಾಗಿದ್ದರು. ಕಾನೂನು ವಿಭಾಗದಲ್ಲಿ ಪದವೀಧರೆ ಆಗಿರುವ ಶರ್ಮಿನ್ ರವರು ಮಾನವ ಹಕ್ಕು ವಿಷಯದಲ್ಲಿ ಪಿ.ಎಚ್.ಡಿ ಸಹ ಮಾಡಿದ್ದಾರೆ.
- ಬಾಂಗ್ಲ ಬಾರ್ ಕೌನ್ಸಿಲ್ ನಲ್ಲಿ ಅಪಾರ ಸೇವೆ ಸಲ್ಲಿಸಿದ ನಂತರ 2009 ರಲ್ಲಿ ಬಾಂಗ್ಲ ಸಂಸತ್ತು ಪ್ರವೇಶ. ಸದ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿದ್ದಾರೆ.

**ಮೇ.3: ವಿಶ್ವ ಪತ್ರಿಕಾ ಸ್ವಾತಂತ್ರ ದಿನ (World Press Freedom Day)**

ವಿಶ್ವ ಪತ್ರಿಕಾ ಸ್ವಾಂತಂತ್ರ ದಿನವನ್ನು ಮೇ.3 ರಂದು ವಿಶ್ವದಾದ್ಯಂತ ಆಚರಿಸಲಾಯಿತು. ಈ ವರ್ಷದ ವಿಶ್ವ ಪತ್ರಿಕಾ ಸ್ವಾತಂತ್ರ ದಿನದ ಥೀಮ್ "Safe to Speak: Securing Freedom of Expression in All Media". ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 1993 ರಲ್ಲಿ ಮೇ.3 ರನ್ನು ವಿಶ್ವ ಪತ್ರಿಕಾ ಸ್ವಾತಂತ್ರ ದಿನವೆಂದು ಘೋಷಿಸಿತು. ಇಂದು ವಿಶ್ವ ಪತ್ರಿಕಾ ಸ್ವಾತಂತ್ರ ದಿನದ 20 ನೇ ವರ್ಷಾಚರಣೆ.

ವಿಶ್ವ ಪತ್ರಿಕಾ ಸ್ವಾತಂತ್ರ ದಿನದ ಉದ್ದೇಶಗಳು:

- ಪತ್ರಿಕಾ ಸ್ವಾತಂತ್ರದ ಮೂಲಭೂತ ತತ್ವಗಳನ್ನು ಆಚರಿಸಲು ಈ ದಿನ ವೇದಿಕೆಯಾಗಿದೆ.
- ಜಗತ್ತಿನಾದ್ಯಂತ ಪತ್ರಿಕಾ ಸ್ವಾತಂತ್ರದ ಮೌಲ್ಯಮಾಪನ ಕೈಗೊಳ್ಳುವುದು.
- ಕಾರ್ಯನಿರತ ವೇಳೆ ಹುತಾತ್ಮರಾದ ಪತ್ರಕರ್ತರಿಗೆ ಶ್ರದ್ದಾಂಜಲಿ ಸಲ್ಲಿಸುವುದು.
- ಮಾಧ್ಯಮ ಸ್ವಾತಂತ್‌ರದ ಮೇಲಾಗುವ ದಾಳಿಯಿಂದ ರಕ್ಷಿಸುವುದು.

**ಅಭಿವ್ಯಕ್ತಿ ಸ್ವಾತಂತ್ರ**:

- ವಿಶ್ವಸಂಸ್ಥೆಯ ಮೂಲಭೂತ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 19 ನೇ ಪರಿಚ್ಛೇದದ ಪ್ರಕಾರ ಅಭಿವ್ಯಕ್ತಿ ಸ್ವಾತಂತ್ರ ವ್ಯಕ್ತಿಯ ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ.
- ವಿಪರ್ಯಾಸವೆಂದರೇ ಇಂದು ವಿಶ್ವದಾದ್ಯಂತ ಅನೇಕ ರಾಷ್ಟ್ರಗಳಲ್ಲಿ ಮಾಧ್ಯಮಗಳ ಮೇಲೆ ನಿರ್ಬಂದ ಹೇರುವುದು, ಪತ್ರಕರ್ತರ ಮೇಲೆ ಹಲ್ಲೆ ಮತ್ತು ಬಂಧನದಲ್ಲಿಡುವುದು ನಿರಂತರವಾಗಿದೆ.
- ಮಾಹಿತಿಯ ಪ್ರಕಾರ ಕಳೆದ ಒಂದು ದಶಕದಲ್ಲಿ ವಿಶ್ವದಾದ್ಯಂತ 600 ಕ್ಕೂ ಹೆಚ್ಚು ಪತ್ರಕರ್ತರನ್ನು ಕೊಲ್ಲಲಾಗಿದೆ. 2012 ನೇ ವರ್ಷ ಒಂದರಲ್ಲೇ 120 ಮಂದಿ ಸಾವನ್ನಪ್ಪಿದ್ದಾರೆ.

**ವಿಶ್ವ ಪತ್ರಿಕಾ ಸ್ವಾತಂತ್ರ ಸೂಚ್ಯಂಕ (World Press Freedom Index)**:

- ವಿಶ್ವ ಪತ್ರಿಕಾ ಸ್ವಾತಂತ್ರ ಸೂಚ್ಯಂಕವನ್ನು "ರಿಪೋರ್ಟರ್ ವಿತೌಟ್ ಬಾರ್ಡರ್" ಎಂಬ ಸಂಸ್ಥೆ ಪ್ರತಿ ವರ್ಷ ಪ್ರಕಟಿಸುತ್ತಿದೆ. ಪತ್ರಕರ್ತರ ಮೇಲೆ ಆಗುತ್ತಿರುವ ದೌರ್ಜನ್ಯ, ಹಲ್ಲೆ ಮತ್ತು ಮಾಧ್ಯಮಗಳ ಮೇಲೆ ಹೇರಲಾಗುತ್ತಿರುವ ನಿರ್ಬಂಧಗಳನ್ನು ಮಾನದಂಡವಾಗಿಟ್ಟುಕೊಂಡು ಈ ಸೂಚ್ಯಂಕವನ್ನು ತಯಾರಿಸಲಾಗುತ್ತದೆ.
- ವಿಶ್ವ ಪತ್ರಿಕಾ ಸ್ವಾತಂತ್ರ ಸೂಚ್ಯಂಕ-2013: ವಿಶ್ವ ಪತ್ರಿಕಾ ಸ್ವಾತಂತ್ರ ಸೂಚ್ಯಂಕದಲ್ಲಿ ಭಾರತಕ್ಕೆ 140 ನೇ ಸ್ಥಾನ ಲಭಿಸಿದೆ. ಸೌದಿ ಅರೇಬಿಯಾ, ನೈಜಿರ್, ಬೊಸ್ನಿಯಾ, ಯುಎಇ, ಚಡ್ ಮತ್ತು ದಕ್ಷಿಣ ಸೂಡಾನ್ ನಂತಹ ಕರಾಳ ರಾಷ್ಟ್ರಗಳಿಗಿಂತಲೂ ಭಾರತ ಹಿಂದೆ ಬಿದಿದ್ದೆ. ಚೀನಾ 173 ನೇ ಸ್ಥಾನದಲ್ಲಿದೆ.
- 2012 ರಲ್ಲಿ ಭಾರತದಲ್ಲಿ 4 ಪತ್ರಕರ್ತರನ್ನು ಹತ್ಯೆಮಾಡಲಾಗಿದೆ. "ಜಮ್ಮು ಮತ್ತು ಕಾಶ್ಮೀರ" ಮತ್ತು "ಚತ್ತೀಸ್ ಗರ್" ರಾಜ್ಯಗಳಲ್ಲಿ ಪತ್ರಕರ್ತರ ಮೇಲಿನ ದೌರ್ಜನ್ಯ ಮಿತಿಮೀರಿದೆ ಎಂದು ಹೇಳಲಾಗಿದೆ. ಅಲ್ಲದೇ ಮಾಧ್ಯಮಗಳ ಮೇಲೆ ನಿರ್ಬಂಧ ಮತ್ತು ಪತ್ರಕರ್ತರ ಬಂಧನ ಸಹ ಭಾರತದಲ್ಲಿ ವ್ಯಾಪಕವಾಗಿ ಹರಡಿರುವುದು ಭಾರತ ಪತ್ರಿಕಾ ಸ್ವಾತಂತ್ರದಲ್ಲಿ ಹಿಂದೆ ಬಿದ್ದಿರಲು ಪ್ರಮುಖ ಕಾರಣ.
- "ಫಿನ್ ಲ್ಯಾಂಡ್", "ನೆದರ್ ಲ್ಯಾಂಡ್", "ನಾರ್ವೆ" ಮತ್ತು "ಲಕ್ಸಂಬರ್ಗ್" ವಿಶ್ವ ಪತ್ರಿಕಾ ಸ್ವಾತಂತ್ರ ಸೂಚ್ಯಂಕದಲ್ಲಿರುವ ಟಾಪ್ 4 ದೇಶಗಳು.

- "ಎರಿಟ್ರಿಯಾ", "ಉತ್ತರ ಕೊರಿಯಾ", "ತರ್ಮೆಕಿಸ್ತಾನ್" ಮತ್ತು "ಸಿರಿಯಾ" ಸೂಚ್ಯಂಕದಲ್ಲಿ ಕೊನೆ ಸ್ಥಾನದಲ್ಲಿರುವ ದೇಶಗಳು.

**"Predator of Freedom of International List":** ಪತ್ರಕರ್ತರ ಮೇಲೆ ಹಲ್ಲೆ, ನಿರ್ಬಂಧ ಮತ್ತು ಬಂಧನ ಮುಂತಾದವುಗಳ ಮೂಲಕ ಪತ್ರಿಕಾ ಸ್ವಾತಂತ್ರಕ್ಕೆ ದಕ್ಕೆ ತರಲು ಕಾರಣವೆನಿಸುವ ಪ್ರಭಾವಿ ರಾಜಕಾರಣಿಗಳು, ಸಂಘ ಸಂಸ್ಥೆಗಳು, ಮಿಲಿಟರಿ ದಂಗೆಕೋರರ ಹೆಸರನ್ನು ಒಳಗೊಂಡ ಪಟ್ಟಿಯೇ "Predator of Freedom of International". "ಬಾರ್ಡರ್ ವಿತೌಟ್ ರಿಪೋರ್ಟ್" ಸಂಸ್ಥೆ ಈ ಪಟ್ಟಿಯನ್ನು ವಿಶ್ವ ಪತ್ರಿಕಾ ಸ್ವಾತಂತ್ರ ದಿನದಂದು ಬಿಡುಗಡೆಗೊಳಿಸುತ್ತದೆ. ಈ ಬಾರಿ ಬಿಡುಗಡೆಮಾಡಿರುವ ಈ ಪಟ್ಟಿಯಲ್ಲಿ ಚೀನಾದ ಅಧ್ಯಕ್ಷ "ಕ್ಸಿ ಜಿನ್ ಪಿಂಗ್" ರವರ ಹೆಸರು ಸೇರ್ಪಡೆಗೊಂಡಿದೆ. ಚೀನಾದಲ್ಲಿ ಮಾಧ್ಯಮಗಳ ಮೇಲೆ ಹೇರಿರುವ ನಿರ್ಬಂಧದ ಕಾರಣ "ಕ್ಸಿ ಜಿನ್ ಪಿಂಗ್" ರವರನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

## ಅಣು ವಿದ್ಯುತ್ ಘಟಕ ಸ್ಥಾಪನೆಯ ಒಪ್ಪಂದಕ್ಕೆ ಜಪಾನ್-ಟರ್ಕಿ ಸಹಿ

ಟರ್ಕಿಯಲ್ಲಿ ಅಣು ವಿದ್ಯುತ್ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಜಪಾನ್ ಮತ್ತು ಟರ್ಕಿ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿವೆ. ಟರ್ಕಿ ಪ್ರವಾಸದಲ್ಲಿರುವ ಜಪಾನ್ ಪ್ರಧಾನಿ "ಶಿಂಜೊ ಅಬೆ" ಮತ್ತು ಟರ್ಕಿ ಪ್ರಧಾನಿ "ರೆಸೆಪ್ ತಯ್ಯಿಪ್" ರವರು ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- ಈ ಒಪ್ಪಂದ ಅನ್ವಯ ಟರ್ಕಿ ದೇಶ ಕಪ್ಪು ಸಮುದ್ರ (Black Sea) ತೀರಾದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಎರಡನೇ ಅಣು ವಿದ್ಯುತ್ ಘಟಕಕ್ಕೆ ಬೇಕಾಗುವ ತಂತ್ರಜ್ಞಾನವನ್ನು ಜಪಾನ್ ಒದಗಿಸಲಾಗಿದೆ. ಜತೆಗೆ ಅಣು ಸುರಕ್ಷತೆಯ ಬಗ್ಗೆ ತರಬೇತಿಯನ್ನು ನೀಡಲಿದೆ.
- ಸುಮಾರು 22 ಬಿಲಿಯನ್ ಡಾಲರ್ ಮೊತ್ತದ ಯೋಜನೆ ಇದಾಗಿದ್ದು, ಜಪಾನ್ ನ "ಮಿಸ್ತುಬಿಶಿ" ಮತ್ತು ಫ್ರೆಂಚ್ ಕಂಪನಿ "ಅರೆವಾ" ಜಂಟಿಯಾಗಿ ರಿಯಾಕ್ಟರ್ ಗಳನ್ನು ಪೂರೈಸಲಿವೆ.
- ಈ ಉದ್ದೇಶಿತ ಅಣು ವಿದ್ಯುತ್ ಘಟಕವು ನಾಲ್ಕು ರಿಯಾಕ್ಟರ್ ಗಳನ್ನು ಹೊಂದಲಿದೆ. ಈ ಘಟಕದ ಒಟ್ಟು ಉತ್ಪಾದನ ಸಾಮರ್ಥ್ಯ 4,800 ಮೆಗಾ ವ್ಯಾಟ್. 2017 ರ ವೇಳೆಗೆ ಇದರ ಕಾಮಗಾರಿ ಪ್ರಾರಂಭಗೊಳ್ಳಲಿದ್ದು, 2023 ರ ವೇಳೆಗೆ ಮೊದಲ ರಿಯಾಕ್ಟರ್ ಕೆಲಸ ನಿರ್ವಹಿಸಲಿದೆ.
- ಟರ್ಕಿ ಸದ್ಯ ತನ್ನ ವಿದ್ಯುತ್ ಬೇಡಿಕೆಯನ್ನು ನೀಗಿಸಿಕೊಳ್ಳು ಇರಾನ್ ಮತ್ತು ರಷ್ಯಾದ ಮೇಲೆ ಅವಲಂಬಿತವಾಗಿದೆ. ಇಂಧನ ಸ್ವಾವಲಂಭನೆಯನ್ನು ಸಾಧಿಸುವ ಸಲುವಾಗಿ ಮೂರು ಅಣು ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ನಿಶ್ಚಯ ತಳಿದಿದೆ.
- ಈ ಹಿಂದೆ 2010 ರಲ್ಲಿ ದಕ್ಷಿಣ ಟರ್ಕಿಯ "ಅಕ್ಕುಯು" ಬಳಿ ದೇಶದ ಮೊದಲ ಅಣು ವಿದ್ಯುತ್ ಘಟಕವನ್ನು ಸ್ಥಾಪಿಸಲು ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು.

**ಇರಾನ್ ನ "ಚಬಹರ್ (Chabahar Port)" ಬಂದರನ್ನು ಅಭಿವೃದ್ಧಿಪಡಿಸಲಿರುವ ಭಾರತ**

ಇರಾನ್-ಪಾಕಿಸ್ತಾನ ಗಡಿಯಲ್ಲಿರುವ "ಚಬಹರ್" ಬಂದರನ್ನು ಅಭಿವೃದ್ಧಿ ಪಡಿಸುವ ಮಹತ್ವದ ಕಾರ್ಯಕ್ರಮವನ್ನು ಭಾರತ ಕೈಗೆತ್ತಿಕೊಳ್ಳಲಿದೆ. ಇತ್ತೀಚೆಗೆ ಇರಾನ್ ಪ್ರವಾಸದಲ್ಲಿದ್ದ ವಿದೇಶಾಂಗ ಸಚಿವ "ಸಲ್ಮಾನ್ ಖುರ್ಷಿದ್" ತಮ್ಮ ಸಹವರ್ತಿಯೊಂದಿಗೆ ಟೆಹಾರಾನ್ ನಲ್ಲಿ ನಡೆಸಿದ ಮಾತುಕತೆಯಲ್ಲಿ ಖುರ್ಷಿದ್ ರವರು ಭಾರತದ ನಿಲುವನ್ನು ವ್ಯಕ್ತಪಡಿಸಿದರು. ಚಬಹರ್ ಅಭಿವೃದ್ಧಿಗೆ ಬೇಕಾಗುವ ಮೂಲ ಸೌಕರ್ಯಗಳನ್ನು ಒದಗಿಸಲು ಭಾರತ ಬದ್ದವಿರುವುದಾಗಿ ತಿಳಿಸಲಾಯಿತು. ಇದೇ ವೇಳೆ ಇರಾನ್ ಮತ್ತು ಭಾರತ ನಡುವಿನ ವ್ಯಾಪಾರ ವೃದ್ಧಿ, ಶಿಕ್ಷಣ, ತೈಲ ವಲಯ, ತಂತ್ರಜ್ಞಾನದ ಬಗ್ಗೆಯೂ ಚರ್ಚಿಸಲಾಯಿತು.

**ಚಬಹರ್ ಬಂದರು**:

- "ಚಬಹರ್" ಬಂದರು ಇರಾನ್ ನ ಏಕೈಕ ಬಂದರು. ಏಷ್ಯಾ ರಾಷ್ಟ್ರಗಳ ಜತೆ ವ್ಯಾಪಾರ ಸಂಪರ್ಕ ಸಾಧಿಸಲು ಈ ಬಂದರು ಮಹತ್ವವಾದದ್ದು. ಐದು ಹಂತಗಳಲ್ಲಿ ಈ ಬಂದರನ್ನು ಅಭಿವೃದ್ಧಿ ಪಡಿಸಲು ಇರಾನ್ ಉದ್ದೇಶಿಸಿದ್ದು, ಈ ಮೂಲಕ 2020 ರ ವೇಳೆಗೆ 20 ಮಿಲಿಯನ್ ಟನ್ ಕಾರ್ಗೋವನ್ನು ನಿರ್ವಹಿಸುವ ಗುರಿಯನ್ನು ಹೊಂದಲಾಗಿದೆ.
- ಈಗಾಗಲೇ ಮೊದಲ ಹಂತದ ಅಭಿವೃದ್ಧಿಯನ್ನು 340 ಮಿಲಿಯನ್ ಡಾಲರ್ ವೆಚ್ಚದಲ್ಲಿ ಇರಾನ್ ಕೈಗೊಂಡಿದೆ. ಉಳಿದ ಅಭಿವೃದ್ಧಿಯನ್ನು ಭಾರತ ಕೈಗೊಳ್ಳುವಂತೆ ಇರಾನ್ ಆಹ್ವಾನ ನೀಡಿದೆ.
- ಈ ಸಂಬಂಧ ಭಾರತ ಈಗಾಗಲೇ ಎರಡು ತಜ್ಞರ ಸಮಿತಿಯನ್ನು ಕಳುಹಿಸಿದ್ದು, ಸಮಿತಿಯು ಹೂಡಿಕೆಯಲ್ಲಿರುವ ಅವಕಾಶಗಳನ್ನು ವಿದೇಶಾಂಗ ಸಚಿವಾಲಯಕ್ಕೆ ಸಲ್ಲಿಸಿದೆ. ಈ ವರದಿಯಲ್ಲಿ "ಕಂಟೈನರ್ ಟರ್ಮಿನಲ್" ನಿರ್ಮಾಣ, ಬಹು ಉಪಯೋಗಿ ಕಾರ್ಗೋ ಅಭಿವೃದ್ಧಿಯಲ್ಲಿ ಬಂಡವಾಳ ಹೂಡಬಹುದು ಎಂದು ಹೇಳಲಾಗಿದೆ. ಇದಕ್ಕೆ ಭಾರತ ರೂ.300-400 ಕೋಟಿ ವ್ಯಯಿಸಬೇಕಾಬಹುದು.

ಭಾರತಕ್ಕೆ ಏನು ಲಾಭ?

- "ಚಬಹರ್" ಬಂದರು ನಿರ್ವಹಣೆ ಇರಾನ್ ಗೆ ಎಷ್ಟು ಪ್ರಾಮುಖ್ಯವೋ ಭಾರತಕ್ಕೂ ಅಷ್ಟೇ ಪ್ರಾಮುಖ್ಯವಾದದ್ದು. ಏಕೆಂದರೆ ಈ ಬಂದರು ನಿರ್ಮಾಣದಿಂದ ಮಧ್ಯ ಏಷ್ಯಾ ರಾಷ್ಟ್ರಗಳಿಗೆ ಪಾಕಿಸ್ತಾನದ ನೆರವಿಲ್ಲದೆ ನೇರ ಸಂಪರ್ಕ ಸಾಧಿಸಲು ಉಪಯೋಗವಾಗಲಿದೆ.
- ಅಲ್ಲದೇ ಭಾರತಕ್ಕೆ ಇರಾನ್ ನಿಂದ ತೈಲ, ಖನಿಜಗಳನ್ನು ಆಮದು ಮಾಡಿಕೊಳ್ಳಲು ಇದು ಸಹಕಾರಿಯಾಗಲಿದೆ.

**ಅಮೆರಿಕಾದ ಖ್ಯಾತೆ**:

- ಇರಾನ್ ಕೈಗೊಂಡ ಪರಮಾಣು ಯೋಜನೆಯ ಹಿನ್ನಲೆಯಲ್ಲಿ ಇರಾನ್ ನಲ್ಲಿ ಯಾವುದೇ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಹೂಡಿಕೆ ಮಾಡದಂತೆ ಅಮೆರಿಕಾ ಪಶ್ಚಿಮ ಏಷ್ಯಾ ರಾಷ್ಟ್ರಗಳ ಮೇಲೆ ಒತ್ತಡ ಹೇರಿದೆ. ಇದರ ಹೊರತಾಗಿಯೂ ಭಾರತ "ಚಬಹರ್" ಬಂದಿರನ ಅಭಿವೃದ್ಧಿಗೆ ಸಿದ್ದವಿದೆ.

**ಗ್ವಾದರ್ ಬಂದರು**:

- "ಚಬಹರ್" ಬಂದರಿನಿಂದ ಕೇವಲ 76 ಕಿ.ಮೀ ದೂರದಲ್ಲಿರುವ "ಗ್ವಾದರ್ ಬಂದರು" ಪಾಕಿಸ್ತಾನದ ಪ್ರಮುಖ ಬಂದರು. ಈ ಬಂದರಿನ ನಿರ್ವಹಣೆಯನ್ನು ಪಾಕಿಸ್ತಾನ ಇತ್ತೀಚೆಗೆ ಚೀನಾಕ್ಕೆ ವಹಿಸಿಕೊಟ್ಟಿತ್ತು. ಈ ಬೆಳವಣಿಗೆಯನ್ನು ಭಾರತ ಅತಿ

ಸೂಕ್ಷ್ಮವಾಗಿ ಗಮನಿಸಿದೆ. ಏಕೆಂದರೆ ಚೀನಾ "ಗ್ವಾದರ್ ಬಂದರ"ನ್ನು ಬೇರೆ ಉದ್ದೇಶಕ್ಕೆ ಬಳಸಿಕೊಳ್ಳಲಿದೆ ಎಂದು ಭಾರತ ಊಹಿಸಿದೆ.

**ಗ್ವಾಟೆಮಾಲದ ಮಾಜಿ ಸರ್ವಾಧಿಕಾರಿ "ಎಫ್ರೈನ್ ರಿಯೋಸ್ ಮಾಂಟ್" ಗೆ 80 ವರ್ಷ ಜೈಲು ಶಿಕ್ಷೆ**

ಗ್ವಾಟೆಮಾಲದ ಮಾಜಿ ಸರ್ವಾಧಿಕಾರಿ "ಎಫ್ರೈನ್ ರಿಯೋಸ್ ಮಾಂಟ್" ರವರಿಗೆ ಗ್ವಾಟೆಮಾಲದ ಸ್ಥಳೀಯ ನ್ಯಾಯಾಲಯ ನರಹತ್ಯೆ ಮತ್ತು ಮಾನವ ಹಕ್ಕು ಉಲ್ಲಂಘನೆ ಅಪರಾಧದಲ್ಲಿ ತಪ್ಪಿತಸ್ಥ ಎಂದು ಸಾಬೀತಾಗಿದ್ದು, 80 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.

- ಗ್ವಾಟೆಮಾಲ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಲ್ಯಾಟಿನ್ ಅಮೆರಿಕನ್ ನಾಯಕನೊರ್ವ ನರಹತ್ಯೆ ಮತ್ತು ಮಾನವೀಯತೆ ವಿರುದ್ದ ಅಪರಾಧ ಪ್ರಕರಣದಲ್ಲಿ ದೋಷಿ ಎಂದು ಸಾಬೀತಾಗಿದೆ.
- ಗ್ವಾಟೆಮಾಲಾದಲ್ಲಿ 36 ವರ್ಷಗಳ ಕಾಲ ನಡೆದ ನಾಗರಿಕ ಸಮರದ ವೇಳೆ 1982 ಮಾರ್ಚ್ ನಿಂದ 1983 ರ ಆಗಸ್ಟ್ ವರೆಗೆ "ರಿಯೋಸ್ ಮಾಂಟ್" ರವರು ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದ್ದರು. ಈ ವೇಳೆ ಮಾಯನ್ ಇಂಡಿಯನ್ ರ ಮೇಲೆ ನಡೆದ ದೌರ್ಜನ್ಯದ ಅರಿವಿದ್ದರು ಮಾಂಟ್ ರವರು ಮೌನವಹಿಸಿದ್ದರು ಎಂದು ಸಂತ್ರಸ್ಥರು ದೂರಿದ್ದರು.
- ಗ್ವಾಟೆಮಾಲ ಸರ್ಕಾರ ಮತ್ತು ಎಡ ಪಂಥೀಯ ಬಂಡುಕೋರರ ನಡುವೆ ನಡೆದ ಈ ಸಂಘರ್ಷದಲ್ಲಿ 2 ಲಕ್ಷಕ್ಕೂ ಹೆಚ್ಚು ಜನ ಮರಣಹೊಂದಿದ್ದರು. 1996 ರಲ್ಲಿ ನಡೆದ ಶಾಂತಿ ಮಾತುಕತೆ ಬಳಿಕ ಗ್ವಾಟೆಮಾಲಾದಲ್ಲಿ ಸಂಘರ್ಷ ಅಂತ್ಯಕಂಡಿತು.

**ಆಹಾರ ಕೊರತೆಯನ್ನು ಹೋಗಲಾಡಿಸಲು ಕೀಟಗಳನ್ನು ತಿನ್ನಿ: ವಿಶ್ವ ಸಂಸ್ಥೆ**

ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಆಹಾರ, ಪೋಷಕಾಂಶಗಳ ಕೊರತೆ ಮತ್ತು ಪರಿಸರ ಮಾಲಿನ್ಯದ ವಿರುದ್ದ ಹೋರಾಡಲು ವಿಶ್ವಸಂಸ್ಥೆ ಹೊಸ ಪರಿಹಾರವನ್ನು ಹುಡುಕಿದೆ. ವಿಶ್ವಸಂಸ್ಥೆಯ "ಆಹಾರ ಮತ್ತು ಕೃಷಿ ಸಂಘಟನೆ (FAO)" ಹೊರತಂದಿರುವ ತನ್ನ 200 ಪುಟಗಳ ವರದಿಯಲ್ಲಿ "ಕೀಟಗಳ"ನ್ನು ಆಹಾರವಾಗಿ ಬಳಸುವಂತೆ ವಿಶ್ವದ ಜನತೆಗೆ ಕರೆ ನೀಡಿದೆ.

- ಜಗತ್ತಿನಲ್ಲಿ ಈಗಾಗಲೇ 2 ಕೋಟಿ ಮಂದಿ ಕೀಟಗಳನ್ನು ತಿಂದು ಜೀವನವನ್ನು ಸಾಗಿಸುತ್ತಿದ್ದಾರೆ.
- ಕೀಟಗಳು ಪ್ರೋಟಿನ್ ಹಾಗೂ ಖನಿಜಾಂಶಗಳ ಬಂಡಾರ. ಜತೆಗೆ ಇವುಗಳಿಂದ ಪರಿಸರ ಮಾಲಿನ್ಯ ಸಹ ಕಡಿಮೆ.
- 2 ಕಿ.ಗ್ರಾಂನಷ್ಟು ಆಹಾರ ನೀಡಿದರೆ ಕೀಟಗಳಿಂದ 1 ಕಿ.ಗ್ರಾಂ ನಷ್ಟು ಮಾಂಸವನ್ನು ಉತ್ಪಾದಿಸಬಹುದು. ಆದರೆ 1 ಕಿ.ಗ್ರಾಂ ನಷ್ಟು ಮಾಂಸ ಉತ್ಪಾದಿಸಲು ಪಶುಗಳಿಗೆ 8 ಗ್ರಾಂ ನಷ್ಟು ಆಹಾರ ನೀಡಬೇಕಾಗುತ್ತದೆ.
- ವರದಿಯಲ್ಲಿರುವಂತೆ ಇರುವೆ, ಮಿಡತೆ ಮತ್ತು ಮತ್ತಿತ್ತರ ಕ್ರಿಮಿ ಕೀಟಗಳು ಉತ್ತಮ ಪೋಷಕಾಂಶ ನೀಡಬಲ್ಲ ಆಹಾರದ ಮೂಲಗಳಾಗಿವೆ.
- ಅನೇಕ ಕ್ರಿಮಿಕೀಟಗಳು ಕಡಿಮೆ ಹಸಿರು ಮನೆ ಅನಿಲಗಳನ್ನು ಉತ್ಪಾದಿಸುತ್ತವೆ. ಹಾಗೂ ಸಗಣೆ, ಮಾನವನ ಮಲ ಮತ್ತು ತ್ಯಾಜ್ಯಗಳನ್ನು ಗೊಬ್ಬರವಾಗಿ ಪರಿವರ್ತಿಸುತ್ತವೆ. ಆದ್ದರಿಂದ ಕೀಟಗಳ ಸಾಕಾಣೆ ಪರಿಸರ ಮಾಲಿನ್ಯ ತಡೆಗೆ ಸಹಾಯವು ಹೌದು.

**ಬ್ರಿಟನ್ ನಿಂದ ಭಾರತೀಯರಿಗೆ "ಮೊದಲ ಆದ್ಯತೆ" ತುರ್ತು ಸೇವೆ ವೀಸಾ ಸೌಲಭ್ಯ**

ಭಾರತದಿಂದ ಬ್ರಿಟನ್ ಗೆ ಪ್ರಯಾಣ ಬೆಳೆಸುವುದು ಈಗ ಮೊದಲಿಗಿಂತಲೂ ಸುಲಭವಾಗಲಿದೆ. ಏಕೆಂದರೆ ಇದೇ ಮೊದಲ ಭಾರತೀಯರಿಗಾಗಿಯೇ "ಮೊದಲ ಆದ್ಯತೆ (Super-Priority)" ತುರ್ತು ವೀಸಾ ಎಂಬ ಹೊಸ ಸೌಲಭ್ಯವನ್ನು ಬ್ರಿಟನ್ ಪ್ರಾರಂಭಿಸಿದೆ.

- ಈ ಹೊಸ ಸೌಲಭ್ಯದಿಂದ ಅರ್ಜಿ ಸಲ್ಲಿಸಿದ ದಿನದಂದೇ ವೀಸಾ ಲಭ್ಯವಾಗಲಿದೆ. ಆದರೆ ಈ ವೀಸಾಕ್ಕಾಗಿ ಈಗಾಗಲೇ ಇರುವ ಶುಲ್ಕದೊಂದಿಗೆ ಹೆಚ್ಚುವರಿಯಾಗಿ ರೂ.4800 ಗಳನ್ನು ಹೆಚ್ಚುವರಿಯಾಗಿ ಪಾವತಿಸಬೇಕು.
- ಭಾರತದಲ್ಲಿ ಮೊದಲ ಬಾರಿಗೆ ತುರ್ತು ವೀಸಾ ಸೌಲಭ್ಯವನ್ನು ಆರಂಭಿಸಿದ್ದು, ಇದರಿಂದ ಬ್ರಿಟನ್ ಗೆ ಬೇಟಿನೀಡುವ ಉದ್ಯಮಿಗಳಿಗೆ ಹೆಚ್ಚು ಅನುಕೂಲವಾಗಲಿದೆ.
- ಬ್ರಿಟನ್ ಇದೇ ಮೊದಲ ಬಾರಿಗೆ ಇಂತಹ ವ್ಯವಸ್ಥೆಯನ್ನು ಭಾರತದಲ್ಲಿ ಆರಂಭಿಸಿರುವುದು ಗಮನಾರ್ಹ.
- ಬ್ರಿಟನ್ ಪ್ರಧಾನಿ "ಡೇವಿಡ್ ಕ್ಯಾಮರನ್" ರವರು ಫೆಬ್ರವರಿ 2013 ರಲ್ಲಿ ಭಾರತಕ್ಕೆ ಬೇಟಿ ನೀಡಿದ್ದ ವೇಳೆ "ಮೊದಲ ಆದ್ಯತೆ" ತುರ್ತು ವೀಸಾವನ್ನು ಆರಂಭಿಸುವುದಾಗಿ ಹೇಳಿದ್ದರು.
- ಭಾರತ-ಬ್ರಿಟನ್ ನಡುವಿನ ದ್ವಿಪಕ್ಷೀಯ ವ್ಯಾಪರವನ್ನು 2015 ರ ವೇಳೆಗೆ ದ್ವಿಗುಣಗೊಳಿಸಲು ಉದ್ದೇಶಿಸಲಾಗಿದ್ದು, ಈ ಹೊಸ ವೀಸಾ ವ್ಯವಸ್ಥೆಯಿಂದ ಮತ್ತಷ್ಟು ಅನುಕೂಲವಾಗಲಿದೆ.
- ಈ ಹೊಸ ವೀಸಾ ವ್ಯವಸ್ಥೆಯು ಕಳೆದ ಐದು ವರ್ಷಗಳಲ್ಲಿ ಯು.ಕೆ, ಅಮೇರಿಕಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಕೆನಡಾ ಮತ್ತು ಸಿಚೆಗನ್ ರಾಷ್ಟ್ರಗಳಿಗೆ ಪ್ರವಾಸ ಮಾಡಿದವರಿಗೆ ಮಾತ್ರ ಲಭ್ಯವಿರಲಿದೆ.

**ನೈಜೀರಿಯಾದ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿ ಘೋಷಣೆ**

ನೈಜೀರಿಯಾದ ಇಸ್ಲಾಮಿಕ್ ಉಗ್ರವಾದಿ ಸಂಘಟನೆ "ಬೊಕೊ ಹರಮ್" ಮತ್ತು ಭದ್ರತೆ ಪಡೆ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಪರಿಸ್ಥಿತಿ ಹತೋಟಿಗೆ ತರಲು ನೈಜೀರಿಯಾದ ಈಶಾನ್ಯ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿಯನ್ನು ಅಧ್ಯಕ್ಷ "ಜೋನಾಥನ್ ಗುಡಲಕ್" ರವರು ಘೋಷಿಸಿದ್ದಾರೆ.

- "ಬೊಕೊ ಹರಮ್" ಸಂಘಟನೆಯ ದಾಳಿಗೆ ನಲುಗಿ ಹೋಗಿರುವ "ಅದಮವ", "ಬೊರ್ನೊ" ಮತ್ತು "ಯೊಬೆ" ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಲಾಗಿದೆ.
- ಇಸ್ಲಾಮಿಕ್ ಉಗ್ರವಾದಿ ಸಂಘಟನೆಯ ದಾಳಿಯನ್ನು ಹತ್ತಿಕ್ಕಲು ಹೆಚ್ಚುವರಿ ಸೇನೆಯನ್ನು ಈ ರಾಜ್ಯಗಳಿಗೆ ರವಾನಿಸಲಾಗಿದೆ. ಉಗ್ರವಾದಿಗಳಿಗೆ ರಕ್ಷಣೆ ನೀಡಲು ಮುಂದಾಗುವವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುವುದು ಎಂದು ದೂರದರ್ಶನ ಮತ್ತು ರೇಡಿಯೊ ಮೂಲಕ ಸರ್ಕಾರ ಜನರಿಗೆ ಎಚ್ಚರಿಸಿದೆ.

**"ಬೊಕೊ ಹರಮ್":**

- "ಬೊಕೊ ಹರಮ್" ಈಶಾನ್ಯ ನೈಜೀರಿಯಾದಲ್ಲಿ ಕಾರ್ಯಗತವಾಗಿರುವ ಇಸ್ಲಾಮಿಕ್ ಉಗ್ರವಾದಿ ಸಂಘಟನೆ. 2001 ರಲ್ಲಿ ಮೊಹಮ್ಮದ್ ಯೂಸಫ್ ಈ ಸಂಘಟನೆಯನ್ನು ಸ್ಥಾಪಿಸಿದ.

- ಮಾನವ ಕಾನೂನು ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ವಿರೋಧಿಸಿ "ಶರಿಯಾ ಕಾನೂನ"ನ್ನು ಸ್ಥಾಪಿಸುವುದು ಈ ಸಂಘಟನೆಯ ಪ್ರಮುಖ ಉದ್ದೇಶ.
- 2001 ರಿಂದ 2012 ರ ವರೆಗೆ 10,000 ಕ್ಕೂ ಹೆಚ್ಚು ನೈಜೀರಿಯಾದ ಪ್ರಜೆಗಳನ್ನು ಈ ಸಂಘಟನೆ ಹತ್ಯೆ ಮಾಡಿದೆ.

**ಸಿರಿಯಾ ಸಂಘರ್ಷ: ವಿಶ್ವಸಂಸ್ಥೆಯಲ್ಲಿ ನಿರ್ಣಯ ಅಂಗೀಕಾರ**

ಸಿರಿಯಾದಲ್ಲಿ "ರಾಜಕೀಯ ಸ್ಥಿತ್ಯಂತರ" ಜಾರಿಗೊಳಿಸಲು ಸಂಬಂಧಿಸಿದಂತೆ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಂಡಿಸಲಾದ ನಿರ್ಣಯಕ್ಕೆ 107 ದೇಶಗಳು ಪರವಾಗಿ ಮತ ಚಲಾಯಿಸುವ ಮೂಲಕ ಅಂಗೀಕಾರ ಪಡೆದುಕೊಂಡಿದೆ. ಈ ನಿರ್ಣಯ ಕುರಿತಾಗಿ ಭಾರತ ಮತ ಚಲಾಯಿಸಿದ ತಟಸ್ಥವಾಗಿ ಉಳಿದಿದೆ. ವಿಶ್ವ ಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳು ಈ ನಿರ್ಣಯಕ್ಕೆ ಬದ್ದರಾಗಬೇಕಿಲ್ಲವಾದರೂ, ಈ ನಿರ್ಣಯ ತನ್ನದೇ ಆದ ಮಹತ್ವವನ್ನು ಹೊಂದಿದೆ.

- ಸಿರಿಯಾದಲ್ಲಿ "ರಾಜಕೀಯ ಸ್ಥಿತ್ಯಂತರ (Political Transition)" ಸಲುವಾಗಿ ಮಂಡಿಸಲಾದ ಈ ನಿರ್ಣಯಕ್ಕೆ 107 ರಾಷ್ಟ್ರಗಳು ಪರವಾಗಿ ಮತ ಚಲಾಯಿಸಿದರೆ, 12 ರಾಷ್ಟ್ರಗಳು ವಿರುದ್ದವಾಗಿ ಮತ್ತು 59 ರಾಷ್ಟ್ರಗಳು ತಟಸ್ಥವಾಗಿ ಉಳಿದಿವೆ. ರಷ್ಯಾ ಸಹ ಈ ನಿರ್ಣಯಕ್ಕೆ ವಿರೋಧ ವ್ಯಕ್ತಪಡಿಸಿದೆ.
- ಸಿರಿಯಾದ ಅಧ್ಯಕ್ಷ "ಬಷರ್ ಅಲ್-ಅಸ್ಸಾದ್" ನೇತೃತ್ವದ ಸರ್ಕಾರ ಹೊಂದಿರುವ ಭಾರಿ ಶಸ್ತ್ರಾಸ್ತ್ರ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯನ್ನು ವಿಶ್ವಸಂಸ್ಥೆ ಬಲವಾಗಿ ಖಂಡಿಸಿದೆ.
- ಸಿರಿಯಾ ಸರ್ಕಾರದ ವಿರುದ್ದ ರಚಿಸಲಾಗಿರುವ "ಸಿರಿಯಾನ್ ನ್ಯಾಷನಲ್ ಕೊಅಲಿಷನ್" ನ್ನು ವಿಶ್ವಸಂಸ್ಥೆ ಸ್ವಾಗತಿಸಿದ್ದು, ಸಿರಿಯಾದಲ್ಲಿ ರಾಜಕೀಯ ಸ್ಥಿತ್ಯಂತರಕ್ಕೆ ಈ ಸಂಘಟನೆ ಪ್ರಮುಖ ಪಾತ್ರವಹಿಸಲಿದೆ ಎಂದಿದೆ.
- 2011 ರಿಂದ ವಿಶ್ವಸಂಸ್ಥೆ ಸಿರಿಯಾ ಸರ್ಕಾರ ವಿರುದ್ದ ಕೈಗೊಳ್ಳುತ್ತಿರುವ ಐದನೇ ನಿರ್ಣಯ ಇದಾಗಿದ್ದು, ಸರ್ವಾಧಿಕಾರ ದೋರಣೆ ತೋರುತ್ತಿರುವ ಸಿರಿಯಾ ಅಧ್ಯಕ್ಷ "ಬಷೀರ್ ಅಸ್ಸಾದ್" ರವರ ಆಡಳಿತಕ್ಕೆ ಇತಿಶ್ರೀ ಹಾಡಲು ಸಜ್ಜಾಗಿದೆ.

**ಚೀನಾದ ಅತ್ಯಂತ ಎತ್ತರದ ಅಣೆಕಟ್ಟು ಯೋಜನೆಗೆ ಪರಿಸರ ಸಚಿವಾಲಯ ಒಪ್ಪಿಗೆ**

ಹಲವು ವರ್ಷಗಳಿಂದ ವಿವಾದಕ್ಕೆ ಸಿಲುಕಿದ್ದ ಚೀನಾದ "ಶೂಯಂಗ್ ಜಿಯಾಂಗ್ ಕ್ಯೂ (Shuangjiangkou)" ಅಣೆಕಟ್ಟು ಯೋಜನೆಗೆ ಚೀನಾದ ಪರಿಸರ ಸಚಿವಾಲಯ ತಾತ್ವಿಕ ಒಪ್ಪಿಗೆ ನೀಡಿದೆ. 2 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯದ "ಶೂಯಂಗ್ ಜಿಯಾಂಗ್ ಕ್ಯೂ" ಯೋಜನೆಗೆ ಅಲ್ಲಿನ ಪರಿಸರ ವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದ ಹಿನ್ನಲೆಯಲ್ಲಿ ವಿಳಂಬವಾಗಿತ್ತು.

- ಸಿಯಾಚಿನ್ ನ ನೈರುತ್ಯ ಭಾಗದಲ್ಲಿರುವ "ದದು (Dadu)" ನದಿಯ ಮೇಲೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.
- 4 ಬಿಲಿಯನ್ ಡಾಲರ್ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಈ ಅಣೆಕಟ್ಟು 314 ಮೀಟರ್ ಎತ್ತರವಿರಲಿದ್ದು, ಚೀನಾದ ಅತ್ಯಂತ ಎತ್ತರದ ಅಣೆಕಟ್ಟು ಎನಿಸಲಿದೆ. ಮೆಕಾಂಗ್ ನದಿ ಮೇಲೆ ನಿರ್ಮಿಸಲಾಗಿರುವ 300 ಮೀಟರ್ ಎತ್ತರದ ಕ್ಸಿಯೋವಾನ್ ಅಣೆಕಟ್ಟು ಸದ್ಯ ಚೀನಾದ ಎತ್ತರದ ಅಣೆಕಟ್ಟು ಎನಿಸಿದೆ.
- ಅಪರೂಪದ ಮೀನಿನ ಪ್ರಭೇದಗಳು ಮತ್ತು ಅಳಿವಿನಂಚಿನಲ್ಲಿರುವ ಕೆಲವು ಸಸ್ಯ ಪ್ರಭೇದಗಳು ಈ ಭಾಗದಲ್ಲಿ ಹೇರಳವಾಗಿರುವ ಕಾರಣ ಈ ಯೋಜನೆಯನ್ನು ಕೈಬಿಡುವಂತೆ ಪರಿಸರವಾದಿಗಳು ಹೋರಾಟ ನಡೆಸಿದ್ದರು.

**ವಿಶ್ವದ ಅತಿದೊಡ್ಡ "ಜಲವಿದ್ಯುತ್ ಯೋಜನೆ"ಯನ್ನು ಕೈಗೆತ್ತಿಕೊಳ್ಳಲಿರುವ "ರಿಪಬ್ಲಿಕ್ ಆಫ್ ಕಾಂಗೋ"**

ವಿಶ್ವದ ಅತಿ ದೊಡ್ಡ ಜಲವಿದ್ಯುತ್ ಯೋಜನೆ ಎನ್ನಲಾಗಿರುವ "ಇಂಗ ಜಲವಿದ್ಯುತ್ ಯೋಜನೆ"ಯ ಕಾಮಗಾರಿಯನ್ನು 2015 ರಿಂದ ಆರಂಭಿಸಲಿರುವುದಾಗಿ "ರಿಪಬ್ಲಿಕ್ ಆಫ್ ಕಾಂಗೋ" ಹೇಳಿದೆ. ಇತ್ತೀಚೆಗೆ ಪ್ಯಾರಿಸ್ ನಲ್ಲಿ ಕಾಂಗೋ ಮತ್ತು ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳ ನಡುವೆ ನಡೆದ ಸಭೆಯ ಬಳಿಕ ಅಧಿಕೃತ ಘೋಷಿಸಲಾಯಿತು.

**"ಇಂಗ ಜಲವಿದ್ಯುತ್ ಯೋಜನೆ (Inga Hydroelectric Dam)":**

- ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳ ಹಣಕಾಸಿನ ನೆರವಿನೊಂದಿಗೆ ರಿಪಬ್ಲಿಕ್ ಆಫ್ ಕಾಂಗೋ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಿದೆ. **ರಿಪಬ್ಲಿಕ್ ಆಫ್ ಕಾಂಗೋ ದ "ಕಾಂಗೋ"** ನದಿಯ ಮೇಲೆ ಈ ಅಣೆಕಟ್ಟನ್ನು ನಿರ್ಮಿಸಲಾಗುವುದು.
- ಈ ಉದ್ದೇಶಿತ ಯೋಜನೆಯು 40000 ಮೆಗಾ ವ್ಯಾಟ್ ವಿದ್ಯುತ್ ನ್ನು ಉತ್ಪಾದಿಸುವ ಗುರಿ ಹೊಂದಿದ್ದು, ಆಫ್ರಿಕಾ ಖಂಡದ ಅರ್ಧ ಭಾಗಕ್ಕೆ ವಿದ್ಯುತ್ ಸೌಲಭ್ಯವನ್ನು ಒದಗಿಸಬಲ್ಲದಾಗಿದೆ.
- ವಿಶ್ವ ಬ್ಯಾಂಕ್ ಅಂದಾಜಿಸಿರುವ ಪ್ರಕಾರ ಈ ಯೋಜನೆಯಿಂದ ಒಟ್ಟು 100000 ಮೆಗಾ ವ್ಯಾಟ್ ವಿದ್ಯುತನ್ನು ಉತ್ಪಾದಿಸಬಹುದಾಗಿದ್ದು, ಸುಮಾರು 500 ಮಿಲಿಯನ್ ಆಫ್ರಿಕನ್ ಕುಟುಂಬಗಳನ್ನು ಬೆಳಗಿಸಬಹುದಾಗಿದೆ.

ಪ್ರಸ್ತುತ ಚೇನಾದ ಯಾಂಗ್ಸೆ ನದಿ ಮೇಲೆ ನಿರ್ಮಿಸಿರುವ "ತ್ರಿ ಗೋರ್ಜಸ್" ಯೋಜನೆ ವಿಶ್ವದ ಅತಿ ದೊಡ್ಡ ಜಲ ವಿದ್ಯುತ್ ಯೋಜನೆಯಾಗಿದೆ. ಈ ಯೋಜನೆಯಿಂದ 22500 ಮೆಗಾ ವ್ಯಾಟ್ ವಿದ್ಯುತನ್ನು ಚೇನಾ ಉತ್ಪಾದಿಸುತ್ತಿದೆ.

**ಜಿಂಬಾಬ್ವೆ ಹೊಸ ಸಂವಿಧಾನಕ್ಕೆ ಅಧ್ಯಕ್ಷ "ರಾಬರ್ಟ್ ಮುಗಾಬೆ" ಅಸ್ತು**

ಜಿಂಬಾಬ್ವೆ ಸರ್ಕಾರ ರಚಿಸಿದ್ದ ಹೊಸ ಸಂವಿಧಾನಕ್ಕೆ ಅಧ್ಯಕ್ಷರಾದ "ರಾಬರ್ಟ್ ಮುಗಾಬೆ" ರವರು ಹೊಸ ಸಹಿ ಹಾಕಿದ್ದು, ಈ ಮೂಲಕ ಕಾನೂನು ಆಗಿ ಜಾರಿಗೊಂಡಿದೆ. ವಿರೋಧ ಪಕ್ಷಗಳು ಹೊಸ ಸಂವಿಧಾನಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಿವೆ. ಮಾರ್ಚ್ 2013 ರಂದು ಸಂವಿಧಾನದ ಕರಡು ಪ್ರತಿಗೆ ಸಂಸತ್ತು ಒಪ್ಪಿಗೆ ಸೂಚಿಸಿತ್ತು. ಹೊಸ ಸಂವಿಧಾನದ ಅಳವಡಿಕೆಯಿಂದ ಈ ವರ್ಷದ ಕೊನೆಯಲ್ಲಿ ಜಿಂಬಾಬ್ವೆಯಲ್ಲಿ ನಡೆಯಲಿರುವ ಚುನಾವಣೆ ಹಾದಿ ಸುಗಮವಾಗಲಿದೆ. ಹೊಸ ಸಂವಿಧಾನ ಜಾರಿಯಾಗದ ಹೊರತು ಮುಂದಿನ ಚುನಾವಣೆ ನಡೆಯುವುದಿಲ್ಲ ಎಂದು ವಿರೋಧ ಪಕ್ಷಗಳು ಬೆದರಿಕೆಯಾಕಿದವು.

**ಹೊಸ ಸಂವಿಧಾನದಲ್ಲಿ ಏನಿದೆ?**

- ಹೊಸ ಸಂವಿಧಾನದ ಅನ್ವಯ ರಾಷ್ಟ್ರಾಧ್ಯಕ್ಷರ ಅಧಿಕಾರ ಅವಧಿಯನ್ನು ಮೊಟಕುಗೊಳಿಸಲಾಗಿದೆ. ಇನ್ನು ಮುಂದೆ ರಾಷ್ಟ್ರಾಧ್ಯಕ್ಷ ಅಧಿಕಾರವನ್ನು ಎರಡು ಅವಧಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಜಿಂಬಾಬ್ವೆಯಲ್ಲಿ ರಾಷ್ಟ್ರಾಧ್ಯಕ್ಷರು ಐದು ವರ್ಷಗಳ ಅಧಿಕಾರದಲ್ಲಿರುತ್ತಾರೆ.
- ಹೊಸ ಸಂವಿಧಾನದಲ್ಲಿ ಪ್ರಧಾನಿ ಹುದ್ದೆಯನ್ನು ಸಹ ಕೈಬಿಡಲಾಗಿದೆ.
- ಹೊಸ ಸಂವಿಧಾನವು ಮುಂದಿನ ಸರ್ಕಾರದಿಂದ ಜಾರಿಗೆ ಬರಲಿದೆ. ಇದರಿಂದ ಇನ್ನು 10 ವರ್ಷಗಳ ಕಾಲ ಮುಗಾಬೆ ರವರು ರಾಷ್ಟ್ರಾಧ್ಯಕ್ಷರಾಗಿ ಆಳ್ವಿಕೆ ನಡೆಸಬಹುದಾಗಿದೆ.

1980 ರಲ್ಲಿ ಬ್ರಿಟನ್ ನಿಂದ ಜಿಂಬಾಬ್ವೆ ಸ್ವಾತಂತ್ರ್ಯ ಪಡೆದಾಗಿನಿಂದಲೂ "ರಾಬರ್ಟ್ ಮುಗಾಬೆ" ರವರು ಜಿಂಬಾಬ್ವೆಯ ಅಧ್ಯಕ್ಷರಾಗಿದ್ದಾರೆ. ಅಧಿಕಾರ ದುರುಪಯೋಗ, ಸರ್ವಾಧಿಕಾರ ಧೋರಣೆಯಿಂದ ಇತ್ತೀಚೆಗೆ ಮುಗಾಬೆ ಭಾರಿ ಟೀಕಾ

ಪ್ರಹಾರಗಳನ್ನು ಎದುರಿಸುತ್ತಿದ್ದಾರೆ. 2009 ರಲ್ಲಿ "ಮುಗಾಬೆ" ಮತ್ತು ಸದ್ಯ ಪ್ರಧಾನಿಯಾಗಿರುವ "ವಂಗಿರೈ" ರವರು ಅಧಿಕಾರವನ್ನು ಹಂಚಿಕೆ ಮಾಡಿಕೊಳ್ಳವು ಒಪ್ಪಂದದ ಮೇರೆಗೆ ಹೊಸ ಸರ್ಕಾರವನ್ನು ರಚಿಸಿದ್ದರು. ಈ ಸರ್ಕಾರ ಜೂನ್ 29, 2013 ರಂದು ಕೊನೆಗೊಳ್ಳಲಿದ್ದು, ನಂತರದ 90 ದಿನಗಳಲ್ಲಿ ಹೊಸ ಸರ್ಕಾರ ರಚನೆಯಾಗಬೇಕಿದೆ.

**ಆಫ್ರಿಕನ್ ಯೂನಿಯನ್ ಗೆ 50 ವರ್ಷಗಳ ಸಂಭ್ರಮ**

ಮೇ 25, 2013 ರಂದು ಆಫ್ರಿಕನ್ ಯೂನಿಯನ್ 50 ವರ್ಷಗಳನ್ನು ಪೂರೈಸಿತು. 50ನೇ ವರ್ಷದ ಸಂಸ್ಥಾಪನ ದಿನದ ಆಚರಣೆಯನ್ನು ಮತ್ತು ಯೂನಿಯನ್ ಸಮ್ಮೇಳನವನ್ನು ಈಥೋಪಿಯಾದ ರಾಜಧಾನಿ "ಅಡ್ಡಿಸ್ ಅಬಬ"ದಲ್ಲಿ ಹಮ್ಮಿಕೊಳ್ಳಲಾಗಿತ್ತು. ವಿಶ್ವದ ಪ್ರಮುಖ ಗಣ್ಯರುಗಳಾದ ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ "ಬಾನ್ ಕಿ ಮೂನ್" ಮತ್ತು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ "ಜಾನ್ ಕೆರಿ" ರವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಆಫ್ರಿಕಾ ದೇಶಗಳನ್ನು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಏಕೀಕರಣಗೊಳಿಸುವ ಉದ್ದೇಶ ಹೊಂದಿರುವ "ಆಫ್ರಿಕನ್ ಯೂನಿಯನ್-2063" ಅಜೇಂಡಾ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಲಾಯಿತು.

**ಆಫ್ರಿಕನ್ ಯೂನಿಯನ್**:

- ಆಫ್ರಿಕಾದ 53 ದೇಶಗಳ ಒಕ್ಕೂಟವೇ ಆಫ್ರಿಕನ್ ಯೂನಿಯನ್. ಈ ಯೂನಿಯನ್ ನಿಂದ ಹೊರಗಿರುವ ಏಕೈಕ ಆಫ್ರಿಕನ್ ದೇಶವೆಂದರೆ "**ಮೊರೊಕೊ".**
- ಮೇ 25, 1963 ರಲ್ಲಿ ಸ್ಥಾಪಿಸಲಾದ "ಆರ್ಗನೇಷನ್ ಆಫ್ ಆಫ್ರಿಕನ್ ಯೂನೈಟಿ" ಯನ್ನು ಬದಲಾಯಿಸಿ "ಆಫ್ರಿಕನ್ ಯೂನಿಯನ್" ನ್ನು ಮೇ 26, 2001 ರಂದು "ಅಡಿಸ್ ಅಬಬ"ದಲ್ಲಿ ಸ್ಥಾಪನೆ ಮಾಡಲಾಯಿತು. "ಈಥೋಪಿಯಾ" ದ ರಾಜಧಾನಿ "ಅಡ್ಡಿಸ್ ಅಬಬ" ದಲ್ಲಿ ಆಫ್ರಿಕನ್ ಯೂನಿಯನ್ ಕಮೀಷನ್ ನ ಪ್ರಧಾನ ಕಚೇರಿ ಇದೆ.

ಆಫ್ರಿಕನ್ ಯೂನಿಯನ್ ಉದ್ದೇಶಗಳು:

- ಆಫ್ರಿಕನ್ ರಾಷ್ಟ್ರಗಳ ಮತ್ತು ಆಫ್ರಿಕಾದ ಜನರ ನಡುವೆ ಹೆಚ್ಚಿನ ಏಕತೆ ಮತ್ತು ಒಗ್ಗಟ್ಟು ಸಾಧಿಸುವುದು.
- ಆಫ್ರಿಕಾ ರಾಷ್ಟ್ರಗಳ ಸಾರ್ವಭೌಮತೆ, ಪ್ರಾದೇಶಿಕ ಸಮಗ್ರತೆ ಮತ್ತು ಅದರ ಸದಸ್ಯ ಸಂಸ್ಥಾನಗಳ ಸ್ವಾಂತಂತ್ರವನ್ನು ಉಳಿಸಿಕೊಳ್ಳವುದು.
- ಸದಸ್ಯ ರಾಷ್ಟ್ರಗಳ ನಡುವೆ ರಾಜಕೀಯ ಮತ್ತು ಆರ್ಥಿಕ ಏಕೀಕರಣಕ್ಕೆ ಶ್ರಮಿಸುವುದು.
- ಅಂತರರಾಷ್ಟ್ರೀಯ ಸಹಕಾರ ಪ್ರೋತ್ಸಾಹಿಸುವ ಮೂಲಕ ಆಫ್ರಿಕಾದಲ್ಲಿ ಶಾಂತಿ ಸುವ್ಯವಸ್ಥೆ, ಭದ್ರತೆ ಮತ್ತು ಸ್ಥಿರತೆಯನ್ನು ಉತ್ತೇಜಿಸುವುದು ಇತ್ಯಾದಿ.

**ಸಲ್ಮಾನ್ ಖುರ್ಷಿದ್ ಸೌದಿ ಪ್ರವಾಸ: ಭಯೋತ್ಪಾದನೆ ನಿಗ್ರಹದತ್ತ ಭಾರತ-ಸೌದಿ ಅರೇಬಿಯಾ** ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ರವರು ನಾಲ್ಕು ದಿನಗಳ ಕಾಲ ಸೌದಿ ಅರೇಬಿಯಾಗೆ ಪ್ರವಾಸ ಕೈಗೊಂಡಿದ್ದರು. ಸೌದಿ ಅರೇಬಿಯಾದ ವಿದೇಶಾಂಗ ಸಚಿವ ರಾಜಕುಮಾರ ಸೌದ್ ಅಲ್-ಫೈಸಲ್ ಜತೆ ಖುರ್ಷಿದ್ ರವರು ಸುಮಾರು ಮೂರು ಗಂಟೆಗಳ ಕಾಲ ಚರ್ಚೆ ನಡೆಸಿದರು. ಉಭಯ ದೇಶಗಳ ಪ್ರತಿನಿಧಿಗಳ ನಡುವೆ ನಡೆದ ಚರ್ಚೆಯ ಮುಖ್ಯಾಂಶಗಳು ಇಂತಿವೆ.

- **ಭಯೋತ್ಪಾದನೆ ನಿಗ್ರಹಕ್ಕೆ ಸಹಕಾರ**: ಉಭಯ ದೇಶಗಳ ವಿದೇಶಾಂಗ ಸಚಿವರ ನಡುವೆ ನಡೆದ ಚರ್ಚೆಯಲ್ಲಿ ಭಯೋತ್ಪಾದನೆ ನಿಗ್ರಹದ ಬಗ್ಗೆ ಆಳವಾಗಿ ಚರ್ಚಿಸಲಾಯಿತು. ಮಹತ್ವದ ಬೆಳವಣಿಗೆಯಲ್ಲಿ ಭಯೋತ್ಪಾದನೆಯನ್ನು ಬಗ್ಗು ಬಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉಭಯ ದೇಶಗಳು ಪರಸ್ಪರ ಸಹಕರಿಸುವ ನಿರ್ಧಾರಕ್ಕೆ ಬಂದವು. ಭಾರತ-ಸೌದಿ ಅರೇಬಿಯಾ 2010 ರಲ್ಲಿ ಸಹಿಹಾಕಿದ "ರಿಯಾದ್ ಘೋಷಣೆ (Riyadh Declaration-2010)"ಯಲ್ಲಿ ಭಯೋತ್ಪಾದನೆಯನ್ನು ನಿಗ್ರಹಿಸುವುದು ಒಂದು ಪ್ರಮುಖ ಅಂಶವಾಗಿದೆ. 26/11 ಮುಂಬೈ ದಾಳಿಯ ಕೈವಾಡದಿಂದಿರುವ ಉಗ್ರ "ಅಬು ಜುಂದಾಲ್" ನ್ನು ಸೌದಿ ಅರೇಬಿಯಾ ಕಳೆದ ವರ್ಷ ಭಾರತಕ್ಕೆ ಹಸ್ತಾಂತರಿಸಿದೆ.
- **ನಿತಾಖತ್ ಕಾನೂನು**: ಸೌದಿ ಅರೇಬಿಯಾ ಜಾರಿಗೊಳಿಸಿರುವ ವಿವಾದತ್ಮಕ "ನಿತಾಖತ್ ಕಾನೂನು" ಬಗ್ಗೆಯು ಚರ್ಚಿಸಲಾಯಿತು. ಈ ಕಾನೂನಿನ ಅನ್ವಯ ಸೌದಿ ಅರೇಬಿಯಾದಲ್ಲಿ ಸೃಷ್ಟಿಯಾಗುವ ಉದ್ಯೋಗಗಳಲ್ಲಿ ಅಲ್ಲಿನ ಪ್ರಜೆಗಳಿಗೆ ಶೇ.10 ರಷ್ಟು ಮೀಸಲಿಡಬೇಕಿದೆ. ಸೌದಿ ಸರ್ಕಾರದ ಈ ನಿರ್ಣಯದಿಂದ ಉದ್ಯೋಗ ಹರಸಿ ಸೌದಿಗೆ ತೆರಳಿದ್ದ ಭಾರತೀಯರಿಗೆ ತೀವ್ರ ಪೆಟ್ಟುಬೀಳಲಿದೆ.
- **ಇಂಧನ ಭದ್ರತೆ**: ಭಾರತಕ್ಕೆ ತೈಲ ರಫ್ತು ಮಾಡುವ ದೇಶಗಳಲ್ಲಿ ಸೌದಿ ಅರೇಬಿಯಾ ದೊಡ್ಡ ಪ್ರಮಾಣದ ಪಾಲನ್ನು ಹೊಂದಿದೆ. ಉಭಯ ದೇಶಗಳ ನಡುವೆ ಇಂಧನ ಭದ್ರತೆಯನ್ನು ಸಾಧಿಸುವ ಸಲುವಾಗಿ ಮಾತುಕತೆ ನಡೆಸಲಾಯಿತು. ಇವಲ್ಲದೇ ಎರಡೂ ದೇಶಗಳ ನಡುವೆ ಬಾಂಧವ್ಯ ಬೆಸೆಯುವ ಮತ್ತಿತ್ತರ ವಿಷಯಗಳ ಬಗ್ಗೆ ಖುರ್ಷಿದ್ ರವರು ಚರ್ಚಿಸಿದರು.

**ಮೇ 28: "ವಿಶ್ವ ಹಸಿವು ದಿನ (World Hunger Day)"**

ಪ್ರತಿ ವರ್ಷ ಮೇ 28 ನ್ನು "ವಿಶ್ವ ಹಸಿವು ದಿನ" ವೆಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಜಗತ್ತನ್ನು ಬೆಂಬಿಡದೆ ಕಾಡುತ್ತಿರುವ "ಹಸಿವು" ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಂಡು, ಹಸಿವು ಮತ್ತು ಬಡತನಕ್ಕೆ ಅಂತ್ಯ ಹಾಡುವ ದಿಸೆಯತ್ತ ಈ ದಿನದಂದು ಚಿಂತಿಸಲಾಗುವುದು. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಜನರನ್ನು ಹಸಿವು ಮತ್ತು ಬಡತನ ನಿವಾರಣೆಗೆ ಒಮ್ಮತದಿಂದ ಹೋರಾಡುವಂತೆ ಉತ್ತೇಜಿಸುವ ಕಾರ್ಯಕ್ರಮಗಳನ್ನು ಈ ದಿನದಂದು ಹಮ್ಮಿಕೊಳ್ಳಲಾಗುವುದು.

- ಅಂಕಿ ಅಂಶಗಳ ಪ್ರಕಾರ ವಿಶ್ವದಾದ್ಯಂತ ಸುಮಾರು 870 ಮಿಲಿಯನ್ ಜನರು ಹಸಿವು ಮತ್ತು ಕಡುಬಡತನದಿಂದ ಬಳಲುತ್ತಿದ್ದಾರೆ.
- ಏಡ್ಸ್, ಮಲೇರಿಯಾ ಮತ್ತು ಕ್ಷಯ ರೋಗಗಳಿಂದ ಮರಣ ಹೊಂದುವ ಪ್ರಮಾಣಕ್ಕಿಂತಲೂ ಹಸಿವು ನಿಂದ ಬಳಲಿ ಸಾವನ್ನಪ್ಪುವವರ ಸಂಖ್ಯೇ ಅಧಿಕವಾಗಿದೆ.
- ಆಫ್ರಿಕಾ, ದಕ್ಷಿಣ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಹಸಿವು ನಿಂದ ಬಳಲುತ್ತಿರುವವರ ಸಂಖ್ಯೆ ಅಧಿಕವಾಗಿದೆ.

**"ವಿಶ್ವ ಸಂತೋಷ ರಾಷ್ಟ್ರ"ಗಳ ಪಟ್ಟಿಯಲ್ಲಿ ಆಸ್ಟ್ರೇಲಿಯಾಗೆ ಮೊದಲ ಸ್ಥಾನ**

"ಆರ್ಗನೈಸೇಷನ್ ಫಾರ್ ಎಕಾನಮಿಕ್ ಡೆವಲಪ್ ಕೋಆಪರೇಷನ್ ಅಂಡ್ ಡೆವಲಪ್ ಮೆಂಟ್ (OECD)" ಸಿದ್ದಪಡಿಸಿರುವ "ಉತ್ತಮ ಜೀವನ ಸೂಚ್ಯಂಕ"ದಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಸತತ ಮೂರನೇ ಬಾರಿಗೆ ವಿಶ್ವದ ಸಂತೋಷ ರಾಷ್ಟ್ರವೆನಿಸಿದೆ (Worlds Happiest Nation). ವರಮಾನ, ಆರೋಗ್ಯ, ಸುರಕ್ಷತೆ ಮತ್ತು ವಸತಿ ಸೌಕರ್ಯಗಳನ್ನು ಮಾನದಂಡವಾಗಿಟ್ಟುಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ 30ಕ್ಕೂ ಹೆಚ್ಚು ರಾಷ್ಟ್ರಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು.

- ಪಟ್ಟಿಯಲ್ಲಿ ಸ್ವೀಡನ್, ಕೆನಡಾ, ನಾರ್ವೆ ಮತ್ತು ಸ್ವಿಟ್ಜರ್ಲ್ಯಾಂಡ್ ಕ್ರಮವಾಗಿ ನಂತರದ ಸ್ಥಾನದಲ್ಲಿವೆ.

**ಸಮೀಕ್ಷೆಯ ಮುಖ್ಯಾಂಶಗಳು**:

- ಆಸ್ಟ್ರೇಲಿಯಾದ 15 ರಿಂದ 64 ವರ್ಷ ವಯಸ್ಸಿನ 23 ಮಿಲಿಯನ್ ಜನರು ಉದ್ಯೋಗವನ್ನು ಹೊಂದಿದ್ದಾರೆ.
- ಆಸ್ಟ್ರೇಲಿಯಾದಲ್ಲಿ ಜೀವನ ಮಟ್ಟ ಸಹ ಉತ್ತಮವಾಗಿದೆ. 2009 ರಲ್ಲಿ ತಲೆದೋರಿದ ವಿಶ್ವ ಆರ್ಥಿಕ ದಿವಾಳಿಗೆ ತುತ್ತಾಗದ ಏಕೈಕ ರಾಷ್ಟ್ರ ಆಸ್ಟ್ರೇಲಿಯಾ.
- ನೈಸರ್ಗಿಕ ಸಂಪನ್ಮೂಲಕ್ಕೆ ಭಾರಿ ಬೇಡಿಕೆ ಇರುವ ಕಾರಣ ಆಸ್ಟ್ರೇಲಿಯಾದ ಆರ್ಥಿಕ ಬೆಳವಣಿಗೆ ಕಳೆದ ಎರಡು ದಶಕಗಳಿಂದ ದುಪ್ಪಟ್ಟಗೊಂಡಿದೆ.

**ಅಪರಾದಿಗಳ ಹಸ್ತಾಂತರದ ಒಪ್ಪಂದಕ್ಕೆ ಭಾರತ-ಥಾಯ್ಲೆಂಡ್ ಒಪ್ಪಿಗೆ**

ಭದ್ರತಾ ಸಹಕಾರ ಕ್ಷೇತ್ರದಲ್ಲಿ ಪರಸ್ಪರ ಸಹಯೋಗದೊಂದಿಗೆ ಮುನ್ನಡೆಯುವ ದಿಸೆಯಲ್ಲಿ ಭಾರತ ಮತ್ತು ಥಾಯ್ಲೆಂಡ್ ಬಹುನಿರೀಕ್ಷಿತ ಗಡೀಪಾರು ಒಪ್ಪಂದಕ್ಕೆ 20 ವರ್ಷಗಳ ಪ್ರಯತ್ನದ ಬಳಿಕ ಕೊನೆಗೂ ಅಂಕಿತ ಹಾಕಿದವು. ಭಾರತದ ಪ್ರಧಾನಿ ಮನಮೋಹನ್ ಸಿಂಗ್ ರವರು ಥಾಯ್ಲೆಂಡ್ ಪ್ರವಾಸದ ವೇಳೆ ಈ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಥಾಯ್ಲೆಂಡ್ ಪ್ರಧಾನಿ ಯಿಂಗ್ ಲಕ್ ಶಿವನಾತ್ರ ಅವರ ಸಮ್ಮುಖದಲ್ಲಿ ಭಾರತ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ಮತ್ತು ಥಾಯ್ ಉಪಪ್ರಧಾನಿ ಸುರಪೊಂಗ ತೊವಿಚಕಚೈಕುಳ ರವರು ಈ ಒಪ್ಪಂದಕ್ಕೆ ಸಹಿ ಹಾಕಿದರು.
- ಈ ಮಹತ್ವದ ಒಪ್ಪಂದದಿಂದಾಗಿ "ಭಯೋತ್ಪಾದನೆ, ಕಳ್ಳಸಾಗಟ, ಆರ್ಥಿಕ ಅಪರಾಧ ಪ್ರಕರಣಗಳಲ್ಲಿ ಶಾಮೀಲಾಗಿರುವ ದೇಶಭ್ರಷ್ಟ ಅಪರಾಧಿಗಳನ್ನು ಉಭಯ ದೇಶಗಳು ಗಡೀಪಾರು ಮಾಡಿಕೊಳ್ಳಲಿವೆ.

ಯಾವುದೇ ಅಪರಾಧ ವಿಚಾರಣೆ, ದಂಡನೆ ಅಥವಾ ಶಿಕ್ಷೆಯ ಜಾರಿಯ ಸಂದರ್ಭಗಳಲ್ಲೂ ಅಪರಾಧಿಗಳನ್ನು ಗಡೀಪಾರು ಮಾಡಲು ಈ ಒಪ್ಪಂದ ಸಹಕಾರಿಯಾಗಲಿದೆ

## ವ್ಯವಹಾರ

**ಸಾಗರಳಾದಲ್ಲಿ ಕೇಬಲ್: ರಿಲಾಯನ್ಸ್ ಜಿಯೋ ಇನ್ಫೋಕಾಂ ಮತ್ತು ವೊಡೊಫೋನ್ ಒಪ್ಪಂದ**

ಬಂಗಾಳಕೊಲ್ಲಿ ಸಾಗರಳಾದ (Bay of Bengal Gateway (BBG)) ಕೇಬಲ್ ಮಾರ್ಗವನ್ನು ಅಳವಡಿಸುವ ಸಲುವಾಗಿ ರಿಲಾಯನ್ಸ್ ಜಿಯೋ ಇನ್ಫೋಕಾಂ, ವೊಡೊಫೋನ್ ಮತ್ತು ಟೆಲಿಕಾಂ ಮಲೇಷಿಯಾ ಸೇರಿದಂತೆ ಜಾಗತಿಕ ಪ್ರಮುಖ ದೂರವಾಣಿ ಸೇವಾ ಸಂಸ್ಥೆಗಳು ಮಹತ್ವದ ಒಪ್ಪಂದ ಮಾಡಿಕೊಂಡಿವೆ.

- ಸಾಗರಳಾದ ಕೇಬಲ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಈ ಪ್ರಮುಖ ಕಂಪನಿಗಳು ಕ್ವಾಲಲಾಂಪುರದಲ್ಲಿ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದವು.
- ಈ ಕೇಬಲ್ ಮಾರ್ಗ 2014 ರ ಅಂತ್ಯದ ವೇಳೆಗೆ ವಾಣಿಜ್ಯ ಬಳಕೆಗೆ ಮುಕ್ತವಾಗಲಿದ್ದು, ಭಾರತ, ಶ್ರೀಲಂಕಾ, ಮಲೇಷಿಯಾ, ಸಿಂಗಪುರ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳ ನಡುವೆ ಸಂಪರ್ಕ ಕಲ್ಪಿಸಲಿದೆ.
- "ಬಿಬಿಜಿ" ಕೇಬಲ್ ಮಾರ್ಗ 8 ಸಾವಿರ ಕಿ.ಮೀ ಗಳಷ್ಟು ಉದ್ದವಿರಲಿದೆ. ಆಗ್ನೇಯ ಏಷ್ಯಾ, ದಕ್ಷಿಣಾ ಏಷ್ಯಾ ಮತ್ತು ಮಧ್ಯ ಪ್ರಾಚ್ಯ ದೇಶಗಳ ನಡುವೆ ಸಂಪರ್ಕ ಕಲ್ಪಿಸುವುದರ ಜೊತೆಗೆ ಯುರೋಪ್, ಆಫ್ರಿಕಾ ದೇಶಗಳ ನಡುವೆಯೂ ಸಂಪರ್ಕ ಕಲ್ಪಿಸುವ ಯೋಜನೆ ಇದಾಗಿದೆ.
- "ಬಿಬಿಜಿ" ಕೇಬಲ್ ಮಾರ್ಗ ಪ್ರತಿ ಸೆಕೆಂಡ್ ಗೆ 100 ಗಿಗಾಬೈಟ್ ನಷ್ಟು ಮಾಹಿತಿಯನ್ನು ವರ್ಗಾಯಿಸುವ ಸಾಮರ್ಥ್ಯ ಹೊಂದಿದೆ.

**2013-14ನೇ ಸಾಲಿನಲ್ಲಿ ದೇಶದ ಆರ್ಥಿಕ ಬೆಳವಣಿಗೆ ಶೇ.6.1 ರಷ್ಟಿರಲಿದೆ: ವಿಶ್ವಬ್ಯಾಂಕ್**

ಜಾಗತಿಕ ಆರ್ಥಿಕ ಮುನ್ನೋಟವನ್ನು ವಿಶ್ವಬಾಂಕ್ ಪ್ರಕಟಿಸಿದ್ದು, ಪ್ರಸ್ತಕ ಸಾಲಿನಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರ ಶೇ. 6.1 ರಷ್ಟು ಇರಲಿದೆ ಎಂದು ವಿಶ್ವಬ್ಯಾಂಕ್ ಅಂದಾಜಿಸಿದೆ. ಕಳೆದು ಆರು ತಿಂಗಳ ಹಿಂದೆ ದೇಶದ ಆರ್ಥಿಕ ಬೆಳವಣಿಗೆ ದರ ಶೇ. 6.7 ರಷ್ಟು ಇರಲಿರುವುದಾಗಿ ವಿಶ್ವಬ್ಯಾಂಕ್ ಹೇಳಿತ್ತು. ಆದರೆ ಕೃಷಿ ಕ್ಷೇತ್ರದಲ್ಲಿನ ಮಂದಗತಿ ಬೆಳವಣಿಗೆ ಹಿನ್ನಲೆಯ ಕಾರಣ ಆರ್ಥಿಕ ಬೆಳವಣಿಗೆ ದರ ಕುಂಠಿತವಾಗಲಿದೆ ಎಂದು ಹೇಳಿದೆ.

- ಪ್ರಸ್ತಕ ಸಾಲಿನಲ್ಲಿ ಕೃಷಿ ವಲಯ ಶೇ. 2 ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಲಾಗಿದೆ. ಈ ಹಿಂದೆ ಕೃಷಿ ವಲಯದಲ್ಲಿ ಶೇ.2.7 ರಷ್ಟು ಬೆಳವಣಿಗೆ ಇರಲಿದೆ ಎಂದು ವಿಶ್ವಬ್ಯಾಂಕ್ ಅಂದಾಜಿಸಿತ್ತು.
- 2013-14 ನೇ ಸಾಲಿನಲ್ಲಿ ದೇಶದ ಆರ್ಥಿಕ ಬೆಳವಣಿಗೆ ಶೇ.6.1 ರಷ್ಟು ಇರಲಿದ್ದು, 2014-15 ನೇ ಸಾಲಿನಲ್ಲಿ ಶೇ.6.7 ರಷ್ಟು ಆಗಬಹುದು.
- ದೇಶದ ಆರ್ಥಿಕ ಬೆಳವಣಿಗೆ ಸುಸ್ಥಿತಿಯಲ್ಲಿ ಇದೆ. ಆದರೆ ಅಸಮರ್ಪಕ ಮಾನ್ಸೂನ್ ನಿಂದಾಗಿ ಅಲ್ಪ ಹಿನ್ನಡೆ ಸಾಧಿಸುವ ಸಾದ್ಯತೆ ಇದೆ, ಆದರೂ ಮುಂದಿನ ದಿನಗಳಲ್ಲಿ ಉತ್ತಮ ಹಾದಿಗೆ ಮರಳಿದೆ ಎಂದು ವಿಶ್ವಬ್ಯಾಂಕ್ ತಿಳಿಸಿದೆ.

ಇತರೆ ಮುನ್ನೋಟ:

- ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಪ್ರಕಾರ ಭಾರತದ ಪ್ರಸ್ತಕ ಸಾಲಿನಲ್ಲಿ ದೇಶದ ಆರ್ಥಿಕ ಬೆಳವಣಿಗೆ ಶೇ.5.7 ರಷ್ಟಿರಲಿದೆ.

- ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿ ಪ್ರಕಾರ ಶೇ.6.4 ರಷ್ಟು ಇರಲಿದೆ.
- "ಎಕನಾಮಿಕ್ ಸರ್ವೇ ಆಫ್ ಇಂಡಿಯಾ 2012-13" ರ ಪ್ರಕಾರ ಶೇ.6.1-6.7 ಎಂದು ಹೇಳಲಾಗಿದೆ.

**ನೇರ ನಗದು ವರ್ಗಾವಣೆ ಯೋಜನೆಯಿಂದ ಶೇ.0.5% ಜಿಡಿಪಿ ಉಳಿತಾಯ: IMF**

ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ "ನೇರ ನಗದು ವರ್ಗಾವಣೆ (Direct Cash Transfer)" ಯಿಂದ ಶೇ.0.5% ಜಿಡಿಪಿ ಉಳಿತಾಯವಾಗಲಿದೆ ಎಂದು "ಅಂತರರಾಷ್ಟ್ರೀಯ ಹಣಕಾಸು ನಿಧಿ (IMF)" ಹೇಳಿದೆ. ಆದರೆ ಈ ಯೋಜನೆ ಸಂಪೂರ್ಣವಾಗಿ ಅನುಷ್ಠಾನಗೊಳ್ಳಲು ದೀರ್ಘ ಸಮಯ ಬೇಕಾಗಲಿದೆ ಎಂಬ ಅಭಿಪ್ರಾಯವನ್ನು "ಐಎಂಎಫ್" ಇದೇ ಸಂದರ್ಭದಲ್ಲಿ ವ್ಯಕ್ತಪಡಿಸಿದೆ.

ಯೋಜನೆಯ ಅನುಕೂಲಗಳು:

- ನೇರವಾಗಿ ಫಲಾನುಭವಿಗಳಿಗಳ ಖಾತೆಗೆ ಹಣ ಜಮೆ. ಇದರಿಂದ ಬಡವರಿಗೆ ಹೆಚ್ಚು ಅನುಕೂಲ.
- ಶೇ.0.5% ರಷ್ಟು "ಜಿಡಿಪಿ" ಉಳಿತಾಯವಾಗಲಿದೆ.
- ವಿವಿಧ ಕಾರ್ಯಕ್ರಮಗಳಡಿಯಲ್ಲಿ ಫಲಾನುಭವಿಗಳಿಗೆ ತಲುಪಬೇಕಿದ್ದ ಹಣದಲ್ಲಿ ಆಗುತ್ತಿದೆ ಸೋರಿಕೆಯಲ್ಲಿ ಶೇ.15 ರಷ್ಟು ನಿಯಂತ್ರಣ.
- ಮಧ್ಯ ವರ್ತಿಗಳ ಮತ್ತು ಪ್ರಭಾವಿ ವ್ಯಕ್ತಿಗಳ ಹಾವಳಿಗೆ ತಡೆ.

ಯೋಜನೆ ಮುಂದಿರುವ ಸವಾಲ್:

- ನೇರ ನಗದು ವರ್ಗಾವಣೆಯನ್ನು ಆಧಾರ್ ಕಾರ್ಡ್ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಆದರೆ 1.2 ಕೋಟಿ ಜನಸಂಖ್ಯೆಗೆ ಆಧಾರ್ ಕಾರ್ಡ್ ಸೌಲಭ್ಯ ಒದಗಿಸುವುದು ಸುಲಭದ ಗುರಿಯಲ್ಲ. 2014 ರ ನಂತರವೇ ಈ ಯೋಜನೆ ಅನುಷ್ಠಾನ ಪೂರ್ಣ ಪ್ರಮಾಣದಲ್ಲಿ ಆಗಲಿದೆ ಎಂದು IMF ಹೇಳಿದೆ.

**ಭಾರತಕ್ಕೆ 6 ಬಿಲಿಯನ್ ಡಾಲರ್ ನೆರವು ನೀಡಲಿರುವ ADB**

ಮುಂದಿನ ಮೂರು ವರ್ಷಗಳಲ್ಲಿ ಭಾರತಕ್ಕೆ 6 ಬಿಲಿಯನ್ ಡಾಲರ್ ನೆರವು ನೀಡುವುದಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಹೇಳಿದೆ.

- ಉತ್ತರಪ್ರದೇಶದ ನೊಯಿಡಾದಲ್ಲಿ ನಡೆದ 46 ನೇ ವಾರ್ಷಿಕ "ಏಷ್ಯನ್ ಅಭಿವೃದ್ಧಿ ಬ್ಯಾಂಕ್" ಸಭೆಯಲ್ಲಿ ಬ್ಯಾಂಕ್ ನ ಅಧ್ಯಕ್ಷ "ತಕೆಹಿಕೊ ನಕೊವ್" ರವರು ಈ ವಿಷಯವನ್ನು ತೆರೆದಿಟ್ಟರು.
- ಭಾರತದಲ್ಲಿ ಸಾರಿಗೆ, ಇಂಧನ, ವಾಣಿಜ್ಯ, ಉದ್ಯಮ ಮತ್ತು ಆರ್ಥಿಕ ಅಭಿವೃದ್ಧಿಗೆ 2012 ರಲ್ಲಿ "ಏಷ್ಯನ್ ಅಭಿವೃದ್ಧಿ ಬ್ಯಾಂಕ್" 2.4 ಬಿಲಿಯನ್ ಡಾಲರ್ ನೆರವು ನೀಡಿತ್ತು.
- ಹಣಕಾಸಿನ ಕೊರತೆಯ ನಡುವೆಯು ಸದಸ್ಯ ರಾಷ್ಟ್ರಗಳಿಗೆ 10 ಬಿಲಿಯನ್ ಡಾಲರ್ ನೆರವನ್ನು ನೀಡುವುದಾಗಿ ಬ್ಯಾಂಕ್ ನ ಅಧ್ಯಕ್ಷ "ನಕೊವ್" ರವರು ಹೇಳಿದ್ದಾರೆ.

**ಬಿಲಿಯನೇರ್ ಗಳ ಪಟ್ಟಿಯಲ್ಲಿ ಮುಂಬೈಗೆ 6 ನೇ ಸ್ಥಾನ**

ಜಗತ್ತಿನಲ್ಲಿ ಅತಿ ಹೆಚ್ಚು ಬಿಲಿಯನೇರ್ ಗಳನ್ನು ಹೊಂದಿರುವ ಟಾಪ್ 10 ನಗರಗಳ ಪಟ್ಟಿಯಲ್ಲಿ ಮುಂಬೈಗೆ 6 ನೇ ಸ್ಥಾನ. "ವೆಲ್ತ್ ಇನ್ ಸೈಟ್" ಎಂಬ ಸಂಶೋಧನಾ ಸಂಸ್ಥೆ ಸಿದ್ದಪಡಿಸಿರುವ ವಿಶ್ವದದಲ್ಲೇ ಅತಿ ಹೆಚ್ಚು ಬಿಲಿಯನೇರ್ ಗಳನ್ನು ಹೊಂದಿರುವ ನಗರಗಳಲ್ಲಿ ಮುಂಬೈ 6 ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ.

- ಮುಂಬೈನಲ್ಲಿ ಒಟ್ಟು 26 ಬಿಲಿಯನೇರ್ ಗಳು ಇರುವುದಾಗಿ ಹೇಳಲಾಗಿದೆ. ಶಾಂಘೈ, ಪ್ಯಾರೀಸ್ ಮತ್ತು ಲಾಸ್ ಏಂಜಲೀಸ್ ನಗರಗಳಿಗಿಂತಲೂ ಮುಂಬೈ ಅತಿ ಹೆಚ್ಚು ಬಿಲಿಯನೇರ್ ಗಳನ್ನು ಹೊಂದಿದೆ.
- ಅತಿ ಹೆಚ್ಚು ಬಿಲಿಯನೇರ್ ಗಳನ್ನು ಹೊಂದಿರುವ ನಗರಗಳ ಪಟ್ಟಿಯಲ್ಲಿ "ನ್ಯೂ ಯಾರ್ಕ್" ನಗರ ಅಗ್ರ ಸ್ಥಾನದಲ್ಲಿದೆ. ನ್ಯೂಯಾರ್ಕ್ ಒಟ್ಟು 70 ಬಿಲಿಯನೇರ್ ಗಳು ಹೊಂದಿದೆ. ರಷ್ಯಾದ ಮಾಸ್ಕೊ (64), ಲಂಡನ್ (54), ಹಾಂಗ್ ಕಾಂಗ್ (40) ಮತ್ತು ಬೀಜಿಂಗ್ (29) ನಗರಗಳು ಟಾಪ್ ಐದರಲ್ಲಿರುವ ಪ್ರಮುಖ ನಗರಗಳು.
- ಇದೇ ವೇಳೆ ವಿಶ್ವದಲ್ಲಿ ಅತಿ ಹೆಚ್ಚು ಮಿಲಿಯನೇರ್ ಗಳನ್ನು ಹೊಂದಿರುವ ನಗರಗಳ ಪೈಕಿ ಟೋಕಿಯೊ ನಗರ 4.6 ಮಿಲಿಯನೇರ್ ಗಳನ್ನು ಹೊಂದುವ ಮೂಲಕ ಅಗ್ರಸ್ಥಾನದಲ್ಲಿದೆ. ಆಶ್ಚರ್ಯವೆಂದರೇ ಭಾರತದ ಯಾವ ನಗರವೂ ಟಾಪ್ 20 ಮಿಲಿಯನೇರ್ ಗಳನ್ನು ಪಟ್ಟಿಯಲ್ಲಿ ಸ್ಥಾನಗಳಿಸಿಲ್ಲ. ಜಾಗತಿಕ ಮಟ್ಟದಲ್ಲಿ ಮಿಲಿಯನೇರ್ ಗಳನ್ನು ಹೊಂದಿರುವ ರಾಷ್ಟ್ರಗಳ ಪೈಕಿ ಭಾರತಕ್ಕೆ 11 ನೇ ಸ್ಥಾನ ದೊರೆತಿದೆ.

**"ಆರ್ಥಿಕ ವಿಶ್ವಾಸ(Economic Confidance)": ಭಾರತಕ್ಕೆ 6 ನೇ ಸ್ಥಾನ**

ಕೇಂದ್ರ ಸರ್ಕಾರದ ಕೆಲವು ಸಚಿವರ ಮೇಲೆ ಕೇಳಿಬಂದಿರುವ ಭ್ರಷ್ಟಾಚಾರ ಹಗರಣದ ಗಂಭೀರ ಆರೋಪ ಹಿನ್ನಲೆಯಿಂದಾಗಿ ಭಾರತದ "ಆರ್ಥಿಕ ವಿಶ್ವಾಸ (Economic Confidence)" ಮಟ್ಟ ಕುಸಿದಿದ್ದು, ಆರ್ಥಿಕ ವಿಶ್ವಾಸ ಪಟ್ಟಿಯಲ್ಲಿ ಭಾರತ 6 ನೇ ಸ್ಥಾನ ಪಡೆದುಕೊಂಡಿದೆ. ಜಾಗತಿಕ ಸಂಶೋಧನೆ ಸಂಸ್ಥೆಯಾದ "ಇಪ್ಸಸ್ (Ipsos)" ನಡೆಸಿರುವ ಸಮೀಕ್ಷೆಯಲ್ಲಿ ಭಾರತದ "ಆರ್ಥಿಕ ವಿಶ್ವಾಸ" ಮಟ್ಟ ಏಪ್ರಿಲ್ 2013 ರಲ್ಲಿ ಶೇ.63 ರಷ್ಟಿದ್ದು, ಮಾರ್ಚ್,2013 ಕ್ಕೆ ಹೋಲಿಸಿದರೆ ಶೇ.2 ರಷ್ಟು ಕಡಿಮೆಯಾಗಿದೆ.

- ಆರ್ಥಿಕ ವಿಶ್ವಾಸ ರಾಷ್ಟ್ರಗಳ ಪಟ್ಟಿಯಲ್ಲಿ "**ಸೌದಿ ಅರೇಬಿಯಾ (ಶೇ.80)**" ಪ್ರಥಮ ಸ್ಥಾನದಲ್ಲಿದ್ದರೆ, ಸ್ವೀಡನ್ (ಶೇ.73), ಚೀನಾ (ಶೇ.72), ಕೆನಡಾ (ಶೇ.65) ಮತ್ತು ಜರ್ಮನಿ (ಶೇ.64) ಕ್ರಮವಾಗಿ ನಂತರದ ಸ್ಥಾನದಲ್ಲಿವೆ.
- ಭಾರತದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ ಆರೋಪಗಳಿಂದಾಗಿ ಹೂಡಿಕೆದಾರರ ದೃಢವಿಶ್ವಾಸದಲ್ಲಿ ನಿರಂತರ ಕುಸಿತ ಕಂಡುಬಂದಿರುವುದಾಗಿ "Ipsos" ನ ಸಿಇಓ "ಮೈಕ್ ಗಾರ್ಡನ್" ಹೇಳಿದ್ದಾರೆ.
- 24 ದೇಶಗಳ 18,331 ಮಂದಿ ಈ ಆನ್ ಲೈನ್ ಸಮೀಕ್ಷೆಯಲ್ಲಿ ಭಾಗಿಯಾಗಿದ್ದು, ತಮ್ಮ ದೇಶದ ಆರ್ಥಿಕ ವಿಶ್ವಾಸದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೇ.34 ರಷ್ಟು ಜನ "ಆರ್ಥಿಕ ವಿಶ್ವಾಸ" ಉತ್ತಮವಾಗಿದೆ ಎಂದು ಹೇಳಿದ್ದಾರೆ.
- ಭಾರತದ ಮಟ್ಟಕ್ಕೆ ಹೇಳುವುದಾದರೆ ಪ್ರತಿ 10 ರಲ್ಲಿ 4 ಜನ (ಶೇ.41) ದೇಶದ ಆರ್ಥಿಕ ವಿಶ್ವಾಸ ಉತ್ತಮ ಸ್ಥಿತಿಯಲ್ಲಿದೆ ಎಂದಿದ್ದಾರೆ. ಶೇ.47 ರಷ್ಟು ಜನ ಮುಂದಿನ ಆರು ತಿಂಗಳಲ್ಲಿ ಭಾರತದ ಆರ್ಥಿಕ ವಿಶ್ವಾಸ ಬಲಿಷ್ಠಗೊಳ್ಳಲಿದೆ ಎಂದಿದ್ದಾರೆ.

**ವಿಶ್ವದ ಎರಡನೇ ದೊಡ್ಡ ದೂರಸಂಪರ್ಕ ಜಾಲ ಹೊಂದಿರುವ ರಾಷ್ಟ್ರವಾಗಿ ಭಾರತ**

ವಿಶ್ವದ ಎರಡನೇ ಅತಿ ದೊಡ್ಡ ದೂರಸಂಪರ್ಕ ಜಾಲ ಹೊಂದಿರುವ ರಾಷ್ಟ್ರ ಎಂಬ ಕೀರ್ತಿಗೆ ಭಾರತ ಪಾತ್ರವಾಗಿದೆ. ವಿಶ್ವದಲ್ಲೇ ಅತಿ ಹೆಚ್ಚು ದೂರಸಂಪರ್ಕ ಚಂದದಾರರನ್ನು ಹೊಂದುವ ಮೂಲಕ ಚೀನಾ ಪ್ರಥಮ ಸ್ಥಾನದಲ್ಲಿದ್ದರೆ, ನಂತರದ ಸ್ಥಾನವನ್ನು ಭಾರತ ಪಡೆದುಕೊಂಡಿದೆ. ಭಾರತದಲ್ಲಿ ಸುಮಾರು 89 ಕೋಟಿ ಜನರು ದೂರಸಂಪರ್ಕ ಸೌಲಭ್ಯವನ್ನು ಹೊಂದಿರುವುದಾಗಿ ದೂರಸಂಪರ್ಕ ಸಚಿವಾಲಯ ಇತ್ತೀಚೆಗೆ ಬಿಡುಗಡೆಗೊಳಿಸಿದ ಅಂಕಿ ಅಂಶಗಳಿಂದ ಧೃಡಪಟ್ಟಿದೆ. ದೂರಸಂಪರ್ಕ ಕ್ಷೇತ್ರ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು, ತಂತ್ರಜ್ಞಾನ ಅಭಿವೃದ್ಧಿ ಮತ್ತು ದೂರಸಂಪರ್ಕ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳ ಬಂಡವಾಳ ಹೂಡಿಕೆಯಿಂದಾಗಿ ಭಾರತ ದೂರಸಂಪರ್ಕ ವಲಯದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ.

**ಅಂಕಿ ಅಂಶಗಳ ಮುಖ್ಯಾಂಶಗಳು**:

- ಕಳೆದ ಒಂಬತ್ತು ವರ್ಷಗಳಿಗೆ ಹೋಲಿಸಿದರೇ ದೇಶದ ದೂರಸಂಪರ್ಕ ವಲಯದಲ್ಲಿ ಅದ್ಬುತ ಯಶಸ್ಸು ಸಾಧಿಸಲಾಗಿದೆ. 2004 ಮಾರ್ಚ್ ನಲ್ಲಿ ರೂ 2.89 ರಷ್ಟಿದ್ದ ಮೊಬೈಲ್ ಕರೆ ದರ ಡಿಸೆಂಬರ್ 2012 ರ ವೇಳೆಗೆ 47 ಪೈಸೆಗೆ ಇಳಿದಿದೆ.
- 2004 ರಲ್ಲಿ 33.6 ಮಿಲಿಯನ್ ರಷ್ಟಿದ್ದ ಮೊಬೈಲ್ ಚಂದದಾರ ಸಂಖ್ಯೆ, 2012 ಡಿಸೆಂಬರ್ ವೇಳೆಗೆ 864.72 ಮಿಲಿಯನ್ ಆಗಿದ್ದು, ದಾಖಲೆ ಬರೆದಿದೆ. ಜನವರಿ 2013 ರ ಅಂತ್ಯಕ್ಕೆ ದೇಶದಲ್ಲಿ 893.14 ಮಿಲಿಯನ್ ಜನರು ದೂರಸಂಪರ್ಕ ಸೌಲಭ್ಯವನ್ನು ಹೊಂದಿದ್ದಾರೆ.
- ಪ್ರಸ್ತುತ ಭಾರತದ ನಗರಗಳಲ್ಲಿ ಟೆಲಿಸಾಂದ್ರತೆ ಶೇ 73.09 ರಷ್ಟಿದೆ. 2004 ರಲ್ಲಿ ಟೆಲಿಸಾಂದ್ರತೆ ಶೇ 7.04 ರಷ್ಟಿತ್ತು. ಇನ್ನು ಗ್ರಾಮೀಣ ಭಾಗಗಳಲ್ಲೂ ಸಾಕಷ್ಟು ಅಭಿವೃದ್ಧಿ ಹೊಂದಲಾಗಿದೆ. 2004 ರಲ್ಲಿ ಗ್ರಾಮೀಣ ಭಾಗದ ಟೆಲಿಸಾಂದ್ರತೆ ಶೇ 1.7 ರಷ್ಟಿದ್ದರೆ, ಜನವರಿ 2013 ರ ಅಂತ್ಯಕ್ಕೆ ಶೇ 40 ರಷ್ಟು ದಾಖಲಾಗಿದೆ.

**ದೂರಸಂಪರ್ಕ ಕ್ಷೇತ್ರ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು**:

- ✓ **"ಮೊಬೈಲ್ ನಂಬರ್ ಪೋರ್ಟಬಲಿಟಿ (MNP)":** ಪ್ರಧಾನಿ ಮನಮೋಹನ್ ಸಿಂಗ್ ರವರು MNP ಸೇವೆಗೆ ಜನವರಿ 20, 2011 ರಂದು ಚಾಲನೆ ನೀಡಿದರು. ದೇಶದಲ್ಲೇ ಮೊದಲ ಬಾರಿಗೆ ಹರಿಯಾಣದಲ್ಲಿ ಈ ಸೇವೆಯನ್ನು ಆರಂಭಿಸಲಾಯಿತು. ನಂತರದ ದಿನಗಳಲ್ಲಿ ದೇಶ ವ್ಯಾಪ್ತಿ ಈ ಸೇವೆಯನ್ನು ಜಾರಿಗೊಳಿಸಲಾಯಿತು. MNP ಸೇವೆಯಡಿ ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು ಬದಲಿಸದೇ ಸೇವಾ ಕಂಪನಿಯನ್ನು ಬದಲಾಯಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಈ ವಿನೂತನ ಸೇವೆಯನ್ನು ಆರಂಭಿಸುವ ಮೂಲಕ ಇಂತಹ ವಿಶೇಷ ಸೇವೆಯನ್ನು ಆರಂಭಗೊಳಿಸಿದ ವಿಶ್ವದ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಭಾರತವೂ ಸೇರ್ಪಡೆಗೊಂಡಿತ್ತು. MNP ಸೇವೆ ಗ್ರಾಹಕರ ಹಿತದೃಷ್ಟಿಯನ್ನು ಕಾಯುತ್ತಿದೆ. ಅಲ್ಲದೇ ವಿನೂತನ ಸೇವೆಗಳನ್ನು ಒದಗಿಸಲು ಕಂಪನಿಗಳ ನಡುವೆ ಸ್ಪರ್ಧಾತ್ಮಕ ಪರಿಸರವನ್ನು ಸೃಷ್ಟಿಸಿದೆ.
- ✓ **"ದೂರಸಂಪರ್ಕ ವಾಣಿಜ್ಯ ಸಂವಹನ ಗ್ರಾಹಕ ಆದ್ಯತೆ ನಿಯಮಗಳು (2010) Telecom Commercial Communication Customer Preference Regulation 2010 (TCCCPR)":** TCCCPR-2010 ನ್ನು ಸೆಪ್ಟೆಂಬರ್ 27,2011 ರಿಂದ ಜಾರಿಗೊಳಿಸಲಾಗಿದೆ. ಈ ನಿಯಮಗಳಡಿ ಬ್ಲಾಕ್ ಲಿಸ್ಟ್, ಡಾಟಾ ಬೇಸ್ ವಿನಿಮಯ, ಅನಪೇಕ್ಷಿತ ಕರೆಗಳಿಗೆ ತಡೆ, ಕಿರಿಕಿರಿ ಎನಿಸುವ ಎಸ್ಎಂಎಸ್ ಗಳಿಗೆ ಕಡಿವಾಣ ಸೇರಿದಂತೆ ಅನೇಕ ಪ್ರಯೋಜನಗಳನ್ನು ಪಡೆದುಕೊಳ್ಳಬಹುದಾಗಿದೆ.

- ✓ **ವಿದೇಶಿ ಬಂಡವಾಳ ಹೂಡಿಕೆ (FDI):** ದೂರಸಂಪರ್ಕ ಸೇವೆಯ ಕ್ಷಿಪ್ರ ವಿಸ್ತರಣೆಗೆ ಬೇಕಾಗುವ ಬಂಡವಾಳದ ಪ್ರಮುಖ ಮೂಲವೆಂದರೆ FDI. ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆರ್ಕಷಿಸುವಲ್ಲಿ ದೂರಸಂಪರ್ಕ ಕ್ಷೇತ್ರ ಮೂರನೇ ಸ್ಥಾನದಲ್ಲಿದೆ. ಪ್ರಸ್ತುತ "ದೂರಸಂಪರ್ಕ ಕ್ಷೇತ್ರದಲ್ಲಿ **ಶೇ 74** ರಷ್ಟು ವಿದೇಶ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡಲಾಗಿದೆ.
- ✓ **ಪ್ರಿಪೇಡ್ ಸುಂಕದಲ್ಲಿ ಇಳಿಕೆ:** ಸಾಮಾನ್ಯ ವ್ಯಕ್ತಿಗೆ ಕೈಗೆಟುಕುವ ಸೇವೆಯನ್ನು ನೀಡುವ ಸಲುವಾಗಿ ಪ್ರಿಪೇಡ್ ಸುಂಕವನ್ನು ಇಳಿಸಲಾಗಿದೆ.
- ✓ **ನ್ಯಾಷನಲ್ ಆಪ್ಟಿಕಲ್ ಫೈಬರ್ ನೆಟ್ ವರ್ಕ್:** ದೇಶದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಆಪ್ಟಿಕಲ್ ಫೈಬರ್ ನೆಟ್ ವರ್ಕ್ ಸೌಲಭ್ಯವನ್ನು ಕಲ್ಪಿಸುವ ಮೂಲಕ ಸರ್ಕಾರದ ಸೇವೆಗಳನ್ನು ಈ-ಆಡಳಿತ ಮುಖಾಂತರ ಜನರ ಬಳಿಗೆ ತಲುಪಿಸುವುದು ಇದರ ಉದ್ದೇಶ (ಹೆಚ್ಚಿನ ಮಾಹಿತಿಗೆ ಅಂಕಣ ನೋಡಿ).
- ✓ **ರಾಷ್ಟ್ರೀಯ ದೂರಸಂಪರ್ಕ ನೀತಿ-2012:** ದೇಶದ ಪ್ರತಿಯೊಬ್ಬ ನಾಗರಿಕನಿಗೂ ದೂರಸಂಪರ್ಕ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರ ರಾಷ್ಟ್ರೀಯ ದೂರ ಸಂಪರ್ಕ ನೀತಿ-2012 ನ್ನು ಅನುಷ್ಠಾನಗೊಳಿಸಿದೆ. ರಾಷ್ಟ್ರೀಯ ದೂರಸಂಪರ್ಕ ನೀತಿ-2012 ರ ಪ್ರಮುಖ ಅಂಶಗಳು ಇಂತಿವೆ.

- ಗ್ರಾಮೀಣ ಅದರಲ್ಲೂ ವಿಶೇಷವಾಗಿ ಮೂಲ ಸೌಕರ್ಯ ವಂಚಿತ ಭಾಗಗಳಿಗೆ ಲಭ್ಯ, ಸುರಕ್ಷಿತ, ವಿಶ್ವಾಸಾರ್ಹ ಮತ್ತು ಉತ್ತಮ ಧ್ವನಿ ಗುಣಮಟ್ಟ ಹೊಂದಿರುವ ದೂರವಾಣಿ ಸಂಪರ್ಕ ಹಾಗೂ ಬ್ರಾಡ್ ಬ್ಯಾಂಡ್ ಸೇವೆಯನ್ನು ಒದಗಿಸುವುದು.
- ಬ್ರಾಡ್ ಬ್ಯಾಂಡ್ ವೇಗವನ್ನು ಉತ್ತಮಪಡಿಸುವ ಮೂಲಕ ತೃಪ್ತಿಕರ ಸೇವೆಯನ್ನು ನೀಡುವುದು.
- ಒಂದು ದೇಶ-ಒಂದು ಮೊಬೈಲ್ ಸಂಖ್ಯೆ ಯೋಜನೆಯಡಿ ರಾಷ್ಟ್ರವ್ಯಾಪ್ತಿ MNP ಸೇವೆಯನ್ನು ಜಾರಿಗೊಳಿಸುವುದು.
- ದೇಶದಾದ್ಯಂತ ರೋಮಿಂಗ್ ಉಚಿತ ಸೇವೆಯನ್ನು ಆರಂಭಿಸುವುದು.
- ದೂರಸಂಪರ್ಕ ಸಾಧನ ಸೇರಿದಂತೆ ಎಲ್ಲಾ ವಿದ್ಯುನ್ಮಾನ ಉತ್ಪನ್ನಗಳ ಉತ್ಪಾದನೆಯನ್ನು ಉತ್ತೇಜಿಸುವ ಮೂಲಕ ಭಾರತವನ್ನು ಜಾಗತಿಕ ಹಬ್ ಆಗಿ ರೂಪಿಸುವುದು.
- ಶಿಕ್ಷಣ, ಆರೋಗ್ಯ, ಕೃಷಿ, ಬ್ಯಾಂಕಿಂಗ್, ವಿಮೆ, ಉದ್ಯೋಗ ಮತ್ತು ಮನರಂಜನೆಯಂತಹ ನಾಗರಿಕ ಕೇಂದ್ರ ಸೇವೆಗಳನ್ನು ಒದಗಿಸಲು ಮೊಬೈಲ್ ಫೋನ್ ಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಪ್ರೋತ್ಸಾಹಿಸುವುದು.

## ವಿಜ್ಞಾನ-ತಂತ್ರಜ್ಞಾನ

**"ಝೋಂಗ್ ಕ್ಸಿಂಗ್-11": ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿದ ಚೀನಾ**

ಚೀನಾದ ಸಂಪರ್ಕ ಉಪಗ್ರಹ "ಝೋಂಗ್ ಕ್ಸಿಂಗ್-11 (Zhongxing)" ನ್ನು ಮೇ.3, 2013 ರಂದು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿಲಾಯಿತು. ನೈರುತ್ಯ ಚೀನಾದ ಸಿಚುಯಾನ್ ಪ್ರಾಂತ್ಯದಲ್ಲಿರುವ "ಕ್ಸಿಚಾಂಗ್ ಉಪಗ್ರಹ ಉಡಾವಣಾ ಕೇಂದ್ರ" ದ ಮೂಲಕ ಈ ಉಪಗ್ರಹದ ಉಡಾವಣಾ ಪ್ರಯೋಗ ಯಶಸ್ವಿಯಾಗಿ ನೆರವೇರಿತು.

"ಝೋಂಗ್ ಕ್ಸಿಂಗ್-11" ಬಗ್ಗೆ:

- ಈ ಉಪಗ್ರಹವನ್ನು "ಲಾಂಗ್ ಮಾರ್ಚ್-3B" ರಾಕೆಟ್ ಮೂಲಕ ಕಕ್ಷೆಗೆ ಸೇರಿಸಲಾಯಿತು. ಇದು "ಲಾಂಗ್ ಮಾರ್ಚ್-3B" ರಾಕೆಟ್ ಸರಣಿಯ 176 ನೇ ಉಡಾವಣೆ.
- "ಯೋಂಗ್ ಕ್ಸಿಂಗ್-11" ಉಪಗ್ರಹ 5,000 ಕೆ.ಜಿ ಭಾರವಿದ್ದು, 15 ವರ್ಷಗಳ ಕಾಲ ಕಾರ್ಯನಿರ್ವಹಿಸಲಿದೆ.
- "ಚೀನಾ ಅಕಾಡೆಮಿ ಆಫ್ ಸ್ಪೇಸ್" ಅಭಿವೃದ್ದಿಪಡಿಸಿರುವ "DFH-4" ಪ್ಲಾಟಫಾರಂ ತಂತ್ರಜ್ಞಾನ ಆಧಾರಿತವಾಗಿದ್ದು, ಸ್ಥಿರ ಮತ್ತು ಮೊಬೈಲ್ ಕಿರಣಗಳ ಪ್ರೇಷಕ ಸಾಮರ್ಥ್ಯವನ್ನು ಹೊಂದಿದೆ.
- ಏಷ್ಯಾ ಫೆಸಿಫಿಕ್ ವಲಯದಲ್ಲಿ ಮಾಹಿತಿ ಪ್ರಸರಣ, "ಡೈರೆಕ್ಟ್ ಟು ಹೋಮ್ (DTH) ಸೇವೆ" ಮತ್ತು "ಡಿಜಿಟಲ್ ಬ್ರಾಡ್ ಬ್ಯಾಂಡ್" ನಂತಹ ವಾಣಿಜ್ಯ ಪ್ರಸಾರ ಕ್ಷೇತ್ರದಲ್ಲಿ ಈ ಉಪಗ್ರಹ ಪ್ರಮುಖ ಪಾತ್ರವಹಿಸಲಿದೆ.

**ಯಶಸ್ವಿಯಾಗಿ ಹಾರಾಟ ನಡೆಸಿದ ವಿಶ್ವದ ಮೊದಲ "ಸೌರ ವಿಮಾನ"**

ವಿಶ್ವದ ಮೊದಲ ಸೌರ ಶಕ್ತಿ ಚಾಲಿತ ವಿಮಾನ "ಸೋಲಾರ್ ಇಂಪಲ್ಸ್-HB-SIB (Solar Impulse)" ಪರೀಕ್ಷಾರ್ಥ ಹಾರಾಟವನ್ನು ಯಶಸ್ವಿಯಾಗಿ ಪೂರೈಸಿತು. ಸ್ವಿಸ್ ಮೂಲದ ಸಾಹಸಿ "ಬರ್ಟಂಡ್ ಪಿಕ್ಕರ್ಡ್" ರವರು ಕ್ಯಾಲಿಫೋರ್ನಿಯಾದಿಂದ ಅಮೆರಿಕಾದಾದ್ಯಂತ ಹಾರಾಟ ನಡೆಸಿ ಅರಿಜೋನಾದ ಫಿನಿಕ್ಸ್ ನಲ್ಲಿ ಸುರಕ್ಷಿತವಾಗಿ ಇಳಿದರು.

ಸೋಲಾರ್ ಇಂಪಲ್ಸ್:

- ಸೌರ ಶಕ್ತಿಯಿಂದ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಹಾರಾಟ ಮಾಡುವ ಸಾಮರ್ಥ್ಯ ಹೊಂದಿರುವ ಜಗತ್ತಿನ ಮೊದಲ ಸೌರ ವಿಮಾನ.
- 2015 ರ ವೇಳೆಗೆ ಶುದ್ದ ಇಂಧನದ ಅವಕಾಶಗಳನ್ನು ಜಗತ್ತಿನ ಮುಂದೆ ಪ್ರಾತ್ಯಕ್ಷಿಕೆ ಮೂಲಕ ತೋರಿಸುವುದು ಇದರ ಮುಖ್ಯ ಉದ್ದೇಶ.
- ರಾತ್ರಿ ವೇಳೆಯಲ್ಲಿ ಸುಮಾರು 8,230 ಮೀಟರ್ ಎತ್ತರದಲ್ಲಿ ಹಾರಾಟ ಮಾಡುವ ಸಾಮರ್ಥ್ಯವನ್ನು ಈ ವಿಮಾನ ಹೊಂದಿದೆ.
- ಈ ವಿಮಾನದಲ್ಲಿ ನಾಲ್ಕು ಮೋಟಾರ್ ಗಳನ್ನು ಅಳವಡಿಸಲಾಗಿದ್ದು, 12,000 ಸೌರ ಕೋಶಗಳು ಬೇಕಾಗುವ ವಿದ್ಯುತ್ ನ್ನು ಪೂರೈಸುತ್ತವೆ.
- ಸದ್ಯ ಫೈಲಟ್ ಕುಳಿತುಕೊಳ್ಳಲು ಮಾತ್ರ ಅವಕಾಶವಿದ್ದು, ಮುಂದಿನ ದಿನಗಳಲ್ಲಿ ಸಾರ್ವಜನಿಕರ ಪ್ರಯಾಣಕ್ಕೆ ಅನುಕೂಲವಾಗುವಂತೆ ಸಿದ್ದಪಡಿಸಲಾಗುವುದು.

**“ರೋಬೊಟಿಕ್ ಫ್ಲೈ (Robo- Fly)”: ವಿಶ್ವದ ಅತಿ ಚಿಕ್ಕ ರೋಬೊಟ್**

ಜಗತ್ತಿನ ಅತಿ ಚಿಕ್ಕ ಗಾತ್ರದ ರೋಬೊಟ್ ಅನ್ನು ತಯಾರಿಸುವಲ್ಲಿ ಯು.ಕೆ ವಿಜ್ಞಾನಿಗಳ ತಂಡ ಯಶಸ್ವಿಯಾಗಿದೆ. “ರೋಬೊಟಿಕ್-ಫ್ಲೈ” ಎಂಬ ಹೆಸರಿನ ಈ ರೋಬೊಟ್ ನೊಣದ ಗಾತ್ರವಿದೆ. ಕೀಟಗಳನ್ನೇ ಹೋಲುವ “ರೋಬೊಟಿಕ್-ಫ್ಲೈ” ಅವುಗಳಂತಯೇ ಕ್ಷಿಪ್ರವಾಗಿ ಹಾರಾಟ ಮಾಡಲಿದೆ.

**“ರೋಬೊಟಿಕ್ ಫ್ಲೈ”**

- ಯು.ಕೆ ನ ಹಾರ್ವಡ್ ವಿಶ್ವ ವಿದ್ಯಾಲಯದ ವಿಜ್ಞಾನಿಗಳಾದ ಡಾ.ಕೇವಿನ್ ಮಾ ಮತ್ತು ಡಾ.ರಾಬರ್ಟ್ ವುಡ್ ರವರನ್ನು ಒಳಗೊಂಡ ವಿಜ್ಞಾನಿಗಳ ತಂಡ ಈ ರೋಬೊಟ್ ನ್ನು ಸೃಷ್ಟಿಸಿದೆ.
- ಕಾರ್ಬನ್ ಫೈಬರ್ ನಿಂದ ಈ ರೋಬೊಟ್ ನ್ನು ತಯಾರಿಸಲಾಗಿದೆ. ಇದರ ತೂಕ ಕೇವಲ ೮೦ ಮಿಲಿ ಗ್ರಾಂ.
- ವೇಗವಾಗಿ ಹಾರಾಟ ನಡೆಸುವ ಸಲುವಾಗಿ ಅತ್ಯಂತ ವೇಗವಾಗಿ ಚಲಿಸುವ ಎಲೆಕ್ಟ್ರಾನಿಕ್ ಸ್ನಾಯುಗಳನ್ನು ಇದಕ್ಕೆ ಅಳವಡಿಸಲಾಗಿದೆ. ಈ ರೋಬೊಟ್ ನ ರೆಕ್ಕೆಗಳು ಸೆಕೆಂಡ್ ಗೆ 120 ಬಾರಿ ಚಲಿಸಲಿವೆ.

**ಉಪಯೋಗಗಳು**:

- ಕೀಟಗಳಂತೆ ಚಿಕ್ಕ ಗಾತ್ರದಲ್ಲಿರುವ ಈ ರೋಬೊಟ್ ಕಿರಿದಾದ ಪ್ರದೇಶಗಳಲ್ಲೂ ಹಾರಾಟ ಮಾಡಲಿದೆ. ಕಟ್ಟಡ ಕುಸಿತದಂತಹ ಅವಘಡಗಳ ಅಡಿಯಲ್ಲಿ ಸಿಲುಕಿದವವರನ್ನು ಪತ್ತೆಹಚ್ಚುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.
- ಪರಿಸರದಲ್ಲಿರುವ ರಾಸಾಯನಿಕ ಪದಾರ್ಥಗಳನ್ನು ಗುರುತಿಸುವುದು ಸೇರಿದಂತೆ ಮಾಲಿನ್ಯದ ಬಗ್ಗೆ ನಿಗಾವಹಿಸಲು ಈ ರೋಬೊಟ್ ಬಳಕೆ ಬರಲಿದೆ.
- ಕೃಷಿ ಬೆಳೆಗಳಲ್ಲಿ ಪರಾಗಸ್ಪರ್ಶ ಕ್ರಿಯೆಯನ್ನು ಹೇಗೆ ಸ್ವಾಭಾವಿಕ ಕೀಟಗಳು ಮಾಡುತ್ತವೆಯೋ ಅದೇ ರೀತಿಯಲ್ಲಿ ರೋಬೊಟಿಕ್-ಫ್ಲೈ” ನ್ನು ಬಳಸಬಹುದು ಎಂಬುದು ವಿಜ್ಞಾನಿಗಳ ಅಂಬೋಣ.

**“ಅಂತರರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣ”ದಲ್ಲಿ ಅಮೋನಿಯ ಸೋರಿಕೆ**

“ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (International Space Station)” ದ ರೇಡಿಯೇಟರ್ ನಲ್ಲಿ “ಅಮೋನಿಯ”ದ ಸೋರಿಕೆ ಉಂಟಾಗಿರುವುದಾಗಿ ನಾಸಾ ಮತ್ತು ರಷ್ಯಾದ ವಿಜ್ಞಾನಿಗಳು ತಿಳಿಸಿದ್ದಾರೆ. ಈ ಸೋರಿಕೆಯಿಂದ ಅಂತರರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣದಕ್ಕೆ ಯಾವುದೇ ಅಪಾಯವಿಲ್ಲವೆಂದು ವಿಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ. ಆದರೆ ಅಮೋನಿಯ ಪೂರ್ತಿಯಾಗಿ ಸೋರಿಕೆಯಾಗುವ ಮುನ್ನ ಇದನ್ನು ದುರಸ್ಥಿಪಡಿಸಲು ನಾಸಾ ಕ್ರಮ ಕೈಗೊಂಡಿದೆ.

- ಅಮೋನಿಯ ಸೋರಿಕ ನಿಲುಗಡೆ ನಾಸಾ ಇಬ್ಬರು ಬಾಹ್ಯಾಕಾಶಯಾನಿಗಳನ್ನು ಅಂತರಿಕ್ಷಕ್ಕೆ ಕಳುಹಿಸಿಕೊಡಲು ಸಿದ್ದತೆ ನಡೆಸಿದೆ. ಬಾಹ್ಯಕಾಶ ನಡಿಗೆ ಮೂಲಕ ಈ ತಂಡ ಸೋರಿಕೆಯನ್ನು ಸರಿಪಡಿಸಲಿದೆ.
- ಬಾಹ್ಯಕಾಶ ನಿಲ್ದಾಣದಲ್ಲಿ ವಿದ್ಯುತ್ ಪೂರೈಕೆ ಮಾಡುವ ಘಟಕವನ್ನು ತಂಪುಗೊಳಿಸಲು ಅಮೋನಿಯವನ್ನು ತಂಪುಕಾರವಾಗಿ ಬಳಸಲಾಗಿತ್ತು. ಇತ್ತೀಚೆಗೆ ಈ ವ್ಯವಸ್ಥೆಯಲ್ಲಿ ಅಮೊನಿಯ ಸೋರಿಕೆಯಾಗುತ್ತಿರುವುದನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದರು. ಒಂದು ವೇಳೆ ವಿದ್ಯುತ್ ಘಟಕದ ಕಾರ್ಯ ಸ್ಥಗಿತಗೊಂಡರು “ಸೌರ ಫಲಕ”ದ ಮೂಲಕ ಬಾಹ್ಯಾಕಾಶ ಕೇಂದ್ರ ಕಾರ್ಯ ನಡೆಸಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

- "ಸ್ಪೇಸ್ ಜಂಕ್" ಡಿಕ್ಕಿ ಹೊಡೆದಿರುವುದೇ ಈ ಸೋರಿಕೆಗೆ ಕಾರಣ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

**ಮೇ.12: ರಾಷ್ಟ್ರೀಯ ತಂತ್ರಜ್ಞಾನ ದಿನ (National Technology Day)**

ಪ್ರತಿ ವರ್ಷ ಮೇ.12 ರಂದು ಭಾರತದಲ್ಲಿ "ರಾಷ್ಟ್ರೀಯ ತಂತ್ರಜ್ಞಾನ ದಿನ"ವನ್ನಾಗಿ ಆಚರಿಸಲಾಗುತ್ತದೆ. ಭಾರತದ ತಂತ್ರಜ್ಞಾನ ಬೆಳವಣಿಗೆಯಲ್ಲಿ ಮೇ.12 ಮಹತ್ವದ ದಿನ ಆಗಾಗಿ ಈ ದಿನವನ್ನು ತಂತ್ರಜ್ಞಾನ ದಿನವೆಂದು ದೇಶದಾದ್ಯಂತ ಆಷರಿಸಲಾಗುತ್ತಿದೆ. ತಂತ್ರಜ್ಞಾನ ಅಭಿವೃದ್ದಿಗೆ ವಿಶೇಷ ಆವಿಷ್ಕಾರ ಮಾಡಿರುವ ಸಂಸ್ಥೆಗಳಿಗೆ ಈ ದಿನದಂದು ರಾಷ್ಟ್ರಪತಿಗಳು ಪ್ರಶಸ್ತಿಯನ್ನು ವಿತರಿಸುವರು.

- ಮೇ.11, 1998 ರಂದು ಭಾರತ ತನ್ನ ಎರಡನೇ "ಅಣ್ವಸ್ತ್ರ ಪರೀಕ್ಷೆ(ಆಪರೇಷನ್ ಶಕ್ತಿ)"ಯನ್ನು ಪೋಖ್ರಾನ್ ನಲ್ಲಿ ಯಶಸ್ವಿಯಾಗಿ ಪ್ರಯೋಗ ನಡೆಸಿತ್ತು.
- ಇದೇ ದಿನ ಸ್ವದೇಶಿ ತಂತ್ರಜ್ಞಾನ ನಿರ್ಮಿತ "ಹಂಸ-3" ಯುದ್ದವಿಮಾನದ ಪರೀಕ್ಷಾರ್ಥ ಸಂಚಾರಕ್ಕೆ ಬೆಂಗಳೂರಿನಲ್ಲಿ ಚಾಲನೆ ನೀಡಲಾಯಿತು. ಹಾಗೂ ತ್ರಿಶೂಲ್ ಕ್ಷಿಪಣಿಯ ಪ್ರಯೋಗಾರ್ಥ ಪರೀಕ್ಷೆಯೂ ಯಶಸ್ವಿಯಾಗಿ ನೆರವೇರಿತು. ಆಗಾಗಿ ಮೇ.11 ಭಾರತದ ತಂತ್ರಜ್ಞಾನ ಅಭಿವೃದ್ದಿಯಲ್ಲಿ ವಿಶೇಷ ದಿನವೆಂದು ಪರಿಗಣಿಸಲಾಗಿದೆ.

ಕರ್ನಾಟಕದ ಸಂಸ್ಥೆಗೆ ಪ್ರಶಸ್ತಿ:

- ರಾಷ್ಟ್ರೀಯ ತಂತ್ರಜ್ಞಾನ ದಿನದ ನಿಮಿತ ನೀಡಲಾಗುವ ರಾಷ್ಟ್ರ ಪ್ರಶಸ್ತಿಗೆ ಕರ್ನಾಟಕದ "ಬಯೋವೆಟ್ ಪ್ರೈವೆಟ್ ಲಿಮಿಟೆಡ್" ಸಂಸ್ಥೆ ಭಾಜನವಾಗಿದೆ. ಕೋಲಾರದ ಮಾಲೂರಿನ ಬಳಿ ಇರುವ ಈ ಸಂಸ್ಥೆ "ನೀಲಿ ನಾಲಿಗೆ (Bluetongue)" ರೋಗಕ್ಕೆ ಪೆಂಟಾವೆಲೆಂಟ್ ಲಸಿಕೆಯನ್ನು ಅಭಿವೃದ್ದಿಪಡಿಸಿರುವುದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಇದೇ ವೇಳೆ ಸಣ್ಣ ಪ್ರಮಾಣದ ಉದ್ಯಮಕ್ಕೆ ನೀಡಲಾಗುವ ಪ್ರಶಸ್ತಿಗೆ ಬೆಂಗಳೂರು ಮೂಲದ "ಫೈರೊಡೈನಾಮಿಕ್" ಕಂಪನಿ ಆಯ್ಕೆಯಾಗಿದೆ.
- ರಾಷ್ಟ್ರೀಯ ತಂತ್ರಜ್ಞಾನ ಮಂಡಳಿ ನೀಡುತ್ತಿರುವ ಈ ಪ್ರಶಸ್ತಿಯು 10 ಲಕ್ಷ ನಗದನ್ನು ಒಳಗೊಂಡಿದೆ.

**ಅತ್ಯಂತ ವೇಗದ 5 ಜಿ ತಂತ್ರಜ್ಞಾನ ಅಭಿವೃದ್ದಿಪಡಿಸಿರುವ "ಸ್ಯಾಮಸಂಗ್"**

ಮೊಬೈಲ್ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಂದ ಹೆಸರು ಮಾಡುತ್ತಿರುವ "ಸ್ಯಾಮಸಂಗ್" ಸಂಸ್ಥೆ ಈಗ ತಂತ್ರಜ್ಞಾನದಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಒಂದೇ ಸೆಕೆಂಡ್ ನಲ್ಲಿ ಇಡೀ ಸಿನಿಮಾವನ್ನು ಡೌನ್ ಲೋಡ್ ಮಾಡಬಹುದಾದ 5 ನೇ ತಲೆಮಾರಿನ ಅತಿ ವೇಗದ ತಂತ್ರಜ್ಞಾನವನ್ನು ಅಭಿವೃದ್ದಿಪಡಿಸಿರುವುದಾಗಿ ದಕ್ಷಿಣ ಕೊರಿಯಾದ ಸ್ಯಾಮಸಂಗ್ ಸಂಸ್ಥೆ ತಿಳಿಸಿದೆ.

- ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 4 ನೇ ತಲೆಮಾರಿನ ತಂತ್ರಜ್ಞಾನಕ್ಕಿಂತಲೂ ಇದು ನೂರು ಪಟ್ಟು ಹೆಚ್ಚು ಪ್ರಸರಣಾ ವೇಗವನ್ನು ಹೊಂದಿರಲಿದೆ.
- ಪ್ರತಿ ಸೆಕೆಂಡ್ ಗೆ 1 ಗಿಗಾ ಬೈಟ್ ನಷ್ಟು ಮಾಹಿತಿಯನ್ನು 2 ಕಿ.ಮೀ ವರೆಗೂ ಪ್ರಸರಣ ಮಾಡುವಲ್ಲಿ ಸಂಸ್ಥೆ ಯಶಸ್ವಿಯಾಗಿದೆ.

- ಈ ಸೂಪರ್ ಪಾಸ್ಟ್ ತಂತ್ರಜ್ಞಾನದಿಂದ ಇಡೀ ಸಿನಿಮಾವನ್ನು ಕೇವಲ ಒಂದು ಸೆಕೆಂಡ್ ನಲ್ಲಿ ಡೌನ್ ಲೋಡ್ ಮಾಡಬಹುದಾಗಿದೆ.
- ಈ ತಂತ್ರಜ್ಞಾನದ ನೆರವಿನಿಂದ ಬಳಕೆದಾರು 3 ಡಿ ಆಯಾಮದ ಸಿನಿಮಾಗಳು, ಗೇಮ್ ಗಳನ್ನು ಉತ್ಕೃಷ್ಟ ದರ್ಜೆಯಲ್ಲಿ ವೀಕ್ಷಿಸಬಹುದಾಗಿದೆ.
- 5 ನೇ ತಲೆಮಾರಿನ ಈ "ಸೂಪರ್ ಫಾಸ್ಟ್ ವೈರ್ ಲೆಸ್" ಸೇವೆಯನ್ನು ಪಡೆಯಲು 2020 ರ ತನಕ ಕಾಯಬೇಕಾಗಬಹುದು ಎನ್ನಲಾಗಿದೆ.

**ಅತಿಸಾರಕ್ಕೆ ಸ್ವದೇಶಿ ಔಷಧ ಸಂಶೋಧನೆ**

ಭಾರತದಲ್ಲಿ ವಾರ್ಷಿಕವಾಗಿ 1 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಬಲಿತೆಗೆದುಕೊಳ್ಳುತ್ತಿರುವ ಅತಿಸಾರ ಕಾಯಿಲೆಯನ್ನು ತಡೆಯುವ ಔಷಧವನ್ನು ಅನ್ವೇಷಿಸುವಲ್ಲಿ ದೇಶದ ವೈದ್ಯಕೀಯ ರಂಗ ಯಶಸ್ವಿಯಾಗಿದೆ.

- ಅತಿಸಾರ ನಿಯಂತ್ರಣಕ್ಕೆ ಸಂಪೂರ್ಣ ಸ್ವದೇಶಿ ಔಷಧ "ರೊಟೊವಾಕ್"ನ್ನು ಸಂಶೋಧಿಸುವಲ್ಲಿ ಭಾರತ ಯಶಸ್ಸನ್ನು ಕಂಡಿದೆ. ಸುಮಾರು 28 ವರ್ಷಗಳ ಕಾಲ ನಡೆಸಿದ ಸಂಶೋಧನೆಯ ಫಲದಿಂದ ಈ ಔಷಧಿಯನ್ನು ಕಂಡುಹಿಡಿಯಲಾಗಿದೆ.
- "ರೊಟೊವಾಕ್" ನಿಂದ ಶೇ.56 ಕ್ಕೂ ಹೆಚ್ಚು ಶಿಶು ಮರಣಗಳನ್ನು ತಡೆಯಬಹುದು ಎಂದು ಅಂದಾಜಿಸಲಾಗಿದೆ.
- ಈ ನೂತನ ಔಷಧಿಗೆ "ಔಷಧ ನಿಯಂತ್ರಣ ಮಂಡಳಿ" ಯಿಂದ ನಿರಪೇಕ್ಷಣಾ ಅನುಮತಿ ದೊರೆಯಬೇಕಿದ್ದು, ವಾಣಿಜ್ಯ ತಯಾರಿಕೆಗೆ ಇನ್ನಷ್ಟು ಸಮಯ ಬೇಕಾಗಬಹುದು.
- ಸದ್ಯ ಅತಿಸಾರ ನಿಯಂತ್ರಣ ಔಷಧಿಗಳ ಬೆಲೆ ರೂ.800 ರಿಂದ ರೂ.900 ತನಕ ಇದ್ದು ದುಬಾರಿ ಎನಿಸಿದೆ. ಆದರೆ ರೊಟೊವಾಕ್ ಕೇವಲ ರೂ.50 ಕ್ಕೆ ದೊರೆಯಲಿದ್ದು, ಭಾರತದ ಎಲ್ಲಾ ವರ್ಗಗಳ ಜನರಿಗೆ ಅನುಕೂಲವಾಗಲಿದೆ.

**"H041 ಸೂಪರ್ ಬಗ್": ಏಡ್ಸ್ ಗಿಂತಲೂ ಹೆಚ್ಚು ಮಾರಣಾಂತಿಕ**

ವೈದ್ಯ ಸಮುದಾಯಕ್ಕೆ ಸವಾಲೆನಿಸಿರುವ "ಏಡ್ಸ್" ವೈರಸ್ ಗಿಂತಲೂ, ಹೆಚ್ಚು ಮಾರಣಾಂತಿಕವಾಗಿರುವ "ಸೂಪರ್ ಬಗ್" (ಬ್ಯಾಕ್ಟೀರಿಯಾ)ನ್ನು ಜಪಾನ್ ವೈದ್ಯರು ಪತ್ತೆಹಚ್ಚಿದ್ದಾರೆ. ಜಪಾನ್ ನ "ಹವಾಯಿ" ಪ್ರದೇಶದಲ್ಲಿ ಹೊಸದಾಗಿ ಎರಡು ಪ್ರಕರಣಗಳನ್ನು ವೈದ್ಯರು ಪತ್ತೆಹಚ್ಚಲಾಗಿದ್ದು, ಜೀವ ನಿರೋಧಕಗಳಿಗೆ ಈ ಸೂಪರ್ ಬಗ್ ತೀವ್ರ ಪ್ರತಿರೋಧ ಒಡ್ಡುವ ಮೂಲಕ ವೈದ್ಯ ಲೋಕವನ್ನು ತಲ್ಲಣಗೊಳಿಸಿದೆ.

**H041:**

- ಲೈಂಗಿಕ ಕ್ರಿಯೆಯ ಮೂಲಕ ಪಸರಣಗೊಳ್ಳುವ ಈ ಸೂಪರ್ ಬಗ್ ಬ್ಯಾಕ್ಟೀರಿಯಾಕ್ಕೆ H041 ಎಂದು ಹೆಸರಿಡಲಾಗಿದೆ.
- ಎರಡು ವರ್ಷಗಳ ಹಿಂದೆ ಜಪಾನ್ ನ ಮಹಿಳಾ ಲೈಂಗಿಕ ಕಾರ್ಯಕರ್ತೆಯರಲ್ಲಿ ಮೊದಲಿಗೆ ಈ "ಸೂಪರ್ ಬಗ್" ನ್ನು ಪತ್ತೆಹಚ್ಚಲಾಗಿತ್ತು.

- ಪುರುಷರಲ್ಲಿ "ಗೊನೊರಿಯಾ" ತರದ ಮಾರಣಾಂತಿಕ ರೋಗವನ್ನು ತರಬಲ್ಲ ಬ್ಯಾಕ್ಟೀರಿಯಾ ಇದಾಗಿದ್ದು, ಜೀವ ನಿರೋಧಕಗಳಿಗೆ ತೀವ್ರ ಪ್ರತಿರೋಧ ಸಾಮರ್ಥ್ಯವನ್ನು ಹೊಂದಿದೆ ಎಂದು ವೈದ್ಯರು ಹೇಳಿದ್ದಾರೆ.
- ವೈರಸ್ ಗಿಂತಲೂ ವೇಗವಾಗಿ ಈ ಬ್ಯಾಕ್ಟೀರಿಯಾ ಹರಡಬಹುದಾಗಿರುವ ಕಾರಣ ಇದು ಏಡ್ಸ್ ಗಿಂತಲೂ ಹೆಚ್ಚು ಅಪಾಯಕಾರಿ ಎನ್ನಲಾಗಿದೆ.

**"ಸೂಪರ್ ಬಗ್":**

- ಒಂದು ಅಥವಾ ಅದಕ್ಕಿಂತ ಹೆಚ್ಚು ಜೀವ ನಿರೋಧಕಗಳಿಗೆ ಪ್ರತಿರೋಧ ವ್ಯಕ್ತಪಡಿಸುವ ರೋಗಾಣುಗಳಿಗೆ ವೈದ್ಯಕೀಯ ಕ್ಷೇತ್ರದಲ್ಲಿ "ಸೂಪರ್ ಬಗ್" ಎನ್ನುತ್ತಾರೆ. ಸಾಮಾನ್ಯವಾಗಿ "ಸೂಪರ್ ಬಗ್" ಬ್ಯಾಕ್ಟೀರಿಯಾ ಆಗಿರುತ್ತದೆ.

**"ಗೊನೊರಿಯಾ (Gonorrhea)":**

- ಗೊನೊರಿಯಾವು "ನೈಸೀರಿಯಾ ಗೊನೊರಿಯೆ" ಎಂಬ ಬ್ಯಾಕ್ಟೀರಿಯಾ ಮೂಲಕ ಲೈಂಗಿಕವಾಗಿ ಹರಡುವ ಒಂದು ಸಾಮಾನ್ಯ ಮಾನವ ಸೋಂಕು. ಪುರಷ ಮತ್ತು ಮಹಿಳೆ ಇಬ್ಬರಲ್ಲೂ ಈ ಕಾಯಿಲೆ ಕಂಡುಬರುತ್ತದೆ ಆದರೂ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಾಯಿಲೆಯ ಲಕ್ಷಣಗಳು ಗೋಚರವಾಗುವುದಿಲ್ಲ. ಮೂತ್ರ ವಿಸರ್ಜನೆ ಸಮಯದಲ್ಲಿ ಉರಿ ಮತ್ತು ನೋವು ಹಾಗೂ ಶಿಶ್ನ ವಿಸರ್ಜನೆ ಕಾಯಿಲೆಯ ಪ್ರಮುಖ ಲಕ್ಷಣಗಳು. ಮಹಿಳೆಯರಲ್ಲೂ ಇದೇ ತರನಾದ ಲಕ್ಷಣಗಳು ಕಂಡುಬರುತ್ತವೆ. ಗೊನೊರಿಯಾಗೆ ಸೂಕ್ತ ಚಿಕಿತ್ಸೆಯನ್ನು ಪಡೆಯದೇ ನಿರ್ಲಕ್ಷಿಸಿದರೇ ಸೋಂಕು ದೇಹಕ್ಕೆ ಹರಡುವ ಮೂಲಕ ಉಲ್ಬಣಗೊಳ್ಳುತ್ತದೆ. ಕೀಲುಗಳು ಮತ್ತು ಹೃದಯದ ಕವಾಟಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.

**ಚಂದ್ರನಿಗೆ ಉಲ್ಕೆ ಡಿಕ್ಕಿ ಪತ್ತೆಹಚ್ಚಿರುವ ನಾಸಾ ವಿಜ್ಞಾನಿಗಳು**

ಚಂದ್ರನ ಮೇಲೆ ನಿಗಾ ಇರಿಸಿರುವ ನಾಸಾದ ಸ್ವಯಂಚಾಲಿತ ದೂರದರ್ಶಕವು ಸುಮಾರು 40 ಕೆ.ಜಿ ತೂಕವುಳ್ಳ ಕಲ್ಲಿನ ಗಾತ್ರದ ಉಲ್ಕೆಯೊಂದು ಚಂದ್ರನಿಗೆ ಅಪ್ಪಳಿಸಿರುವ ದೃಶ್ಯವನ್ನು ಸೆರೆಹಿಡಿದಿದೆ. ಉಲ್ಕೆ ಅಪ್ಪಳಿಕೆಯಿಂದಾಗಿ ಪ್ರಕಾಶಮಾನವಾದ ಬೆಳಕು ಚಂದ್ರನ ಮೇಲ್ಮೈ ಮೇಲೆ ಸೃಷ್ಟಿಯಾಗಿರುವುದಾಗಿ ನಾಸಾ ವಿಜ್ಞಾನಿಗಳು ತಿಳಿಸಿದ್ದಾರೆ.

- ಕಳೆದ ಎಂಟು ವರ್ಷಗಳಿಂದ ನಾಸಾದ ದೂರದರ್ಶಕ ಚಂದ್ರನ ಮೇಲೆ ನಿಗಾ ಇರಿಸಿದ್ದು, ಇಷ್ಟೊಂದು ದೊಡ್ಡ ಗಾತ್ರದ ಉಲ್ಕೆ ಅಪ್ಪಳಿಸಿರುವುದು ಇದೇ ಮೊದಲು.
- ಈ ಹಿಂದೆ ಸುಮಾರು 300 ಕ್ಕೂ ಹೆಚ್ಚು ಉಲ್ಕೆಗಳು ಚಂದ್ರನ ಮೇಲ್ಮೈಗೆ ಅಪ್ಪಳಿಸಿವೆ. ಆದರೆ ಅಪ್ಪಳಿಕೆಯಿಂದ ಉಂಟಾದ ಬೆಳಕಿನ ತೀವ್ರತೆ ಇದೆಂದಿಗಿಂತಲೂ ಹೆಚ್ಚು. ವಿಜ್ಞಾನಿಗಳ ಹೇಳುವಂತೆ ಈ ಅಪರೂಪದ ಕ್ಷಣವನ್ನು ಬರಿಗಣ್ಣಿನಿಂದಲೂ ನೋಡಬಹುದಿತ್ತು.
- ಸುಮಾರು ಒಂದು ಅಡಿ ವ್ಯಾಸವನ್ನು ಹೊಂದಿರುವ ಉಲ್ಕೆ ಗಂಟೆಗೆ 56,000 ಕಿ.ಮೀ ವೇಗದಲ್ಲಿ ಚಲಿಸುತ್ತಿತ್ತು.

**40 ವರ್ಷಗಳ ಹಿಂದಿನ ದಾಖಲೆ ಮುರಿದ "ರೋವರ್"**

ಮಂಗಳನ ಅಧ್ಯಯನಕ್ಕೆಂದು ನಾಸಾ ಕಳುಹಿಸಿರುವ "ರೋವರ್ ಅಪಾರ್ಚುನಿಟಿ" ರೋಬೋಟ್ ಸತತ 9 ವರ್ಷಗಳ ದೀರ್ಘ ಕಾಲ ಮಂಗಳದಲ್ಲಿ ಚಲಿಸುವ ಮೂಲಕ ನಾಸಾ ದ 40 ವರ್ಷಗಳ ದಾಖಲೆಯನ್ನು ಅಳಿಸಿ ಹಾಕಿದೆ. ಇತ್ತೀಚೆಗಷ್ಟೇ "ರೋವರ್" ಮಂಗಳ ಗ್ರಹದಲ್ಲಿ ಪತ್ತೆಯಾಗಿರುವ ನೀರಿನಿಂದ ಮಾರ್ಪಾಡಾಗಿರುವ "ಎಸ್ಪಾರೆನ್ಸ್ ಶಿಲೆ"ಯ ತಪಾಸಣೆಯನ್ನು ಪೂರ್ಣಗೊಳಿಸಿದೆ. ಇದರಿಂದ ಮಂಗಳನಲ್ಲಿ ಕೋಟ್ಯಾಂತರ ವರ್ಷಗಳ ಹಿಂದೆ ನೀರಿನ ತೇವಯುಕ್ತ ವಾತಾವರಣ ಇದ್ದ ಬಗ್ಗೆ ಬಹುತೇಕ ಖಚಿತವಾಗಿದೆ.

- "ರೋವರ್ ಅಪಾರ್ಚುನಿಟಿ" ರೊಬೋಟ್ ನ್ನು 2004 ರಲ್ಲಿ ಮಂಗಳ ಗ್ರಹದಲ್ಲಿ ಇಳಿಸಲಾಗಿತ್ತು. ಅಲ್ಲಿಂದ 9 ವರ್ಷಗಳ ಕಾಲ ಈ ಆರು ಚಕ್ರಗಳ ರೊಬೋಟ್ 35,760 ಕಿ.ಮೀ ಚಲಿಸಿದೆ.
- 1972 ರಲ್ಲಿ ಚಂದ್ರನಲ್ಲಿಗೆ ಮೂರು ದಿನ ತೆರಳಿದ್ದ ಅಪೊಲೊ-17 ಅಂತರಿಕ್ಷಯಾನಿಗಳಾದ ಹ್ಯುಗೇನ್ ಸೆರ್ನಾನ್ ಮತ್ತು ಹ್ಯಾರಿಸಲ್ ಚಮೆಟ್ ಅವರು ತೆರಳಿದ್ದ 35,744 ಕಿ,ಮೀ ದೂರದ ದಾಖಲೆಯನ್ನು ರೋವರ್ ಅಳಿಸಿರುವುದಾಗಿ ನಾಸಾ ವಿಜ್ಞಾನಿಗಳು ಹೇಳಿದ್ದಾರೆ.
- 1973 ರಲ್ಲಿ ರಷ್ಯಾ ಚಂದ್ರನಲ್ಲಿಗೆ ಕಳುಹಿಸಿದ ರಿಮೋಟ್ ಮೂಲಕ ನಿಯಂತ್ರಿಸುವ "ಲುನೊಖೊಡ್ (Lunokhod) -2" ರೋವರ್ ಬಾಹ್ಯಕಾಶ 37 ಕಿ,ಮೀ ಚಲಿಸುವ ಮೂಲಕ ಅತಿ ಹೆಚ್ಚು ದೂರ ಚಲಿಸಿದ ದಾಖಲೆಯನ್ನು ಸದ್ಯ ಹೊಂದಿದೆ.

**"ಬಿಳಿ ಹುಲಿಗಳ" ಬಣ್ಣದ ರಹಸ್ಯ ಬಯಲು ಮಾಡಿದ ಸಂಶೋಧಕರು**

ಭಾರತ ಮೂಲದ ಬಿಳಿ ಹುಲಿಗಳ ಮೈಮೇಲಿನ ಬಿಳಿ ಪಟ್ಟೆಯ ಬಣ್ಣಕ್ಕೆ ಕಾರಣವೇನು ಎಂಬ ರಹಸ್ಯವನ್ನು ಹೊಸ ಅಧ್ಯಯನದಿಂದ ಬಯಲಾಗಿದೆ. ಚೀನಾದ "ಪೆಕಿಂಗ್" ವಿಶ್ವವಿದ್ಯಾಲಯದಲ್ಲಿ ನಡೆಸಿದ ಸಂಶೋಧನೆಯಲ್ಲಿ ರಹಸ್ಯವನ್ನು ಬಿಚ್ಚಿಡಲಾಗಿದ್ದು, ವರ್ಣದ್ರವ್ಯದಲ್ಲಿನ ಅಲ್ಪ ಬದಲಾವಣೆಯೇ ಹುಲಿಯ ತುಪ್ಪಳ ಬಿಳಿ ಬಣ್ಣ ಪಡೆಯಲು ಮೂಲ ಕಾರಣವಾಗಿದೆ.

- "SLC45A2" ಎಂಬ ವರ್ಣದ್ರವ್ಯ ವಂಶವಾಹಿನಿಯಲ್ಲಿ ಆಗಿರುವ ಬದಲಾವಣೆಯೇ ಬಿಳಿಪಟ್ಟೆಗೆ ಕಾರಣವೆಂದು ಅಧ್ಯಯನದಿಂದ ಗೊತ್ತಾಗಿದೆ.
- ಹುಲಿಯ ತುಪ್ಪಳ, ಪಟ್ಟೆ ಮತ್ತು ಕಣ್ಣುಗಳ ಬಣ್ಣವನ್ನು "ಪೊಮೆಲಾನಿನ್" ಮತ್ತು "ಯುಮೆಲಾನಿನ್" ಎಂಬ ಎರಡು ಬಗೆಯ ಮೆಲಾನಿನ್ ಗಳು ನಿರ್ಧರಿಸುತ್ತವೆ. ಬಿಳಿ ಹುಲಿಗಳಲ್ಲಿ 'ಪೊಮೆಲಾನಿನ್" ನಲ್ಲಿ ವ್ಯತ್ಯಾಸ ಆಗಿರುತ್ತದೆ ಎಂದು ಹೇಳಲಾಗಿದೆ. ಇದೇ ತರನಾದ ಬದಲಾವಣೆಯನ್ನು ಆಧುನಿಕ ಯುರೋಪಿಯನ್ ರಲ್ಲೂ ಕಾಣಬಹುದಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಬಿಳಿ ಹುಲಿಗಳ ಸಂಖ್ಯೆ ತೀರಾ ವಿರಳವಾಗಿದೆ. ಮೃಗಾಲಯಗಳಲ್ಲಿ ಇವುಗಳ ಸಂತತಿಯನ್ನು ಅಭಿವೃದ್ಧಿಪಡಿಸುವುದು ಸಹ ತೀರಾ ಕಷ್ಟ. ಸಾಮಾನ್ಯ ಹುಲಿಗಳಿಗೆ ಹೋಲಿಸಿದರೆ ಬಿಳಿ ಹುಲಿಗಳ ಆರೋಗ್ಯ ಸಾಮರ್ಥ್ಯ ಕೂಡ ಧೃಡವಲ್ಲ ಎಂಬುದು ಸಂಶೋಧಕರ ಹೇಳಿಕೆ.

**"ಇಸ್ರೋ ನ್ಯಾವಿಗೇಷನ್ ಕೇಂದ್ರ" ಕ್ಕೆ ಚಾಲನೆ**

ಬೆಂಗಳೂರಿನಿಂದ 40 ಕಿ.ಮೀ ದೂರದಲ್ಲಿರುವ "ಬ್ಯಾಲಾಳು" ಬಳಿ "ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ)" ಯ ಸಂಚರಣೆ ಕೇಂದ್ರ (Navigation Centre)ಕ್ಕೆ ಕೇಂದ್ರ ಸಚಿವ ವಿ.ನಾರಾಯಣಸ್ವಾಮಿ ಚಾಲನೆ ನೀಡಿದರು. ಈ ಮೂಲಕ "ಬ್ಯಾಲಾಳು" ಬಾಹ್ಯಕಾಶ ಹಬ್ ಆಗಿ ಗುರುತಿಸಿಕೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಇಸ್ರೋ ಕೈಗೊಳ್ಳಲು ಉದ್ದೇಶಿಸಿರುವ ಪ್ರಮುಖ ಬಾಹ್ಯಕಾಶ ಅಭಿಯಾನಗಳಿಗೆ ಈ ಕೇಂದ್ರ ಮುಖ್ಯ ಪಾತ್ರವಹಿಸಲಿದೆ.

- ಇಸ್ರೋ ಇದೇ ಜೂನ್ 12 ರಂದು ಉಡಾಯಿಸಲಿರುವ "ಭಾರತೀಯ ಪ್ರಾದೇಶಿಕ ಸಂಚಾರ ಉಪಗ್ರಹ ವ್ಯವಸ್ಥೆ (Indian Regional Navigation Satellite System (INRSS))" ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಲಿರುವ "ಮಂಗಳ ಅಭಿಯಾನ" ದ ಸಂಪೂರ್ಣ ನಿಯಂತ್ರಣವನ್ನು ಈ ಕೇಂದ್ರ ನಿಭಾಯಿಸಲಿದೆ.
- ಈ ಕೇಂದ್ರವು INRSSS ನ ಮೇಲ್ವಿಚಾರಣೆ ಸೇರಿದಂತೆ ಸಂದೇಶ ಸ್ವೀಕೃತಿ ಮತ್ತು ರವಾನಿಸುವ ಕಾರ್ಯವನ್ನು ಮಾಡಲಿದೆ. ಅಧಿಕ ನಿಖರತೆ ಹೊಂದಿರುವ ಪರಮಾಣು ಗಡಿಯಾರವನ್ನು ಈ ಕೇಂದ್ರ ಹೊಂದಿದ್ದು, ದೇಶದ ಇತರೆ 21 ಪ್ರಾದೇಶಿಕ ಕೇಂದ್ರಗಳ ಜೊತೆ ಸಂಘಟನೆಯೊಂದಿಗೆ ಕಾರ್ಯನಿರ್ವಹಸಲಿರುವುದಾಗಿ ಇಸ್ರೋ ಅಧ್ಯಕ್ಷ ರಾಧಕೃಷ್ಣನ್ ಹೇಳಿದ್ದಾರೆ.

## ಪರಿಸರ

**19.57 ಲಕ್ಷ ಹೆಕ್ಟೇರ್ ಅರಣ್ಯ ಭೂಮಿ ಒತ್ತುವರಿ**

ಅರಣ್ಯ ಮತ್ತು ವನ್ಯಜೀವಿ ಸಂಪತ್ತು ರಕ್ಷಣೆಗೆ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆಯಾದರು ಅರಣ್ಯ ಸಂಪತ್ತಿನ ಲೂಟಿ ಎಗ್ಗಿಲ್ಲದೇ ಸಾಗಿದೆ ಎಂಬುದಕ್ಕೆ ಅರಣ್ಯ ಸಚಿವಾಲಯ ಹೊರತಂದಿರುವ ಮಾಹಿತಿ ಉತ್ತಮ ನಿದರ್ಶನ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಕ್ರೋಢಿಕರಿಸಿರುವ ಅಂಕಿ ಅಂಶಗಳ ಪ್ರಕಾರ ದೇಶದ ವಿವಿಧ ರಾಜ್ಯಗಳಲ್ಲಿ 19.57 ಲಕ್ಷ ಹೆಕ್ಟೇರ್ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ.

**ಯಾವ ರಾಜ್ಯಗಳಲ್ಲಿ ಎಷ್ಟೇಷ್ಟು?**

- ಅರಣ್ಯ ಭೂಮಿ ಅತಿ ಹೆಚ್ಚಾಗಿ ಒತ್ತುವರಿ ಮಾಡಲಾದ ರಾಜ್ಯಗಳ ಪೈಕಿ ಮಧ್ಯಪ್ರದೇಶಕ್ಕೆ ಅಗ್ರಸ್ಥಾನ. ಮಧ್ಯಪ್ರದೇಶದಲ್ಲಿ 4.87 ಲಕ್ಷ ಹೆಕ್ಟೇರ್ ನಷ್ಟು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ.
- ಅಸ್ಸಾಂ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಕ್ರಮವಾಗಿ ನಂತರದ ಸ್ಥಾನದಲ್ಲಿವೆ. ಅಸ್ಸಾಂನಲ್ಲಿ 3.30 ಹೆಕ್ಟೇರ್, ಆಂಧ್ರಪ್ರದೇಶದಲ್ಲಿ 2.57 ಹೆಕ್ಟೇರ್ ಮತ್ತು ಮಹಾರಾಷ್ಟ್ರದಲ್ಲಿ 1.83 ಹೆಕ್ಟೇರ್ ನಷ್ಟು ಒತ್ತುವರಿ ಮಾಡಲಾಗಿದೆ.
- ಒಂದು ಲಕ್ಷ ಹೆಕ್ಟೇರ್ ಗಿಂತ ಹೆಚ್ಚು ಒತ್ತುವರಿಯಾಗಿರುವ ರಾಜ್ಯಗಳಲ್ಲಿ ಛತ್ತೀಸ್ ಘರ್ ಮತ್ತು ಕರ್ನಾಟಕ ಸ್ಥಾನ ಪಡೆದಿವೆ. ಕರ್ನಾಟಕದಲ್ಲಿ 1.15 ಲಕ್ಷ ಹೆಕ್ಟೇರ್ ಅರಣ್ಯ ಭೂಮಿಯನ್ನು ಅಕ್ರಮವಾಗಿ ಅತಿಕ್ರಮಣ ಮಾಡಲಾಗಿದೆ.
- **ಗೋವಾ, ಪುದುಚೇರಿ ಮತ್ತು ಲಕ್ಷದ್ವೀಪಗಳಲ್ಲಿ ಸಲ್ಪವೂ ಒತ್ತುವರಿಯಾಗಿಲ್ಲ**.

ಯಾವ ಉದ್ದೇಶಕ್ಕೆ ಒತ್ತುವರಿ ಮಾಡಲಾಗಿದೆ?

- ಒತ್ತುವರಿ ಶೇ.90 ರಷ್ಟು ಭಾಗವನ್ನು ಕೃಷಿ ಉದ್ದೇಶಕ್ಕಾಗಿ ಮಾಡಲಾಗಿದೆ. ಬಳಿಕ ಈ ಪ್ರದೇಶಗಳಲ್ಲಿ ಗುಡಿಸಲು ನಿರ್ಮಿಸಿಕೊಂಡು ವಸತಿ ಸೌಕರ್ಯಕ್ಕೆ ಬಳಸಿ ಮಾಡಲಾಗುತ್ತಿದೆ.

**ಅರಣ್ಯ ಸಂರಕ್ಷಣೆಗೆ ಭಾರತದಲ್ಲಿರುವ ಕಾಯಿದೆಗಳು**:

- ಪರಿಸರ, ಅರಣ್ಯ ಸಂಪತ್ತು ಮತ್ತು ವನ್ಯ ಜೀವಿಗಳ ಸಂರಕ್ಷಣೆಗಾಗಿ ಭಾರತದಲ್ಲಿ ಹಲವು ಕಾಯಿದೆಗಳನ್ನು ಜಾರಿಗೆ ತರಲಾಗಿದೆ ಅವುಗಳಲ್ಲಿ ಭಾರತ ಅರಣ್ಯ ಕಾಯಿದೆ-1927, ವನ್ಯಜೀವಿ ಸಂರಕ್ಷಣಾ ಕಾಯಿದೆ-1972 ಮತ್ತು ಅರಣ್ಯ (ಸಂರಕ್ಷಣಾ) ಕಾಯಿದೆ-1980 ಅತಿ ಪ್ರಮುಖವಾದವು.

**ಇಂಗಾಲದ ಕಡಿತ ಸುಧಾರಣೆಯಲ್ಲಿರುವ ಸಂಸ್ಥೆಗಳ ಟಾಪ್ 5 ರಲ್ಲಿ ಸ್ಥಾನ ಪಡೆದ ಇನ್ಫೋಸಿಸ್**

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ "ಇನ್ಫೋಸಿಸ್" ಸಂಸ್ಥೆ ಪರಿಸರ ಮಾಲಿನ್ಯ ತಡೆಯಲು ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಳ್ಳುವಲ್ಲು ಸೈ ಎನಿಸಿಕೊಂಡಿದೆ. ಲಂಡನ್ ಮೂಲದ "ಎನ್ವಿರನ್ ಮೆಂಟಲ್ ಇನ್ ವೆಸ್ಟಮೆಂಟ್ ಆರ್ಗನೈಸೇಷನ್ (Environmental Investment Organnisation)" ಪರಿಸರ ರಕ್ಷಣೆಗಾಗಿ ಕ್ರಮಕೈಗೊಂಡಿರುವ ವಿಶ್ವದ ಪ್ರಮುಖ 300 ಸಂಸ್ಥೆಗಳ ಪಟ್ಟಿಯನ್ನು ಹೊರತಂದಿದ್ದು, ಇನ್ಫೋಸಿಸ್ ಟಾಪ್ 5 ರಲ್ಲಿ ಸ್ಥಾನಗಳಿಸುವಲ್ಲಿ ಯಶಸ್ವಿಯಾಗಿದೆ. "ಹಸಿರು ಮನೆ ಅನಿಲ" ನಿರ್ವಹಣೆಗೆ ಇನ್ಫೋಸಿಸ್ ಸಂಸ್ಥೆ "ಪರಿಸರ ಸ್ನೇಹಿ ತಂತ್ರಜ್ಞಾನ"ವನ್ನು ಅಳವಡಿಸಿಕೊಂಡಿರುವುದೇ ಈ ಸಾಧನೆಗೆ ಪ್ರಮುಖ ಕಾರಣ.

- ಇನ್ಫೋಸಿಸ್ ಕಂಪನಿಯ ಕಟ್ಟಡಗಳಲ್ಲಿ "ರೇಡಿಯಂಟ್ ಕೂಲಿಂಗ್" ಎಂಬ ನೂತನ ತಂತ್ರಜ್ಞಾನದ ಹವಾ ನಿಯಂತ್ರಕಗಳನ್ನು ಅಳವಡಿಸಿಲಾಗಿದೆ. ಸಾಮಾನ್ಯ ತಂತ್ರಜ್ಞಾನಕ್ಕಿಂತ ಇದು ಕಡಿಮೆ ವಿದ್ಯುತ್ ಶಕ್ತಿಯನ್ನು ಬಳಸಿಕೊಳ್ಳುತ್ತದೆ. ಇಂಗಾಲದ ಪ್ರಮಾಣ ಕಡಿತಗೊಳಿಸಲು ಈ ಹೊಸ ವಿಧಾನ ಅತ್ಯಂತ ಪ್ರಯೋಜನಕಾರಿಯಾಗಿದೆ.
- ರಾಜಸ್ತಾನದ ಜೈಪುರನಲ್ಲಿರುವ ಇನ್ಫೋಸಿಸ್ ಕ್ಯಾಂಪಸ್ ನಲ್ಲಿ 250 ಕಿಲೊ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಘಟಕ ಮತ್ತು ಕೇರಳದ ತಿರುವನಂತಪುರಂ ನಲ್ಲಿ 125 ಕಿಲೋ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಘಟಕ ಸ್ಥಾಪಿಸಲಾಗಿದೆ.
- ಸಿಬ್ಬಂದಿ ತಮ್ಮ ಕಂಪ್ಯೂಟರ್ ಗಳನ್ನು ಸ್ವಿಚ್ ಆಫ್ ಮಾಡದೇ ತೆರಳಿದರೆ ಅವರ ಮೊಬೈಲ್ ಮೂಲಕ ದೂರದಿಂದಲೇ ಕಂಪ್ಯೂಟರ್ ಗಳನ್ನು ಆಫ್ ಮಾಡುವಂತ ನಾವೀನ್ಯ ವ್ಯವಸ್ಥೆಯನ್ನು ಸಂಸ್ಥೆ ಅಳವಡಿಸಕೊಂಡಿದೆ. ಇದರಿಂದ ಹಸಿರು ಮನೆ ಅನಿಲ ಹೊರಸೂಸುವಿಕೆ ನಿಯಂತ್ರಣಕ್ಕೆ ಭಾರಿ ಅನುಕೂಲವಾಗಿದೆ.
- ಅಷ್ಟೇ ಅಲ್ಲ ಮೈಸೂರಿನಲ್ಲಿ ಇನ್ಫೋಸಿಸ್ ಕಟ್ಟಡದಲ್ಲಿ "ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಅಳವಡಿಸಿದ್ದು, ಇದರಿಂದ ಕಂಪನಿಯು 300 ಮಿಲಿಯನ್ ಲೀಟರ್ ನೀರನ್ನು ಉಳಿಸಿದೆ.
- ಇನ್ಫೋಸಿಸ್ ಸಂಸ್ಥೆ ಪರಿಸರ ಮಾಲಿನ್ಯ ತಡೆಯುವ ಕ್ರಮಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಯೋಜನೆಗಳನ್ನು ರೂಪಿಸಿದೆ ಮತ್ತು ಪರಿಸರ ಸಂರಕ್ಷಣೆಗೆ ಬದ್ದವಾಗಿದೇ ಎಂದು ಸಿಇಓ ಗೋಪಾಲ ಕೃಷ್ಣನ್ ಹೇಳಿದ್ದಾರೆ.

**"ನಿಯೊನಿಕೊಟಿನ್ಯೆಡ್" ಕ್ರಿಮಿನಾಶಕ ಬಳಕೆಗೆ ನಿಷೇಧ ಹೇರಿದ ಯುರೋಪಿಯನ್ ಯೂನಿಯನ್**

ವಿಶ್ವದಾದ್ಯಂತ ವ್ಯಾಪಕವಾಗಿ ಬಳಕೆಯಾಗುತ್ತಿರುವ "ನಿಯೊನಿಕೊಟಿನ್ಯೆಡ್ (Neonicotinoids)" ಕ್ರಿಮಿನಾಶಕ ಬಳಕೆಗೆ ಯುರೋಪಿಯನ್ ಯೂನಿಯನ್ ಎರಡು ವರ್ಷಗಳ ಕಾಲ ನಿಷೇಧ ಹೇರಿದೆ. ಇತ್ತೀಚೆಗೆ ಬ್ರಸೆಲ್ ನಲ್ಲಿ ನಡೆದ ಚರ್ಚೆಯಲ್ಲಿ ಈ ಮಹತ್ವದ ನಿರ್ಣಯ ತೆಗೆದುಕೊಳ್ಳಲಾಗಿದೆ. ಜೇನು ಹುಳು ಮತ್ತು ಅವುಗಳ ಸಂತತಿ ಮೇಲೆ ಈ ಕ್ರಿಮಿನಾಶಕ ಹಾನಿಕಾರಕ ಪರಿಣಾಮ ಬೀರುತ್ತಿರುವುದೇ ಈ ನಿರ್ಣಯಕ್ಕೆ ಮುಖ್ಯ ಕಾರಣ.

ಏನಿದು "ನಿಯೊನಿಕೊಟಿನ್ಯೆಡ್"?

- "ನಿಯೊನಿಕೊಟಿನ್ಯೆಡ್" ಒಂದು ತರನಾದ ಕ್ರಿಮಿನಾಶಕ. ಭಿತ್ತನೆ ಸಮಯದಲ್ಲಿ ಬೀಜಗಳನ್ನು ಕೀಟಗಳಿಂದ ರಕ್ಷಿಸಲು ಇದರೊಂದಿಗೆ ಮಿಶ್ರಣ ಮಾಡಿ ಬಿತ್ತಲಾಗುವುದು. ಈ ಕ್ರಿಮಿನಾಶಕವು ಕೀಟಗಳ ನರವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತದೆಯಾದರು, ಮಾನವರು ಮತ್ತು ಇತರೆ ಸಸ್ತನಿಗಳಿಗೆ ಇದು ನಿರುಪದ್ರವ ಎಂದು ಭಾವಿಸಲಾಗಿದೆ.
- "ನಿಯೊನಿಕೊಟಿನ್ಯೆಡ್" ನೀರಿನಲ್ಲಿ ಕರಗಬಲ್ಲದಾಗಿದ್ದು, ಮಣ್ಣು ಇದನ್ನು ಸುಲಭವಾಗಿ ಹೀರಿಕೊಳ್ಳುತ್ತದೆ. ಹೀಗೆ ಮಣ್ಣಿನ ಮೂಲಕ ಸಸ್ಯಗಳಲ್ಲಿ ಈ ವಿಷಕಾರಿ ಅಂಶ ಶೇಖರಣೆಯಾಗುತ್ತದೆ. ಜೇನು ಹುಳು ಮತ್ತಿತ್ತರ ಪರಾಗಸ್ಪರ್ಶ ಕೀಟಗಳು ಇಂತಹ ಸಸ್ಯಗಳಿಂದ ಮಕರಂದ ಹೀರಿಕೊಂಡಾಗ ಅವುಗಳ ಪ್ರಾಣಕ್ಕೆ ಈ ಕ್ರಿಮಿನಾಶಕ ಮಾರಕವಾಗಿ ಪರಿಣಮಿಸುತ್ತದೆ.

ನಿಷೇಧ ಏಕೆ?

- ಪರಾಗಸ್ಪರ್ಶ ಕ್ರಿಯೆಯಲ್ಲಿ ಜೇನುಹುಳುಗಳ ಪಾತ್ರ ಅಪಾರ. ಶೇ.90 ರಷ್ಟು ಪರಾಗಸ್ಪರ್ಶ ಕ್ರಿಯೆಗಳು ಜೇನು ನೊಣದ ಮೂಲಕವೇ ಆಗುತ್ತವೆ. ಇಂದೊಮ್ಮೆ ಜೇನು ನೊಣಗಳೇ ಇಲ್ಲವಾದರೇ ಆಹಾರ ಉತ್ಪಾದನೆ ಮೇಲೆ ವ್ಯತಿರಿಕ್ತ

ಪರಿಣಾಮ ಬೀರಲಿದೆ. ಜೇನು ನೊಣ ಮತ್ತು ಅವುಗಳ ಸಂತತಿ ರಕ್ಷಣೆಗೋಸ್ಕರ ಈ ಕ್ರಿಮಿನಾಶಕದ ಮೇಲೆ ನಿಷೇಧ ಹೇರಲಾಗಿದೆ.

- ನಿಯೊಕೊಟಿನೈಡ್ ನ ಮೂರು ಉತ್ಪನ್ನಗಳಾದ "ಕ್ಲೊಥಿಯಾನಿಡಿನ್", "ಇಮಿಡಕ್ಲೊಪಿರಿಡ್", ಮತ್ತು "ಥಿಯಾಮಿಥೆಕ್ಸನ್" ಗಳ ಬಳಕೆಗೆ ನಿರ್ಬಂಧ ವಿಧಿಸಲಾಗಿದೆ.

**ಸುಲಭವಾಗಿ ನೀರನ್ನು ಶುದ್ಧಿಕರೀಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ವಿಜ್ಞಾನಿಗಳು**

ಮದ್ರಾಸ್ ಐಐಟಿಯ ವಿಜ್ಞಾನಿಗಳು ಸರಳ ಮತ್ತು ಅತಿ ಕಡಿಮೆ ದರದಲ್ಲಿ ನೀರನ್ನು ಶುದ್ಧಿಕರೀಸುವ ವಿಧಾನವೊಂದನ್ನು ಅನ್ವೇಷಿಸಿದ್ದಾರೆ. ಈ ವಿಧಾನದಿಂದ 10 ಲೀಟರ್ ನೀರನ್ನು ಸ್ಥಳದಲ್ಲಿಯೇ ಶುದ್ಧಿಕರೀಸುವ ಬಹುದು. ಬ್ಯಾಕ್ಟೀರಿಯಾ ಮತ್ತು ವೈರಸ್ ನಿಂದ ಮುಕ್ತವಾಗಿರುವ ಈ ನೀರಿನ ಶುದ್ದೀಕರಣಕ್ಕೆ ತಗಲುವ ವೆಚ್ಚ ಕೇವಲ 10-12 ರೂಪಾಯಿ.

**ಯಾವ ವಿಧಾನ?**

- ನೀರಿನ ಶುದ್ದೀಕರಣಕ್ಕೆ ವಿಜ್ಞಾನಿಗಳ ತಂಡ "ಬೆಳ್ಳಿಯ ನ್ಯಾನೋಕಣಗಳನ್ನು (Silver Nanoparticle)"ನ್ನು ಬಳಸಿಕೊಂಡಿದೆ. ಈ ವಿಧಾನಕ್ಕೆ ಯಾವುದೇ ವಿದ್ಯುತ್ ನ ಅವಶ್ಯಕತೆ ಇಲ್ಲ. ಮತ್ತು 5 ರಿಂದ 35 ಡಿಗ್ರಿ ತಾಪಮಾನದಲ್ಲಿ ಇದು ಸುಲಭವಾಗಿ ಕೆಲಸ ನಿರ್ವಹಿಸಲಿದೆ.
- ಶುದ್ದೀಕರಿಸಬೇಕಾದ ನೀರಿನೊಳಗೆ ಸುಮಾರು 50 ((ppb) Parts Per Billion) ಬೆಳ್ಳಿ ನ್ಯಾನೊಕಣಗಳನ್ನು ಸಿಂಪಡಿಸಲಾಗಿದೆ. ಈ ಕಣಗಳನ್ನು ಸೂಕ್ಷ್ಮಜೀವಿಗಳ ಜೀವಕೋಶಗಳ ಹಾನಿಕಾರಕ ಪರಿಣಾಮ ಬೀರುವುತ್ತವೆ.
- ಇದೊಂದು ಪರಿಸರ ಸ್ನೇಹಿ ವಿಧಾನವಾಗಿದ್ದು, ಕಡಿಮೆ ದರದಲ್ಲಿ ಶುದ್ಧ ನೀರನ್ನು ಉತ್ಪಾದಿಸಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

**ಮೇ.7: ವಿಶ್ವ ಅಸ್ತಮ ದಿನ**

ಪ್ರತಿ ವರ್ಷ ಮೇ ತಿಂಗಳ ಮೊದಲ ಮಂಗಳವಾರದಂದು ವಿಶ್ವ ಅಸ್ತಮ ದಿನವನ್ನು ಆಚರಿಸಲಾಗುತ್ತದೆ. ಈ ಬಾರಿ ಮೇ.7 ರಂದು ವಿಶ್ವ ಅಸ್ತಮ ದಿನವನ್ನು ವಿಶ್ವದಾದ್ಯಂತ ಆಚರಿಸಲಾಯಿತು. ಈ ದಿನದಂದು ಅಸ್ತಮ ಕಾಯಿಲೆ ಕುರಿತಾದ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಜಗತ್ತಿನಾದ್ಯಂತ ಹಮ್ಮಿಕೊಳ್ಳಲಾಗುತ್ತದೆ.

- 2013 ನೇ ವರ್ಷದ ವಿಶ್ವ ಅಸ್ತಮ ದಿನದ ಥೀಮ್: "You Can Control Your Asthma"(ನಿಮ್ಮ ಅಸ್ತಮವನ್ನು ಹತೋಟಿಯಲ್ಲಿಡಬಹುದು)".
- "ವಿಶ್ವ ಅಸ್ತಮ ದಿನ"ವನ್ನು "GIMA (Global Initiative for Asthma)"ದ ಪ್ರಾಯೋಜಕತ್ವದಲ್ಲಿ ಆಯೋಜಿಸಲಾಗುತ್ತಿದೆ. 1998 ರಲ್ಲಿ ಮೊದಲ ಬಾರಿಗೆ "ವಿಶ್ವ ಅಸ್ತಮ ದಿನ"ವನ್ನು ಆಚರಿಸಲಾಯಿತು. ಅಂದು 35 ದೇಶಗಳು ಭಾಗಿಯಾಗಿದ್ದವು. ಸ್ಪೇನ್ ನ ಬಾರ್ಸಿಲೋನಾದಲ್ಲಿ ನಡೆದ ವಿಶ್ವದ ಮೊದಲ ಅಸ್ತಮ ಸಭೆಯ ಸ್ಮರಣರ್ಥ ಈ ದಿನವನ್ನು ಅಸ್ತಮ ದಿನವನ್ನಾಗಿ ಆಚರಿಸಲಾಗುವುದು.

**ಅಸ್ತಮ ಕಾಯಿಲೆ**:

- ಅಸ್ತಮಾ ಒಂದು ಉಸಿರಾಟ ತೊಂದರೆ ಸಂಬಂಧಿ ಕಾಯಿಲೆಯಾಗಿದೆ. ಉಸಿರಾಟದಲ್ಲಿ ತೊಂದರೆ, ಉರಿಯೂತ, ಎದೆ ಬಿಗಿತ, ಉಸಿರಾಟದ ವೇಳೆ ಶಿಳ್ಳೆಯಂತಹ ಶಬ್ದ, ಕೆಮ್ಮು ಹಾಗೂ ಉಬ್ಬಸ ಈ ಕಾಯಿಲೆಯ ಪ್ರಮುಖ ಲಕ್ಷಣಗಳು.
- ಅಸ್ತಮಾ ಕಾಯಿಲೆ ಅನುವಂಶೀಕವಾಗಿ ಮತ್ತು ವಾತಾವರಣದಲ್ಲಿರುವ ಅಂಶಗಳಿಂದಾಗಿಯೂ ಸಂಭವಿಸಬಹುದಾದ ಕಾಯಿಲೆ. ವಾತಾವರಣದಲ್ಲಿರುವ ಧೂಳು, ಅಲರ್ಜಿ ಕಾರಕ ಅಂಶಗಳು ಮತ್ತು ರಾಸಾಯನಿಕ ವಸ್ತುಗಳು ಅಸ್ತಮ ಕಾಯಿಲೆಯನ್ನು ಪ್ರೇರೆಪಿಸುತ್ತವೆ.
- ವಿಶ್ವ ವ್ಯಾಪ್ತಿ ಸುಮಾರು 300 ಮಿಲಿಯನ್ ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಪ್ರತಿ ವರ್ಷ 2.50 ಲಕ್ಷ ಸಾವಿನ ಪ್ರಕರಣಗಳು ಅಸ್ತಮದಿಂದ ಸಂಭವಿಸುತ್ತಿವೆ

**"2013-ಜಲ ಸಂರಕ್ಷಣಾ ವರ್ಷ(Water Conservation Year)": ಕೇಂದ್ರ ಸರ್ಕಾರ ಘೋಷಣೆ**

ಭಾರತದಲ್ಲಿ ನೀರಿನ ತಲಾ ಲಭ್ಯತೆ ಪ್ರಮಾಣ ತೀವ್ರ ಗತಿಯಲ್ಲಿ ಕ್ಷೀಣಿಸುತ್ತಿದ್ದು, ಸಕಲ ಜೀವಿಗಳ ಉಳಿವಿಗೆ ಅತಿ ಅಮೂಲ್ಯವಾದ ಸಂಪನ್ಮೂಲವೆನಿಸಿರುವ ನೀರಿನ ಬಗ್ಗೆ ಜನ ಸಮೂಹದಲ್ಲಿ ಜಾಗೃತಿ ಮೂಡಿಸಲು 2013 ನೇ ವರ್ಷವನ್ನು "ಜಲ ಸಂರಕ್ಷಣಾ ವರ್ಷ" ವೆಂದು ಘೋಷಿಸುವಂತೆ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯ ಸಲ್ಲಿಸಿದ್ದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಚಿವ ಸಂಪುಟ ಅಂಗೀಕರಿಸಿದೆ. "ಜಲ ಸಂರಕ್ಷಣಾ ವರ್ಷ"ದ ಅನುಗುಣವಾಗಿ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯ ನೀರಿನ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಅದರಲ್ಲೂ ವಿಶೇಷವಾಗಿ ಮಕ್ಕಳಲ್ಲಿ ಅತಿ ಹೆಚ್ಚು ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಲಾಗಿದೆ.

**ಜಲ ಸಂರಕ್ಷಣಾ ವರ್ಷ-2013 ಉದ್ದೇಶ:**

- ಜಲ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರ ಈಗಾಗಲೇ ಜಾರಿಗೊಳಿಸಿರುವ "ರಾಷ್ಟ್ರೀಯ ಜಲ ನೀತಿ-2012 (National Water Policy-2012)" ಮತ್ತು "ಜಲ ಸಂರಕ್ಷಣಾ ಅಭಿಯಾನ (Water Conservation Mission)" ದಡಿ ಹೊಂದಿರುವ ಗುರಿಯನ್ನು ಸಾಧಿಸಲು ಕ್ರಮಕ್ಕೈಗೊಳ್ಳಲಾಗುವುದು.
- ಗಣನೀಯವಾಗಿ ಏರುತ್ತಿರುವ ಜನಸಂಖ್ಯೆಯಿಂದ ಭಾರತದಲ್ಲಿ "ನೀರಿನ ತಲಾ ಲಭ್ಯತೆ (Per capita Availabality)"ಯಲ್ಲಿ ಇಳಿಕೆಯಾಗುತ್ತಿದೆ. 2011 ರಲ್ಲಿ ಭಾರತದಲ್ಲಿ ತಲಾ ನೀರಿನ ಲಭ್ಯತೆ ಪ್ರಮಾಣ ವರ್ಷಕ್ಕೆ 1545 ಕ್ಯೂಬಿಕ್ ಮೀಟರ್ ನಷ್ಟಿದೆ. 2025 ರ ವೇಳಗೆ 1341 ಕ್ಯೂಬಿಕ್ ಮೀಟರ್ ನಷ್ಟು ಆಗಲಿದೆ ಎಂದು ಅಂದಾಜಿಸಲಾಗಿದೆ. ನೀರಿಗಾಗಿ ಹಾಹಕಾರ ಪಡುವ ದಿನಗಳೂ ಹತ್ತಿರದಲ್ಲಿವೆ ಆದ್ದರಿಂದ ನೀರಿನ ಸದ್ಬಳಕೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಬಹಳ ಮಹತ್ವವಾದದ್ದು.

**"ರಾಷ್ಟ್ರೀಯ ಜಲ ನೀತಿ-2012":**

- ಜೀವಿಗಳ ಉಗಮಕ್ಕೆ ಆಧಾರವಾಗಿರುವ ನೀರಿನ ಸಂರಕ್ಷಣೆ ಮತ್ತು ಸದ್ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ "ರಾಷ್ಟ್ರೀಯ ಜಲ ಸಂಪನ್ಮೂಲ ಮಂಡಳಿ" ರಾಷ್ಟ್ರೀಯ ಜಲ ನೀತಿಯನ್ನು 2012 ರಲ್ಲಿ ಜಾರಿಗೊಳಿಸಿತು. ಈ ಹಿಂದೆ 1987 ಮತ್ತು 2002 ರಲ್ಲಿ ಸಹ "ರಾಷ್ಟ್ರೀಯ ಜಲ ನೀತಿ"ಯನ್ನು ಜಾರಿಗೊಳಿಸಲಾಗಿತ್ತಾದರೂ, ಹೊಸ ನೀತಿಯಲ್ಲಿ ವಿಸ್ತಾರವಾದ ಉದ್ದೇಶಗಳನ್ನು ಹೊಂದಲಾಗಿದೆ.

**ರಾಷ್ಟ್ರೀಯ ಜಲ ನೀತಿ ಉದ್ದೇಶಗಳು**:

- ಪ್ರತಿಯೊಬ್ಬ ನಾಗರೀಕನಿಗೂ ಅಗತ್ಯವಿರುವ ಕನಿಷ್ಟ ಪ್ರಮಾಣದ ಕುಡಿಯಲು ಯೋಗ್ಯವಾದ ನೀರನ್ನು ಒದಗಿಸುವುದು.
- ಕೃಷಿ ವಿದ್ಯುತ್ ಬಳಕೆದಾರರಿಗೆ ಸಬ್ಸಿಡಿ ಮೊಟಕುಗೊಳಿಸುವುದು.
- ಜಲ ನಿಯಂತ್ರಣ ಪ್ರಾಧಿಕಾರಗಳ ಸ್ಥಾಪನೆ.
- ನಗರ ಮತ್ತು ಗ್ರಾಮೀಣ ಭಾಗಗಳ ನಡುವೆ ನೀರು ಹಂಚಿಕೆಯಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು.

**"ರಾಷ್ಟ್ರೀಯ ಜಲ ಅಭಿಯಾನ (National Water Mission)":**

ಭಾರತ ಸರ್ಕಾರ ಜಾರಿಗೆ ತಂದಿರುವ "ಹವಾಮಾನ ಬದಲಾವಣೆ ಕುರಿತಾದ ರಾಷ್ಟ್ರೀಯ ಕ್ರೀಯಾ ಯೋಜನೆ (National Action Plan on Climate Change)" ನ ಎಂಟು ಅಭಿಯಾನಗಳಲ್ಲಿ ರಾಷ್ಟ್ರೀಯ ಜಲ ಅಭಿಯಾನ ಸಹ ಒಂದು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಈ ಅಭಿಯಾನದ ರೂಪುರೇಷೆಗಳನ್ನು ಸಿದ್ದಪಡಿಸಲಾಗಿದೆ. "ಸಮಗ್ರ ಜಲ ಸಂಪನ್ಮೂಲ ನಿರ್ವಹಣೆ ಮೂಲಕ" ನೀರಿನ ಸಂರಕ್ಷಣೆ ಮತ್ತು ನೀರಿನ ಮಿತ ಬಳಕೆಗೆ ಉತ್ತೇಜಿಸುವುದು ಇದರ ಪ್ರಮುಖ ಉದ್ದೇಶ.

**ಅಪಾಯಕಾರಿ ಮಟ್ಟ ತಲುಪಿರುವ "ಇಂಗಾಲ ಡೈ ಆಕ್ಸೈಡ್" ಪ್ರಮಾಣ**

ಮಿತಿಮೀರಿದ ಮಾನವನ ಚುಟವಟಿಕೆಯಿಂದಾಗಿ ವಾತಾವರಣದಲ್ಲಿ ಹಸಿರು ಮನೆ ಪರಿಣಾಮಕ್ಕೆ ಕಾರಣವಾಗುವ "ಇಂಗಾಲ ಡೈ ಆಕ್ಸೈಡ್" ನ ಪ್ರಮಾಣ ಅಪಾಯಕಾರಿ ಮಟ್ಟ ತಲುಪಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. 3 ರಿಂದ 5 ಮಿಲಿಯನ್ ವರ್ಷಗಳ ಅವಧಿಯಲ್ಲೇ ಇಷ್ಟೊಂದು ಪ್ರಮಾಣದ "ಇಂಗಾಲ ಡೈ ಆಕ್ಸೈಡ್" ವಾತಾವರಣದಲ್ಲಿ ಕಂಡುಬಂದಿಲ್ಲ ಎಂದು ಹೇಳಲಾಗಿದೆ.

- "ಹವಾಯಿ"ಯ ಮೌನ ಲೊವ ಪರ್ವತದಲ್ಲಿರುವ "ಇಂಗಾಲ ಡೈ ಆಕ್ಸೈಡ್" ನಿಗಾ ಕೇಂದ್ರದಲ್ಲಿ ಇದೇ ಮೊದಲ ಬಾರಿಗೆ 400 (Parts Per Million (PPM)) ನಷ್ಟು "ಇಂಗಾಲ ಡೈ ಆಕ್ಸೈಡ್" ಪ್ರಮಾಣ ದಾಖಲಾಗುವ ಮೂಲಕ ಎಚ್ಚರಿಕೆಯ ಸಂದೇಶ ರವಾನಿಸಿದೆ. 1958 ರಲ್ಲಿ ಈ ನಿಗಾ ಕೇಂದ್ರ ಸ್ಥಾಪನೆಯಾದಾಗ 316 (PPM) ನಷ್ಟು "ಇಂಗಾಲ ಡೈ ಆಕ್ಸೈಡ್" ದಾಖಲಾಗಿತ್ತು.
- ವಾಹನಗಳಿಂದ ಹೊರಸೂಸುವ ಹೊಗೆ, ಕೈಗಾರಿಕೆಗಳಿಂದ ಹೊರ ಬರುವ ಹೊಗೆ ಮತ್ತು ವಿದ್ಯುತ್ ಘಟಕಗಳಲ್ಲಿ ಕಲ್ಲಿದಲ್ಲಿನಂತಹ ಪಳೆಯುಳಿಕೆ ಇಂಧನಗಳನ್ನು ಉರಿಸುವುದರಿಂದ "ಇಂಗಾಲ ಡೈ ಆಕ್ಸೈಡ್" ಪ್ರಮಾಣ ಹೆಚ್ಚಾಗುತ್ತಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.
- "ಇಂಗಾಲ ಡೈ ಆಕ್ಸೈಡ್" ಹಸಿರು ಮನೆ ಪರಿಣಾಮಕ್ಕೆ ಕಾರಣವಾಗುವ ಅನಿಲ. ವಾತಾವರಣದಲ್ಲಿ ತಾಪಮಾನ ಅಧಿಕವಾಗಲು "ಇಂಗಾಲ ಡೈ ಆಕ್ಸೈಡ್" ಪ್ರಮುಖ ಪಾತ್ರವಹಿಸುತ್ತದೆ.

**"ಆರ್ಕ್ಟಿಕ್ ಕೌನ್ಸಿಲ್ (Arctic Council)" ನಲ್ಲಿ ವೀಕ್ಷಕ ರಾಷ್ಟ್ರ ಸ್ಥಾನ ಪಡೆದ ಭಾರತ**

ಆರ್ಕ್ಟಿಕ್ ಸಂಬಂಧಿತ ವಿಷಯಗಳ ಬಗ್ಗೆ ಚರ್ಚಿಸಲು ಸ್ಥಾಪನೆಗೊಂಡಿರುವ ಅಂತರಿಕಸರ್ಕಾರ ವೇದಿಕೆ "ಆರ್ಕ್ಟಿಕ್ ಕೌನ್ಸಿಲ್" ನಲ್ಲಿ ವೀಕ್ಷಕ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಭಾರತ ಯಶಸ್ವಿಯಾಗಿದೆ. ಸ್ವೀಡನ್ ನ "ಕಿರುನ" ದಲ್ಲಿ ನಡೆದ "ಆರ್ಕ್ಟಿಕ್ ಕೌನ್ಸಿಲ್"ನ ದ್ವೈವಾರ್ಷಿಕ ಸಭೆಯಲ್ಲಿ ಈ ಮಹತ್ವದ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಭಾರತ ಅಲ್ಲದೇ ಚೀನಾ, ರಿಪಬ್ಲಿಕ್ ಆಫ್ ಕೊರಿಯಾ, ಜಪಾನ್, ಸಿಂಗಾಪುರ ರಾಷ್ಟ್ರಗಳು ಸಹ ವೀಕ್ಷಕ ಸ್ಥಾನವನ್ನು ಪಡೆದುಕೊಂಡಿವೆ.

**"ಆರ್ಕ್ಟಿಕ್ ಕೌನ್ಸಿಲ್":**

- ಆರ್ಕ್ಟಿಕ್ ನ ಕೌನ್ಸಿಲ್ ಒಂದು ಉನ್ನತ ಮಟ್ಟದ ಅಂತರಿಕ ಸರ್ಕಾರಗಳ ವೇದಿಕೆಯಾಗಿದ್ದು, ಆರ್ಕ್ಟಿಕ್ ನ ಸ್ಥಳೀಯ ಸರ್ಕಾರ ಮತ್ತು ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗೆ ಸ್ಪಂದಿಸುವ ಮೂಲಕ ಪರಿಹಾರ ಕಂಡುಕೊಳ್ಳುವ ಗುರಿಯನ್ನು ಹೊಂದಿದೆ.
- 1991 ರಲ್ಲಿ ಆರ್ಕ್ಟಿಕ್ ನ ಎಂಟು ರಾಷ್ಟ್ರಗಳು "ಆರ್ಕ್ಟಿಕ್ ಪರಿಸರ ಸಂರಕ್ಷಣಾ ತಂತ್ರ (Arctic Environment Protection Strategy)" ಒಪ್ಪಂದಕ್ಕೆ ಸಹಿ ಹಾಕುವ ಮೂಲಕ "ಆರ್ಕ್ಟಿಕ್ ಕೌನ್ಸಿಲ್" ನ ಕಲ್ಪನೆ ಮೊಳಕೆ ಹೊಡೆಯಿತು. ತದ ನಂತರ 1996 ರಲ್ಲಿ "ಒಟ್ಟಾವ ಘೋಷಣೆ" ಮೂಲಕ ಆರ್ಕ್ಟಿಕ್ ಕೌನ್ಸಿಲ್ ನ್ನು ಸ್ಥಾಪನೆ ಮಾಡಲಾಯಿತು.
- ಆರ್ಕ್ಟಿಕ್ ಸ್ಥಳೀಯ ಸಮುದಾಯದ ಮತ್ತು ಅಲ್ಲಿನ ನಿವಾಸಿಗಳ ಸಹಕಾರ, ಹೊಂದಾಣಿಕೆ ಮತ್ತು ಸಹಾಯದೊಂದಿಗೆ ಸುಸ್ಥಿರ ಅಭಿವೃದ್ದಿ, ಪರಿಸರ ಸಂರಕ್ಷಣೆಯಲ್ಲಿ ತೊಡಗುವ ಮತ್ತು ಪರಸ್ಪರ ಉತ್ತೇಜಿಸುವ ಆಶಾಯದೊಂದಿಗೆ ಈ ಕೌನ್ಸಿಲ್ ನ್ನು ಸ್ಥಾಪನೆಮಾಡಲಾಗಿದೆ.
- ಆರ್ಕ್ಟಿಕ್ ನಲ್ಲಿ ಹವಾಮಾನ ಬದಲಾವಣೆ, ತೈಲ ಮತ್ತು ಅನಿಲ ನಿಕ್ಷೇಪ ಮತ್ತು ಹಡಗು ಸಂಚಾರದ ಬಗ್ಗೆ ಈ ಕೌನ್ಸಿಲ್ ಅಧ್ಯಯನವನ್ನು ನಡೆಸುತ್ತದೆ.

**ಆರ್ಕ್ಟಿಕ್ ಕೌನ್ಸಿಲ್ ಸದಸ್ಯ ರಾಷ್ಟ್ರಗಳು:**

- ಆರ್ಕ್ಟಿಕ್ ನೊಂದಿಗೆ ಭೂಭಾಗವನ್ನು ಹೊಂದಿಕೊಂಡಿರುವ ರಾಷ್ಟ್ರಗಳು ಮಾತ್ರ ಈ ಕೌನ್ಸಿಲ್ ನ ಸದಸ್ಯ ರಾಷ್ಟ್ರಗಳು ಆಗಿವೆ. ಪ್ರಸ್ತುತ ಎಂಟು ರಾಷ್ಟ್ರಗಳು ಸದಸ್ಯತ್ವವನ್ನು ಹೊಂದಿವೆ. ಅವುಗಳೆಂದರೆ ಕೆನಡಾ, ಡೆನ್ಮಾರ್ಕ್, ಅಮೆರಿಕಾ, ಫಿನ್ ಲ್ಯಾಂಡ್, ಐಸ್ ಲ್ಯಾಂಡ್, ನಾರ್ವೆ, ರಷ್ಯಾ ಮತ್ತು ಸ್ವೀಡನ್.

**ವೀಕ್ಷಕ ರಾಷ್ಟ್ರಗಳು:**

- ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಸದಸ್ಯ ರಾಷ್ಟ್ರಗಳ ಸಚಿವರ ಸಭೆಯಲ್ಲಿ ಆರ್ಕ್ಟಿಕ್ ಹೊರಗಿನ ರಾಷ್ಟ್ರಗಳಿಗೆ ವೀಕ್ಷಕ ಸ್ಥಾನವನ್ನು ನೀಡಲಾಗುತ್ತದೆ. ಸದ್ಯ ಭಾರತ ಸೇರಿದಂತೆ ಒಟ್ಟು 12 ರಾಷ್ಟ್ರಗಳು ಖಾಯಂ ವೀಕ್ಷಕ ರಾಷ್ಟ್ರಗಳಾಗಿ ಸ್ಥಾನವನ್ನು ಪಡೆದಿವೆ.
- ಚೀನಾ, ಭಾರತ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ದಕ್ಷಿಣ ಕೊರಿಯಾ, ನೆದರಲ್ಯಾಂಡ್, ಪೋಲ್ಯಾಂಡ್, ಸಿಂಗಾಪುರ, ಸ್ಪೇನ್ ಮತ್ತು ಯು.ಕೆ ಆರ್ಕ್ಟಿಕ್ ಕೌನ್ಸಿಲ್ ನಲ್ಲಿ ವೀಕ್ಷಕ ಸ್ಥಾನ ಪಡೆದಿರುವ ರಾಷ್ಟ್ರಗಳು.

**ಕೌನ್ಸಿಲ್ ನ ಅಧ್ಯಕ್ಷ ಸ್ಥಾನ:**

- ಆರ್ಕ್ಟಿಕ್ ಕೌನ್ಸಿಲ್ ನ ಅಧ್ಯಕ್ಷ ಸ್ಥಾನ ಪ್ರತಿ ಎರಡು ವರ್ಷಕ್ಕೊಮ್ಮೆ ಬದಲಾವಣೆಗೊಳ್ಳುತ್ತದೆ. ಪ್ರಸ್ತುತ "ಕೆನಡಾ" ರಾಷ್ಟ್ರ ಕೌನ್ಸಿಲ್ ನ ಅಧ್ಯಕ್ಷತೆಯನ್ನು ವಹಿಸಿಕೊಂಡಿದೆ. ಕೆನಡಾ 2013 ರಿಂದ 2015 ರ ವರೆಗೆ ಅಧ್ಯಕ್ಷ ಸ್ಥಾನದಲ್ಲಿರಲಿದೆ. 2015 ರಿಂದ 2017 ರ ವರೆಗೆ ಅಮೆರಿಕಾ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲಿದೆ.

**ಭಾರತಕ್ಕೆ ಉಪಯೋಗವೇನು?**

- ಆರ್ಕ್ಟಿಕ್ ನ ವೀಕ್ಷಕ ಸ್ಥಾನ ಪಡೆಯುವ ರಾಷ್ಟ್ರಗಳು ಆರ್ಕ್ಟಿಕ್ ನಲ್ಲಿರುವ ತೈಲ ಮತ್ತು ಅನಿಲ ಸಂಪನ್ಮೂಲದ ಪರಿಶೋಧನೆಯಲ್ಲಿ ಭಾಗವಹಿಸಬಹುದು.
- ಆರ್ಕ್ಟಿಕ್ ಸದಸ್ಯ ರಾಷ್ಟ್ರಗಳು ಆಯೋಜಿಸುವ ಸಭೆಯಲ್ಲಿ ಪಾಲ್ಗೊಳ್ಳುವ ಅಧಿಕಾರವನ್ನು ವೀಕ್ಷಕ ರಾಷ್ಟ್ರಗಳು ಹೊಂದಿರುತ್ತವೆ. ಈ ಮೂಲಕ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯದಲ್ಲೂ ಪ್ರಮುಖ ಪಾತ್ರವಹಿಸಲಿವೆ.
- ಆರ್ಕ್ಟಿಕ್ ನಲ್ಲಿ ಪರಿಸರ ಸಂರಕ್ಷಣೆ ಸೇರಿದಂತೆ ಇತರೆ ಪ್ರಮುಖ ಅಧ್ಯಯನಗಳಲ್ಲಿ ಸಂಶೋಧನೆ ನಡೆಸಲು ವೀಕ್ಷಕ ರಾಷ್ಟ್ರಗಳು ಅರ್ಹತೆ ಪಡೆಯಲಿವೆ
- ಆರ್ಕ್ಟಿಕ್ ಅಪಾರ ತೈಲ ಮತ್ತು ಅನಿಲ ಸಂಪತ್ತಿನ್ನು ಹೊಂದಿರುವ ಪ್ರದೇಶ. ಅಂದಾಜಿನ ಪ್ರಕಾರ ಜಗತ್ತಿನ ಶೇ.30 ರಷ್ಟು ತೈಲ ಸಂಪನ್ಮೂಲವನ್ನು ಆರ್ಕ್ಟಿಕ್ ಹೊಂದಿದೆ. ಆರ್ಕ್ಟಿಕ್ ಕೌನ್ಸಿಲ್ ನ ವೀಕ್ಷಕ ರಾಷ್ಟ್ರ ಸ್ಥಾನಮಾನ ಪಡೆದಿರುವ ಭಾರತ ಇಲ್ಲಿನ ತೈಲ ಮತ್ತು ಅನಿಲ ಸಂಪನ್ಮೂಲವನ್ನು ಬಳಸಿಕೊಳ್ಳಲು ಸಹಕಾರಿಯಾಗಲಿದೆ.

**200 ಜೈವಿಕ ಶೌಚಾಲಯಗಳನ್ನು ಅಳವಡಿಸಲಿರುವ ದಕ್ಷಿಣ ಕೇಂದ್ರ ರೈಲ್ವೆ**

ರೈಲ್ವೇ ಪ್ರಯಾಣಿಕರಿಗೆ ಒಂದು ಸಂತಸದ ಸುದ್ದಿ. ರೈಲು ಪ್ರಯಾಣಿಕರ ಹಿತದೃಷ್ಟಿ ಕಾಯುವ ಉದ್ದೇಶದಿಂದ ದಕ್ಷಿಣ ಕೇಂದ್ರ ರೈಲ್ವೆ 200 ಜೈವಿಕ ಶೌಚಾಲಯಗಳನ್ನು(Bio Toilet) ರೈಲಿನಲ್ಲಿ ಅಳವಡಿಸಲು ಯೋಜನೆ ರೂಪಿಸಿದೆ. ರೈಲ್ವೇ ಇಲಾಖೆಯ ಈ ಮಹತ್ವದ ನಿರ್ಣಯದಿಂದ ರೈಲು ಪ್ರಯಾಣಿಕರು ಶೌಚಾಲಯದ ದುರ್ವಾಸನೆಯಿಂದ ಅನುಭವಿಸುವ ಹಿಂಸೆಯಿಂದ ಮುಕ್ತರಾಗಲಿದ್ದಾರೆ.

- ಅಜಂತ ಎಕ್ಸ್ ಪ್ರೆಸ್, ಪದ್ಮವತಿ ಎಕ್ಸ್ ಪ್ರೆಸ್ ಮತ್ತು ಮುಂಬೈ-ಹೈದ್ರಾಬಾದ್ ನಡುವೆ ಸಂಚರಿಸುವ ಹುಸೇನ್ ಸಾಗರ್ ಎಕ್ಸ್ ಪ್ರೆಸ್ ರೈಲುಗಳಲ್ಲಿ ಈ ಜೈವಿಕ ಶೌಚಾಲಯಗಳನ್ನು ಅಳವಡಿಸಲಾಗುವುದು.
- ಇತ್ತೀಚೆಗಷ್ಟೇ ಕಾಚಿಗೋಡ-ಬೆಂಗಳೂರು ಎಕ್ಸ್ ಪ್ರೆಸ್ ಮತ್ತು ಹುಸೇನ್ ಸಾಗರ್ ಎಕ್ಸ್ ಪ್ರೆಸ್ ನಲ್ಲಿ 48 ಜೈವಿಕ ಶೌಚಾಲಯಗಳನ್ನು ಅಳವಡಿಸಲಾಗಿದ್ದು, ತೃಪ್ತಿಕರ ಫಲಿತಾಂಶ ಹೊರಬಂದಿರುವ ಕಾರಣ ಹೊಸದಾಗಿ 200 ಜೈವಿಕ ಶೌಚಾಲಯಗಳನ್ನು ವಿವಿಧ ರೈಲುಗಳಿಗೆ ವಿಸ್ತರಿಸಲಾಗುತ್ತಿದೆ.

**ಜೈವಿಕ ಶೌಚಾಲಯ**:

- ರೈಲುಗಳಲ್ಲಿ ಪ್ರಯಾಣಿಕರಿಗೆ ಶೌಚಾಲಯಗಳ ದುರ್ವಾಸನೆಯ ಕಿರಿಕಿರಿಯನ್ನು ತಪ್ಪಿಸಿ, ಆರೋಗ್ಯಕರ ಪರಿಸರ ಸೃಷ್ಟಿಸುವ ಉದ್ದೇಶದಿಂದ ಜನ್ಮತಾಳಿದ ಪರ್ಯಾಯ ವ್ಯವಸ್ಥೆಯೇ ಜೈವಿಕ ಶೌಚಾಲಯ.
- ಈ ನಾವೀನ್ಯ ಮಾದರಿಯ ಪರಿಸರ ಸ್ನೇಹಿ ಶೌಚಾಲಯಗಳನ್ನು "ರೈಲ್ವೇ ರಿಸರ್ಚ್ ಡಿಸೈನ್ ಮತ್ತು ಸ್ಟಾಂಡರ್ಡ್ ಆರ್ಗನೇಷನ್ (RDSO)" ಮತ್ತು "ಡಿಫೆನ್ಸ್ ರಿಸರ್ಚ್ ಡೆವಲಪ್ ಮೆಂಟ್ ಎಸ್ಟಬ್ಲಿಶ್ ಮೆಂಟ್ (DRDE)" ಜಂಟಿಯಾಗಿ ಅಭಿವೃದ್ಧಿ ಪಡಿಸವೆ. ಪ್ರತಿ ಶೌಚಾಲಯಗಳ ನಿರ್ಮಾಣಕ್ಕೆ ತಗಲುವ ವೆಚ್ಚ ಸುಮಾರು ರೂ 80,000.

- ದೇಶದಲ್ಲೆ ಮೊದಲ ಬಾರಿಗೆ ಜೈವಿಕ ಶೌಚಾಲಯಗಳನ್ನು "ಬುಂದೇಲ್ ಖಂಡ್ ಎಕ್ಸ್ ಪ್ರೆಸ್" ನಲ್ಲಿ ಅಳವಡಿಸಲಾಯಿತು.
- ಜೈವಿಕ ಶೌಚಾಲಯಗಳಲ್ಲಿ ಮಾನವನ ತ್ಯಾಜ್ಯವನ್ನು ಬ್ಯಾಕ್ಟಿರೀಯಾಗಳ ಸಹಾಯದ ಮೂಲಕ ನೀರು ಮತ್ತು ಹಾನಿಕಾರವಲ್ಲದ ಮತ್ತು ದುರ್ಗಂದ ಬೀರದ ಗಾಳಿಯನ್ನಾಗಿ ಪರಿವರ್ತಿಸಲಾಗುತ್ತದೆ. ಈ ಕ್ರಿಯೆಯಿಂದ ಪರಿವರ್ತನೆಗೊಳ್ಳುವ ನೀರನ್ನು "ಕ್ಲೋರಿನ್" ಹೊಂದಿರುವ ಟ್ಯಾಂಕ್ ಗಳಿಗೆ ಹಾಯಿಸಿ ಶುದ್ದಗೊಳಿಸಲಾಗುವುದು. ಜೈವಿಕ ಶೌಚಾಲಯ ಒಂದು ಪರಿಸರ ಸ್ನೇಹಿ ವಿಧಾನವಾಗಿರುವ ಕಾರಣ ಮುಂದಿನ ದಿನಗಳಲ್ಲಿ ಎಲ್ಲಾ ರೈಲುಗಳಲ್ಲೂ ಅಳವಡಿಸಲು ಚಿಂತಿಸಲಾಗಿದೆ.

**ಅಪಾಯದ ಅಂಚಿನಲ್ಲಿರುವ ಸಸ್ತನಿಗಳ ಪಟ್ಟಿಯಲ್ಲಿ ಏಷ್ಯಾದ ಆನೆ ಮತ್ತು ಇಂಡಿಯನ್ ಡಾಲ್ಫಿನ್ ಗಳು**

"ಝೂಲಾಜಿಕಲ್ ಸೊಸೈಟಿ ಆಫ್ ಲಂಡನ್" ಹೊರತಂದಿರುವ ಅಳಿವಿನ ಅಂಚಿನಲ್ಲಿರುವ 100 ಸಸ್ತನಿಗಳ ಪಟ್ಟಿಯಲ್ಲಿ ಏಷ್ಯಾದ ಆನೆಗಳು ಮತ್ತು ಇಂಡಿಯನ್ ಡಾಲ್ಫಿನ್ ಗಳನ್ನು ಸೇರಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಉಳಿವಿಗಾಗಿ ಹೋರಾಟ ನಡೆಸುತ್ತಿರುವ ಸಸ್ತನಿಗಳ ಪಟ್ಟಿಯನ್ನು ಇದೇ ಮೊದಲ ಬಾರಿಗೆ "ಝೂಲಾಜಿಕಲ್ ಸೊಸೈಟಿ ಆಫ್ ಲಂಡನ್" ಹೊರತಂದಿದೆ. ಅನೇಕ ಸಸ್ತನಿಗಳ ಬಗ್ಗೆ ಜನರಲ್ಲಿ ಅರಿವು ಇಲ್ಲದಿರುವ ಕಾರಣ ಅವುಗಳ ಸಂರಕ್ಷಣೆ ಬಗ್ಗೆ ನಿರ್ಲಕ್ಷೆ ತೋರಲಾಗಿದೆ. ಆದ್ದರಿಂದ ಈ ಸಸ್ತನಿಗಳು ಅಳಿವಿನ ಅಂಚಿಗೆ ತಲುಪಿವೆ ಎನ್ನಲಾಗಿದೆ.

- "ಝೂಲಾಜಿಕಲ್ ಸೊಸೈಟಿ ಆಫ್ ಲಂಡನ್" ಹೊರತಂದಿರುವ ಪಟ್ಟಿಯಲ್ಲಿ ಏಷ್ಯಾದ ಆನೆಗಳು 17 ನೇ ಸ್ಥಾನದಲ್ಲಿವೆ. ಅಂದರೆ ಈಗಾಗಲೇ ಸಂಖ್ಯೆ ಗಣನೀಯವಾಗಿ ಕ್ಷೀಣಿಸಿದೆ ಎಂಬ ಎಚ್ಚರಿಕೆಯ ಸಂದೇಶವನ್ನು ರವಾನಿಸಿದೆ. ಭಾರತ ಮತ್ತು ಮಯಾನ್ಮಾರ್ ನಲ್ಲಿ ಹೆಚ್ಚಾಗಿ ಕಂಡು ಬರುವ ಕಾಡಾನೆಗಳ ಸಂಖ್ಯೆಯಲ್ಲಿ ತೀವ್ರ ಇಳಿಕೆಯಾಗಿದೆ. ಅರಣ್ಯನಾಶ, ರೈತರ ಆಕ್ರೋಶ ಮತ್ತು ದಂತಚೋರರ ದಾಳಿಗೆ ಕಾಡಾನೆಗಳು ನಶಿಸುತ್ತಿರಲು ಪ್ರಮುಖ ಕಾರಣವಾಗಿದೆ.

ಇನ್ನು ಡಾಲ್ಫಿನ್ ಗಳ ವಿಚಾರದಲ್ಲೂ ಇದೇ ಪರಿಸ್ಥಿಯನ್ನು ಕಾಣಬಹುದಾಗಿದೆ. ಅಳಿವಿನ ಅಂಚಿನಲ್ಲಿರುವ ಸಸ್ತನಿಗಳ ಪಟ್ಟಿಯಲ್ಲಿ ಡಾಲ್ಫಿನ್ ಗಳು 60 ನೇ ಸ್ಥಾನದಲ್ಲಿವೆ. ಡಾಲ್ಫಿನ್ ಗಳು ಭಾರತದ ಗಂಗಾ-ಬ್ರಹ್ಮಪುತ್ರ ಮತ್ತು ಬಾಂಗ್ಲದ ಕರ್ಣಫುಲಿ-ಸಂಗು ನದಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಆದರೆ ಈ ಪ್ರದೇಶಗಳು ವಿಪರೀತ ಜನ ಸಾಂದ್ರತೆಯಿಂದ ಕೂಡಿರುವುದು ಡಾಲ್ಫಿನ್ ಗಳಿಗೆ ಸಂಚಕಾರ ತಂದೊಡ್ಡಿವೆ. ವಿದ್ಯುತ್ ಉತ್ಪಾದನೆ ಮತ್ತು ಕೃಷಿ ನೀರಾವರಿಗಾಗಿ ಅನೇಕ ಅಣೆಕಟ್ಟುಗಳ ನಿರ್ಮಾಣದಿಂದ ಡಾಲ್ಫಿನ್ ಗಳ ಸಂಖ್ಯೆಯಲ್ಲಿ ಬಹಳಷ್ಟು ಇಳಿಕೆಯಾಗಿದೆ. ಮಾಹಿತಿ ಪ್ರಕಾರ "ಗಂಗಾ-ಬ್ರಹ್ಮಪುತ್ರ ನದಿ ಪ್ರದೇಶದಲ್ಲಿ 18 ಎತ್ತರದ ಅಣೆಕಟ್ಟುಗಳು ಮತ್ತು 20ಕ್ಕೂ ಹೆಚ್ಚು ಬ್ಯಾರೇಜ್ ಗಳನ್ನು ನಿರ್ಮಿಸಲಾಗಿದೆ.

**"ರಾಜಾಜಿ ರಾಷ್ಟ್ರೀಯ ಉದ್ಯಾನ" ಕ್ಕೆ ಹುಲಿ ಮೀಸಲು ಪ್ರದೇಶ ಸ್ಥಾನಮಾನ**

ರಾಜಾಜಿ ರಾಷ್ಟ್ರೀಯ ಉದ್ಯಾನವನ್ನು ಹುಲಿ ಮೀಸಲು ಪ್ರದೇಶವೆಂದು ಘೋಷಿಸುವಂತೆ ಉತ್ತರಖಂಡ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ಕೇಂದ್ರ ಸರ್ಕಾರದ ಈ ಕ್ರಮದಿಂದ ಈ ಪ್ರದೇಶದಲ್ಲಿ ಹುಲಿ ಸಂರಕ್ಷಣೆಗೆ ಮತ್ತಷ್ಟು ಪುಷ್ಠಿ ಬಂದಂತಾಗಿದೆ.

- ರಾಜಾಜಿ ರಾಷ್ಟ್ರೀಯ ಉದ್ಯಾನ ಸುಮಾರು 1,150 ಚದರ ಕಿ.ಮೀ ವಿಸ್ತೀರ್ಣತೆಯನ್ನು ಹೊಂದಿದೆ. ಉತ್ತರಖಂಡ್ ನ ಹರಿದ್ವಾರ್, ಕೊಟ್ ದ್ವಾರ್, ಲಾಲ್ ದಂಗ್, ಡೆಹ್ರಡೂನ್ ನಲ್ಲಿರುವ ಹಬ್ಬಿರುವ ಈ ಉದ್ಯಾನದಲ್ಲಿ ಕೇವಲ ಹುಲಿ ಅಲ್ಲದೇ ಆನೆ, ಜಿಂಕೆ ಸಹ ಹೇರಳವಾಗಿ ಕಂಡುಬರುತ್ತವೆ.
- "ರಾಜಾಜಿ ರಾಷ್ಟ್ರೀಯ ಉದ್ಯಾನ" ಉತ್ತರಖಂಡ್ ನ ಎರಡನೇ ಹುಲಿ ಮೀಸಲು ಪ್ರದೇಶ. ಈ ಮುಂಚೆ "ಕಾರ್ಬೆಟ್ ರಾಷ್ಟ್ರೀಯ ಉದ್ಯಾನ"ವನ್ನು ಹುಲಿ ಮೀಸಲು ಪ್ರದೇಶವೆಂದು ಘೋಷಿಸಲಾಗಿದೆ.

**ನಿಕೋಬರ್ ದ್ವೀಪ ಕ್ಕೆ UNESCO "ವರ್ಲ್ಡ್ ಬಯೋಸ್ಪಿಯರ್ ರಿಸರ್ವ್" ಮಾನ್ಯತೆ**

ವಿಶ್ವ ಸಂಸ್ಥೆಯ ಶಿಕ್ಷಣ, ವಿಜ್ಞಾನ ಮತ್ತು ಸಾಂಸ್ಕೃತಿಕ ಸಂಸ್ಥೆ (UNESCO) ತನ್ನ "ಮ್ಯಾನ್ ಅಂಡ್ ಬಯೋಸ್ಪಿಯರ್" ನಡಿ ಭಾರತದ ನಿಕೋಬರ್ ದ್ವೀಪ ಪ್ರದೇಶವನ್ನು "ವರ್ಲ್ಡ್ ಬಯೋಸ್ಪಿಯರ್ ರಿಸರ್ವ್ (World Biosphere Reserve)" ಪಟ್ಟಿಗೆ ಸೇರ್ಪಡೆಗೊಳಿಸಿದೆ.

**UNESCO "ಮ್ಯಾನ್ ಅಂಡ್ ಬಯೋಸ್ಪಿಯರ್ (Man and Biosphere (MAB))" ಕಾರ್ಯಕ್ರಮ:**

- ಜಾಗತಿಕ ಮಟ್ಟದಲ್ಲಿ ಜನರು ಮತ್ತು ಅವರ ಪರಿಸರ ನಡುವಿನ ಸಂಬಂಧವನ್ನು ವೈಜ್ಞಾನಿಕವಾಗಿ ಸುಧಾರಣೆಗೆ ತರಲು ಜಾರಿಗೊಂಡಿರುವ ಅಂತರಸರ್ಕಾರಗಳ ವೈಜ್ಞಾನಿಕ ಕಾರ್ಯಕ್ರಮ
- 1970 ರಲ್ಲಿ ಯುನೆಸ್ಕೊ "ಮ್ಯಾನ್ ಅಂಡ್ ಬಯೋಸ್ಪಿಯರ್" ಕಾರ್ಯಕ್ರಮವನ್ನು ಆರಂಭಿಸಿಲಾಗಿದೆ. ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ ಆರಂಭಗೊಂಡಿರುವ ಈ ಕಾರ್ಯಕ್ರಮವದಡಿ ಪ್ರಸ್ತುತ ವಿಶ್ವದ 117 ದೇಶಗಳಲ್ಲಿ 621 "ಬಯೋಸ್ಪಿಯರ್ ರಿಸರ್ವ್" ಗಳನ್ನು ಗುರುತಿಸಲಾಗಿದೆ.

**ಭಾರತದಲ್ಲಿ "ಬಯೋಸ್ಪಿಯರ್ ರಿಸರ್ವ್"**:

- ಭಾರತ ಸರ್ಕಾರ ಒಟ್ಟು 18 "ಬಯೋಸ್ಪಿಯರ್ ರಿಸರ್ವ್"ಗಳನ್ನು ಸ್ಥಾಪಿಸಿದೆ. ಇವುಗಳಲ್ಲಿ ಕೇವಲ 9 ಬಯೋಸ್ಪಿಯರ್ ರಿಸರ್ವ್ ಗಳನ್ನು "ಯುನೆಸ್ಕೊ"ದ "ಮ್ಯಾನ್ ಅಂಡ್ ಬಯೋಸ್ಪಿಯರ್" ಕಾರ್ಯಕ್ರಮದಡಿ ಗುರುತಿಸಲಾಗಿದೆ.
- 2000 ರಲ್ಲಿ ತಮಿಳುನಾಡಿನ "ನಿಲಗಿರಿ ಬಯೋಸ್ಪಿಯರ್ ರಿಸರ್ವ್" ಯುನೆಸ್ಕೊ MAB ನಡಿ ಗುರುತಿಸಿಕೊಂಡ ಭಾರತದ ಮೊದಲ ಬಯೋಸ್ಪಿಯರ್ ರಿಸರ್ವ್.

ಬಯೋಸ್ಪಿಯರ್ ರಿಸರ್ವ್:

- ಯುನೆಸ್ಕೋ ಹೇಳಿಕೆಯಂತೆ "ಬಯೋಸ್ಪಿಯರ್ ರಿಸರ್ವ್" ಎಂದರೆ ಮಾನವ ಮತ್ತು ಪ್ರಕೃತಿ ನಡುವಿನ ಸಂಬಂಧದ ನಿರ್ವಹಣೆಗಾಗಿ ಹೊಸ ಮತ್ತು ಉತ್ತಮ ವಿಧಾನಗಳನ್ನಿ ಪರೀಕ್ಷಿಸಿ ಮತ್ತು ಪ್ರದರ್ಶಿಸುವ ಪ್ರದೇಶ ಎಂದರ್ಥ. ಈ ಮೂಲಕ ಸುಸ್ಥಿರ ಅಭಿವೃದ್ದಿಗೆ ಶ್ರಮಿಸುವುದು.

**ನಿಕೋಬರ್ ದ್ವೀಪ ಪ್ರದೇಶ:**

ನಿಕೋಬರ್ ದ್ವೀಪವೂ 103.870 ಹೆಕ್ಟೇರ್ ವಿಸ್ತೀರ್ಣತೆಯನ್ನು ಹೊಂದಿದ್ದು, ಉಷ್ಣವಲಯದ ಆರ್ದ್ರ ನಿತ್ಯಹರಿದ್ವರ್ಣ ಅರಣ್ಯದಿಂದ ಕೂಡಿದೆ. ನಿಕೋಬರ್ ದ್ವೀಪವೂ 200 ಬಗೆಯ "ಮಿಯೊಫೌನ (Meifauna)" ಹಾಗೂ 1800 ಕ್ಕೂ ಹೆಚ್ಚು ಪ್ರಾಣಿ ಪ್ರಬೇಧದಗಳಿಗೆ ನೆಲೆಯಾಗಿದೆ. ನಿಕೋಬರ್ ದ್ವೀಪವೂ ಶೋಂಪೆನ್ ಹಾಗೂ ನಿಕೋಬರಿಸ್ ಎಂಬ ಎರಡು ಬುಡಕಟ್ಟು ಜನಾಂಗವನ್ನು ಹೊಂದಿದೆ. ಶೋಂಪೆನ್ ಜನರು ದ್ವೀಪದ ಮಧ್ಯಭಾಗದಲ್ಲಿ ವಾಸವಾಗಿದ್ದು, ಅರೆ ಅಲೆಮಾರಿ ಭೇಟೆಗಾರರಿಗೆ ಜೀವನವನ್ನು ಸಾಗಿಸಿದರೆ,

ನಿಕೋಬರಿಸ್ ಜನರು ಕರಾವಳಿ ತೀರದಲ್ಲಿ ವಾಸವಾಗಿದ್ದು ತೋಟಗಾರಿಕೆ ಮತ್ತು ಮೀನುಗಾರಿಕೆಯನ್ನು ಅವಲಂಭಿಸಿದ್ದಾರೆ. ಒಟ್ಟಾರೆಯಾಗಿ ಈ ದ್ವೀಪವೂ 6,318ರಷ್ಟು ಜನಸಂಖ್ಯೆಯನ್ನು ಹೊಂದಿದ್ದು, ಇವರೆಲ್ಲರು ಅಗಾಧ ಔಷಧಿ ಗಿಡಮೂಲಿಕೆಗಳು ಮತ್ತು ಇತರೆ ಅರಣ್ಯ ಉತ್ಪನ್ನಗಳಂತಹ ಜೈವಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಬರುತ್ತಿದ್ದಾರೆ.

ಕರುನಾಡು ಎಗ್ಸಾ

## ಪ್ರಶಸ್ತಿಗಳು

### ಡಾ.ಅಪರಜಿತ ದತ್ತಾಗೆ ಪ್ರತಿಷ್ಠಿತ "ವೈಟ್ಲೆ ಪ್ರಶಸ್ತಿ (Whitley Award)"

ಗ್ರೀನ್ ಅಸ್ಕರ್ ಎಂದೇ ಕರೆಯಲಾಗುವ ಪ್ರತಿಷ್ಠಿತ "ವೈಟ್ಲೆ ಪ್ರಶಸ್ತಿ"ಯನ್ನು ಭಾರತದ ವನ್ಯಜೀವಿ ಜೀನಶಾಸ್ತ್ರಜ್ಞೆ ಡಾ.ಅಪರಜಿತ ದತ್ತಾಗೆ ನೀಡಿಲಾಗಿದೆ. ಡಾ.ಅಪರಜಿತ ದತ್ತಾ ರವರು ಅಳಿವಿನ ಅಂಚಿನಲ್ಲಿರುವ "ಹಾರ್ನಬಿಲ್" ಗಳ ರಕ್ಷಣೆಗೆ ವಹಿಸಿರುವ ಶ್ರಮವನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ರಾಣಿ ಎಲಿಜಬೆತ್ ರವರ ಮಗಳಾದ ರಾಜಕುಮಾರಿ ಅನ್ನೆ ರವರು ಲಂಡನ್ ನ "ರಾಯಲ್ ಜಿಯೊಗ್ರಾಫಿಕಲ್ ಸೊಸೈಟಿ"ಯಲ್ಲಿ ಅಪರಜಿತ ರವರಿಗೆ ಈ ಪ್ರಶಸ್ತಿಯನ್ನು ವಿತರಣೆ ಮಾಡಿದರು.

- "ಡಾ.ಅಪರಜಿತ ದತ್ತಾ" ರವರು ಅರುಣಾಚಲ ಪ್ರದೇಶದ ದಟ್ಟ ಕಾಡುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ "ಹಾರ್ನ್ ಬಿಲ್" ಹಕ್ಕಿಗಳ ಸಂರಕ್ಷಣಾ ಕಾರ್ಯಕ್ರಮದ ಮುಖ್ಯಸ್ಥೆಯಾಗಿದ್ದಾರೆ. "ಹಾರ್ನ್ ಬಿಲ್" ಪಕ್ಷಿಗಳ ರೆಕ್ಕೆಪುಕ್ಕಗಳಿಗೆ ಬೇಡಿಕೆ ಇರುವ ಕಾರಣ ಇವುಗಳ ಬೇಟೆ ಹೆಚ್ಚಾಗಿದ್ದು ಅಳಿವಿನ ಅಂಚಿನಲ್ಲಿವೆ.
- ಅಪಾಯದ ಅಂಚಿನಲ್ಲಿರುವ "ಹಾರ್ನ್ ಬಿಲ್" ಪಕ್ಷಿಗಳ ರಕ್ಷಣೆಗೆ ಸಮುದಾಯ ಮುಂದಾಳತ್ವದಲ್ಲಿ ಸ್ಥಳೀಯ ಬುಡಕಟ್ಟು ಜನರ ನೆರವಿನಿಂದ "ರಕ್ಷಣಾ ಕಾರ್ಯಪಡೆ"ಯನ್ನು ಸ್ಥಾಪಿಸುವ ಮೂಲಕ ಈ ಪಕ್ಷಿಗಳ ಬೇಟೆಯನ್ನು ನಿಯಂತ್ರಿಸಿದ್ದಾರೆ. ಇದರ ಜತೆಗೆ ನದಿ ತೀರವನ್ನು ಸವಕಳಿಯಿಂದ ಸಂರಕ್ಷಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.
- ಡಾ.ಅಪರಜಿತ ದತ್ತಾ ರವರ ಜತೆಗೆ ಇತರೆ ದೇಶಗಳ 8 ಪರಿಸರ ತಜ್ಞರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ವೈಟ್ಲೆ ಪ್ರಶಸ್ತಿ:

- ಪರಿಸರ ಸಂರಕ್ಷಣೆಗೆ ಗಣನೀಯ ಸೇವೆ ಸಲ್ಲಿಸಿದವರೆಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ಈ ಪ್ರಶಸ್ತಿಯನ್ನು "ಎಡ್ವರ್ಡ್ ವೈಟ್ಲೆ" ರವರು 1994 ರಲ್ಲಿ ಸ್ಥಾಪಿಸಿದರು. ಇದನ್ನು ಗ್ರೀನ್ ಅಸ್ಕರ್ ಎಂತಲೇ ಕರೆಯುವರು.

### ಭಾರತೀಯ ವೈದ್ಯ ಡಾ.ಚತುರ್ವೇದಿಗೆ "ವಿಲ್ಕಿನ್ ಫೆಲ್ಡ್" ಪ್ರಶಸ್ತಿ

ಭಾರತದಲ್ಲಿ ತಂಬಾಕು ನಿಯಂತ್ರಣಕ್ಕೆ ಶ್ರಮಿಸಿದ ಮುಂಬೈ ಟಾಟಾ ಸ್ಮಾರಕ ಸಂಸ್ಥೆಯ ವೈದ್ಯ "ಡಾ. ಚತುರ್ವೇದಿ"ಗೆ ಪ್ರತಿಷ್ಠಿತ ಅಂತರರಾಷ್ಟ್ರೀಯ ಜುಡಿ "ವಿಲ್ಕಿನ್ ಫೆಲ್ಡ್" ಪ್ರಶಸ್ತಿಯನ್ನು ನೀಡಲಾಗಿದೆ.

- ಡಾ.ಚತುರ್ವೇದಿ ರವರು ತಂಬಾಕು ವಿರೋಧಿ ಅಭಿಯಾನದಿಂದಾಗಿ ಇಂದು ದೇಶದ ಅನೇಕ ರಾಜ್ಯಗಳಲ್ಲಿ ಗುಟ್ಕಾ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ. ಧೂಮಪಾನ ನಿಯಂತ್ರಣಕ್ಕೆ ಸಿಗರೇಟ್ ಮತ್ತು ಬೀಡಿಗಳ ಮೇಲೆ ದೊಡ್ಡ ಪ್ರಮಾಣದ ತೆರಿಗೆಯನ್ನು ವಿಧಿಸಲಾಗಿದೆ.

"ವಿಲ್ಕಿನ್ ಫೆಲ್ಡ್ ಪ್ರಶಸ್ತಿ":

- "ತಂಬಾಕು ಮತ್ತು ಮಕ್ಕಳು" ಎಂಬ ಅಂತರರಾಷ್ಟ್ರೀಯ ಕಾರ್ಯಕ್ರಮವನ್ನು ಪ್ರಾರಂಭಿಸಿದ "ಜುಡಿ ವಿಲ್ಕಿಫೆಲ್ಡ್" ರವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.
- 2007 ರಲ್ಲಿ "ಜುಡಿ ವಿಲ್ಕಿಫೆಲ್ಡ್" ರವರು ನಿಧನ ಹೊಂದಿದರು.

**ಲೇಖಕಿ ದಿವಂಗತ "ಇಂದಿರಾ ಗೋಸ್ವಾಮಿ"ಗೆ "ಅಸ್ಸಾಂ ರತ್ನ" ಪ್ರಶಸ್ತಿ**

ಅಸ್ಸಾಂ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ "ಅಸ್ಸಾಂ ರತ್ನ" ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, 2012 ನೇ ಸಾಲಿನಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಹೆಸರಾಂತ ಲೇಖಕಿ ದಿವಂಗತ "ಇಂದಿರಾ ಗೋಸ್ವಾಮಿ" ರವರಿಗೆ ಮರೋಣತ್ತರವಾಗಿ ನೀಡಲಾಯಿತು. ಇತ್ತೀಚೆಗೆ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ಪ್ರಣಭ್ ಮುಖರ್ಜಿ ರವರು ಈ ಪ್ರಶಸ್ತಿಯನ್ನು ಪ್ರಧಾನ ಮಾಡಿದರು. ಇದೇ ವೇಳೆ ಶ್ರೀಮಂತ ಶಂಕರದೇವ್ ಪ್ರಶಸ್ತಿಯನ್ನು ಹಿರಿಯ ಚಿತ್ರನಟಿ "ಶರ್ಮಿಳಾ ಟಾಗೋರ್" ರವರಿಗೆ ನೀಡಲಾಯಿತು.

ಅಸ್ಸಾಂ ರತ್ನ ಪ್ರಶಸ್ತಿ:

- ಅಸ್ಸಾಂ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದ್ದು, 2010 ರಿಂದ ಕೊಡಲಾಗುತ್ತಿದೆ.
- ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಗಣನೀಯ ಕೊಡುಗೆ ನೀಡಿದವರಿಗೆ ನೀಡಲಾಗುತ್ತದೆ.
- ಪ್ರಖ್ಯಾತ ಸಂಗೀತ ನಿರ್ದೇಶಕ "ಭೂಪೆನ್ ಹಜಾರಿಕ" ರವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ಇಂದಿರಾ ಗೋಸ್ವಾಮಿ ಈ ಪ್ರಶಸ್ತಿಯನ್ನು ಪಡೆದ ಎರಡನೇಯವರು.

"ಶ್ರೀಮಂತ ಶಂಕರದೇವ ಪ್ರಶಸ್ತಿ"

- 15 ನೇ ಶತಮಾನದಲ್ಲಿ ಜೀವಿಸಿದ್ದ, ಅಸ್ಸಾಂನ ಪ್ರಸಿದ್ಧ ಸಂತ, ಸಮಾಜ ಸುಧಾರಕ "ಶಂಕರದೇವ್" ರವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು 1986 ರಿಂದ ನೀಡಲಾಗುತ್ತಿದೆ.
- ಜನಪ್ರಿಯ ಸಿನಿಮಾ ನಿರ್ದೇಶಕ "ಸತ್ಯಜಿತ್ ರೇ" ಈ ಪ್ರಶಸ್ತಿಯನ್ನು ಪಡೆದ ಪ್ರಥಮರು.

**ಹರಿಹರನ್ ಗೆ "ಲತಾ ಮಂಗೇಶ್ಕರ್ ಅಲಂಕರಣ್" ಪ್ರಶಸ್ತಿ**

ಮಧ್ಯಪ್ರದೇಶ ಸರ್ಕಾರ ಹಿನ್ನಲೆ ಗಾಯಕರಿಗೆ ನೀಡುವ "ಲತಾ ಮಂಗೇಶ್ಕರ್ ಅಲಂಕರಣ್" ಪ್ರಶಸ್ತಿಯನ್ನು ಗಾಯಕ ಹರಿಹರನ್ ಗೆ ನೀಡಲಾಗಿದೆ. ಇಂಧೋರ್ ನಲ್ಲಿ ನಡೆದ ಮೂರು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ವೇಳೆ ಹರಿಹರನ್ ರವರಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಬಗ್ಗೆ:

- ಲತಾ ಮಂಗೇಶ್ಕರ್ ಅಲಂಕರಣ್" ಪ್ರಶಸ್ತಿಯನ್ನು ಮಧ್ಯಪ್ರದೇಶ ಸರ್ಕಾರ ನೀಡುತ್ತಿದೆ. ಪ್ರಶಸ್ತಿಯು ಎರಡು ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.
- ಈ ಪ್ರಶಸ್ತಿಯನ್ನು ಸಂಗೀತ ನಿರ್ದೇಶಕ ಮತ್ತು ಗಾಯಕರಿಗೆ ಮಾತ್ರ ನೀಡಲಾಗುತ್ತದೆ. 2012 ನೇ ಸಾಲಿನಲ್ಲಿ ಈ ಪ್ರಶಸ್ತಿಯನ್ನು ಸಂಗೀತ ನಿರ್ದೇಶಕ ರಾಜೇಶ್ ರೋಷನ್ ರವರಿಗೆ ನೀಡಲಾಗಿತ್ತು.

ಹರಿಹರನ್:

- ಹರಿಹರನ್ ರವರು ಒಬ್ಬ ಜನಪ್ರಿಯ ಗಾಯಕ. ಪದ್ಮಶ್ರೀ ಪ್ರಶಸ್ತಿ ವಿಜೇತರಾಗಿರುವ ಇವರು ಕನ್ನಡ, ಮಲೆಯಾಳಂ, ಮರಾಠಿ, ಹಿಂದಿ, ತೆಲುಗು ಮತ್ತು ಭೋಜಪುರಿ ಸೇರಿದಂತೆ ಅನೇಕ ಭಾಷೆಗಳಲ್ಲಿ ಹಾಡಿದ್ದಾರೆ.

**"ಮಲಾಲ ಯೂಸಫ್ ಝೈ" ಗೆ "ಚಾಂಪಿಯನ್ ಫಾರ್ ಗ್ಲೋಬಲ್ ಚೇಂಜ್" ಪ್ರಶಸ್ತಿ**

ಹೆಣ್ಣು ಮಕ್ಕಳ ಹಕ್ಕುಗಾಗಿ ಹೋರಾಟ ನಡೆಸಿ ವಿಶ್ವ ಗಮನ ಸೆಳೆದ ಪಾಕಿಸ್ತಾನ ಯುವತಿ "ಮಲಾಲ ಯೂಸಫ್ ಝೈ" ಗೆ "UNA-USA ಗ್ಲೋಬಲ್ ಲೀಡರ್ ಷಿಪ್ ಆವಾರ್ಡ್" ಅಥವಾ "ಚಾಂಪಿಯನ್ ಫಾರ್ ಗ್ಲೋಬಲ್ ಚೇಂಜ್" ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

- ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸಬಲೀಕರಣಕ್ಕಾಗಿ ಮಲಾಲ ನಡೆಸಿದ ಹೋರಾಟವನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ನವೆಂಬರ್ 6, 2013 ರಂದು ವಿಶ್ವಸಂಸ್ಥೆಯ ನೇತೃತ್ವದಲ್ಲಿ ನಡೆಯುವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಮಲಾಲ ರವರಿಗೆ ವಿತರಿಸಲಾಗುವುದು.
- ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಗಳಾದ "ಬಾನ್-ಕಿ-ಮೂನ್" ರವರು ನವೆಂಬರ್ 10 ನ್ನು "ಮಲಾಲ ದಿನ"ವೆಂದು ಈಗಾಗಲೇ ಘೋಷಿಸಿದ್ದಾರೆ. ಅಲ್ಲದೇ "ವಿಶ್ವಸಂಸ್ಥೆಯ ಪುತ್ರಿ" ಎಂಬ ಬಿರುದನ್ನು ಸಹ ಮಲಾಲಗೆ ನೀಡಲಾಗಿದೆ.

**ಕುಲದೀಪ್ ಸಿಂಗ್ ನಾಯರ್ ಮತ್ತು ಎನ್. ರಾಮುಗೆ ಜೀವಮಾನ ಸಾಧನೆ ಪ್ರಶಸ್ತಿ**

ಮುಂಬೈ ಪ್ರೆಸ್ ಕ್ಲಬ್ ವತಿಯಿಂದ ನೀಡಲಾಗುವ ಜೀವಮಾನ ಸಾಧನೆ ಪ್ರಶಸ್ತಿಗೆ ಹಿರಿಯ ಪತ್ರಕರ್ತ "ಕುಲದೀಪ್ ಸಿಂಗ್ ನಾಯರ್ ಮತ್ತು ಎನ್.ರಾಮು" ರವರು ಆಯ್ಕೆಯಾಗಿದ್ದಾರೆ. ಮೇ.25 ರಂದು ಮುಂಬೈನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿಯನ್ನು ವಿತರಿಸಲಾಗುವುದು.

- "ಮುಂಬೈ ಪ್ರೆಸ್ ಕ್ಲಬ್" ನಿರ್ವಹಣಾ ಸಮಿತಿ ಹೆಸರುವಾಸಿಯಾಗಿರುವ ಪತ್ರಕರ್ತರನ್ನು ಪರಿಗಣಿಸಿ ದೇಶದಾದ್ಯಂತ ನಡೆಸಿದ ಸಮೀಕ್ಷೆಯ ಮೂಲಕ "ಜೀವಮಾನ ಸಾಧನೆ ಪ್ರಶಸ್ತಿ" ಗೆ ಆಯ್ಕೆಮಾಡಲಾಗಿದೆ.
- ಮಾಜಿ ರಾಜ್ಯ ಸಭಾ ಸದಸ್ಯರಾಗಿರುವ "ಕುಲದೀಪ್ ಸಿಂಗ್" ರವರು ಅಂಕಣಕಾರರಾಗಿ ಅಪಾರ ಹೆಸರು ಗಳಿಸಿದ್ದಾರೆ. ನಾಯರ್ ರವರು ಶಾಂತಿ ಹೋರಾಟಗಾರರು ಆಗಿದ್ದಾರೆ.
- ಎನ್.ರಾಮು ರವರು ಎರಡು ದಶಕಗಳಿಂದ "ದಿ ಹಿಂದೂ" ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. "ಪದ್ಮ ಭೂಷಣ" ಪ್ರಶಸ್ತಿ ವಿಜೇತರಾಗಿರುವ ರಾಮು ರವರಿಗೆ ಶ್ರೀಲಂಕಾ ಸರ್ಕಾರ ನೀಡುವ "ಶ್ರೀಲಂಕಾ ರತ್ನ" ಪ್ರಶಸ್ತಿಯು ಲಭಿಸಿದೆ.
- "ಪ್ರೆಸ್ ಕ್ಲಬ್" ಪ್ರಶಸ್ತಿಯನ್ನು ರೆಡ್ ಇಂಕ್" ಎಂತಲೂ ಕರೆಯುತ್ತಾರೆ. ಕಲೆ, ಕ್ರೀಡೆ, ಅಪರಾಧ ಹೀಗೆ 9 ವರ್ಗಗಳಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

**ಲೇಖಕಿ "ಲಿಡಿಯಾ ಡೇವಿಸ್"ಗೆ " ಮ್ಯಾನ್ ಬೂಕರ್ ಇಂಟರ್ ನ್ಯಾಷನಲ್" ಪ್ರಶಸ್ತಿ**

ನ್ಯೂಯಾರ್ಕ್ ಮೂಲದ ಇಂಗ್ಲೀಷ್ ಲೇಖಕಿ "ಲಿಡಿಯಾ ಡೇವಿಸ್" ರವರಿಗೆ 2013 ನೇ ಸಾಲಿನ ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ಲಭಿಸಿದೆ. ಕನ್ನಡದ ಹಿರಿಯ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು.ಆರ್.ಅನಂತಮೂರ್ತಿ ರವರ ಕಾದಂಬರಿ "ಸಂಸ್ಕಾರ" ಪ್ರಶಸ್ತಿಯ ಕಣದಲ್ಲಿತ್ತು. ಯು.ಆರ್.ಅನಂತಮೂರ್ತಿರವರಿಗೆ ಈ ಬಾರಿ ವಿಶ್ವದ ಪ್ರತಿಷ್ಠಿತ ಮ್ಯಾನ್ ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ಲಭಿಸಲಿದೆ ಎಂದೇ ಭಾವಿಸಲಾಗಿತ್ತು. ಆದರೆ ಈ ನಿರೀಕ್ಷೆ ಹುಸಿಯಾಗಿದೆ.

- "ಲಿಡಿಯಾ ಡೇವಿಸ್" ರವರ ಸೃಜನಶೀಲ ಕೃತಿಗಳಾದ "ದಿ ಎಂಡ್ ಆಫ್ ದಿ ಸ್ಟೋರಿ" ಹಾಗೂ "ವೆರೈಟೀಸ್ ಆಫ್ ಡಿಸ್ಟರ್ಬನ್ಸ್" ಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. "ಬ್ರೇಕ್ ಇಟ್ ಡೌನ್", "ಅಲ್ ಮೋಸ್ಟ್ ನೊ ಮೆಮೊರಿ","ಸ್ಯಾಮುಯೆಲ್ ಜಾನ್ ಸನ್ ಈಸ್ ಇಂಡಿಗ್ನಂಟ್" ಅವರ ಇತರೆ ಕೃತಿಗಳು.
- ನ್ಯೂಯಾರ್ಕ್ ನ "ಅಲ್ಬನಿ ವಿಶ್ವವಿದ್ಯಾಲಯ"ದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿರುವ "ಲಿಡಿಯಾ" ರವರು ಈ ಪ್ರಶಸ್ತಿಯನ್ನು ಪಡೆಯುತ್ತಿರುವ 5 ನೇ ಲೇಖಕರು. 2011 ನೇ ಸಾಲಿನಲ್ಲಿ ಈ ಪ್ರಶಸ್ತಿಯನ್ನು ಅಮೆರಿಕಾದವರೇ ಆದ "ಫಿಲಿಪ್ ರಾತ್" ರವರು ಪಡೆದುಕೊಂಡಿದ್ದರು.

**"ಮ್ಯಾನ್ ಬೂಕರ್ ಅಂತರರಾಷ್ಟ್ರೀಯ" ಪ್ರಶಸ್ತಿ:**

- ಸಾಹಿತ್ಯ ಲೋಕಕ್ಕೆ ನೀಡುವ ಈ ಪ್ರತಿಷ್ಠಿತ ಪ್ರಶಸ್ತಿಯನ್ನು 2004 ರಲ್ಲಿ ಸ್ಥಾಪಿಸಲಾಗಿದೆ. "ಮ್ಯಾನ್ ಗ್ರೂಫ್" ವತಿಯಿಂದ ನೀಡಲಾಗುವ ಈ ಪ್ರಶಸ್ತಿಯನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ನೀಡಲಾಗುತ್ತಿದೆ. ಪ್ರಶಸ್ತಿಯ ಮೊತ್ತ 42 ಲಕ್ಷ.
- ಕಾಮನ್ ವೆಲ್ತ್, ಐರ್ಲೆಂಡ್ ಅಥವಾ ಜಿಂಬಾಬ್ವೆ ರಿಪಬ್ಲಿಕ್ ನ ಯಾವುದೇ ನಾಗರಿಕ ಬರೆದ ಪೂರ್ಣ ಪ್ರಮಾಣದ ಕಾದಂಬರಿಯ ಅಥವಾ ಇಂಗ್ಲೀಷ್ ಭಾಷೆಗೆ ತರ್ಜುಮೆಗೊಂಡ ಕಾದಂಬರಿಯನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿಯ ಸಂದರ್ಭದಲ್ಲಿ ಲೇಖಕನು ಜೀವಂತವಾಗಿದ್ದರೆ ಮಾತ್ರ ನೀಡಲಾಗುತ್ತದೆ.

**ಪ್ರಶಸ್ತಿ ಪಡೆದವರು:**

- ಮ್ಯಾನ್ ಬೂಕರ್ ಪ್ರಶಸ್ತಿಯನ್ನು 2005 ರಿಂದ ಕೊಡಲಾಗುತ್ತಿದೆ. 2005 ರಲ್ಲಿ ಅಲ್ಬೇನಿಯಾದ ಕಾದಂಬರಿಕಾರ "ಇಸ್ಮೈಲ್ ಕದರೆ (Ismail Kadare)" ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. 2007 ರಲ್ಲಿ ನೈಜೀರಿಯಾದ ಚಿನುವಾ ಅಚಿಬೆ (ಇತ್ತೀಚೆಗೆ ನಿಧನರಾದರು), 2009 ರಲ್ಲಿ ಕೆನಡಾದ "ಅಲೈಸ್ ಮುನ್ರೊ" ಮತ್ತು 2011 ರಲ್ಲಿ ಅಮೆರಿಕಾದ "ಫಿಲಿಪ್ ರಾತ್" ಈ ಪ್ರಶಸ್ತಿಗೆ ಭಾಜರಾಗಿದ್ದಾರೆ.
- 2013 ನೇ ಸಾಲಿನ ಪ್ರಶಸ್ತಿಗೆ "ಲಿಡಿಯಾ ಡೇವಿಸ್" ಆಯ್ಕೆಯಾದ್ದರಿಂದ ಅಮೆರಿಕಾಗೆ ಎರಡು ಬಾರಿ ಈ ಪ್ರಶಸ್ತಿ ಲಭಿಸಿದಂತಾಗಿದೆ.

**ಪ್ರೊಫೆಸರ್ ರಾಮಚಂದ್ರ ಮಿಶ್ರಾ ಮತ್ತು ಡಾ.ನರೇಂದ್ರ ಕೊಹ್ಲಿಗೆ "ವ್ಯಾಸ ಸಮ್ಮಾನ್" ಪ್ರಶಸ್ತಿ**

ಕೆ.ಕೆ.ಬಿರ್ಲಾ ಫೌಂಡೇಶನ್ ವತಿಯಿಂದ ನೀಡಲಾಗುವು "ವ್ಯಾಸ ಸಮ್ಮಾನ್" ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, ಪ್ರೊಫೆಸರ್ ರಾಮಚಂದ್ರ ಮಿಶ್ರಾ ಮತ್ತು ಡಾ,ನರೇಂದ್ರ ಕೊಹ್ಲಿ ರವರು 2011 ಮತ್ತು 2012 ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಖ್ಯಾತ ಹಿಂದಿ ವಿದ್ವಾಂಸ "ಸೂರ್ಯ ಪ್ರಸಾದ್ ದಿಕ್ಷೀತ್" ರವರು ಈ ಬಾರಿಯ ಆಯ್ಕೆ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದರು.

- ಡಾ.ರಾಮಚಂದ್ರ ಮಿಶ್ರಾ ರವರ ಕವನ ಸಂಕಲನ "ಆಮ್ ಕೆ ಪತ್ತೆ" ಗೆ ಈ ಪ್ರತಿಷ್ಠಿತ ಪ್ರಶಸ್ತಿ ಸಂದಿದೆ. "ಆಮ್ ಕೆ ಪತ್ತೆ" ಕವನ ಸಂಕಲನ 2004 ರಲ್ಲಿ ಪ್ರಕಾಶನಗೊಂಡಿದ್ದು, ಮಾನವರು ಮತ್ತು ಸಾಮಾನ್ಯ ವಸ್ತುಗಳಾದ ಮೇಜು. ಪೆನ್ನು ಗಳೊಂದಿಗೆ ಸಂಬಂಧವನ್ನು ಬೆಸೆಯುವದರ ಕುರಿತಾಗಿದೆ.
- ಡಾ.ನರೇಂದ್ರ ಕೊಹ್ಲಿ ರವರ "ನಾ ಬೊತೊ ನಾ ಭವಿಷ್ಯತಿ" ಐತಿಹಾಸಿಕ ಕಾದಂಬರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. "ನಾ ಬೊತೊ ನಾ ಭವಿಷ್ಯತಿ" ಸ್ವಾಮಿ ವಿವೇಕನಂದರನ್ನು ಕುರಿತಾದ ಕಾದಂಬರಿಯಾಗಿದೆ.

**ವ್ಯಾಸ ಸಮ್ಮಾನ್ ಪ್ರಶಸ್ತಿ:**

- ಕೆ.ಕೆ.ಬಿರ್ಲಾ ಫೌಂಡೇಶನ್ 1991 ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ. ಕಳೆದ ಹತ್ತು ವರ್ಷಗಳಲ್ಲಿ ಹಿಂದಿ ಭಾಷೆಯಲ್ಲಿ ಪ್ರಕಾಶನಗೊಂಡ ಕಾದಂಬರಿ, ಕವನ ಸಂಕಲನ, ನಾಟಕ, ಸಣ್ಣ ಕಥೆಗಳಿಗೆ ಪ್ರತಿವರ್ಷ ನೀಡಲಾಗುತ್ತದೆ.
- ಪ್ರಶಸ್ತಿಯು 2.5 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

**ಕ್ಯಾನೆಸ್ ಚಲನಚಿತ್ರೋತ್ಸವ: "ಬ್ಲೂ ಈಸ್ ದಿ ವರ್ಮೆಸ್ಟ್ ಕಲರ್ (Blue Is the Warmest Colour)" ಚಿತ್ರಕ್ಕೆ ಅತ್ಯುತ್ತಮ ಪ್ರಶಸ್ತಿ**

ಸಲಿಂಗಕಾಮಿಗಳ ಪ್ರೇಮಕಥೆ ಆಧಾರಿತ "ಬ್ಲೂ ಈಸ್ ದಿ ವರ್ಮೆಸ್ಟ್ ಕಲರ್" ಚಿತ್ರವೂ ಕ್ಯಾನೆಸ್ ಚಲನಚಿತ್ರೋತ್ಸವದ ಅತ್ಯುನ್ನತ ಪ್ರಶಸ್ತಿಯಾದ "ಪಾಮೆ ಡಿ ಒರ್" ಪ್ರಶಸ್ತಿಗೆ ಆಯ್ಕೆಯಾಗಿದೆ. ಈ ಮೂಲಕ ಇದೇ ಮೊದಲ ಬಾರಿಗೆ ಸಲಿಂಗಕಾಮಿಗಳ ಕಥೆಯುಳ್ಳ ಚಿತ್ರವೊಂದು ಈ ಪ್ರಶಸ್ತಿಗೆ ಭಾಜನವಾಗಿದೆ. ಪ್ರಸಿದ್ದ ನಿರ್ದೇಶಕ "ಸ್ಟೀಫನ್ ಸ್ಪೆಲ್ ಬರ್ಗ್" ಅಧ್ಯಕ್ಷತೆ ವಹಿಸಿದ್ದ ಆಯ್ಕೆ ಸಮಿತಿಯು ಈ ಚಿತ್ರವನ್ನು ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಮಾಡಿದೆ. ಆಯ್ಕೆ ಸಮಿತಿಯಲ್ಲಿ ಭಾರತದ ನಟಿ ವಿದ್ಯಾ ಬಾಲನ್ ಸಹ ಸದಸ್ಯರಾಗಿದ್ದರು.

- ಖ್ಯಾತ ನಿರ್ದೇಶಕ "ಅಬ್ದುಲೆತಿಫ್ ಕೆಚಿಚೆ" ರವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ 15 ವರ್ಷದ ಯುವತಿಯೊಬ್ಬಳು ವಯಸ್ಸಾದ ಮಹಿಳೆಯೊಂದಿಗೆ ಪ್ರೀತಿಯಲ್ಲಿ ಬೀಳುವ ಕಥೆಯ ಎಳೆಯನ್ನು ಇಟ್ಟುಕೊಂಡು ಸಿನಿಮಾ ಮಾಡಲಾಗಿದೆ. "ಬ್ಲೂ ಈಸ್ ದಿ ವರ್ಮೆಸ್ಟ್ ಕಲರ್" ಚಿತ್ರವೂ ಅನೇಕ ಚಿತ್ರವಿಮರ್ಶಕರಿಂದ ಪ್ರಶಂಸೆಯನ್ನು ಗಳಿಸಿತ್ತು.

**ಇತರೆ ಪ್ರಶಸ್ತಿಗಳು:**

**ಅತ್ಯುತ್ತಮ ನಟ:** ಹಾಲಿವುಡ್ ಹಿರಿಯ ನಟ "ಬ್ರೂಸ್ ಡರ್ನ್" (ಚಿತ್ರ: ನೆಬ್ರಾಸ್ಕ).

**ಅತ್ಯುತ್ತಮ ನಟಿ**: ಫ್ರೆಂಚ್ ನಟಿ ಬೆರೆನಿಸ್ ಬೆಜೊ (ಚಿತ್ರ: ದಿ ಆರ್ಟಿಸ್ಟ್)

**ಅತ್ಯುತ್ತಮ ನಿರ್ದೇಶಕ**: ಅಮತ್ ಎಸ್ಕಲಂಟೆ (ಚಿತ್ರ: ಹೆಲಿ)

**ಆಯ್ಕೆಗಾರರ ಚಿತ್ರ**: "ಲೈಕ್ ಫಾದರ್ ಲೈಕ್ ಸನ್"

**ಓರಿಯಾ ಸಾಹಿತಿ "ಮನೋಜ್ ದಾಸ್" ಗೆ "NTR ರಾಷ್ಟ್ರೀಯ ಸಾಹಿತ್ಯ" ಪ್ರಶಸ್ತಿ**

NTR ವಿಜ್ಞಾನ ಟ್ರಸ್ಟ್ ವತಿಯಿಂದ ನೀಡಲಾಗುವ "NTR ರಾಷ್ಟ್ರೀಯ ಸಾಹಿತ್ಯ" ಪ್ರಶಸ್ತಿಗೆ ಖ್ಯಾತ ಓರಿಯಾ ಸಾಹಿತಿ "ಮನೋಜ್ ದಾಸ್" ರವರನ್ನು ಆಯ್ಕೆಮಾಡಲಾಗಿದೆ. NTR ವಿಜ್ಞಾನ ಟ್ರಸ್ಟ್ ನ ಅಧ್ಯಕ್ಷರಾದ ಎನ್. ಲಕ್ಷ್ಮಿ ಪಾರ್ವತಿ ಅವರು ಅಧ್ಯಕ್ಷತೆ ವಹಿಸಿದ್ದ ಆಯ್ಕೆ ಸಮಿತಿಯು ದಾಸ್ ರವರ ಹೆಸರನ್ನು ಈ ಪ್ರತಿಷ್ಠಿತ ಪ್ರಶಸ್ತಿಗೆ ಅಂತಿಮಗೊಳಿಸಿದೆ.

**ಮನೋಜ್ ದಾಸ್**:

- ದಾಸ್ ರವರು ಪ್ರಸಿದ್ದ ಓರಿಯಾ ಸಾಹಿತಿ. ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆಯನ್ನು ಗಮನಿಸಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ.

**NTR ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ**:

- ತೆಲುಗಿನ ಖ್ಯಾತ ನಟ ಮತ್ತು ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ದಿವಂಗತ "ನಂದಮೂರಿ ತಾರಕ ರಾಮ್ ರಾವ್ (NTR)" ರವರ ನೆನಪಿಗಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

- ತೆಲುಗು ಭಾಷೆಗೆ ಅಪಾರ ಮನ್ನಣೆ ತಂದುಕೊಟ್ಟ NTR ರವರು ಸ್ವತಃ ಸಾಹಿತಿಯಾಗಿದ್ದರಲ್ಲದೇ ತಮ್ಮ 14 ನೇ ವಯಸ್ಸಿನಲ್ಲಿಯೇ ಮೊದಲ ಕಾದಂಬರಿ ರಚಿಸಿದ್ದರು.
- ಭಾರತೀಯ ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದ ಸಾಹಿತಿಗಳಿಗೆ ವಾರ್ಷಿಕವಾಗಿ ನೀಡಲಾಗುವ ಈ ಪ್ರಶಸ್ತಿಯು 1 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

**2012 ನೇ ಸಾಲಿನ ಕೇಂದ್ರ ಸಂಗೀತಾ ನಾಟಕ ಅಕಾಡೆಮಿ ಫೆಲೊಶಿಪ್ (ಅಕಾಡೆಮಿ ರತ್ನ) ಪ್ರಕಟ**

ಖ್ಯಾತ ಹಿಂದೂಸ್ತಾನಿ ಗಾಯಕ ರಾಜಶೇಖರ್ ಮನ್ಸೂರ್, ಗ್ರ್ಯಾಮಿ ಪ್ರಶಸ್ತಿ ವಿಜೇತ ಘಟಂ ವಾದಕ ಟಿ.ಎಚ್. ವಿಕ್ಕು ವಿನಾಯಕರಾಮ್, ರಂಗಭೂಮಿ ಕಲಾವಿದ ರತನ್ ಥಿಯಾಮ್, ಅಜಯ್ ಪೋಹಂಕರ್ ಮತ್ತು ತಬಲ ವಾದಕ ಸಬೀರ್ ಖಾನ್ ಸೇರಿದಂತೆ ಇತರೆ 34 ಕಲಾವಿದರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 2012 ನೇ ಸಾಲಿನ ಫೆಲೊಶಿಪ್ ನ್ನು ರಾಷ್ಟ್ರಪತಿ ಪ್ರಣಭ್ ಮುಖರ್ಜಿ ರವರು ಪ್ರಧಾನ ಮಾಡಿದರು. ಪ್ರದರ್ಶನ ಕಲೆಗಾಗಿ ನಂದಿನಿ ರಮಣಿ ಮತ್ತು ಅರುಣ್ ಕಾಕಡೆ ರವರು ಸಹ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

**ಸಂಗೀತ ನಾಟಕ ಅಕಾಡೆಮಿ ಫೆಲೊಶಿಪ್**

- ಸಂಗೀತ ನಾಟಕ ಅಕಾಡೆಮಿ ಫೆಲೊಶಿಪ್ ಅಥವಾ ಸಂಗೀತ ನಾಟಕ "ಅಕಾಡೆಮಿ ರತ್ನ"ವನ್ನು ಸಂಗೀತ ನಾಟಕ ಮತ್ತು ನೃತ್ಯ ಕ್ಷೇತ್ರ ಕಲಾವಿದರಿಗೆ ಭಾರತ ಸರ್ಕಾರ ನೀಡುವ ಅತ್ಯುನ್ನತ ಪ್ರಶಸ್ತಿ. ಅಕಾಡೆಮಿ ಪುರಸ್ಕಾರವನ್ನು 1952 ರಲ್ಲಿ ಸ್ಥಾಪಿಸಿಲಾಗಿದೆ. ಅಕಾಡೆಮಿ ಫೆಲೊಶಿಪ್ ನ್ನು 1954 ರಲ್ಲಿ ಸ್ಥಾಪಿಸಲಾಗಿದೆ.
- ಅಕಾಡೆಮಿ ಪುರಸ್ಕಾರವು 1 ಲಕ್ಷ ಹಾಗೂ ಅಕಾಡೆಮಿ ರತ್ನವೂ 3 ಲಕ್ಷ ನಗದು, ತಾಮ್ರಪತ್ರ ಮತ್ತು ಶಾಲುವನ್ನು ಒಳಗೊಂಡಿದೆ.
- 1954 ರಲ್ಲಿ ಪ್ರಾರಂಭಿಸಲಾದ ಈ ಫೆಲೊಶಿಪ್ ಗೆ ಪಾತ್ರರಾದ ಮೊದಲಿಗರು ಕರ್ನಾಟಕ ಸಂಗೀತದ "ಕಾರೈಕುಡಿ ಸಾಂಬಶಿವ ಅಯ್ಯರ್ ಮತ್ತು "ಅರಿಯಾಕುಡಿ ರಾಮಾಜುಜ ಅಯ್ಯಂಗರ್", ಹಿಂದೂಸ್ತಾನಿ ಸಂಗೀತದ "ಅಲ್ಲಾವುದ್ದೀನ್ ಖಾನ್" ಮತ್ತು ಹಫೀಜ್ ಅಲಿ ಖಾನ್ ಹಾಗೂ ಚಲನಚಿತ್ರ ನಟ ಪೃಥ್ವೀರಾಜ ಕಪೂರ್.
- ಸಂಗೀತ ನಾಟಕ ಅಕಾಡೆಮಿಯನ್ನು ಭಾರತ ಸರ್ಕಾರ 1953 ರಲ್ಲಿ ಸ್ಥಾಪಿಸಿದೆ. ಸಂಗೀತ, ನೃತ್ಯ ಮತ್ತು ನಾಟಕವನ್ನು ಉತ್ತೇಜಿಸಿ ಸಂರಕ್ಷಸಿವುದು ಇದರ ಮುಖ್ಯ ಉದ್ದೇಶ.

## ಸುದ್ದಿಯಲ್ಲಿರುವ ವ್ಯಕ್ತಿಗಳು

**ಡಾ.ಕ್ರಿಸ್ಟೋಫರ್ ಬ್ರಗ್ಸ್:"ರಾಮ್ಸರ್ ಕನ್ ವೆನ್ ಶನ್ (Ramsar Convention)" ನ ನೂತನ ಜನರಲ್ ಸೆಕ್ರಟರಿ**

ವಿಶ್ವ ತೇವಭೂಮಿಗಳ ಸಂರಕ್ಷಣಾ ವೇದಿಕೆ "ರಾಮ್ಸರ್ ಕನ್ ವೇಶನ್" ನ ನೂತನ ಸೆಕ್ರೆಟರಿಯಾಗಿ "ಡಾ.ಕ್ರಿಸ್ಟೋಫರ್ ಬ್ರಗ್ಸ್" ರವರು ನೇಮಕಗೊಂಡಿದ್ದಾರೆ. ಸ್ವಿಟ್ಜರ್ ಲ್ಯಾಂಡ್ ನ ಗ್ಲಾಂಡ್ ನಲ್ಲಿ ನಡೆದ 46 ನೇ "ರಾಮ್ಸರ್ ಕನ್ ವೇನಶನ್" ಕುರಿತಾದ ಸಭೆಯಲ್ಲಿ ಅವರ ಆಯ್ಕೆಯನ್ನು ಅಂತಿಮಗೊಳಿಸಲಾಯಿತು. "ಟೈಗಾ ಅನದ (Taiga Anada)" ರವರ ಉತ್ತರಾಧಿಕಾರಿಯಾಗಿ ಕ್ರಿಸ್ಟೋಫರ್ ರವರು ಅಧಿಕಾರವಹಿಸಿಕೊಳ್ಳಲಿದ್ದಾರೆ.

ಡಾ.ಕ್ರಿಸ್ಟೋಫರ್ ಬಗ್ಗೆ:

- ಡಾ.ಕ್ರಿಸ್ಟೋಫರ್ ರವರು "ಯುನೈಟೆಡ್ ನೇಷನ್ ಡೆವೆಲಪ್ ಮೆಂಟ್ ಪ್ರೋಗ್ರಾಂ (UNDP)", "ಯುನೈಟೆಡ್ ನೇಷನ್ ಎನಮಿರನ್ ಮೆಂಟ್ ಪ್ರೋಗ್ರಾಂ (UNEP)" ಮತ್ತು "ಯುನೈಟೆಡ್ ನೇಷನ್ ಎನಮಿರನ್ ಮೆಂಟ್ ಪ್ರೋಗ್ರಾಂ (UNEP)-ಗ್ಲೋಬಲ್ ಎನವಿರನ್ ಮೆಂಟ್ ಫೆಸಿಲಿಟಿ" ನಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವರು.

"ರಾಮ್ಸರ್ ಕನ್ ವೆನ್ ಶನ್":

- "ತೇವಭೂಮಿಗಳ (Wetland)" ಸಂರಕ್ಷಣೆಗಾಗಿ 1971 ರಲ್ಲಿ ಇರಾನ್ ನ ರಾಮ್ಸರ್ ನಲ್ಲಿ ಅಸ್ಥಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಒಪ್ಪಂದವೇ "ರಾಮ್ಸರ್ ಕನ್ ವೇನ್ ಶನ್". ಸದ್ಯ 167 ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸದಸ್ಯತ್ವ ಪಡೆದಕೊಂಡಿವೆ. ಏಪ್ರಿಲ್ 17, 2013 "ಒಮೆನ್" ದೇಶ ಈ ಒಪ್ಪಂದಕ್ಕೆ ಸಹಿ ಹಾಕಿದ 167 ನೇ ರಾಷ್ಟವೆನಿಸಿತು.
- ಇದೊಂದು ಅಂತರರಾಷ್ಟ್ರೀಯ ಒಪ್ಪಂದವಾಗಿದ್ದು, ಸದಸ್ಯ ರಾಷ್ಟ್ರಗಳು ತಮ್ಮ ದೇಶಗಳಲ್ಲಿ ಈ ಒಪ್ಪಂದದ ಮೂಲಕ ಗುರುತಿಸಲಾದ ತೇವಭೂಮಿ ಮತ್ತು ಅಲ್ಲಿನ ಜೀವ ವೈವಿಧ್ಯಮಗಳ ರಕ್ಷಣೆಗೆ ಬದ್ದವಾಗಿರಬೇಕು.
- ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಹಕಾರ ಮೂಲಕ "ತೇವ ಭೂಮಿಗಳ" ನ್ನು ವಿವೇಕಯುತವಾಗಿ ಬಳಸಿಕೊಂಡು ಸುಸ್ಥಿರ ಅಭಿವೃದ್ದಿಯನ್ನು ಹೊಂದುವುದು ಇದರ ಮುಖ್ಯ ಉದ್ದೇಶ.
- ಫೆಬ್ರವರಿ 2 ರಂದು: "ವಿಶ್ವ ತೇವಭೂಮಿ ದಿನ (World Wetland Day)" ವನ್ನಾಗಿ ಆಚರಿಸಲಾಗುತ್ತದೆ.
- **ಭಾರತದಲ್ಲಿ ಸದ್ಯ "ರಾಮ್ಸರ್ ಕನ್ ವೆನ್ ಶನ್" ಗುರುತಿಸಲ್ಪಟ್ಟ 26 ತೇವಭೂಮಿಗಳಿವೆ**.

**"ಶೇಕ್ ಸಲ್ಮಾನ್": "ಏಷ್ಯನ್ ಫುಟ್ ಬಾಲ್ ಫೆಡರೇಷನ್" ನ ನೂತನ ಅಧ್ಯಕ್ಷ**

"ಏಷ್ಯನ್ ಫುಟ್ ಬಾಲ್ ಫೆಡರೇಷನ್" ನ ನೂತನ ಅಧ್ಯಕ್ಷರಾಗಿ "ಶೇಕ್ ಸಲ್ಮಾನ್ ಬಿನ್ ಇಬ್ರಾಹಿಂ ಅಲ್ ಖಲೀಫಾ" ರವರು ಆಯ್ಕೆಯಾದರು. ಮಹಮ್ಮದ್ ಬಿನ್ ಹಮ್ಮಾಮ್ ರವರಿಂದ ತೆರವಾಗಿದ್ದ ಈ ಸ್ಥಾನವನ್ನು "ಶೇಕ್ ಸಲ್ಮಾನ್" ರವರು ತುಂಬಲಿದ್ದು, ಮುಂದಿನ ಎರಡು ವರ್ಷಗಳ ಕಾಲ AFF ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ.

- ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಹ್ರೇನ್ ಮೂಲದ ಸಲ್ಮಾನ್ ರವರು, ಥಾಯ್ಲೆಂಡ್ ನ "ವೊರವಿ ಮಕುದಿ" ಮತ್ತು ಯುಎಇ ಯ ಯೂಸಫ್ ಅಲ್ ಸರ್ಕಲ್ ರವರನ್ನು ಹಿಂದಿಕ್ಕಿ 46 ಮತಗಳ ಪೈಕಿ 33 ಮತಗಳನ್ನು ಗಳಿಸುವಲ್ಲಿ ಯಶಸ್ವಿಯಾದರು.

- ಇದೇ ವೇಳೆ FIFA ದ ಕಾರ್ಯಕಾರಿ ಮಂಡಳಿಗೆ ನಡೆದ ಚುನಾವಣೆಯಲ್ಲೂ ಸಹ ಸಲ್ಮಾನ್ ರವರು ವಿಜಯರಾದರು. ಅವರು ಖತರ್ ನ "ಹಸನ್ ಅಲ್ ತವೇದಿ" ರವರನ್ನು ಮಣಿಸುವ ಮೂಲಕ FIFA ದ ಕಾರ್ಯಕಾರಿ ಮಂಡಳಿಗೆ ನೇಮಕಗೊಂಡರು.

**ಮಲೇಷ್ಯಾ ಪ್ರಧಾನಿಯಾಗಿ "ನಜೀಬ್ ರಜಾಕ್"**

ಮಲೇಷಿಯಾದಲ್ಲಿ ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ 56 ವರ್ಷಗಳಿಂದ ಅಧಿಕಾರದಲ್ಲಿರುವ "ಬಾರಿಸನ್ ನ್ಯಾಷನಲ್ ಪಕ್ಷಕ್ಕೆ (ಬಿಎನ್)" ಸ್ಪಷ್ಟ ಬಹುಮತ ಪಡೆಯಿತು. ನಜೀಬ್ ರಜಾಕ್ ರವರು ಎರಡನೇ ಅವಧಿಗೆ ಮಲೇಷಿಯಾ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಮಲೇಷಿಯಾದ ರಾಜ "ಅಬ್ದುಲ್ಲಾ ಹಲಿಮ್ ಮುಝ್ದುಮ್ ಶಾ" ರವರು ನಜೀಬ್ ರವರಿಗೆ ಪ್ರಮಾಣ ವಚನ ಬೋಧಿಸಿದರು.

- ಇತ್ತೀಚೆಗೆ ನಡೆದ ಚುನಾವಣೆಯಲ್ಲಿ "ನಜೀಬ್ ರಜಾಕ್" ಮುಂದಾಳತ್ವದ ನ್ಯಾಷನಲ್ ಬಾರಿಸನ್ ಪಕ್ಷ 222 ಸದಸ್ಯ ಬಲದ ಸಂಸತ್ತಿನ 133 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಮತ್ತೊಮ್ಮೆ ಆಡಳಿತ ನಡೆಸುವ ಅಧಿಕಾರವನ್ನು ತನ್ನ ಸುರ್ಪದಿಗೆ ತೆಗೆದುಕೊಂಡಿತು. ಆದರೆ ಈ ಬಾರಿ ವಿರೋಧ ಪಕ್ಷಗಳ ಮೈತ್ರಿಕೂಟ ತೀವ್ರ ಪೈಪೋಟಿ ನೀಡಿತ್ತು.
- ಬಾರಿಸನ್ ನ್ಯಾಷನಲ್ ಪಕ್ಷ 1956 ರಿಂದ ಸತತವಾಗಿ 56 ವರ್ಷಗಳ ಕಾಲ ಮಲೇಷಿಯಾವನ್ನು ಮುನ್ನಡೆಸುತ್ತಿದೆ.

**ನಜೀಬ್ ರಜಾಕ್:**

- ನಜೀಬ್ ರಜಾಕ್ ರವರು 2009 ರಲ್ಲಿ ಮಲೇಷಿಯಾದ 6 ನೇ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಇದು ಅವರ ಎರಡನೇ ಅವಧಿ.
- ಪ್ರಧಾನಿಯಾಗುವುದಕ್ಕೂ ಮುನ್ನ ಅವರು 7 ಜನವರಿ 2004 ರಿಂದ 3 ಏಪ್ರಿಲ್ 2009 ರ ವರೆಗೆ ಉಪ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು.
- 1991 ರಲ್ಲಿ ಅವರು ರಕ್ಷಣಾ ಸಚಿವರಾಗಿದ್ದರು. ಬಳಿಕ 1995 ರಲ್ಲಿ ಶಿಕ್ಷಣ ಸಚಿವರಾಗಿ ನೇಮಕಗೊಂಡರು. 2008 ರಲ್ಲಿ ಆರ್ಥಿಕ ಸಚಿವಾಲಯದ ಮೇಲ್ವಿಚಾರಣೆ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

**ವಿಶ್ವ ವ್ಯಾಪಾರ ಸಂಸ್ಥೆಯ ಮುಖ್ಯಸ್ಥರಾಗಿ "ರಾಬರ್ಟೋ ಕರ್ವಲ್ಹೊ ಡಿ ಅಝೆವೆದೊ"**

ಬ್ರೆಜಿಲ್ ನ "ರಾಬರ್ಟೋ ಕರ್ವಲ್ಹೊ ಡಿ ಅಝೆವೆದೊ (Roberto Carvaldo de Azevedo)" ರವರು "ವಿಶ್ವ ವ್ಯಾಪಾರ ಸಂಸ್ಥೆಯ(World Trade Organisation(WTO))" ಮುಖ್ಯಸ್ಥರಾಗಿ (ಡೈರೆಕ್ಟರ್ ಜನರಲ್) ಆಯ್ಕೆಯಾಗಿದ್ದಾರೆ. ಅಝೆವೆದೊ ರವರು "ಪ್ಯಾಸ್ಕಲ್ ಲ್ಯಾಮಿ" ರವರಿಂದ ಸೆಪ್ಟೆಂಬರ್ 2013 ರಲ್ಲಿ ಅಧಿಕಾರವಹಿಸಿಕೊಳ್ಳಲಿದ್ದಾರೆ.

- "ಅಝೆವೆದೊ" ರವರು ಈ ಹುದ್ದೆಯನ್ನು ಅಲಂಕರಿಸಿದ ಲ್ಯಾಟಿನ್ ಅಮೆರಿಕಾ ಮೊದಲ ವ್ಯಕ್ತಿ. ಒಟ್ಟು 9 ಜನ ಈ ಹುದ್ದೆಗಾಗಿ ಪೈಪೋಟಿ ನಡೆಸಿದ್ದರು.
- ಬ್ರೆಜಿಲ್ ಆರ್ಥಿಕ ವ್ಯವಹಾರ ಮತ್ತು ಹಣಕಾಸು ಸಂಬಂಧಿತ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿರುವ ಅನುಭವವನ್ನು ಅಝೆವೆದೊ ಹೊಂದಿದ್ದಾರೆ.

- ಬ್ರೆಜಿಲ್ ನ ಹಿರಿಯ ರಾಜತಾಂತ್ರಿಕ ಆಗಿರುವ "ಅಝೆವೆಡೊ" ರವರು 2008 ರಿಂದ WTO ದಲ್ಲಿ ಬ್ರೆಜಿಲ್ ಖಾಯಂ ಪ್ರತಿನಿಧಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ವಿಶ್ವ ವ್ಯಾಪಾರ ಸಂಸ್ಥೆ:

- ಅಂತರರಾಷ್ಟ್ರೀಯ ವ್ಯಾಪಾರವನ್ನು ಮೇಲ್ವಿಚಾರಣೆ ಮಾಡುವ ಮತ್ತು ಉದಾರೀಕರಣಗೊಳಿಸುವ ಆಶಯವನ್ನು ಹೊಂದಿರುವ ಒಂದು ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆ. ಇದರ ಕೇಂದ್ರ ಕಚೇರಿ ಸ್ವಿಟ್ಜರ್ ಲ್ಯಾಂಡ್ ನ ಜಿನಿವಾದಲ್ಲಿದೆ.
- 1948 ರಿಂದ ಜಾರಿಯಲ್ಲಿದ್ದ "ಸುಂಕಗಳು ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ (General Agreement on Trade and Tariff (GATT))ದ ಪರ್ಯಾಯವಾಗಿ, ಮರಾಕೇಶ್ ಒಪ್ಪಂದದ ಅನ್ವಯ ಜನವರಿ 1, 1995 ರಿಂದ ಅಧಿಕೃತವಾಗಿ ಕಾರ್ಯಾರಂಭಿಸಿತು.
- WTO ಪ್ರಸ್ತುತ 159 ಸದಸ್ಯರನ್ನು ಹೊಂದಿದೆ.
- ಪೀಟರ್ ಸುತರ್ ಲ್ಯಾಂಡ್ (Peter Sutherland) WTO ನ ಮೊದಲ ಡೈರೆಕ್ಟರ್ ಜನರಲ್.

**"ಇವಾನ್ ಮೆನೆಝೆಸ್ (Ivan Menezes)" ಡಿಯೋಜಿಯೊದ ನೂತನ ಸಿಇಒ**

ಜಗತ್ತಿನ ಅತಿ ದೊಡ್ಡ ಮದ್ಯ ಕಂಪನಿ "ಡಿಯೋಜಿಯೊದ (Diageo)" ಮುಖ್ಯಕಾರ್ಯನಿರ್ವಹಣಾಧಿಕಾರಿ (ಸಿಇಒ)ಯಾಗಿ ಭಾರತ ಮೂಲದ "ಇವಾನ್ ಮೆನೆಝೆಸ್" ರವರು ನೇಮಕಗೊಂಡಿದ್ದಾರೆ. ಈ ಬೆಳವಣೆಗೆಯಿಂದ ಭಾರತೀಯನೊಬ್ಬರು ವಿಶ್ವದ ಅತಿ ದೊಡ್ಡ ಕಂಪನಿಯ ಜವಾಬ್ದಾರಿಯನ್ನು ವಹಿಸಿಕೊಂಡಂತಾಗಿದೆ.

- "ಸಿಮ್ರಾನ್ ಆಫ್", "ಜಾನಿ ವಾಕರ್", ಕ್ಯಾಪ್ಟನ್ ಮೊರ್ಗನ್" ಮತ್ತು "ವಾಂಟೆಡ್ ಸಿಂಗಲ್" ನಂತಹ ವಿಶ್ವದ ಅತಿ ಜನಪ್ರಿಯ ಮದ್ಯ ಬ್ರಾಂಡ್ ಗಳನ್ನು "ಡಿಯೊಜಿಯೊ" ಕಂಪನಿ ತಯಾರಿಸುತ್ತಿದೆ.
- ಡಿಯೊಜಿಯಾದ ಪ್ರಸ್ತುತ ಸಿಇಒ ಆಗಿರುವ "ಪಾಲ್ ವಾಶ್" ರವರು ಮುಂದಿನ ತಿಂಗಳಲ್ಲಿ ಅಧಿಕಾರದಿಂದ ಕೆಳಗಿಳಿಯಲ್ಲಿದ್ದು, ಅವರ ಉತ್ತರಾಧಿಕಾರಿಯಾಗಿ "ಇವಾನ್ ಮೆನೆಝೆಸ್" ರವರು ಜುಲೈ 1 ರಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ.
- ಐಐಎಂ-ಅಲಹಬಾದ್ ನಲ್ಲಿ ಎಂಬಿಎ ಪದವಿ ಪಡೆದಿರುವ "ಇವಾನ್ ಮೆನೆಝೆಸ್" ರವರು ಡಿಯೊಜಿಯೊ ಕಂಪನಿಯ ಉತ್ತರ ಅಮೆರಿಕಾದ ವಿಭಾಗದಲ್ಲಿ ಸಿಓಓ ಆಗಿ 8 ವರ್ಷಗಳ ಕಾಲ ಸೇವೆಸಲ್ಲಿಸಿದ್ದರು.

**ಹಾಲಿವುಡ್ ಸಿನಿಮಾ ನಿರ್ದೇಶಕ "ಬ್ರಯಾನ್ ಫೋರ್ಬ್ಸ್ (Bryan Forbes) ನಿಧನ"**

ಹಾಲಿವುಡ್ ನ ಹಿರಿಯ ಸಿನಿಮಾ ನಿರ್ದೇಶಕ, ನಟ ಮತ್ತು ಕಾದಂಬರಿಗಾರ "ಬ್ರಯಾನ್ ಫೋರ್ಬ್ಸ್" ರವರು ನಿಧನರಾದರು. ದೀರ್ಘಕಾಲದ ಆರೋಗ್ಯ ಸಮಸ್ಯೆಯಿಂದ ಅವರು ಬಳಲುತ್ತಿದ್ದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಬ್ರಯಾನ್ ಫೋರ್ಬ್ಸ್ ಬಗ್ಗೆ:

- ಬ್ರಯಾನ್ ರವರು ಜುಲೈ, 22, 1926 ರಲ್ಲಿ ಲಂಡನ್ ನಲ್ಲಿ ಜನಿಸಿದರು. ನವೋದರ ಪುರುಷ ಎಂದೇ ಅವರು ಖ್ಯಾತಿ ಹೊಂದಿದ್ದರು.

- ಬ್ರಯಾನ್ ನಿರ್ದೇಶನದಲ್ಲಿ 1970 ರಲ್ಲಿ ತೆರೆಕಂಡ ಭಯಾನಕ ಚಿತ್ರ "ಸ್ಟೆಫೋರ್ಡ್ ವೈವ್ಸ್ (Steford Wives)" ಅಪಾರ ಯಶಸ್ಸುಗಳಿಸುವ ಮೂಲಕ ಅವರಿಗೆ ವಿಶ್ವ ಮನ್ನಣೆ ತಂದು ಕೊಟ್ಟಿತು.
- "ಕಿಂಗ್ Rat", "ವಿಶಲ್ ಡೌನ್ ದಿ ವಿಂಗ್", "ದಿ ಅಂಗ್ರಿ ಸೈಲೆನ್ಸ್" ಮತ್ತು "ದಿ ಲೀಗ್ ಆಫ್ ಜೆಂಟಲಲ ಮನ್" ಅವರು ನಿರ್ದೇಶನದ ಪ್ರಮುಖ ಚಿತ್ರಗಳು.
- ಅವರ "ದಿ ಅಂಗ್ರಿ ಸೈಲೆನ್ಸ್" ಚಿತ್ರಕ್ಕೆ 1976 ರಲ್ಲಿ BAFTA ಸಿನಿಮಾ ಪ್ರಶಸ್ತಿ ಸೇರಿದಂತೆ "ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್: ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

**"ಧ್ರುಪದ್" ಮಾಂತ್ರಿಕ "ಉಸ್ತದ್ ಝಿಯಾ ಫಾರುಧ್ದುದ್ದೀನ್ ದಗರ್" ವಿಧಿವಶ**

ಪ್ರಸಿದ್ಧ "ಧ್ರುಪದ್ (Drupad) ಗಾಯಕ" "ಉಸ್ತದ್ ಝಿಯಾ ಫಾರುದ್ದುದ್ದೀನ್ ದಗರ್" ರವರು ಕೊನೆಯುಸಿರೆಳೆದರು. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರಿಗೆ 80 ವರ್ಷ ವಯಸ್ಸಾಗಿತ್ತು. "ಧ್ರುಪದ್" ಸಂಗೀತಾ ವಿಶ್ವ ವಿಖ್ಯಾತಿ ಪಡೆಯುವಲ್ಲಿ ಅವರ ಅಪಾರ ಶ್ರಮ ವಹಿಸಿದ್ದರು.

**"ಉಸ್ತದ್ ಝಿಯಾ ಫಾರುದ್ದುದ್ದೀನ್ ದಗರ್"**

- ರಾಜಸ್ತಾನದ ಜೈಪುರದಲ್ಲಿ ಜುಲೈ, 15, 1932 ರಂದು ಜನನ.
- ಇವರ ತಂದೆ "ಉಸ್ತದ್ ಝಿಯಾ ಉದ್ದೀನ್ ದಗರ್" ರವರು ಜೈಪುರದ "ಮಹಾರಾಜ ಭೂಪಾಲ್ ಸಿಂಗ್" ರವರ ಆಸ್ಥಾನದಲ್ಲಿ ಪ್ರಸಿದ್ಧ ಸಂಗೀತಕಾರರಾಗಿದ್ದರು. ಇವರ ಹಿರಿಯ ಸಹೋದರ ದಿವಂಗತ "ಉಸ್ತದ್ ಝಿಯಾ ಮೊಹಿದ್ದೀನ್ ದಗರ್" ರವರು ಸಹ "ಧ್ರುಪದ್" ಸಂಗೀತಕಾರ ಎನಿಸಿದ್ದರು.
- ದಗರ್ ರವರು ದೇಶ ವಿದೇಶಗಳಲ್ಲಿ ನಡೆದ ಅನೇಕ ಸಮಾರಂಭಗಳಲ್ಲಿ "ಧ್ರುಪದ್" ಸಂಗೀತಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದರು.
- ಧ್ರುಪದ್ ಸಂಗೀತಕ್ಕೆ ನೀಡಿದ್ದ ಅಮೋಘ ಕಾಣಿಕೆಯನ್ನು ಗುರುತಿಸಿ ದಗರ್ ರವರಿಗೆ "ಟಾಗೋರ್ ರತ್ನ", "ತಾನಸೇನ್ ಸಮ್ಮಾನ್" ಮತ್ತು ಸಂಗೀತಾ ನಾಟಕ ಅಕಾಡೆಮಿಯ ಪುರಸ್ಕಾರಗಳನ್ನು ನೀಡಲಾಗಿತ್ತು.
- ದೇಶದ ನಾಲ್ಕನೇ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ "ಪದ್ಮಶ್ರೀ" ಪ್ರಶಸ್ತಿಗೆ 2012 ನೇ ಸಾಲಿನಲ್ಲಿ ಇವರನ್ನು ಆಯ್ಕೆಮಾಡಲಾಗಿತ್ತು. ಆದರೆ ದಗರ್ ರವರು "ಪದ್ಮಶ್ರಿ" ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದ್ದರು.

**ಬ್ರೆಜಿಲ್ ನ ನೊಬೆಲ್ ವಿಜೇತ "ಕ್ರಿಶ್ಚಿಯನ್ ಡಿ ದುವೆ" ನಿಧನ**

ಬ್ರೆಜಿಲ್ ನ ನೊಬೆಲ್ ಪುರಸ್ಕೃತ ಪ್ರಖ್ಯಾತ ವಿಜ್ಞಾನಿ "ಕ್ರಿಶ್ಚಿಯನ್ ಡಿ ದುವೆ" (95) ರವರು ದಯಾಮರಣ ಸ್ವೀಕರಿಸುವ ಮೂಲಕ ಮರಣರಾದರು. 2008 ರಲ್ಲಿ ಲೇಖಕ "ಹುಗೊ ಕ್ಲಾಸ್" ನಂತರ ದಯಾಮರಣ ಸ್ವೀಕರಿಸದ ಬ್ರೆಜಿಲ್ ನ ಎರಡನೇ ಪ್ರಮುಖ ವ್ಯಕ್ತಿ "ಕ್ರಿಶ್ಚಿಯನ್ ಡಿ ದುವೆ".

- ಮನೆಯಲ್ಲಿ ಆಕಸ್ಮಿಕವಾಗಿ ಜಾರಿ ಬಿದ್ದ ಕಾರಣ ದುವೆ ರವರು ತೀವ್ರವಾಗಿ ಗಾಯಗೊಂಡಿದ್ದರು. ನೋವಿನಿಂದ ಬಳಲುತ್ತಿದ್ದ ಅವರು ಐಚ್ಛಿಕವಾಗಿ ದಯಾಮರಣ ಸ್ವೀಕರಿಸುವುದಾಗಿ ಕುಟುಂಬ ಸದಸ್ಯರು ಹೇಳಿದ್ದಾರೆ.

- ಬ್ರೆಜಿಲ್ ನ "ಅಲ್ಬರ್ಟ್ ಕ್ಲಾರ್ಕ್", ಅಮೆರಿಕಾದ "ಜಿಯಾರ್ಜ್ ಪಲಡೆ" ಜತೆ ಜಂಟಿಯಾಗಿ ಕ್ಯಾನ್ಸರ್ ಮೇಲೆ ನಡೆಸಿದ ಸಂಶೋಧನೆಗಾಗಿ ದುವೆ ರವರಿಗೆ 1974 ರಲ್ಲಿ ವೈದ್ಯಕೀಯ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿತ್ತು.
- ಬ್ರೆಜಿಲ್ ನಲ್ಲಿ ದಯಾಮರಣಕ್ಕೆ ಕಾನೂನು ಮಾನ್ಯತೆ ನೀಡಲಾಗಿದೆ. ನೆದರ್ ಲ್ಯಾಂಡ್ ನಂತರ ದಯಾಮರಣಕ್ಕೆ ಕಾನೂನು ಮಾನ್ಯತೆ ನೀಡಿದ ಎರಡನೇ ರಾಷ್ಟ್ರ ಬ್ರೆಜಿಲ್.

**"ಏರ್ ಏಷ್ಯಾ ಇಂಡಿಯಾ" ಸಂಸ್ಥೆಯ ಪ್ರಥಮ ಸಿಇಓ ಆಗಿ "ಮಿತ್ತು ಚಾಂಡಿಲ್ಯ" ನೇಮಕ**

ಮಲೇಷಿಯಾದ ಅಗ್ಗ ದರದ ವಿಮಾನಯಾನ ಸಂಸ್ಥೆ ಮತ್ತು ಭಾರತದ ಟಾಟಾ ಸಂಸ್ಥೆ ಪಾಲುಗಾರಿಕೆಯ "ಏರ್ ಏಷ್ಯಾ ಇಂಡಿಯಾ" ಸಂಸ್ಥೆಯ ಮೊದಲ ಸಿಇಓ ಆಗಿ "ಮಿತ್ತು ಚಾಂಡಿಲ್ಯ" ರವರನ್ನು ನೇಮಕಮಾಡಲಾಗಿದೆ.

- ಭಾರತ ಮೂಲದವರಾದ ಮಿತ್ತು ಚಾಂಡಿಲ್ಯ ರವರು ಸದ್ಯ ಸಿಂಗಾಪುರದಲ್ಲಿ "ಮ್ಯಾನಜ್ ಮೆಂಟ್ ಕನ್ಸಲ್ ಟೆಂಟ್" ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಕೇವಲ 32 ವರ್ಷ ವಯಸ್ಸಿನವರಾದ ಚಾಂಡಿಲ್ಯ ರವರು ಭಾರತ ವಿಮಾನಯಾನ ಸಂಸ್ಥೆಗಳ ಸಿಇಓ ಗಳಲ್ಲೇ ಅತಿ ಕಿರಿಯ ಎನಿಸಿದ್ದಾರೆ. "ಇಂಡಿಗೋ" ವಿಮಾನಯಾನ ಸಂಸ್ಥೆಯ ಅಧ್ಯಕ್ಷರಾಗಿ "ಆದಿತ್ಯ ಘೋಷ್" ರವರು ಇದೇ ವಯಸ್ಸಿನಲ್ಲಿ ಅಧಿಕಾರ ವಹಿಸಿಕೊಂಡಿದ್ದರು.
- ಭಾರತದವರೇ ಆದ "ಮಿತ್ತು" ರವರ ನೇತೃತ್ವದಲ್ಲಿ "ಏರ್ ಏಷ್ಯಾ ಇಂಡಿಯಾ" ಸಂಸ್ಥೆ ಭಾರತದಲ್ಲಿ ಕಾರ್ಯಾರಂಭ ಮಾಡಲು ವಿಮಾನಯಾನ ಸಚಿವಾಲಯದಿಂದ ಬೇಕಾಗಿರುವ ಅನುಮತಿಯನ್ನು ಪಡೆಯಲು ಸುಗಮವಾಗಲಿದೆ ಎಂದು ಸಂಸ್ಥೆ ಹೇಳಿದೆ.

**ಎವರೆಸ್ಟ್ ಏರಿ ಸಾಧನೆ ಬರೆದ ಮಹಿಳೆಯರು: ಕಿರು ಪರಿಚಯ**

ವಿಶ್ವದ ಅತ್ಯಂತ ಎತ್ತರದ ಶಿಖರ ಮೌಂಟ್ ಎವರೆಸ್ಟ್ ನ್ನು ಏರಿ ಸುದ್ದಿಯಲ್ಲಿರುವ ಕೆಲವು ಮಹಿಳೆಯರ ಕಿರು ಪರಿಚಯ

- **ರಹ ಮೊಹರಕ್:** ರಹ ಮೊಹರಕ್ ರವರು ಮೂಲತಃ ಜೆಡ್ಡಾದವರು. 25 ವರ್ಷ ಪ್ರಾಯದ ಈಕೆ ಮೌಂಟ್ ಎವರೆಸ್ಟ್ ಶಿಖರವನ್ನು ತಲುಪುವ ಮೂಲಕ ಈ ಸಾಧನೆಗೈದ "ಸೌಧಿ ಅರೇಬಿಯಾ"ದ ಮೊದಲ ಮಹಿಳೆ ಎನಿಸಿದ್ದಾರೆ. ಅಷ್ಟೇ ಅಲ್ಲ ಎವರೆಸ್ಟ್ ಏರಿದ ಅರಬ್ ನ ಕಿರಿಯ ಮಹಿಳೆ ಸಹ ಆಗಿದ್ದಾರೆ. ರಹಾ ಅವರು ಪರ್ವತರೋಹಣಕ್ಕೆ ಕೈಹಾಕಿರುವುದು ಇದೇ ಮೊದಲಲ್ಲ. "ಸ್ತನ ಕ್ಯಾನ್ಸರ್" ನ ಬಗ್ಗೆ ಅರಿವು ಮೂಢಿಸುವ ಸಲುವಾಗಿ ಕಳೆದ ಬಾರಿ ಪರ್ವತರೋಹಣ ಕೈಗೊಂಡಿದ್ದರು.

- **ಅಂಶು ಜಮ್ ಶೆನ್ಪ:** "ಅಂಶು ಜಮ್ ಶೆನ್ಪ" ಅರುಣಾ ಚಲ ಪ್ರದೇಶ ರಾಜ್ಯದವರು. ಸತತವಾಗಿ ಮೂರನೇ ಬಾರಿ ಮೌಂಟ್ ಎವೆರಸ್ಟ್ ಶಿಖರವನ್ನು ತಲುಪುವ ಮೂಲಕ ಸುದ್ದಿಯಲ್ಲಿದ್ದಾರೆ. ಈ ಹಿಂದೆ ಎವೆರಸ್ಟನ್ನು ಹತ್ತು ದಿನಗಳ ಅಂತರದಲ್ಲಿ ಎರಡು ಬಾರಿ ಏರುವ ಮೂಲಕ ದಾಖಲೆ ಬರೆದಿದ್ದರು.

- **ಚಂದ ಗಯೇನ್**: ಪಶ್ಚಿಮ ಬಂಗಾಳದವರಾದ "ಚಂದ ಗಯೇನ್" ರವರು ಎವರೆಸ್ಟ್ ಶಿಖರವನ್ನು ಮುಟ್ಟವ ಮೂಲಕ ಈ ದಾಖಲೆಗೈದ ಪಶ್ಚಿಮ ಬಂಗಾಳದ ಮೂರನೇ ಮಹಿಳೆ ಎನಿಸಿದ್ದಾರೆ. ಹೌರ ನಗರ ನಿವಾಸಿಯಾಗಿರುವ 30 ವರ್ಷದ ಚಂಧ ರವರು ಈ ಹಿಂದೆ ಹಿಮಾಲಯದ ಜೊಗಿನ್ ಪರ್ವತವನ್ನು ಯಶಸ್ವಿಯಾಗಿ ಏರಿದ್ದರು. 1994 ರಲ್ಲಿ ಡಾರ್ಜಲಿಂಗ್ ನ "'ಕುಂಗ ಭೂತಿಯಾ" ಮತ್ತು 2004 ರಲ್ಲಿ ಮುರ್ಷಿದಬಾದ್ ನ "ಶಿರ್ಪಾ ಮಜುಂದರ್" ಎವೆರಸ್ ಏರಿದ್ದ ಪಶ್ಚಿಮ ಬಂಗಾಳದ ಇಬ್ಬರು ಮಹಿಳೆಯರು.

**WMO ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ "ಲಕ್ಷಣ್ ರಾಥೋರ್ ಸಿಂಗ್" ನೇಮಕ**

"ಭಾರತ ಪವನಶಾಸ್ತ್ರ ಸಂಸ್ಥೆ(Meteorological Institute)" ಯ ನಿರ್ದೇಶಕ ಹಾಗೂ "ವಿಶ್ವ ಪವನಶಾಸ್ತ್ರ ಸಂಸ್ಥೆ (World Meteorological Organisation (WMO))" ನ ಭಾರತದ ಖಾಯಂ ಪ್ರತಿನಿಧಿಯಾಗಿರುವ "ಲಕ್ಷಣ್ ಸಿಂಗ್ ರಾಥೋರ್" ರವರು "ವಿಶ್ವ ಪವನಶಾಸ್ತ್ರ ಸಂಸ್ಥೆ"ಯ ಕಾರ್ಯಕಾರಿ ಮಂಡಳಿಗೆ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಜಿನಿವಾದಲ್ಲಿ ನಡೆದ ವಿಶ್ವ ಪವನಶಾಸ್ತ್ರ ಸಂಸ್ಥೆಯ 65 ನೇ ಕಾರ್ಯಕಾರಿ ಮಂಡಳಿ ಸಭೆಯಲ್ಲಿ "ರಾಥೋರ್" ರವರನ್ನು ಆಯ್ಕೆಮಾಡಲಾಗಿದೆ.

- ರಾಥೋರ್ ರವರು ಈ ಹಿಂದೆ "WMO" ಕೃಷಿ ಆಯೋಗದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.
- WMO ಕಾರ್ಯಕಾರಿ ಮಂಡಳಿಯು ಒಬ್ಬ ಅಧ್ಯಕ್ಷ, ಮೂವರು ಉಪಾಧ್ಯಕ್ಷರು ಮತ್ತು 37 ಪವನಶಾಸ್ತ್ರ ಕೇಂದ್ರಗಳ ನಿರ್ದೇಶಕರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ.
- ಕಾರ್ಯಕಾರಿ ಮಂಡಳಿಯೂ "WMO" ನ ಪ್ರಮುಖ ಅಂಗವಾಗಿದ್ದು, ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಗಳ ಸಮರ್ಪಕ ಅನುಷ್ಠಾನ, ಯೋಜನೆಗಳ ಅನುಷ್ಠಾನಕ್ಕೆ ತಗಲುವ ಅನುದಾನದ ವಿವರ ಸೇರಿದಂತೆ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿದೆ.

**ಭಾರತದ 12 ನೇ CAG ಆಗಿ "ಶಶಿಕಾಂತ್ ಶರ್ಮಾ"**

ದೇಶದ 12 ನೇ "ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ (ಸಿಎಜಿ)" ಆಗಿ "ಶಶಿಕಾಂತ್ ಶರ್ಮಾ" ರವರನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ನೇಮಕ ಮಾಡಿದ್ದಾರೆ. ಹಾಲಿ ಸಿಎಜಿ ಆಗಿದ್ದ "ವಿನೋದ್ ರಾಯ್" ಅವರ ಅವಧಿ ಮೇ 21, 2013 ಕ್ಕೆ ಮುಗಿಯಲಿದ್ದು, ಅವರ ಸ್ಥಾನವನ್ನು ಶಶಿಕಾಂತ್ ಶರ್ಮಾರವರು ತುಂಬಲಿದ್ದಾರೆ. ರಕ್ಷಣಾ ಕಾರ್ಯದರ್ಶಿಯಾಗಿರುವ ಶಶಿಕಾಂತ ಶರ್ಮಾ ರವರು ಮೇ 23, 2013 ರಂದು ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ.

**"ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ":**

- ಭಾರತ ಸಂವಿಧಾನದ ಪರಿಚ್ಛೇದ 148 (1) ರ ಪ್ರಕಾರ "ಸಿಎಜಿ" ರವರನ್ನು ಭಾರತದ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ. ಸಂವಿಧಾನದ ಪರಿಚ್ಛೇದ 148-151 ರ ಅಡಿಯಲ್ಲಿ "ಸಿಎಜಿ" ರ ನೇಮಕಾತಿ, ನಿವೃತ್ತಿ ಮತ್ತು ಕಾರ್ಯವಿಧಾನಗಳ ಬಗ್ಗೆ ಉಲ್ಲೇಖಿಸಲಾಗಿದೆ.
- ಸಭಾರತ ಸರ್ಕಾರದ "ಸ್ವೀಕೃತಿ ಮತ್ತು ಖರ್ಚಿನ" ವಿವರಗಳ ಲೆಕ್ಕ ತಪಾಸಣೆ ಮಾಡಿ ಸಂಸತ್ತಿನ "ಸಾರ್ವಜನಿಕ ಲೆಕ್ಕ ತಪಾಸಣಾ" ಸಮಿತಿಗೆ ಸಲ್ಲಿಸುವ ಜವಾಬ್ದಾರಿಯನ್ನು "ಸಿಎಜಿ" ಗೆ ವಹಿಸಲಾಗಿದೆ. ಆದ್ದರಿಂದಲೇ "ಸಿಎಜಿ" ರವರನ್ನು

**"ಸಾರ್ವಜನಿಕ ಹಣಕಾಸಿನ ಕಾವಲುಗಾರ (Guardian of Public Purse)"** ಎನ್ನಲಾಗಿದೆ. ಸಿಎಜಿ ರವರು "ಇಂಡಿಯನ್ ಆಡಿಟ್ ಅಂಡ್ ಅಂಕೌಟ್ಸ್ ಕೌನ್ಸಿಲ್" ನ ಅಧ್ಯಕ್ಷರು ಸಹ ಆಗಿರುತ್ತಾರೆ.

- ಸಿಎಜಿ ರವರು **"ಸುಪ್ರೀಂಕೋರ್ಟ್ ನ ನ್ಯಾಯಾಧೀಶರು"** ಹೊಂದಿರುವ ಸ್ಥಾನಮಾನಗಳನ್ನು ಹೊಂದಿರುತ್ತಾರೆ. ಇವರ ಮಾಸಿಕ ಸಂಬಳ ರೂ.90,000/-. ಸುಪ್ರೀಂಕೋರ್ಟ್ ನ ನ್ಯಾಯಾಧೀಶರನ್ನು ವಜಾಗೊಳಿಸುವ ವಿಧಾನವೇ "ಸಿಎಜಿ" ಗೂ ಅನ್ವಯವಾಗುತ್ತದೆ.
- ಸಿಎಜಿ ರವರ ಅಧಿಕಾರ ಅವಧಿ **"6 ವರ್ಷ ಅಥವಾ 65 ವರ್ಷ"** ವಯಸ್ಸಿನವರೆಗೆ. ಯಾವುದೋ ಮುನ್ನವೊ ಅದು ಎಂದು ಭಾವಿಸತಕ್ಕದ್ದು. "ಸಿಎಜಿ" ಯವರು ನಿವೃತ್ತಿಯ ನಂತರ ಭಾರತ ಸರ್ಕಾರ (ಕೇಂದ್ರ ಮತ್ತು ರಾಜ್ಯ ಸರ್ಕಾರ) ಯಾವುದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಅರ್ಹರಲ್ಲ.

**"ನೇಮಕಾತಿ ಪ್ರಕ್ರಿಯೆ":**

- ಭಾರತದ **ರಾಷ್ಟ್ರಪತಿಗಳು** "ಕಂಟ್ರೋಲರ್ ಅಂಡ್ ಅಡಿಟರ್ ಜನರಲ್ ಆಫ್ ಇಂಡಿಯಾ" ರವರನ್ನು ಪ್ರಧಾನಿ ಮಂತ್ರಿಗಳ ಶಿಫಾರಸ್ಸಿನ ಮೇರೆಗೆ ನೇಮಕ ಮಾಡುತ್ತಾರೆ. ಸಿಎಜಿ ರವರಿಗೆ ರಾಷ್ಟ್ರಪತಿಗಳು ಪ್ರಮಾಣ ವಚನ ಬೋಧಿಸುವರು.
- **"ವಿ.ನರಹರಿ ರಾವ್"** ರವರು ಭಾರತದ ಮೊದಲ "ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ". ರಾವ್ ರವರು 1948 ರಿಂದ 1954 ರ ವರೆಗೆ ಅಧಿಕಾರದಲ್ಲಿದ್ದರು.

**ಫೋರ್ಬ್ಸ್ ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ ಸೋನಿಯಾ**

ಫೋರ್ಬ್ಸ್ ನಿಯತಕಾಲಿಕೆ 2013 ರ ವಿಶ್ವದ ನೂರು ಪ್ರಭಾವಿ ಮಹಿಳೆಯರ ಪಟ್ಟಿಯನ್ನು ಹೊರತಂದಿದ್ದು, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಪೆಪ್ಸಿ ಕಂಪನಿಯ ಭಾರತ ಮೂಲದ ಮುಖ್ಯಸ್ಥೆ ಇಂದ್ರಾ ನೂರಿ ರವರು ಅತ್ಯಂತ ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ 10 ರೊಳಗೆ ಸ್ಥಾನ ಪಡೆದಿದ್ದಾರೆ.

- ಈ ಪಟ್ಟಿಯಲ್ಲಿ ಸೋನಿಯಾ ಗಾಂಧಿಗೆ 9 ನೇ ಸ್ಥಾನ ಮತ್ತು ಇಂದ್ರಾ ನೂಯಿ ಗೆ 10 ನೇ ಸ್ಥಾನ ಲಭಿಸಿದೆ.
- ಜರ್ಮನ್ ನ ಚಾನ್ಸೆಲರ್ ಆದ "ಏಂಜೆಲಾ ಮೈಕಲ್" ಸತತ ಮೂರನೇ ವರ್ಷ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದ್ದಾರೆ.
- ಐಸಿಐಸಿಐ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕಿ ಚಂದಾ ಕೊಚ್ಚರ್ (65), ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ (85) ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಇತರೆ ಭಾರತೀಯ ಮಹಿಳೆಯರು.
- ನಂತರದ ಸ್ಥಾನದಲ್ಲಿ ಬ್ರೆಜಿಲ್ ಅಧ್ಯಕ್ಷೆ "ದಿಲ್ಮಾ ರೂಸೆಫ್, ಬಿಲ್ ಗೇಟ್ಸ್ ಪತ್ನಿ "ಮಿಲಿಂದಾ ಬಿಲ್ ಗೇಟ್ಸ್", ಅಮೆರಿಕಾದ ಪ್ರಥಮ ಮಹಿಳೆ "ಮಿಶೆಲ್ ಒಬಾಮ" ಮತ್ತು ಮಾಜಿ ವಿದೇಶಾಂಗ ಕಾರ್ಯದರ್ಶಿ "ಹಿಲರಿ ಕ್ಲಿಂಟನ್" ಕಾಣಿಸಿಕೊಂಡಿದ್ದಾರೆ.

**ಖ್ಯಾತ ಹಿನ್ನಲೆ ಗಾಯಕ ಸುಂದರರಾಜನ್ ನಿಧನ**

ಅನಾರೋಗ್ಯದಿಂದ ಬಳಲುತ್ತಿದ್ದ ತಮಿಳಿನ ಖ್ಯಾತ ಹಿನ್ನಲೆ ಗಾಯಕ ಟಿ.ಎಂ.ಸುಂದರರಾಜನ್ (91) ರವರು ನಿಧನರಾದರು. ಕಳೆದ ಕೆಲವು ದಿನಗಳಿಂದ ಉಸಿರಾಟದ ತೊಂದರೆಯಿಂದ ಅವರು ಬಳಲುತ್ತಿದ್ದರು. ಸುಂದರರಾಜನ್ ರವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಆಗಲಿದ್ದಾರೆ.

- ತಮಿಳಿನ ಸುಪ್ರಸಿದ್ಧ ನಟರಾದ ಎಂ.ಜಿ.ರಾಮಚಂದ್ರನ್ ಹಾಗೂ ಶಿವಾಜಿ ಗಣೇಶನ್ ಸೇರಿದಂತೆ ಖ್ಯಾತ ನಟರ ಚಿತ್ರಗಳಲ್ಲಿ ಸುಂದರರಾಜನ್ ರವರು ತಮ್ಮ ಗಾನ ಮಾಧುರ್ಯವನ್ನು ಮೆರಿದಿದ್ದರು.
- ಸಿನಿಮಾ ಹಾಗೂ ಭಕ್ತಿ ಗೀತೆಗಳೂ ಸೇರಿದಂತೆ ಸುಮಾರು ಐದು ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಹಾಡಿದ್ದರು.
- ಭಾರತ ಸರ್ಕಾರ ನೀಡುವ ಪದ್ಮಶ್ರೀ ಪ್ರಶಸ್ತಿ ಹಾಗೂ ತಮಿಳುನಾಡು ರಾಜ್ಯ ನೀಡುವ "ಕಲೈಮಮನಿ" ಪ್ರಶಸ್ತಿಗೆ ಸುಂದರರಾಜನ್ ಭಾಜನರಾಗಿದ್ದರು.
- 2010 ರಲ್ಲಿ ನಡೆದ "ವಿಶ್ವ ಶಾಸ್ತ್ರೀಯ ತಮಿಳು ಸಮ್ಮೇಳನ"ದಲ್ಲಿ ಎ.ಆರ್ ರೆಹಮಾನ್ ರವರು ಸಂಯೋಜಿಸಿದ್ದ ಶೀರ್ಷಿಕೆ ಗೀತೆಯೇ ಅವರು ಹಾಡಿದ ಕೊನೆಯ ಹಾಡು.

**ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಅಧ್ಯಕ್ಷೆಯಾಗಿ: "ಕುಶಲ್ ಸಿಂಗ್"**

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವೂ "ಶ್ರೀಮತಿ ಕುಶಲ್ ಸಿಂಗ್" ರವರನ್ನು ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಅಧ್ಯಕ್ಷರಾಗಿ ನೇಮಕಮಾಡಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಕೃಷ್ಣ ತೀರಥ್ ನೇತೃತ್ವದ ಆಯ್ಕೆ ಸಮಿತಿಯೂ ಕುಶಲ್ ಸಿಂಗ್ ರವರ ಆಯ್ಕೆಯನ್ನು ಅಂತಿಮಗೊಳಿಸಿದೆ.

**"ಕುಶಲ್ ಸಿಂಗ್"**:

- ಕುಶಲ್ ಸಿಂಗ್ ರವರು ಕೇಂದ್ರ ಸರ್ಕಾರದ ವಿವಿಧ ಇಲಾಖೆ ಹಾಗೂ ರಾಜಸ್ತಾನ ರಾಜ್ಯ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿದ್ದಾರೆ. ರಾಜಸ್ತಾನ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ ಅವರು ಕಾರ್ಯನಿರ್ವಹಿಸಿದ್ದರು.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ, ಪರಿಸರ ಮತ್ತು ಸಾಮಾಜಿಕ ಭದ್ರತೆ ಹಾಗೂ ಸಮಾಜ ಕಲ್ಯಾಣ ಮತ್ತು ಬುಡಕಟ್ಟು ಪ್ರದೇಶ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿದ್ದಾರೆ. ಜತೆಗೆ "ನ್ಯಾಷನಲ್ ಡಿಫೆನ್ಸ್ ಕಾಲೇಜಿನ" ಹಿರಿಯ ನಿರ್ದೇಶಕರಾಗಿ ಸಹ ಕಾರ್ಯನಿರ್ವಹಿಸಿ ಸೈ ಎನಿಸಿಕೊಂಡಿದ್ದಾರೆ.

**ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗ**:

- ಮಕ್ಕಳ ಹಕ್ಕು ರಕ್ಷಣಾ ಕಾಯಿದೆ-2005 ರ ಅಡಿಯಲ್ಲಿ "ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗವನ್ನು 2007 ರಲ್ಲಿ ಸ್ಥಾಪಿಸಲಾಗಿದೆ. ಮಕ್ಕಳ ಹಕ್ಕನ್ನು ಕಾಯುವಿಕೆಯ ಸಲುವಾಗಿ ಭಾರತ ಸಂವಿಧಾನ ಮತ್ತು ವಿಶ್ವಸಂಸ್ಥೆಯ ಮಕ್ಕಳ ಹಕ್ಕು ರಕ್ಷಣಾ ಸಮ್ಮೇಳನದ ಅಡಿ ಜಾರಿಗೊಳಿಸಿರುವ ಕಾನೂನು, ನಿಯಮಗಳು ಮತ್ತು ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಈ ಆಯೋಗ ಹೊಂದಿದೆ. 0-18 ವರ್ಷ ವಯಸ್ಸಿನವರನ್ನು ಮಕ್ಕಳೆಂದು ಗುರುತಿಸಲಾಗಿದೆ.

ಆಯೋಗದ ಉದ್ದೇಶ:

- ಮಕ್ಕಳ ಹಕ್ಕು ರಕ್ಷಣೆಗಾಗಿ ಕಾನೂನಡಿ ಜಾರಿಗೊಂಡಿರುವ ನಿಯಮಗಳನ್ನು ಕಾಲ ಕಾಲಕ್ಕೆ ಪರಿಶೀಲಿಸುವುದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸೂಕ್ತ ಕ್ರಮಗಳನ್ನು ಶಿಫಾರಸ್ಸುಗೊಳಿಸುವುದು.

- ಆಯೋಗ ಸಿದ್ದಪಡಿಸಿದ ಶಿಫಾರಸ್ಸುಗಳನ್ನು ವಾರ್ಷಿಕವಾಗಿ ಕೇಂದ್ರ ಸರ್ಕಾರದ ಮುಂದಿನ ಕ್ರಮಕ್ಕೆ ಸಲ್ಲಿಸುವುದು.
- ಮಕ್ಕಳ ಹಕ್ಕು ಉಲ್ಲಂಘನೆ ಕುರಿತು ತನಿಖೆ ಕೈಗೊಳ್ಳುವುದು. ಹಾಗೂ ಮಕ್ಕಳನ್ನು ಮನೋರಂಜನೆಯಿಂದ ವಂಚಿತರನ್ನಾಗಿಸುವ ಕೋಮು ಗಲಭೆ, ಭಯೋತ್ಪಾದನೆ, ಬಾಲ ಕಾರ್ಮಿಕ ಪದ್ಧತಿ, ಪ್ರಕೃತಿ ವಿಕೋಪ, ಕೌಟುಂಬಿಕ ಕಲಹ, ವೇಶ್ಯಾವಾಟಿಕೆಯಂತಹ ಹೀನಾ ಕೃತ್ಯಗಳಿಂದ ಮಕ್ಕಳನ್ನು ರಕ್ಷಿಸಿ ಸೂಕ್ತ ಪರಿಹಾರ ಒದಗಿಸುವುದು.

**ರಾಷ್ಟ್ರೀಯ ಮಾಹಿತಿ ಕೇಂದ್ರ ಸಂಸ್ಥಾಪಕ ಡಾ.ಎನ್.ಶೇಷಗಿರಿ ನಿಧನ**

ಕೇಂದ್ರ ಸರ್ಕಾರದ ನಿವೃತ್ತ ಕಾರ್ಯದರ್ಶಿ ಮತ್ತು "ರಾಷ್ಟ್ರೀಯ ಮಾಹಿತಿ ಕೇಂದ್ರದ (National Informatics Centre (NIC))" ಹರಿಕಾರ, ಪದ್ಮಭೂಷಣ ಪ್ರಶಸ್ತಿ ವಿಜೇತ ಡಾ.ಎನ್.ಶೇಷಗಿರಿ ಅವರು ನಿಧನರಾದರು. ಅವರಿಗೆ 73 ವರ್ಷ ವಯಸ್ಸಾಗಿತ್ತು.

- ಶೇಚಗಿರಿ ರವರು ದೇಶದಾದ್ಯಂತ ಕಂಪ್ಯೂಟರ್ ನೆಟವರ್ಕ್ ಅನ್ನು ಸ್ಥಾಪಿಸುವಲ್ಲಿ ಅಪಾರ ಶ್ರಮ ವಹಿಸಿದ್ದರು. ಅದರ ಫಲವಾಗಿಯೇ "ರಾಷ್ಟ್ರೀಯ ಮಾಹಿತಿ ಕೇಂದ್ರ" 2000 ರಲ್ಲಿ ರೂಪುಗೊಂಡಿತ್ತು. "ಭಾರತೀಯ ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್" ಅನ್ನು ಸ್ಥಾಪಿಸುವಲ್ಲು ಅವರು ಪ್ರಮುಖ ಪಾತ್ರವಹಿಸಿದ್ದರು.
- ದೇಶದಲ್ಲಿ ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿ ಮೂಡಿಸಲು ಕಾರಣವಾದ "ಸಾಫ್ಟವೇರ್ ಮತ್ತು ಹಾರ್ಡವೇರ್" ನೀತಿಯ ಕರಡು ಪ್ರತಿಯನ್ನು ತಯಾರಿಸುವಲ್ಲೂ ಅವರು ಪ್ರಮುಖ ರೂವಾರಿಯಾಗಿದ್ದರು. ಅಷ್ಟೇ ಅಲ್ಲ ಅಮೆರಿಕಾದ ಆಚೆ "V-SAT(Very Small Aperture Network)" ನ್ನು ಮೊದಲ ಬಾರಿಗೆ ಸ್ಥಾಪಿಸಿದ ಕೀರ್ತಿ ಶೇಷಗಿರಿ ಅವರಿಗೆ ಸಲ್ಲುತ್ತದೆ.
- ಮಾಹಿತಿ ತಂತ್ರಜ್ಞಾನಕ್ಕೆ ಅಪಾರ ಕೊಡುಗೆ ಸಲ್ಲಿಸಿರುವ ಅವರಿಗೆ 2005 ರಲ್ಲಿ "ಪದ್ಮ ಭೂಷಣ" ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸಚ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಫೋರ್ಬ್ ದಾನಿಗಳ ಪಟ್ಟಿಯಲ್ಲಿ ಕಿರಣ್ ಮಜುಂದಾರ್**

ಏಷ್ಯಾ-ಫೆಸಿಫಿಕ್ ವಲಯದಲ್ಲಿ ಉದಾರವಾಗಿ ದಾನ ಮಾಡುವ ಮಹನೀಯರ ಪಟ್ಟಿಯಲ್ಲಿ ಭಾರತದ "ಕಿರಣ್ ಮಜುಂದಾರ್ ಷಾ" ಸೇರಿದಂತೆ ಇತರೆ ಮೂವರು ಭಾರತೀಯರ ಸ್ಥಾನ ಪಡೆದಿದ್ದಾರೆ. ಫೋರ್ಬ್ ಏಷ್ಯಾ ಹೊರತಂದಿರುವ "ಹೀರೋಸ್ ಆಫ್ ಫಿಲಂತ್ರೊಫಿ (Heroes of Philanthropy)" ಪಟ್ಟಿಯಲ್ಲಿ ಏಷ್ಯಾ-ಫೆಸಿಫಿಕ್ ವಲಯದ ಒಟ್ಟು 48 ಜನರು ಸ್ಥಾನಪಡೆದಿದ್ದಾರೆ.

**ಪಟ್ಟಿಯಲ್ಲಿರುವ ಭಾರತೀಯರು:**

**ಕಿರಣ್ ಮಜುಂದಾರ್ ಷಾ**: ಬಯೋಕಾನ್ ಸಂಸ್ಥೆಯ ಸ್ಥಾಪಕಿ ಆಗಿರುವ ಕಿರಣ್ ಮಜುಂದಾರ್ ರವರು ಕ್ಯಾನ್ಸರ್ ಪೀಡಿತರಿಗೆ ನೆರವಾಗಲು ಶೇ 75 ರಷ್ಟು ಆಸ್ತಿಯನ್ನು ದಾನ ಮಾಡುವುದಾಗಿ ಹೇಳಿದ್ದಾರೆ.

**ಪಿ.ಸಿ.ಮೆನನ್**: ಪ್ರತಿಷ್ಠಿತ ಶೋಭಾ ಡೆವಲಪರ್ಸ್ ಸಂಸ್ಥೆಯ ಅಧ್ಯಕ್ಷರಾಗಿರುವ ಮೆನನ್ ರವರು ತಮ್ಮ ಆಸ್ತಿಯ ಒಟ್ಟು ಮೌಲ್ಯದ ಅರ್ಧದಷ್ಟನ್ನು ದಾನ ಮಾಡುವುದಾಗಿ ಹೇಳಿದ್ದಾರೆ. ಶ್ರಿ ಕುರಂಬ ಟ್ರಸ್ಟ್ ಸ್ಥಾಪಿಸುವ ಮೂಲಕ ತಮ್ಮ ಹುಟ್ಟೂರು ಆಗಿರುವ ಕೇರಳದಲ್ಲಿ ನಾಲ್ಕು ಹಳ್ಳಿಗಳನ್ನು ದತ್ತು ಪಡೆಯುವ ಮೂಲಕ ಜನರ ಜೀವಮಟ್ಟವನ್ನು ಸುಧಾರಿಸಲು ಮೆನನ್ ಸಹಕರಿಸುತ್ತಿದ್ದಾರೆ.

**ವಿನೀತ್ ನಾಯರ್**: HCL ಟೆಕ್ನಲಾಜೀಸ್ ನ ಉಪಾಧ್ಯಕ್ಷರಾಗಿರುವ ವಿನೀತ್ ನಾಯರ್ ರವರು "ಸಂಪರ್ಕ್" ಎಂಬ ಚಾರಿಟಿ ಸ್ಥಾಪಿಸಿ, ಸ್ಥಳೀಯ ಸರ್ಕಾರದೊಂದಿಗೆ ಬೆರೆತು ಶಾಲೆ ಅಭಿವೃದ್ಧಿ, ನೀರು ಪೂರೈಕೆ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ನೆರವು ನೀಡುತ್ತಿದ್ದಾರೆ.

**ರೊನ್ನಿ ಸ್ಕ್ರೀವಲ (Ronnie Screwvala)**: UTV ಗ್ರೂಫ್ ನ ಸಹ ಸಂಸ್ಥಾಪಕ **ಮತ್ತು** ವಾಲ್ಟ್ ಡಿಸ್ನೆ ಯ ಇಂಡಿಯಾ ಮ್ಯಾನೆಜಿಂಗ್ ಡೈರೆಕ್ಟರ್ ಆಗಿರುವ ರೊನ್ನಿ ರವರು ಮಹಾರಾಷ್ಟ್ರದ 1 ಮಿಲಿಯನ್ ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸಲು ಪಣ ತೊಟ್ಟಿದ್ದಾರೆ.

**ಬಂಗಾಳದ ರಾಷ್ಟ್ರ ಪ್ರಶಸ್ತಿ ವಿಜೇತ ನಿರ್ದೇಶಕ "ರಿತುಪರ್ಣೊ ಘೋಷ್" ನಿಧನ**

ಬಂಗಾಳದ ಖ್ಯಾತ ನಿರ್ದೇಶಕ "ರಿತುಪರ್ಣೊ ಘೋಷ್" ರವರು ಹೃದಯಾಘಾತದಿಂದ ನಿಧನರಾದರು. ಅದ್ಭುತ ಪ್ರತಿಭೆ ಕೇವಲ 49 ವರ್ಷ ವಯಸ್ಸಾಗಿತ್ತು. ಘೋಷ್ ರವರ ಅಕಾಲಿಕ ಮರಣಕ್ಕೆ ಇಡೀ ಚಿತ್ರ ಜಗತ್ತು ಕಂಬನಿ ಮಿಡಿದಿದೆ.

- ಘೋಷ್ ರವರು ಸುಮಾರು 19 ಚಿತ್ರಗಳನ್ನು ನಿರ್ದೇಶಿಸಿದ್ದು, ಇದರಲ್ಲಿ 12 ಚಿತ್ರಗಳು ರಾಷ್ಟ್ರ ಪ್ರಶಸ್ತಿ ಪಡೆದಿರುವುದು ಅವರ ಕಲಾ ನೈಪುಣ್ಯತೆಗೆ ಕನ್ನಡಿ ಹಿಡಿದಿವೆ.
- 1994 ರಲ್ಲಿ "ಹಿರೆರ್ ಅಂಗ್ಟಿ (The Diamond Ring)" ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಘೋಷ್, ಇದೇ ವರ್ಷ "ಉನಿಶೆ ಏಪ್ರಿಲ್" ಚಿತ್ರವನ್ನು ನಿರ್ದೇಶಸಿದರು. ಈ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಲಭಿಸಿತು.
- ದಹಾನ್, ಉತ್ಸವ್, ಚೊಖೆರ್ ಬಾಲಿ, ರೈನ್ ಕೋಟ್ (ಹಿಂದಿ), ದೊಸೊರ್, ದ ಲಾಸ್ಟ್ ಲೆಯರ್, ಶೊಬ್ ಚರಿತ್ರೊ ಕಲ್ಪೊನಿಕ್ ಮತ್ತು ಅಬೊಹೊಮಾನ್ ಚಿತ್ರಗಳು ಚಿತ್ರ ರಸಿಕರ ಮನಗೆದ್ದಿವೆ.
- ಮೂರು ಚಿತ್ರಗಳಲ್ಲಿ ನಟನೆ ಕೂಡ ಮಾಡಿದ್ದ ಅವರು ಟಿವಿಯಲ್ಲಿ ಹಲವಾರು ಚರ್ಚಕೂಟದಲ್ಲಿ ಭಾಗವಹಿಸಿದ್ದರು.
- 1995 ರಿಂದ 2012 ರ ತನಕ 12 ರಾಷ್ಟ್ರೀಯ ಪ್ರಶಸ್ತಿ ಗೆದ್ದ ಘೋಷ್ ಅನೇಕ ಅಂತರರಾಷ್ಟ್ರೀಯ ಪ್ರಶಸ್ತಿಗೂ ಭಾಜನರಾಗಿದ್ದಾರೆ.

## ಚೂರು ಪಾರು ಸುದ್ದಿಗಳು

- **"Foal Eagle" ಗೆ ವಿದಾಯ**: ಅಮೆರಿಕಾ ಮತ್ತು ದಕ್ಷಿಣ ಕೊರಿಯಾ ಜಂಟಿಯಾಗಿ ನಡೆಸಿದ ಸಮರಾಭ್ಯಾಸವೇ "Foal Eagle". ಕಳೆದ ಎರಡು ತಿಂಗಳಿನಿಂದ ಉಭಯ ದೇಶಗಳ ಭೂ ಸೇನೆ, ವಾಯು ಸೇನೆ ಮತ್ತು ನೌಕ ಸೇನೆಗಳು ಈ ಸಮರಾಭ್ಯಾಸದಲ್ಲಿ ಪಾಲ್ಗೊಂಡಿದ್ದವು. ಸದ್ಯ ಈ ಸಮರಾಭ್ಯಾಸಕ್ಕೆ ಈಗ ತೆರೆ ಎಳೆಯಲಾಗಿದೆ. ಉತ್ತರ ಕೊರಿಯಾ ನಡೆಸುತ್ತಿರುವ ಅಣ್ವಸ್ತ್ರ ಪರೀಕ್ಷೆಗೆ ಪ್ರತಿರೋಧವಾಗಿ ಈ ಸಮರಾಭ್ಯಾಸವನ್ನು ಕೈಗೊಂಡಿದ್ದು, ಅಮೆರಿಕಾ ಮತ್ತು ದಕ್ಷಿಣ ಕೊರಿಯಾ ಪರೋಕ್ಷವಾಗಿ ಉತ್ತರ ಕೊರಿಯಾಗೆ ಎಚ್ಚರ ನೀಡಿವೆ ಎಂದು ಹೇಳಲಾಗುತ್ತಿದೆ.

- **ನೆದರ್ ಲ್ಯಾಂಡ್ "ರಾಣಿ ಬಿಯಾಟ್ರಿಕ್ಸ್" ಅಧಿಕಾರ ತ್ಯಾಗ**: ನೆದರ್ ಲ್ಯಾಂಡ್ ನ ರಾಣಿ "ಬಿಯಾಟ್ರಿಕ್ಸ್ (Queen Beatrix)" ರವರು ಅಧಿಕೃತವಾಗಿ ತಮ್ಮ ಅಧಿಕಾರವನ್ನು ಅವರ ಹಿರಿಯ ಮಗ "ವಿಲ್ಲೆಂ ಅಲೆಕ್ಸಾಂಡರ್ (Willem Alexander)" ರವರಿಗೆ ತ್ಯಾಗ ಮಾಡುವ ಮೂಲಕ ತಮ್ಮ 33 ವರ್ಷಗಳ ಸುದೀರ್ಘ ಆಳ್ವಿಕೆಗೆ ಇತಿಹಾಡಿದರು. ಇನ್ನು ಮುಂದೆ ವಿಲ್ಲೆಂ ಅಲೆಕ್ಸಾಂಡರ್ ರವರು ನೆದರ್ ಲ್ಯಾಂಡ್ ನ ರಾಜ ಹಾಗೂ 100 ವರ್ಷಗಳ ನಂತರ ಅಧಿಕಾರ ವಹಿಸಿಕೊಂಡ ಡಚ್ ಕಿಂಗ್ ಎನಿಸಿದ್ದಾರೆ. 1890 ರಲ್ಲಿ ವಿಲ್ಲೆಂ III ರವರು ನೆದರ್ ಲ್ಯಾಂಡ್ ನ ಮೊದಲ ರಾಜ ಎನಿಸಿದ್ದರು.

- **ಏಷ್ಯಾ ಫೆಸಿಫಿಕ್ ಸಂಖ್ಯಾ ಸಂಸ್ಥೆಯ ಆಡಳಿತ ಮಂಡಳಿಗೆ ಭಾರತ:** ವಿಶ್ವಸಂಸ್ಥೆಯ ಸಕ್ರಿಯ ಘಟಕಗಳಲ್ಲಿ ಒಂದಾದ ಏಷ್ಯಾ ಫೆಸಿಫಿಕ್ ಸಂಖ್ಯಾ ಸಂಸ್ಥೆ (SIAP) ಆಡಳಿತ ಮಂಡಳಿಗೆ ಭಾರತ ಆಯ್ಕೆಯಾಗಿದೆ. ಆಡಳಿತ ಮಂಡಳಿಯ 8 ಸದಸ್ಯ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 16 ರಾಷ್ಟ್ರಗಳು ಸ್ಪರ್ಧಿಸಿದ್ದವು. ಭಾರತ, ಆಸ್ಟ್ರೇಲಿಯಾ, ಚೀನಾ, ಥಾಯ್ಲೆಂಡ್, ಫಿಲಿಫೈನ್ಸ್, ಕೊರಿಯಾ ಮತ್ತು ರಷ್ಯಾ ಆಯ್ಕೆಯಾದವು.

- **ಶನಿ ಗ್ರಹದಲ್ಲಿ ಚಂಡಮಾರುತ ಪತ್ತೆ**: ನಾಸಾದ ಕ್ಯಾಸಿನಿ ಬಾಹ್ಯಕಾಶ ನೌಕೆ ಶನಿ ಗ್ರಹದಲ್ಲಿ ಚಂಡಮಾರುತವನ್ನು ಸೆರೆಹಿಡಿದಿರುವುದಾಗಿ ನಾಸಾ ವಿಜ್ಞಾನಿಗಳು ಹೇಳಿದ್ದಾರೆ. ಚಂಡಮಾರುತದ ಫೋಟೊ ಮತ್ತು ವಿಡಿಯೋ ವಿಜ್ಞಾನಿಗಳಿಗೆ ಲಭ್ಯವಾಗಿದ್ದು, ಚಂಡಮಾರುತದ ಕೇಂದ್ರ ಭಾಗ ಸುಮಾರು 2,000 ಕಿ.ಮೀ ಗಿಂತಲೂ ದೊಡ್ಡದಾಗಿದೆ ಹಾಗೂ ಇದು ಭೂಮಿಯ ಮೇಲೆ ಉಂಟಾಗುವ ಚಂಡಮಾರುತಕ್ಕಿಂತ 20 ಪಟ್ಟು ದೊಡ್ಡದಾಗಿದೆ ಎಂದು ಹೇಳಿದ್ದಾರೆ. ಒಂದು ಸೆಕೆಂಡ್ ಗೆ 150 ಕಿ.ಮೀ ವೇಗದಲ್ಲಿ ಈ ಚಂಡಮಾರುತ ಚಲಿಸುತ್ತಿದೆ.

- **ಅರ್ಜುನ್ ಪ್ರಶಸ್ತಿಗೆ ಕೊಹ್ಲಿ ಹೆಸರು ಶಿಫಾರಸ್ಸು:** ಸ್ಫೋಟಕ ಬ್ಯಾಟ್ಸ್ ಮನ್ "ವಿರಾಟ್ ಕೊಹ್ಲಿ" ರವರ ಹೆಸರನ್ನು 2012 ನೇ ಸಾಲಿನ ಅರ್ಜುನ್ ಪ್ರಶಸ್ತಿಗೆ ಬಿಸಿಸಿಐ ಶಿಫಾರಸ್ಸು ಮಾಡಿದೆ. ಇದೇ ವೇಳೆ ಮಾಜಿ ಕ್ರಿಕೆಟ್ ಆಟಗಾರ ಸುನೀಲ್ ಗಾವಸ್ಕರ್ ರವರ ಹೆಸರನ್ನು "ಧ್ಯಾನಚಂದ್ ಪ್ರಶಸ್ತಿ"ಗೆ ಶಿಫಾರಸ್ಸು ಮಾಡಲಾಗಿದೆ.

- **ಕೇರಳದ "ವಯನಾಡ್" ನಲ್ಲಿ ಸ್ಪೈಸ್ ಪಾರ್ಕ್:** ಕೇರಳದ "ವಯನಾಡ್" ನಲ್ಲಿ "ಸ್ಪೈಸ್ ಪಾರ್ಕ್ (Spice Park)" ನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿರುವುದಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಆನಂದ್ ಶರ್ಮಾ ಹೇಳಿದ್ದಾರೆ. ಕೇರಳ ಸರ್ಕಾರದ ಸಹಯೋಗದೊಂದಿಗೆ ಸ್ಥಾಪನೆಗೊಳ್ಳಲಿರುವ ಈ ಸ್ಪೈಸ್ ಪಾರ್ಕ್ ನಲ್ಲಿ ಮೆಣಸು ಸಂಸ್ಕರಣೆಗೆ ಹೆಚ್ಚಿನ ಮಹತ್ವ ನೀಡಲಾಗುವುದು.

- **ಶೈಲೇಂದ್ರ ನಾಥ್ ರಾಯ್ ನಿಧನ:** ಗಿನ್ನಿಸ್ ದಾಖಲೆ ಸಾಹಸಿ ಶೈಲೇಂದ್ರ ನಾಥ್ ರಾಯ್ ನಿಧನರಾದರು. ಹಗ್ಗದ ಮೇಲೆ ನಡೆಯುವ ಹರಸಾಹಸದಲ್ಲಿ ವಿಶ್ವ ಪ್ರಸಿದ್ದಿಯನ್ನು ಅವರು ಹೊಂದಿದ್ದರು. ತೀಸ್ತಾ ನದಿಯ ಮೇಲೆ ಇಂತಹ ಸಾಹಸ ಕೈಗೊಂಡಿದ್ದ ವೇಳೆ ದುರಾದೃಷ್ಟವಶತ್ ವಿಧಿ ಪಾಲಾದರು.

- **ಜಾರ್ಖಂಡ್ ನಲ್ಲಿ 14 ಮೆಗಾ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಘಟಕ ಉದ್ಘಾಟನೆ:** ರಾಷ್ಟ್ರಪತಿ ಪ್ರಣಭ್ ಮುಖರ್ಜಿ ರವರು ಏಪ್ರಿಲ್ 30 ರಂದು ಜಾರ್ಖಂಡ್ ನ ದಿಯೋಗರ್ ನಲ್ಲಿ ನಿರ್ಮಿಸಿರುವ 14 ಮೆಗಾ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಘಟಕವನ್ನು ಉದ್ಘಾಟಿಸಿದರು. ಇದೇ ವೇಳೆ ದಿಯೋಗರ್-ಬುಸ್ಕಿನಾತ್ ನಡುವಿನ 44 ಕಿ.ಮೀ ಉದ್ದದ ಸೌರ ಶಕ್ತಿ ಬೀದಿ ದೀಪ ಯೋಜನೆಗೆ ಶಂಕು ಸ್ಥಾಪನೆ ನೇರವೇರಿಸಿದರು.

- **ಸ್ಟುಟ್ಟ್ ಗರ್ಟ್ ಟೈಟಲ್ (Stuttgart Tittle) ಶರಪೋವಾಗೆ ಜಯ:** ರಷ್ಯಾದ ನಂ.2 ಟೆನ್ನಿಸ್ ಆಟಗಾರ್ತಿ ಮಾರಿಯ ಶರಪೋವಾ ರವರು ಫೈನಲ್ ಪಂದ್ಯದಲ್ಲಿ 6-4,6-3 ರಿಂದ ಚೀನಾದ "ಲಿ ನಾ" ರವರನ್ನು ಮಣಿಸಿ "ಪೋರ್ಚೆ ಟೆನ್ನಿಸ್ ಗ್ರಾಂಡ್ ಫಿಕ್ಸ್ ಟೈಟಲ್ (ಸ್ಟುಟ್ಟ್ ಗರ್ಟ್)" ನ್ನು ತಮ್ಮದಾಗಿಸಿಕೊಂಡರು. ಇಂಡಿಯನ್ ವೆಲ್ಸ್ ನಲ್ಲಿ ಪ್ರಶಸ್ತಿ ಗೆದ್ದ ಬಳಿಕ ಮಾರಿಯ ಶರಪೋವಾ ರವರಿಗೆ ಇದು ಈ ವರ್ಷದ ಎರಡನೇ ಪ್ರಶಸ್ತಿ.

- **ಹೆಚ್ಚುವರಿ ಸಾಲಿಸಿಟರ್ ಜನರಲ್ ಹರೇನ್ ರಾವಲ್ ರಾಜೀನಾಮೆ:** ಕಲ್ಲಿದ್ದಲು ಹಗರಣದಲ್ಲಿ ಸಿಬಿಐ ಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿರುವ ಬೆನ್ನಲ್ಲೇ ಹೆಚ್ಚುವರಿ ಸಾಲಿಸಿಟರ್ ಜನರಲ್ "ಹರೇನ್ ರಾವಲ್" ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಕಲ್ಲಿದ್ದಲು ಹಗರಣ ತನಿಖೆಗೆ ಸಂಬಂಧಿಸಿದ ವಸ್ತುಸ್ಥಿತಿ ವರದಿಯನ್ನು ನ್ಯಾಯಾಲಕ್ಕೆ ಸಲ್ಲಿಸುವ ಮುನ್ನವೇ ಬಹಿರಂಗಗೊಂಡ ವಿಷಯದಲ್ಲಿ ತನ್ನನ್ನು ಬಲಿಪಶು ಮಾಡಲಾಗಿದೆ ಎಂದು ಹರೇನ್ ಹೇಳಿದ್ದಾರೆ.

- **ಕಂಪ್ಯೂಟರ್ ಮಾರುಕಟ್ಟೆ ಚೀನಾ ನಂ.1:** ಚೀನಾದಲ್ಲಿ ಕಂಪ್ಯೂಟರ್ ಗಳಿಗೆ ಬೇಡಿಕೆ ಹೆಚ್ಚಿದ್ದು, ಕಂಪ್ಯೂಟರ್ ಮಾರುಕಟ್ಟೆಯಲ್ಲಿ ಅಮೆರಿಕಾವನ್ನು ಹಿಂದಿಕ್ಕಿ ಚೀನಾ ನಂ.1 ಸ್ಥಾನಕ್ಕೆ ಏರಿದೆ. ಮಾರುಕಟ್ಟೆ ಸಂಶೋಧನಾ ಸಂಸ್ಥೆ HIS ನಡೆಸಿರುವ ಸಮೀಕ್ಷೆಯಲ್ಲಿ 2012 ರಲ್ಲಿ ಸುಮಾರು 66 ಮಿಲಿಯನ್ ಕಂಪ್ಯೂಟರ್ ಗಳು ಚೀನಾದಲ್ಲಿ ಮಾರಾಟವಾಗಿವೆ. ಇಂಟರ್ ನೆಟ್ ಬಳಕೆದಾರರ ಸಂಖ್ಯೆಯಲ್ಲೂ ಚೀನಾ ನಂ.1 ಸ್ಥಾನದಲ್ಲಿದೆ. ಚೀನಾದ ಗ್ರಾಮೀಣ ಭಾಗದಲ್ಲಿ ಲ್ಯಾಪ್ ಟಾಪ್ ಗಳಿಗಿಂತ ಡೆಸ್ಕಟಾಪ್ ಕಂಪ್ಯೂಟರ್ ಗಳಿಗೆ ಹೆಚ್ಚು ಬಳಸು ಕಾರಣ ಕಂಪ್ಯೂಟರ್ ಗಳಿಗೆ ಬೇಡಿಕೆ ಹೆಚ್ಚಾಗಿದೆ.

- **<u>ಜೆನಿತಾ ಮೆರಿಗೆ "ಇಸ್ರೋ ಯುವ ವಿಜ್ಞಾನಿ ಪ್ರಶಸ್ತಿ":</u>** ಮೇಘಾಲಯದ ಮಹಿಳಾ ವಿಜ್ಞಾನಿ "ಜೆನಿತಾ ಮೆರಿ ನಾಂಗ್ಕಿರಿನ್" ರವರಿಗೆ 2013 ನೇ ಸಾಲಿನ "ಇಸ್ರೋ ಯುವ ವಿಜ್ಞಾನಿ ಪ್ರಶಸ್ತಿ" ಲಭಿಸಿದೆ. ಪ್ರಶಸ್ತಿಯು ರೂ.50000 ನಗದು ಮತ್ತು ಫಲಕವನ್ನು ಒಳಗೊಂಡಿದೆ. ಜೆನಿತಾ ರವರು ಸದ್ಯ "ನಾರ್ಥ್ ಈಸ್ಟರ್ನ್ ಸ್ಪೇಸ್ ಅಪ್ಲಿಕೇಷನ್ ಸೆಂಟರ್" ನಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಭೂಗೋಳ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಜೆನಿತಾ ರವರು "ನಗರ ಮಾಹಿತಿ ವ್ಯವಸ್ಥೆ" ಮೇಲೆ ಮಾಡಿರುವ ಪ್ರಾಜೆಕ್ಟ್ ಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

- **<u>ಐರ್ಲೆಂಡ್ ನಲ್ಲಿ ಗರ್ಭಪಾತಕ್ಕೆ ಅವಕಾಶ ನೀಡುವ ಮಸೂದೆ:</u>** ಭಾರತೀಯ ಮೂಲದ ವೈದ್ಯೆ ಡಾ.ಸವಿತಾ ಹಾಲಪ್ಪನವರ್ ಸಾವಿನ ನಂತರ ವಿಶ್ವ ವ್ಯಾಪ್ತಿ ಟೀಕೆಗೆ ಒಳಗಾಗಿದ್ದ "ಐರ್ಲೆಂಡ್ ಸರ್ಕಾರ" ಕೊನೆಗೂ ಮಣಿದಿದ್ದು, ತಾಯಿಯ ಜೀವಕ್ಕೆ ಅಪಾಯವಿರುವ ಸಂದರ್ಭದಲ್ಲಿ ಗರ್ಭಪಾತಕ್ಕೆ ಅವಕಾಶ ನೀಡುವ ಮಸೂದೆಯನ್ನು ಮಂಡಿಸಲು ಸಿದ್ದವಾಗಿದೆ. ಆದರೆ ಅಕ್ರಮವಾಗಿ ಗರ್ಭಪಾತ ಮಾಡಲು ಮುಂದಾದರೆ ಸಂಬಂಧಪಟ್ಟವರಿಗೆ 14 ವರ್ಷಗಳ ಶಿಕ್ಷೆಯನ್ನು ವಿಧಿಸಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

- **<u>ಬಹುಬ್ರಾಂಡ್ ಚಿಲ್ಲರೆ ವಹಿವಾಟಿನಲ್ಲಿ FDI ಸರಿ: ಸುಪ್ರೀಂ ಕೋರ್ಟ್:</u>** ದೇಶದ ಬಹುಬ್ರಾಂಡ್ ಚಿಲ್ಲರೆ ವಹಿವಾಟಿನಲ್ಲಿ ಶೇ.51 ರಷ್ಟು "ವಿದೇಶಿ ನೇರ ಬಂಡವಾಳ (FDI)" ಹೂಡಿಕೆಗೆ ಅವಕಾಶ ನೀಡಿರುವ ಸರ್ಕಾರದ ಕ್ರಮವನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಬಹುಬ್ರಾಂಡ್ ಮಾರಾಟದಿಂದ ಮಧ್ಯವರ್ತಿಗಳ ಹಾವಳಿ ತಪ್ಪುವುದರಿಂದ ರೈತರಿಗೆ ಲಾಭವೇ ಹೊರತು ನಷ್ಟವಲ್ಲ ಎಂದು ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ. ಅಲ್ಲದೇ "ಗ್ರಾಹಕನೇ ರಾಜ" ಎನ್ನುವ ತತ್ವ ಈ ನೀತಿಯ ಹಿಂದಿದ್ದರೆ ಇದರಿಂದ ತಪ್ಪೇನಿದೆ ಎಂದು ಸುಪ್ರೀಂ ಪ್ರಶ್ನಿಸಿದೆ. ಕೋರ್ಟ್ ನ ಈ ನಿರ್ಣಯಯದಿಂದ ಸರ್ಕಾರಕ್ಕೆ ನಿರಾಳವೆನಿಸಿರುವುದು ಸತ್ಯ.

- **<u>ಸರಬ್ಜಿತ್ ಸಿಂಗ್ ನಿಧನ:</u>** ಪಾಕಿಸ್ತಾನದ ಲಾಹೋರ್ ನಲ್ಲಿರುವ "ಕೋಟ್ ಲಖ್ ಪತ್" ಜೈಲಿನಲ್ಲಿ ಇತರೆ 6 ಕೈದಿಗಳಿಂದ ಮಾರಣಾಂತಿಕ ಹಲ್ಲೆಗೆ ಒಳಗಾಗಿದ್ದ "ಸರಬ್ಜಿತ್ ಸಿಂಗ್" ನಿಧನರಾದರು. ಹೃದಯಾಘಾತದಿಂದ ಸಿಂಗ್ ಮೃತಪಟ್ಟಿರುವುದಾಗಿ ಪಾಕ್ ನ ವೈದ್ಯರು ತಿಳಿಸಿದ್ದಾರೆ. ಸಿಂಗ್ ರವರ ಮೇಲೆ ನಡೆದ ಈ ಹಲ್ಲೆಯನ್ನು ಭಾರತ ಸೇರಿದಂತೆ ವಿಶ್ವದ ಇತರೆ ರಾಷ್ಟ್ರಗಳಲ್ಲಿ ಪ್ರತಿಭಟನೆ ವ್ಯಕ್ತವಾಗಿತ್ತು. "ಸರಬ್ಜಿತ್ ಸಿಂಗ್" ಭಾರತದ "ವೀರಪುತ್ರ" ಎಂದು ಬಣ್ಣಿಸಿರುವ ಪ್ರಧಾನಿ ಮನಮೋಹನ್ ಸಿಂಗ್ ರವರು ಅವರ ಕುಟುಂಬಕ್ಕೆ ರೂ.25 ಲಕ್ಷ ಪರಿಹಾರ ಘೋಷಿಸಿದ್ದಾರೆ. ಜತೆಗೆ ಪಂಜಾಬ್ ರಾಜ್ಯ ಸಹ 1 ಕೋಟಿ ಪರಿಹಾರ ಮತ್ತು ಸಿಂಗ್ ರವರ ಇಬ್ಬರು ಹೆಣ್ಣು ಮಕ್ಕಳಿಗೆ ಸರ್ಕಾರಿ ಉದ್ಯಮದ ಭರವಸೆ ನೀಡಿದೆ. ಪಾಕಿಸ್ತಾನದಲ್ಲಿ ಬಾಂಬ್ ದಾಳಿ ನಡೆಸಿದ ಎನ್ನುವ ಆರೋಪದಲ್ಲಿ ಸರಬ್ಜಿತ್ ಸಿಂಗ್ ರವರು ಅಕ್ಟೋಬರ್ 3, 1991 ರಿಂದ ಪಾಕಿಸ್ತಾನದಲ್ಲಿ ಬಂಧಿತರಾಗಿದ್ದರು.

- **ಗ್ರೀಸ್ ನಲ್ಲಿ ಸರ್ಕಾರಿ ನೌಕರಿಗೆ ಕತ್ತರಿ:** ಗ್ರೀಸ್ ನಲ್ಲಿ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಬಿಗಾಡಯಿಸಿದ್ದು, 2014 ರ ವೇಳೆಗೆ 14,000 ಸರ್ಕಾರಿ ನೌಕರರನ್ನು ಹುದ್ದೆಯಿಂದ ಕೆಳಗಿಳಿಸುವ ವಿವಾದತ್ಮಕ ಮಸೂದೆಯನ್ನು ಮಂಡಿಸಲಾಗಿದೆ. ಗ್ರೀಸ್ ಸಂಸತ್ತಿನ ಹೊರಗಡೆ ನೌಕರರು ಪ್ರತಿಭಟನೆ ನಡೆಸುತ್ತಿದ್ದರೂ ಅದನ್ನು ಲೆಕ್ಕಿಸದೇ ಈ ಮಸೂದೆ ಬಹುಮತದಲ್ಲಿ ಅಂಗೀಕಾರಗೊಂಡಿದೆ. ಮಸೂದೆಯ ಪ್ರಕಾರ 2014 ರ ವೇಳೆಗೆ ಸುಮಾರು 14,000 ಸರ್ಕಾರಿ ನೌಕರರು ಕೆಲಸವನ್ನು ತೊರೆಯಬೇಕಿದೆ. ಆರ್ಥಿಕ ದಿವಾಳಿಯಿಂದ ಪಾರಾಗಲು ಗ್ರೀಸ್ ಸರ್ಕಾರ ಕೈಗೊಂಡಿರುವ ಈ ನಿರ್ಧಾರಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ.

- **"ಎ ಬಾಯ್ ಅಂಡ್ ಹಿಸ್ ಆಟಮ್" ವಿಶ್ವದ ಅತಿ ಚಿಕ್ಕ ಸಿನಿಮಾ:** ಮೂಲ ವಸ್ತುಗಳ ಅತಿ ಚಿಕ್ಕ ಕಣವಾದ ಪರಮಾಣುವನ್ನು ಅವಲಂಭಿಸಿ ಜಗತ್ತಿನ ಅತ್ಯಂತ ಚಿಕ್ಕ ಗಾತ್ರದ ಚಲನಚಿತ್ರವಾದ "ಎ ಬಾಯ್ ಅಂಡ್ ಹಿಸ್ ಅಟಮ್ (A Boy and His Atom)" ನ್ನು IBM ಸಂಸ್ಥೆ ನಿರ್ಮಿಸಿದೆ. ಪರಮಾಣುವಿನ ಗೋಚರತೆಯನ್ನು 10 ಕೋಟಿ ಪಟ್ಟು ಹಿಗ್ಗಿಸಿ ಅದರ ಚಲನ ಮೇಲೆ ಕಣ್ಣಿಡಬಲ್ಲ ತಂತ್ರಜ್ಞಾನ ಇದಾಗಿದೆ.

- **ಚೇತನ್ ಭಗತ್ ಪುಸ್ತಕಗಳಲ್ಲಿ ಅಶ್ಲೀಲ ಪದಗಳು ಅಲಹಾಬಾದ್ ಹೈಕೋರ್ಟ್ ವಿಷಾದ:** ಪ್ರಸಿದ್ದ ಲೇಖಕ "ಚೇತನ್ ಭಗತ್" ರವರು ಪುಸ್ತಕಗಳಲ್ಲಿ ಬಳಕೆಯಾಗಿರುವ ಅಶ್ಲೀಲ ಪದಗಳಿಗೆ ಅಲಹಾಬಾದ್ ಹೈಕೋರ್ಟ್ ವಿಷಾದ ವ್ಯಕ್ತಪಡಿಸಿದೆ. ಸಜ್ಜನಿಕೆಯ ಲೇಖಕರು ಇಂತಹ ಪದಗಳನ್ನು ತಮ್ಮ ಪುಸ್ತಕದಲ್ಲಿ ಬಳಸುವುದಿಲ್ಲ ಎಂದು ಕೋರ್ಟ್ ಛೀಮಾರಿ ಹಾಕಿದೆ. ಚೇತನ್ ಭಗತ್ ರವರ "ತ್ರಿ ಮಿಸ್ಟೆಕ್ ಇನ್ ಮೈ ಲೈಫ್" ಪುಸ್ತಕ ಆಧಾರಿತ ಚಲನಚಿತ್ರ "ಕೈ ಪೊ ಚೆ" ಗೆ ಸೆನ್ಸಾರ್ ಮಂಡಳಿ ನೀಡಿರುವ ಸರ್ಟಿಫಿಕೇಟ್ ನ್ನು ಹಿಂಪಡೆಯುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ ಕೋರ್ಟ್ ಅಸಮಾಧಾನವನ್ನು ವ್ಯಕ್ತಪಡಿಸಿತು. "ಕೈ ಪೊ ಚೆ" ಚಿತ್ರದಲ್ಲಿ ಗುಜರಾತ್ ಕೋಮು ಗಲಭೆಗೆ ಹಿಂದೂಗಳನ್ನು ಆಪಾದಿಸಿರುವುದು ಈಗ ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

- **ಮೈಕ್ ಗ್ಯಾಟಿಂಗ್ MCC ಅಧ್ಯಕ್ಷ:** ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ "ಮೈಕ್ ಗ್ಯಾಟಿಂಗ್ (Mike Gatting)" ರವರನ್ನು "ಮೆಲ್ಬರ್ನ್ ಕ್ರಿಕೆಟ್ ಕ್ಲಬ್ (MCC)"ನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಮೈಕ್ ಗ್ಯಾಟಿಂಗ್ ರವರು 1978 ರಲ್ಲಿ ಕ್ರಿಕೆಟ್ ಲೋಕಕ್ಕೆ ಪಾದಾರ್ಪಣೆ ಮಾಡಿದರು. ಗ್ಯಾಟಿಂಗ್ ರವರು ಅಕ್ಟೋಬರ್ 1 ರಿಂದ ಅಧಿಕಾರವಹಿಸಿಕೊಳ್ಳಲಿದ್ದಾರೆ.

- **ಸೊಮಾಲಿಯಾ ಬರಕ್ಕೆ 2,58,000 ಬಲಿ:** ಸೋಮಾಲಿಯಾದಲ್ಲಿ 2010 ರಿಂದ 2012 ರ ವರೆಗೆ ಕಾಡಿರುವ ಬರಗಾಲಕ್ಕೆ ಸುಮಾರು 2,58,000 ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆಂದು ವಿಶ್ವ ಸಂಸ್ಥೆ ವರದಿಯಲ್ಲಿ ಹೇಳಿದೆ. ಇದರಲ್ಲಿ ಅರ್ಧದಷ್ಟು ಅಂದರೆ, 1,33,000 ದಷ್ಟು ಐದು ವರ್ಷದ ಮಕ್ಕಳು. ಬರಗಾಲದ ಹಿನ್ನಲೆಯಲ್ಲಿ ಸೊಮಾಲಿಯಾದಲ್ಲಿ

ಆಹಾರದ ಕೊರತೆ ತೀವ್ರವಾಗಿ ಕಾಡಿದ್ದು, ಹಸಿವಿನಿಂದ ಜನ ಕಂಗಲಾಗಿದ್ದಾರೆ. ಅಭಿವೃದ್ಧಿ ರಾಷ್ಟ್ರಗಳು ಸೊಮಾಲಿಯಾದ ಸಹಾಯಕ್ಕೆ ಮುಂದಾಗಬೇಕು ಎಂದು ವಿಶ್ವಸಂಸ್ಥೆ ಕರೆ ನೀಡಿದೆ.

- **ವಿದೇಶಿ ಜೈಲುಗಳಲ್ಲಿ 6,567 ಭಾರತೀಯ ಕೈದಿಗಳು**: 80 ದೇಶಗಳಲ್ಲಿ 6,567 ಕ್ಕೂ ಹೆಚ್ಚು ಭಾರತೀಯ ಕೈದಿಗಳು ಬಂಧಿತರಾಗಿದ್ದಾರೆ. ಕೊಚ್ಚಿ ಮೂಲದ NGO "Human Rights Defence Forum" ಸಲ್ಲಿಸಿದ್ದ ಮಾಹಿತಿ ಹಕ್ಕು ಅರ್ಜಿಯಡಿ ಈ ಮಾಹಿತಿ ಬಹಿರಂಗಗೊಂಡಿದೆ. ಕುವೈತ್ ನಲ್ಲಿ 1,691, ಸೌಧಿ ಅರೇಬಿಯಾದಲ್ಲಿ 1.161, ಯುಎಇ ನಲ್ಲಿ 1,012, ಚೀನಾದಲ್ಲಿ 157, ನೇಪಾಳದಲ್ಲಿ 377, ಅಮೆರಿಕಾದಲ್ಲಿ 155, ಸಿಂಗಾಪುರ 156, ಬಾಂಗ್ಲ 167 ಮತ್ತು ಇಟಲಿಯಲ್ಲಿ 151 ಭಾರತೀಯ ಕೈದಿಗಳು ಬಂಧಿತರಾಗಿದ್ದಾರೆ.

- **"ನೆಹಲ್ ಬೊಗೈತ (Nehal Bogaita)"ಗೆ "ಮಿಸ್ ಇಂಡಿಯಾ ವರ್ಲ್ಡ್ ವೈಡ್" ಕಿರೀಟ:** ಕೌವಲಲಾಂಪುರದಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಬ್ರಿಟನ್ ನ "ನೆಹಲ್ ಬೊಗೈತ" ರವರು "ಮಿಸ್ ಇಂಡಿಯಾ ವರ್ಲ್ಡ್ ವೈಡ್" ಕಿರೀಟವನ್ನು ತಮ್ಮದಾಗಿಸಿಕೊಂಡರು. ನೆಹಲ್ ರವರು ಈ ಗೌರವಕ್ಕೆ ಪಾತ್ರರಾದ ಮೊದಲ ಕಿವುಡ ಸುಂದರಿ. ಮಲೇಷಿಯಾದ "ಜಸ್ವೀರ್ ಕೌರ್ ಸಂಧು" ರವರು ಮೊದಲ ರನ್ನರ್ ಆಫ್ ಮತ್ತು ಓಮೆನ್ ನ "ಸುರಭಿ ಸಚದೇವ್" ರವರು ಎರಡನೇ ರನ್ನರ್ ಆಫ್ ಆಗಿ ಹೊರಹೊಮ್ಮಿದರು.

- **ಖೇಲ್ ರತ್ನ ಪ್ರಶಸ್ತಿಗೆ "ಸೋಮ್ ದೇವ್" ಹೆಸರು ಶಿಫಾರಸ್ಸು**: ಅಖಿಲ ಭಾರತ ಟೆನ್ನಿಸ್ ಅಸೋಸಿಯೇಷನ್ (AITA)" ಟೆನ್ನಿಸ್ ಆಟಗಾರ "ಸೋಮ್ ದೇವ್" ರವರ ಹೆಸರನ್ನು 2013 ನೇ ಸಾಲಿನ ಪ್ರತಿಷ್ಠಿತ "ರಾಜೀವ್ ಖೇಲ್ ರತ್ನ" ಪ್ರಶಸ್ತಿಗೆ ಶಿಫಾರಸ್ಸು ಮಾಡಿದೆ. ಇದೇ ವೇಳೆ ವಿಜಯ್ ಅಮೃತ್ ಸರ್ ರವರ ಹೆಸರನ್ನು ಧ್ಯಾನಚಂದ್ ಪ್ರಶಸ್ತಿಗೆ ಮತ್ತು ಡೇವಿಸ್ ಕಪ್ ತರಬೇತುದಾರ "ಝೀಷನ್ ಅಲಿ" ರವರ ಹೆಸರನ್ನು ಅರ್ಜುನ್ ಪ್ರಶಸ್ತಿಗೆ ಶಿಫಾರಸ್ಸು ಮಾಡಿದೆ.

- **ATP ಅಧ್ಯಕ್ಷ "ಬ್ರಾಡ್ ರೆಟ್ (Brad Drewett)" ನಿಧನ**: ATP ಅಧ್ಯಕ್ಷ "ಬ್ರಾಡ್ ರೆಟ್" ರವರು ನರವ್ಯೂಹ ಸಂಬಂಧಿ ಕಾಯಿಲೆಯಿಂದ ಮೃತರಾದರು. ಅವರಿಗೆ 54 ವರ್ಷ ವಯಸ್ಸಾಗಿತ್ತು. ರೆಟ್ ರವರು ಜನವರಿ 2012 ರಿಂದ ATP ಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಗ್ರಾಂಡ್ ಸ್ಲಾಮ್ ಟೂರ್ನಿಯ ಪ್ರಶಸ್ತಿ ಮೊತ್ತವನ್ನು ಹೆಚ್ಚಿಸುವಲ್ಲಿ ರೆಟ್ ರವರು ಪ್ರಮುಖವೆನಿಸಿದ್ದರು.

- **ಸೌದಿಯಿಂದ 3000 ಕೇರಳಿಯರು ಭಾರತಕ್ಕೆ ವಾಪಸ್ಸು:** ಸೌದಿ ಅರೇಬಿಯಾದಲ್ಲಿ ಜಾರಿಗೊಳಿಸಿರುವ ವಿವಾದಿತ "ನಿತಕತ್" ನಿಯಮದಿಂಧ ಉದ್ಯೋಗ ಕಳೆದುಕೊಳ್ಳುವ ಭಯದಲ್ಲಿರುವ ಸುಮಾರು 3000 ಕ್ಕೂ ಹೆಚ್ಚು ಕೇರಳಿಯರು ಭಾರತಕ್ಕೆ ಹಿಂದಿರುಗಿದ್ದಾರೆ. ಕೇರಳ ರಾಜ್ಯದ ಬಳಿ ಇರುವ ಮಾಹಿತಿ ಪ್ರಕಾರ ಏಪ್ರಿಲ್ 2 ರಿಂದ ಮೇ.1 ರ ಅವಧಿಯಲ್ಲಿ ಕೇರಳಕ್ಕೆ ವಾಪಸ್ ಆದವರ ಸಂಖ್ಯೆ 2,953. ವಾಪಸ್ಸದರಲ್ಲಿ ಕೇರಳದ ಮಲ್ಲಪುರಂ ಜಿಲ್ಲೆಯವರು ಅತ್ಯಧಿಕ ಅಂದರೆ

1,114 ಜನ ಎಂದು ಹೇಳಲಾಗಿದೆ. ಸೌದಿ ಅರೇಬಿಯಾ ಜಾರಿಗೊಳಿಸಿರುವ ಈ ನಿಯಮದಿಂದ ಅಲ್ಲಿನ ಸಂಸ್ಥೆಗಳಲ್ಲಿ ಉದ್ಯೋಗಕ್ಕಾಗಿ ಸ್ಥಳೀಯರಿಗೆ ಶೇ.10 ರಷ್ಟು ಮೀಸಲಾತಿ ನೀಡಬೇಕು. ಈ ನಿಯಮದಿಂದ ಉದ್ಯೋಗ ಹರಸಿ ಸೌದಿಗೆ ಪ್ರಯಾಣ ಬೆಳೆಸಿದ ಭಾರತೀಯರ ಉದ್ಯೋಗದಿಂದ ವಂಚಿತರಾಗಲಿದ್ದಾರೆ. ಸೌದಿಯಲ್ಲಿ ಉದ್ಯೋಗ ಮಾಡುತ್ತಿರುವವರ ಪೈಕಿ ಕೇರಳ ರಾಜ್ಯದವರ ಪಾಲು ಅಧಿಕ.

- **ಗೇಲ್ ಇವಾನ್ಸ್ ಬಂಧನ:** ಗೇಲ್ ಇವಾನ್ಸ್ ರವರು ಬ್ರಿಟನ್ ಸಂಸತ್ತಿನ ಕೆಳಮನೆಯ ಉಪಾಧ್ಯಕ್ಷ. 2010 ರಲ್ಲಿ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾದರು. ಇವರೊಬ್ಬ ಸಲಿಂಗ ಕಾಮಿ ಎಂದು ಹೇಳಲಾಗುತ್ತಿತ್ತು. ಯುವಕರ ಮೇಲೆ ಅತ್ಯಾಚಾರ ಮತ್ತು ಲೈಂಗಿಕ ಹಲ್ಲೆ ನಡೆಸಿದ ಆರೋಪದ ಮೇಲೆ ಇವರನ್ನು ಪೊಲಿಸರು ಇತ್ತೀಚೆಗೆ ಬಂಧಿಸಿದರು.

- **ಬಿಲ್ಲುಗಾರ್ತಿ "ಪ್ರತಿಮಾ ಬೋರೊ" ಆತ್ಮಹತ್ಯೆ:** ಅಂತರರಾಷ್ಟ್ರೀಯ ಮಟ್ಟದ ಯುವ ಬಿಲ್ಲುಗಾರ್ತಿ "ಪ್ರತಿಮಾ ಬೋರೊ" ರವರು ಪುಣೆಯ ಕ್ರೀಡಾ ತರಬೇತಿ ಕೇಂದ್ರದಲ್ಲಿ ಆತ್ಮಹತ್ಯೆಗೆ ಶರಣಾದರು. ಮೂಲತಃ ಅಸ್ಸಾಂನವರಾದ ಬೋರೊ ರವರು ಅಂತರರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಭಾರತವನ್ನು ಪ್ರತಿನಿದಿಸಿದ್ದರು. ಅವರ ಆತ್ಮಹತ್ಯೆಗೆ ಕಾರಣ ಏನು ಎಂಬುದು ತಿಳಿದು ಬಂದಿಲ್ಲ.

- **5 ನೇ ಬಾರಿ ರಾಜ್ಯಸಭೆ ಪ್ರವೇಶಿಸಲಿರುವ ಮನಮೋಹನ್ ಸಿಂಗ್:** ಪ್ರಧಾನಿ ಮನಮೋಹನ್ ಸಿಂಗ್ ರವರ ರಾಜ್ಯಸಭಾ ಸದಸ್ಯ ಅವಧಿ ಜೂನ್ 14 ರಂದು ಮುಗಿಯಲ್ಲಿದ್ದು, 5 ನೇ ಬಾರಿ ರಾಜ್ಯಸಭೆಯನ್ನು ಪ್ರವೇಶಿಸಲು ಮನಮೋಹನ್ ಸಿಂಗ್ ಸಜ್ಜಾಗಿದ್ದಾರೆ. ಮನಮೋಹನ್ ಸಿಂಗ್ ರವರ ಜತೆಗೆ ಕುಮಾರ್ ದೀಪಕ್ ದಾಸ್ ರವರ ಅವಧಿಯೂ ಜೂನ್ 14ಕ್ಕೆ ಕೊನೆಗೊಳ್ಳಲಿದೆ. ಚುನಾವಣಾ ಆಯೋಗ ಮೇ.30 ರಂದು ಚುನಾವಣೆ ನಡೆಸಲು ನಿರ್ಧರಿಸಿದೆ.

- **ಶಿರಡಿ ಸಾಯಿ ಬಾಬಾ ಸಂಸ್ಥಾನಕ್ಕೆ ಹೊಸ ಸಮಿತಿ ರಚನೆ:** ಶಿರಡಿ ಸಾಯಿ ಬಾಬಾ ಸಂಸ್ಥಾನದ ನಿರ್ವಹಣೆಗೆ ಹೊಸ ಸಮಿತಿಯನ್ನು ರಚಿಸುವಂತೆ ಬಾಂಬೆ ಹೈಕೋರ್ಟ್ ಮಹಾರಾಷ್ಟ್ರ ಸರ್ಕಾರಕ್ಕೆ ಸೂಚಿಸಿದೆ. ತಾನು ವಿಧಿಸಿರುವ ನಿಯಮಗಳಿಗೆ ಒಳಪಡುವಂತೆ ಸಮಿತಯನ್ನು ರಚಿಸಬೇಕು ಎಂದು ಕೋರ್ಟ್ ಹೇಳಿದೆ. ದೇಶ ವಿದೇಶಗಳಲ್ಲಿ ಅಪಾರ ಭಕ್ತರನ್ನು ಹೊಂದಿರುವ ಶಿರಡಿ ಸಂಸ್ಥಾನದ ಆಡಳಿತದ ಮುಖ್ಯ ನಿರ್ಣಯಗಳನ್ನು ಈ ಸಮಿತಿ ನೋಡಿಕೊಳ್ಳಲಿದೆ.

- **"ಸ್ಟಫನ್ ಡಿ ಮಿಸ್ತುರ" ವಿಶೇಷ ನಿಯೋಗಿ:** ಕೇರಳದ ಇಬ್ಬರು ಮೀನುಗಾರರನ್ನು ಗುಂಡಿಟ್ಟು ಕೊಂದ ಇಟಲಿಯ ನಾವಿಕರ ಪರವಾಗಿ ಇಟಲಿಯ ಉಪ ವಿದೇಶಾಂಗ ಸಚಿವ "ಸ್ಟಫನ್ ಡಿ ಮಿಸ್ತುರ" ರವರನ್ನು ನಿಯೋಜನೆ ಮಾಡಲಾಗಿದೆ. ಇಟಲಿಯ ಪ್ರಧಾನಿ "ಎನ್ ರಿಕೊ ಲೆಟ್ಟಾ" ರವರು ಈ ವಿಚಾರವನ್ನು ಭಾರತಕ್ಕೆ ಅಧಿಕೃತವಾಗಿ ತಿಳಿಸಿದ್ದಾರೆ. ಮಿಸ್ತುರ ರವರ ಭಾರತ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ರವರ ಜತೆ ಈ ಪ್ರಕರಣವನ್ನು ನಿರ್ವಹಿಸಲಿದ್ದಾರೆ.

ಕರುನಾಡು ಪರೀಕ್ಷೆ

- **ಸಹರ ಇಂಡಿಯಾ ಪರಿವಾರ್ ದಿಂದ ಗಿನ್ನಿಸ್ ದಾಖಲೆ:** ರಾಷ್ಟ್ರಗೀತೆ "ಜನ ಗಣ ಮನ" ವನ್ನು ಸಹರಾ ಇಂಡಿಯಾ ಪರಿವಾರ್ ಗೆ ಸೇರಿದ 1,21,653 ಸಿಬ್ಬಂದಿ ಸಾಮೂಹಿಕವಾಗಿ ಏಕಕಾಲದಲ್ಲಿ ಹಾಡುವ ಮೂಲಕ ಗಿನ್ನಿಸ್ ದಾಖಲೆ ಬರೆದರು. ಈ ಹಿಂದೆ ಪಾಕಿಸ್ತಾನದಲ್ಲಿ 42,813 ಜನ ಸಾಮೂಹಿಕವಾಗಿ ಹಾಡಿದ್ದು ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಂಡಿತ್ತು.

- **ಕರ್ನಾಟಕ ವಿಧಾನ ಸಭಾ ಚುನಾವಣೆ ಫಲಿತಾಂಶ ಪ್ರಕಟ:** ಕರ್ನಾಟಕದಲ್ಲಿ ಮೇ.5 ರಂದು 224 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಫಲಿತಾಂಶ ಪ್ರಕಟವಾಗಿದ್ದು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ 121 ಕ್ಷೇತ್ರಗಳಲ್ಲಿ ಜಯಭೇರಿ ಸಾಧಿಸಿತು. ಆಡಳಿತ ರೂಢ ಬಿಜೆಪಿ ಕೇವಲ 40 ಕ್ಷೇತ್ರಗಳಲ್ಲಿ ಜಯಸಾಧಿಸಿ ಭಾರಿ ಮುಖಭಂಗ ಅನುಭವಿಸಿದೆ. ಜ್ಯಾತ್ಯತೀತ ಜನತಾ ದಳ 40 ಮತ್ತು ಕೆಜೆಪಿ 7 ಸ್ಥಾನಗಳಲ್ಲಿ ವಿಜಯ ಸಾಧಿಸಿವೆ. ಉಳಿದಂತೆ ಬಿಎಸ್ಆರ್ ಕಾಂಗ್ರೆಸ್ 3 ಮತ್ತು ಪಕ್ಷೇತರರು 12 ಕ್ಷೇತ್ರಗಳಲ್ಲಿ ಜಯಸಾಧಿಸಿವೆ.

- **"ಮರಿಯಾ ಮುಟೊಲ" 10ಕೆ ಮ್ಯಾರಥಾನ್ ರಾಯಭಾರಿ:** ಮೂರು ಬಾರಿ ವಿಶ್ವ ಚಾಂಪಿಯನ್ ಹಾಗೂ ಸಿಡ್ನಿ ಒಲಿಂಪಿಕ್ ಚಾಂಪಿಯನ್ "ಮರಿಯಾ ಮುಟೊಲ" ರವರು ಬೆಂಗಳೂರಿನಲ್ಲಿ ಮೇ ಅಂತ್ಯಕ್ಕೆ ನಡೆಯಲಿರುವ "10ಕೆ ಮ್ಯಾರಥಾನ್" ನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. 800 ಮೀ ಓಟದಲ್ಲಿ ಮಿಂಚುತ್ತಿರುವ ಮುಟೊಲ ರವರು 6 ಬಾರಿ ಒಲಂಪಿಕ್ ನಲ್ಲಿ ಭಾಗವಹಿಸಿರುವ ವಿಶ್ವದ 4 ನೇ ಅಥ್ಲಿಟ್.

- **ಭಾರತದ ಪೂವಮ್ಮಗೆ ಚಿನ್ನ:** ಭಾರತದ ಎಂ.ಆರ್.ಪೂವಮ್ಮ ರವರು ಥಾಯ್ಲೆಂಡ್ ನಲ್ಲಿ ನಡೆದ ಏಷ್ಯನ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ ಚಾಂಪಿಯನ್ ಷಿಪ್ ನ 400 ಮೀಟರ್ ಓಟದಲ್ಲಿ ಚಿನ್ನ ಗೆಲ್ಲುವ ಮೂಲಕ ಸಾಧನೆ ಮಾಡಿದ್ದಾರೆ. ಈ ಪದಕದಿಂದ ಗ್ರ್ಯಾನ್ ಪ್ರಿ ನಲ್ಲಿ ಪೂವಮ್ಮ ಎರಡನೇ ಬಾರಿ ಚಿನ್ನ ಗೆದ್ದಂತಾಯಿತು. ಈ ಚಾಂಪಿಯನ್ ಷಿಪ್ ನಲ್ಲಿ ಭಾರತ ನಾಲ್ಕು ಬಂಗಾರದ ಪದಕ ಸೇರಿದಂತೆ ಒಟ್ಟು 10 ಪದಕ ಗೆದ್ದಿದೆ.

- **ಕಾವೇರಿ ಮೇಲ್ವಿಚಾರಣೆ ಸಮಿತಿ ರಚನೆ:** ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಸುಪ್ರೀಂಕೋರ್ಟ್ ತಾತ್ಕಲಿಕ ಮೇಲ್ವಿಚಾರಣೆ ಸಮಿತಿಯನ್ನು ರಚಿಸಿದೆ. ಕೇಂದ್ರ ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ರವರು ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಕೇಂದ್ರ ಸರ್ಕಾರ ಮುಂದಿನ ಕ್ರಮಗಳನ್ನು ವಹಿಸಿಕೊಳ್ಳುವ ವರೆಗೂ ಈ ಸಮಿತಿ ಅಸ್ತಿತ್ವದಲ್ಲಿ ಇರಲಿದೆ. ಕೇರಳ, ತಮಿಳುನಾಡು, ಪಾಂಡಿಚೇರಿ ಮತ್ತು ಕರ್ನಾಟಕ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಈ ಸಮಿತಿಯ ಸದಸ್ಯರಾಗಿದ್ದಾರೆ.

- **<u>ಕೆಜೆಪಿ ಈಗ ರಾಜ್ಯ ಪಕ್ಷ:</u>** ಮಾಜಿ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ರವರ "ಕರ್ನಾಟಕ ಜನತಾ ಪಕ್ಷ"ಕ್ಕೆ ರಾಜ್ಯ ಚುನಾವಣಾ ಆಯೋಗದಿಂದ ರಾಜ್ಯ ಪಕ್ಷದ ಮಾನ್ಯತೆ ಗಳಿಸಿದೆ. ಒಂದು ರಾಜಕೀಯ ಪಕ್ಷಕ್ಕೆ ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆಯಬೇಕಾದರೆ ವಿಧಾನಸಭಾ ಚುನಾವಣೆಯಲ್ಲಿ ಚಲಾವಣೆಯಲ್ಲಿ ಮತದಾನಗೊಂಡ ಮತಗಳ ಪೈಕಿ ಶೇ.6 ರಷ್ಟು ಮತಗಳನ್ನು ಗಳಿಸಿರಬೇಕು. ಕೆಜೆಪಿ ಪ್ರಸ್ತುಕ ವಿಧಾನಸಭಾ ಚುನಾವಣೆಯಲ್ಲಿ ಶೇ.9.83 ರಷ್ಟು ಮತಪಡೆದಿರುವ ಕಾರಣ ರಾಜ್ಯ ಪಕ್ಷದ ಮಾನ್ಯತೆ ಲಭಿಸಿದೆ. ಇದೇ ವೇಳೆ ಶೇ.2.69 ರಷ್ಟು ಮತಗಳಿಸಿರುವ ಬಿಎಸ್ಆರ್ ಕಾಂಗ್ರೆಸ್ ಈ ಸ್ಥಾನಮಾನದಿಂದ ವಂಚಿತವಾಗಲಿದೆ.

- **<u>ಸೈಬರ್ ಭೃದತೆ ಮುಖ್ಯಸ್ಥರಾಗಿ "ಗುಲ್ಶನ್ ರೈ":</u>** ಸೈಬರ್ ಭದ್ರತೆ ಸಂಯೋಜಕರಾಗಿ "ಗುಲ್ಶನ್ ರೈ" ರವರು ಕೇಂದ್ರ ಸಚಿವ ಸಂಪುಟ ನೇಮಿಸಿದೆ. ಸದ್ಯ "ಗುಲ್ಶನ್ ರೈ" ರವರು CERT (Computer Emergency Response Team)" ನ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

- **<u>ತಮಿಳುನಾಡಿನಲ್ಲಿ ಗುಟ್ಕಾ, ಪಾನ್ ನಿಷೇಧ:</u>** ಗುಟ್ಕಾ, ಪಾನ್ ಮತ್ತಿತರ ಹಾನಿಕಾರ ತಂಬಾಕು ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯ ಮೇಲೆ ತಮಿಳುನಾಡು ಸರ್ಕಾರ ನಿಷೇಧ ಹೇರಿದೆ. ಪಾನ್, ಗುಟ್ಕಾಗಳ ಮೇಲೆ ನಿಷೇಧ ಹೇರುವಂತೆ ತಮಿಳುನಾಡು ತಂಬಾಕು ನಿಯಂತ್ರಣ ಮಂಡಳಿ ಸರ್ಕಾರಕ್ಕೆ ಸಲ್ಲಿಸಿದ್ದ ಮನವಿಯನ್ನು ಮುಖ್ಯಮಂತ್ರಿ ಜಯಲಲಿತ ಅನುಮೋದಿಸಿ ಆದೇಶ ಹೊರಡಿಸಿದ್ದಾರೆ. ಪಾನ್, ಗುಟ್ಕಾಗಳ ಮೇಲೆ ನಿಷೇಧವೇರಿದೆ ದೇಶದ ಮೊದಲ ರಾಜ್ಯ ಮಧ್ಯಪ್ರದೇಶ. ಬಳಿಕ ಕೇರಳ, ಗುಜರಾತ್, ಪಶ್ಚಿಮಬಂಗಾಳ ಮತ್ತು ಮಿಜೋರಂ ನಲ್ಲಿ ನಿಷೇಧ ಹೇರಲಾಯಿತು.

- **<u>ರತ್ನಾಕರ್ ದಾಸ್ ಕ್ಯಾಲಿಫೋರ್ನಿಯಾ ವಿವಿಯಿಂದ ಪದವಿ ಪಡೆದ ಅತಿ ಕಿರಿಯ ವಿದ್ಯಾರ್ಥಿ:</u>** ಶತಮಾನದ ಅವಧಿಯಲ್ಲಿ ಅಮೆರಿಕಾದ ಪ್ರತಿಷ್ಠಿತ ಕ್ಯಾಲಿಫೋರ್ನಿಯಾ ವಿವಿ ಯಿಂದ ಅಗ್ರಸ್ಥಾನದಲ್ಲಿ ಪದವಿ ಪಡೆದ ಅತ್ಯಂತ ಕಿರಿಯ ವಿದ್ಯಾರ್ಥಿ ಎಂಬ ಹೆಗ್ಗಳಿಕೆಗೆ ಭಾರತೀಯ ಮೂಲದ 18 ರ ಹರೆಯದ ವಿದ್ಯಾರ್ಥಿ "ರತ್ನಾಕರ್ ದಾಸ್" ರವರು ಪಾತ್ರರಾಗಿದ್ದಾರೆ. ಕೊಲ್ಕತ್ತಾ ಮೂಲದ ರತ್ನಾಕರ್ ದಾಸ್ ರವರು ಕ್ಯಾಲಿಫೋರ್ನಿಯಾ ವಿವಿಯಲ್ಲಿ ಜೈವಿಕ ಎಂಜನಿಯರಿಂಗ್ ಮತ್ತು ರಾಸಾಯನಿಕ ಜೀವಶಾಸ್ತ್ರದಲ್ಲಿ ಈ ಸಾಧನೆ ಮಾಡಿದ್ದಾರೆ.

- **<u>ಪ್ಲೋರೆನ್ಸ್ ನೈಟಿಂಗೇಲ್ ಪ್ರಶಸ್ತಿ:</u>** ಅಂತರರಾಷ್ಟ್ರೀಯ ನರ್ಸಿಂಗ್ ದಿನದ ಅಂಗವಾಗಿ ನರ್ಸಿಂಗ್ ನಲ್ಲಿ ಅಮೋಘ ಕಾರ್ಯಸಾಧನೆ ತೋರಿರುವ ದೇಶದ 35 ನರ್ಸ್ ಗಳಿಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ಪ್ಲೋರೆನ್ಸ್ ನೈಟಿಂಗೇಲ್ ಪ್ರಶಸ್ತಿಯನ್ನು ವಿತರಣೆ ಮಾಡಿದರು. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಈ ಪ್ರಶಸ್ತಿಯನ್ನು 1973 ರಲ್ಲಿ ಸ್ಥಾಪಿಸಿದ್ದು, ಅತ್ಯುತ್ತಮ ಸೇವೆ ನೀಡುವ ನರ್ಸ್ ಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿಯು ರೂ.50,000 ನಗದನ್ನು ಒಳಗೊಂಡಿದೆ.

- **ಶಾರೂಕ್ ಖಾನ್ ಗೆ ಶಿವಾಜಿ ಪ್ರಶಸ್ತಿ:** ಖ್ಯಾತ ತಮಿಳು ನಟ ದಿವಂಗತ ಶಿವಾಜಿ ಗಣೇಶನ್ ರವರ ಸ್ಮರಣರ್ಥ ನೀಡಲಾಗುವ ಶಿವಾಜಿ ಪ್ರಶಸ್ತಿ-2012 ನ್ನು ಶಾರೂಕ್ ಖಾನ್ ರವರಿಗೆ ನೀಡಲಾಯಿತು. ಹಿರಿಯ ನಟ ಕಮಲ್ ಹಾಸನ್ ರವರು ಈ ಪ್ರಶಸ್ತಿಯನ್ನು ಶಾರೂಕ್ ರವರಿಗೆ ವಿತರಿಸಿದರು.

- **"ದಿ ಹಿಂದೂ ಮೆಟ್ರೋ ಪ್ಲಸ್ ಆವಾರ್ಡ್**: ದಿ ಹಿಂದೂ ಪತ್ರಿಕೆ ನೀಡುವ "ದಿ ಹಿಂದೂ ಮೆಟ್ರೋ ಪ್ಲಸ್ ನಾಟಕಕಾರ ಪ್ರಶಸ್ತಿ-2013" ಪ್ರಶಸ್ತಿಗೆ ಮಂಜಿಮ ಚಟರ್ಜಿ ರವರು ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯನ್ನು 2008 ರಲ್ಲಿ ಸ್ಥಾಪಿಸಲಾಗಿದೆ. ಪ್ರಶಸ್ತಿಯ ಮೊತ್ತ 1 ಲಕ್ಷ. "ಮಂಜಿಮ ಚಟರ್ಜಿ" ರವರ "ದಿ ಮೌಂಟೇನ್ ಆಫ್ ಬೋನ್ಸ್" ಕೃತಿಗೆ ಈ ಪ್ರಶಸ್ತಿ ಲಭಿಸಿದೆ. ಕಳೆದ ವರ್ಷ ಈ ಪ್ರಶಸ್ತಿಗೆ "ಪ್ರಶಾಂತ್ ಕುಮಾರ್ ನಾಯರ್" ರವರ "ರೋಮಿಯೋ ಜೂಲಿಯೆಟ್" ಆಯ್ಕೆಯಾಗಿತ್ತು.

- **ಮೇ.15 ರಿಂದ ನೇರ ನಗದು ವರ್ಗಾವಣೆ ಯೋಜನೆಯಡಿ LPG ಸಬ್ಸಿಡಿ**: ನೇರ ನಗದು ವರ್ಗಾವಣೆಯಡಿ LPG ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪಿಸುವ ಯೋಜನೆಯನ್ನು ದೇಶದ 20 ಜಿಲ್ಲೆಗಳಲ್ಲಿ ಪ್ರಾತ್ಯಕ್ಷಿಕವಾಗಿ ಮೇ.15 ರಿಂದ ಜಾರಿಗೆ ತರಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ದೇಶದಾದ್ಯಂತ ಈ ಯೋಜನೆಯನ್ನು ಅಕ್ಟೋಬರ್ ನಲ್ಲಿ ಜಾರಿಗೊಳಿಸಲು ಸರ್ಕಾರ ತಿರ್ಮಾನಿಸಿದೆ. ಪ್ರಸುತ್ತ ಮಾರುಕಟ್ಟೆಯಲ್ಲಿ 14.2 ಕೆ.ಜಿ LPG ಸಿಲಿಂಡರ್ ಗೆ ರೂ.901.50 ಭರಿಸಬೇಕು. ಆದರೆ ಸಬ್ಸಿಡಿಯಿಂದ ರೂ.410.50 ಗೆ ದೊರೆಯಲಿದೆ. ಇದರಿಂದ ಗ್ರಾಹಕರಿಗೆ ವಾರ್ಷಿಕವಾಗಿ ರೂ.4000 ಉಳಿತಾಯವಾಗಲಿದ್ದು, ಈ ಹಣವನ್ನು ಅವರ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು.

- **"ಮಾಯೊ ಝೆಡಾಂಗ್" ಭಾವಚಿತ್ರ ಹರಾಜಿನಲ್ಲಿ ದಾಖಲೆ ಮಾರಾಟ:** ಚೀನಾ ಕಮ್ಯೂನಿಟಿ ಪಕ್ಷದ ನಾಯಕ "ಮಾಯೊ ಝೆಡಾಂಗ್ (Mao Zedong)" ರವರ ಭಾವಚಿತ್ರ ಹರಾಜಿನಲ್ಲಿ 55,000 ಡಾಲರ್ ಮೊತ್ತಕ್ಕೆ ಮಾರಾಟವಾಗಿದೆ. ಮಾಯೊ ರವರು ನಿಧನರಾಗಿ 27 ವರ್ಷಗಳ ಸರಿದಿದ್ದರು, ಹರಾಜಿನಲ್ಲಿ ದಾಖಲೆ ಮಾರಾಟ ಕಂಡಿರುವುದು ಅವರ ಜನಪ್ರಿಯತೆಗೆ ನಿದರ್ಶನವಾಗಿದೆ. 1961 ರಲ್ಲಿ ಚೀನಾದ "ಲೂಶನ್ ಪರ್ವತ"ದಲ್ಲಿ ಮಾಯೊ ರವರ ಪತ್ನಿ "ಜಿಯಾಂಗ್ ಕ್ವಿಂಗ್" ರವರು ಈ ಭಾವಚಿತ್ರವನ್ನು ತೆಗೆದಿದ್ದರು.

- **ಸಿಬಲ್ ಮತ್ತು ಸಿ.ಪಿ.ಜೋಶಿಗೆ ಹೆಚ್ಚುವರಿ ಖಾತೆ:** ಕಾನೂನು ಸಚಿವ ಅಶ್ವಿನಿ ಕುಮಾರ್ ರವರ ರಾಜೀನಾಮೆಯಿಂದ ತೆರವಾಗಿದ್ದ ಕಾನೂನು ಸಚಿವ ಖಾತೆಯನ್ನು ದೂರಸಂಪರ್ಕ ಸಚಿವ "ಕಪಿಲ್ ಸಿಬಲ್"ರವರಿಗೆ ವಹಿಸಲಾಗಿದೆ. ದೂರಸಂಪರ್ಕ ಖಾತೆಯ ಜೊತೆಗೆ ಕಾನೂನು ಸಚಿವ ಖಾತೆಯನ್ನು ಸಿಬಲ್ ನೋಡಿಕೊಳ್ಳಲಿದ್ದಾರೆ. ಅದೇ ರೀತಿ ಪವನ್ ಬನ್ಸಲ್ ರವರಿಂದ ತೆರವಾಗಿದ್ದ ರೈಲು ಸಚಿವ ಖಾತೆಯನ್ನು ರಸ್ತೆ ಮತ್ತು ಸಾರಿಗೆ ಸಚಿವ ಸಿ.ಪಿ.ಜೋಶಿಯವರಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ.

- **ಪ್ರವಾಸಿಗರ ಆಕರ್ಷಣೆಗೆ ರೋಡ್ ಶೋ:** ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಸೌಧಿ ಅರರೇಬಿಯಾದಲ್ಲಿ ರೋಡ್ ಶೋ ನಡೆಸಲು ಭಾರತದ ಪ್ರವಾಸೋದ್ಯಮ ಇಲಾಖೆ ನಿರ್ಧರಿಸಿದೆ. ಸೌಧಿಯ ಪ್ರಮುಖ ನಗರಗಳಾದ ರಿಯಾದ್, ಜೆಡ್ಡಾ ಮತ್ತು ದಮ್ಮಾಮ್ ನಗರಗಳಲ್ಲಿ "Find What You Seek" ಎನ್ನುವ ಶೀರ್ಷಿಕೆಯಡಿ ಈ ರೋಡ್ ಶೋ ನಡೆಯಲಿದೆ. ಭಾರತಕ್ಕೆ ಆಗಮಿಸುವ ಪ್ರವಾಸಿಗರ ಸಂಖ್ಯೆಯಲ್ಲಿ ಸೌಧಿ ಅರೇಬಿಯಾದ ಪಾಲು ಗಮನಾರ್ಹವಾಗಿ ಏರಿಕೆಯಾಗುತ್ತಿರುವ ಕಾರಣ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

- **ಛಾಯಾಚಿತ್ರಕಾರ ಜಗದೀಶ್ ಮಲಿ ನಿಧನ**: ಪ್ರಸಿದ್ದ ವಿನ್ಯಾಸ ಛಾಯಾಚಿತ್ರಕಾರ "ಜಗದೀಶ್ ಮಲಿ" ಅವರು ಆರೋಗ್ಯ ಸಮಸ್ಯೆಯಿಂದ ನಿಧನರಾದರು. ಬಾಲಿವುಡ್ ಸಿನಿಮಾ ತಾರೆಯರಾದ ರೇಖಾ, ಶಬೀನಾ ಅಜ್ಮಿ, ಕರೀನಾ ಕಪೂರ್, ಅನುಪಮಾ ಖೇರ್ ಮತ್ತಿತ್ತರ ಜೊತೆ ಕೆಲಸ ನಿರ್ವಹಿಸಿದ್ದರು.

- **"ಶಾಂತಿ ಟಿಗ್ಗ" ನಿಧನ:** ಭಾರತ ಸೇನೆಯ ಮೊದಲ ಮಹಿಳಾ ಜವಾನ್ ಎನಿಸಿದ್ದ "ಶಾಂತಿ ಟಿಗ್‌ಗ" ರವರು ನಿಧನರಾಗಿದ್ದಾರೆ. ಕೊಲ್ಕತ್ತಾ ರೈಲ್ವೆ ಆಸ್ಪತ್ರೆಯಲ್ಲಿ ಅವರ ದೇಹ ನೇಣು ಹಾಕಿಕೊಂಡ ಸ್ಥಿತಿಯಲ್ಲಿದ್ದು, ಆತ್ಮಹತ್ಯೆ ಎಂದು ಶಂಕಿಸಲಾಗಿದೆ. ಟಿಗ್ಗ ರವರು "ರೈಲ್ವೆ ಎಂಜನಿಯರ್ ಪ್ರಾದೇಶಿಕ ಸೈನ್ಯ ದಳದ" ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸೇವೆ ಸಲ್ಲಿಸಿದ್ದರು. ಆರು ವರ್ಷಗಳ ಅವರು ಭಾರತ ಸೇನೆ ಗೆ ಸೇರ್ಪಡೆಗೊಂಡಿದ್ದರು.

- **MGNREGA ಕೂಲಿ ಹೆಚ್ಚಳ:** "ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (MGNREGA)" ಯ ಕೂಲಿಯನ್ನು ಹೆಚ್ಚಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಹೊಸ ಆದೇಶದ ಅನ್ವಯ ಹರಿಯಾಣದಲ್ಲಿ ಪರಿಷ್ಕೃತ ಕೂಲಿ ದರ ರೂ.214 ಇರಲಿದೆ. ಈಶಾನ್ಯ ರಾಜ್ಯಗಳಲ್ಲಿ ರೂ.135 ಕ್ಕೆ ನಿಗದಿಪಡಿಸಲಾಗಿದೆ. ಕರ್ನಾಟಕದಲ್ಲಿ ರೂ.174 ಇರಲಿದ್ದು, ಏಪ್ರಿಲ್ 1, 2013 ರಿಂದ ಅನ್ವಯವಾಗಲಿದೆ.

- **ರಕ್ಷಣಾ ಕಾರ್ಯದರ್ಶಿ "ಶಶಿ ಕಾಂತ್ ಶರ್ಮಾ" ಮುಂದಿನ CAG?:** ರಕ್ಷಣಾ ಕಾರ್ಯದರ್ಶಿ "'ಶಶಿ ಕಾಂತ್ ಶರ್ಮಾ" ರವರು ದೇಶದ ಮುಂದಿನ "ಕಂಟ್ರೋಲರ್ ಮತ್ತು ಆಡಿಟರ್ ಜನರಲ್'" ಆಗಿ ನೇಮಕಗೊಳ್ಳುವ ಸೂಚನೆಗಳು ಅಧಿಕವಾಗಿವೆ. ಶರ್ಮಾ ರವರ ಹೆಸರನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರ ಅನುಮೋದನೆಗೆ ಶಿಫಾರಸ್ಸು ಮಾಡಲಾಗಿದ್ದು, ಶೀಘ್ರವೇ ಅಧಿಸೂಚನೆ ಹೊರಬೀಳಲಿದೆ. ಪ್ರಸ್ತುತ CAG ವಿನೋದ್ ರಾಯ್ ರವರು ಮೇ ತಿಂಗಳ ಕೊನೆಯಲ್ಲಿ ನಿವೃತ್ತಿ ಹೊಂದಲಿರುವ ಕಾರಣ ಹೊಸ CAG ನೇಮಕಾತಿಗೆ ಕ್ಷಣಗಣನೆ ಆರಂಭವಾಗಿದೆ. CAG ಹುದ್ದೆಗೆ ಇತರರ ಹೆಸರನ್ನು ಶಿಫಾರಸ್ಸು ಮಾಡಲಾಗಿರುವ ಕಾರಣ ಅಂತಿಮ ಫಲಿತಾಂಶಕ್ಕಾಗಿ ಸ್ವಲ್ಪ ದಿನ ಕಾದು ನೋಡಬೇಕಿದೆ.

- **ಉತ್ತನೂರು ರಾಜಮ್ಮ ನಿಧನ:** ಹಿರಿಯ ಬಂಡಾಯ ಸಾಹಿತಿ ಉತ್ತನೂರು ರಾಜಮ್ಮ (70) ನಿಧನರಾದರು. ಅವರು ಮೂತ್ರ ವೈಫಲ್ಯಗಳ ಕಾಯಿಲೆಯಿಂದ ಬಳಲುತ್ತಿದ್ದರು. ಮಹಿಳೆಯರ, ದಲಿತರ ಮತ್ತು ಸಮಾಜದಲ್ಲಿ ಕಟ್ಟ ಕಡೆ ವರ್ಗದ

ಜನರ ಮೇಲಾಗುವ ಶೋಷಣೆಗಳನ್ನು ಸಾಹಿತ್ಯ ರೂಪದಲ್ಲಿ ಬೆಳಕು ಚೆಲ್ಲಿದ್ದರು. ಕೋಲಾರ ಜಿಲ್ಲಾ ೯ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿ ರಾಜಮ್ಮ ಅವರು ಆಯ್ಕೆಯಾಗಿದ್ದರು.

- **"ಬಜೆಟ್ ಕ್ಯಾಂಟೀನ್ ವಿಸ್ತರಣೆ":** ಕಡಿಮೆ ದರದಲ್ಲಿ ಜನರಿಗೆ ಆಹಾರ ಒದಗಿಸುವ "ಅಮ್ಮ ಉನವಗಂಸ್" ಅಥವಾ "ಬಜೆಟ್ ಕ್ಯಾಂಟೀನ್" ಸೌಲಭ್ಯವನ್ನು ತಮಿಳುನಾಡು ಸರ್ಕಾರ ರಾಜ್ಯದ ಒಂಬತ್ತು ಮಹಾನಗರ ಪಾಲಿಕೆಗೆ ವಿಸ್ತರಿಸಲಿದೆ. ಪ್ರಸ್ತುತ ಚೆನ್ನೈ ನ 200 ವಾರ್ಡ್ ಗಳಲ್ಲಿ ಮಾತ್ರ ಈ ಕ್ಯಾಂಟೀನ್ ಗಳನ್ನು ತೆರೆಯಲಾಗಿದೆ. ಇಡ್ಲಿಯನ್ನು 1 ರೂ ಗೆ ಮತ್ತು ಮೊಸರನ್ನ, ಸಾಂಬಾರನ್ನು 3 ರೂ ಗಳಿಗೆ ಈ ಕ್ಯಾಂಟೀನ್ ಗಳು ನೀಡುತ್ತಿವೆ. ಇದೇ ವೇಳೆ ಪೊಂಗಲ್ ಮತ್ತು ರೈಸ್ ಬಾತ್ ಗಳನ್ನು ಇನ್ನು ಮುಂದೆ ಈ ಕ್ಯಾಂಟೀನ್ ಗಳಲ್ಲಿ ನೀಡಲು ನಿರ್ಧರಿಸಲಾಗಿದೆ.

- **ಸ್ಪಾಟ್ ಫಿಕ್ಸಿಂಗ್ ರಾಜಸ್ತಾನ್ ರಾಯಲ್ಸ್ ತಂಡದ ಮೂರು ಆಟಗಾರರ ಬಂಧನ:** ಐಪಿಲ್ 6 ನೇ ಆವೃತ್ತಿಯಲ್ಲಿ "ರಾಜಸ್ತಾನ ರಾಯಲ್ಸ್" ತಂಡದ ಪರವಾಗಿ ಆಡುತ್ತಿರುವ "ಶ್ರೀಶಾಂತ್, "ಅಜಿತ್ ಚಂಡಿಲಾ" ಮತ್ತು "ಅಂಕಿತ್ ಚವಣ್" ರವರನ್ನು "ಸ್ಪಾಟ್ ಫಿಕ್ಸಿಂಗ್" ಹಗರಣದಲ್ಲಿ ಭಾಗಿಯಾಗಿರುವ ಕಾರಣ ದೆಹಲಿ ಪೊಲಿಸರು ಬಂಧಿಸಿದ್ದಾರೆ. ಪಂದ್ಯ ನಡೆಯುವ ವೇಳೆ ನಿರ್ದಿಷ್ಟ ಓವರ್ ನಲ್ಲಿ ನಿಗದಿತ ರನ್ ನೀಡುವುದಾಗಿ ಈ ಮೂವರು ಆಟಗಾರರು ಬುಕ್ಕಿಗಳೊಂದಿಗೆ "ಸ್ಪಾಟ್ ಫಿಕ್ಸಿಂಗ್" ನಲ್ಲಿ ಭಾಗಿಯಾಗಿರುವುದಾಗಿ ಪೊಲಿಸರು ಹೇಳಿದ್ದಾರೆ.

- **ಪಿಎಫ್ ಠೇವಣಿಗೆ ಶೇ.8.5 ಬಡ್ಡಿ:** ಭವಿಷ್ಯ ನಿಧಿ ಠೇವಣಿಗೆ 2012-13 ನೇ ಸಾಲಿನಲ್ಲಿ ಶೇ.8.5 ರಷ್ಟು ಬಡ್ಡಿ ದರ ನೀಡಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. 2011-12 ನೇ ಸಾಲಿನಲ್ಲಿ ಶೇ.8.25 ರಷ್ಟು ಬಡ್ಡಿಯನ್ನು ನಿಗದಿಪಡಿಸಲಾಗಿತ್ತು.

- **ಕೇರಳದಲ್ಲಿ ಹೊಸದಾಗಿ 12 ತಾಲ್ಲೂಕ್ ಗಳ ರಚನೆ:** ಹೊಸದಾಗಿ 12 ತಾಲ್ಲೂಕ್ ಗಳ ರಚನೆಗೆ ಸಲ್ಲಿಸಿದ್ದ ಪ್ರಸ್ತಾವನೆಗೆ ಕೇರಳ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದ ಕೇರಳದಲ್ಲಿರುವ ತಾಲ್ಲೂಕ್ ಗಳ ಸಂಖ್ಯೆ 87 ಕ್ಕೆ ಏರಿಕೆಯಾಗಲಿದೆ.

- **ಡೇವಿಡ್ ಬೆಕಮ್ ನಿವೃತ್ತಿ:** ಜಗತ್ತು ಕಂಡ ಶ್ರೇಷ್ಠ ಫುಟ್ ಬಾಲ್ ಆಟಗಾರ ಡೇವಿಡ್ ಬೆಕಮ್ ರವರು ಈ ಋತುವಿನ ಕೊನೆಯಲ್ಲಿ ನಿವೃತ್ತಿ ಹೊಂದುವುದಾಗಿ ಹೇಳಿದ್ದಾರೆ. 38 ವರ್ಷದ ಬೆಕಮ್ ರವರು ಪ್ರಸ್ತುತ "ಪ್ಯಾರಿಸ್ ಸೆಂಟ್-ಜರ್ಮನಿ" ಕ್ಲಬ್ ನಲ್ಲಿ ಆಡುತ್ತಿದ್ದಾರೆ. ವಿಶ್ವದ ಅತ್ಯಂತ ಶ್ರೀಮಂತ ಫುಟ್ ಬಾಲ್ ಆಟಗಾರ ಎಂಬ ಖ್ಯಾತಿಯನ್ನು ಅವರು ಹೊಂದಿದ್ದಾರೆ. 1996 ರಲ್ಲಿ ತಮ್ಮ 21 ವಯಸ್ಸಿನಲ್ಲಿ ಬೆಕಮ್ ರವರು ಅಂತರರಾಷ್ಟ್ರೀಯ ಫುಟ್ ಬಾಲ್ ಪಂದ್ಯಕ್ಕೆ ಪಾದರ್ಪಣೆ ಮಾಡಿದರು.

- **ಏಷ್ಯಾದ ಟಾಪ್ 101 ರೆಸ್ಟೋರೆಂಟ್ ಗಳು:** ಏಷ್ಯಾದ ಟಾಪ್ 101 ರೆಸ್ಟೋರೆಂಟ್ ಗಳ ಪಟ್ಟಿಯಲ್ಲಿ ಭಾರತದ ಐದು ರೆಸ್ಟೋರೆಂಟ್ ಗಳು ಸ್ಥಾನ ಪಡೆದುಕೊಂಡಿವೆ. "ದಿ ಡೈಲಿ ಮೀಲ್" ನಡೆಸಿರುವ ಸಮೀಕ್ಷೆಯಲ್ಲಿ ತೈವಾನ್ ರಾಷ್ಟ್ರದ ರಾಜಧಾನಿ ತೈಪೆನಲ್ಲಿರುವ "ದಿನ್ ಥಾಯ್ ಫಂಗ್ (Din Tai Fung)" ಟಾಪ್ ನಂ.1 ಸ್ಥಾನದಲ್ಲಿದೆ. 2 ನೇ ಸ್ಥಾನದಲ್ಲಿ ಚೀನಾದ "ಡಕ್ ಡಿ ಚಿನೆ" ಸ್ಥಾನಪಡೆದುಕೊಂಡಿದೆ. ದೆಹಲಿಯಲ್ಲಿರುವ "ವಾಕ್ (Varq)" ರೆಸ್ಟೋರೆಂಟ್ 6 ನೇ ಸ್ಥಾನವನ್ನು ಪಡೆದುಕೊಂಡಿದೆ.

- **ಸರಬ್ಜಿತ್ ಸಿಂಗ್ ಪ್ರಕರಣ ತನಿಖೆಗೆ ನ್ಯಾಯಮೂರ್ತಿ ನೇಮಕ:** ಪಾಕಿಸ್ತಾನದ ಲಾಹೋರ್ ನಲ್ಲಿರುವ ಕೊಟ್ ಲಖಪತ್ ಜೈಲಿನಲ್ಲಿ ಸಹ ಕೈದಿಗಳಿಂದ ಹಲ್ಲೆಗೊಳಗಾಗಿ ಮರಣ ಹೊಂದಿದ ಭಾರತದ ವೀರ ಪುತ್ರ "ಸರಬ್ಜಿತ್ ಸಿಂಗ್" ರವರ ಕೊಲೆ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪಾಕಿಸ್ತಾನ ಕೋರ್ಟ್ ನ್ಯಾಯಮೂರ್ತಿ "ಸಯ್ಯದ್ ಮಝುರ್ ಅಲಿ ಅಕ್ಬರ್ ನಾಕ್ವಿ" ರವರನ್ನು ನೇಮಕಮಾಡಿದೆ. ಆದರೆ ವರದಿ ಸಲ್ಲಿಸಲು ಯಾವುದೇ ಸಮಯ ಮಿತಿಯನ್ನು ನೀಡಲಾಗಿಲ್ಲ.

- **OBC ಕೆನೆ ಪದರ ಮಿತಿ ಹೆಚ್ಚಳ**:ಹಿಂದುಳಿದ ವರ್ಗಗಳ ಜನರು (ಒಬಿಸಿ) ಮೀಸಲು ಸೌಲಭ್ಯಗಳನ್ನು ಪಡೆಯಲು ಇದ್ದ ವಾರ್ಷಿಕ ವರಮಾನ ಮಿತಿಯನ್ನು ಕೇಂದ್ರ ಸಚಿವ ಸಂಪುಟ ರೂ.4.5 ಲಕ್ಷದಿಂದ ರೂ.6 ಲಕ್ಷಕ್ಕೆ ಹೆಚ್ಚಿಸಿದೆ. ಕೆನೆ ಪದರ ಮಿತಿ (Creamy Layer) ಎಂದು ಕರೆಯಲಾಗುವ ಈ ಮಿತಿಯನ್ನು ಹಣದುಬ್ಬರವನ್ನು ಲೆಕ್ಕಕ್ಕೆ ತೆಗೆದುಕೊಂಡು ಹೆಚ್ಚಿಸಲಾಗಿದೆ.

- **ಮಹಾಸೇನ್**: ಮಹಾಸೇನ್ ಒಂದು ಚಂಡಮಾರುತದ ಹೆಸರು. ಬಾಂಗ್ಲದೇಶ ಮತ್ತು ಭಾರತ ಈಶಾನ್ಯ ರಾಜ್ಯಗಳಲ್ಲಿ ಮಹಾಸೇನ್ ಚಂಡಮಾರುತ ಅಬ್ಬರ ಜೋರಾಗಿದ್ದು, ಬಾಂಗ್ಲಾದಲ್ಲಿ ನಾಲ್ವರು ಬಲಿಯಾಗಿದ್ದಾರೆ. ಈ ಮಧ್ಯೆ ಮಹಾಸೇನ್ ಭಾರತದ ಈಶಾನ್ಯ ರಾಜ್ಯಗಳತ್ತ ಗಂಟೆಗೆ 97 ಕಿ.ಮೀ ವೇಗದಲ್ಲಿ ಚಲಿಸುತ್ತಿದ್ದು, ಭಾರಿ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

- **ಮೈಸೂರು ಮತ್ತು ತುಮಕೂರಿನಲ್ಲಿ LPG ಸಬ್ಸಿಡಿ ನೇರವಾಗಿ ಖಾತೆಗೆ:** ನೇರ ನಗದು ವರ್ಗಾವಣೆ ಯೋಜನೆಯಡಿ LPG ಸಬ್ಸಿಡಿಯನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡುವ ಯೋಜನೆಯನ್ನು ರಾಜ್ಯದ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಜೂನ್ 1 ರಿಂದ ಪ್ರಾರಂಭವಾಗಲಿದೆ.

- **ಭಾರತದ "ರಾಜಾ ರೆಡ್ಡಿ"ಗೆ ಸುರಕ್ಷಿತ ಚಾಲಕ ಪ್ರಶಸ್ತಿ:** ದುಬೈ ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟ್ರಾನ್ಸ್ ಗ್ರೂಪ್ಸ್ ಏರ್ ಸೈಡ್ ಸರ್ವೀಸ್ ಟೀಮ್ ನಲ್ಲಿ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ಭಾರತ ಮೂಲದ ರಾಜಾ ರೆಡ್ಡಿ ಅಲ್ಲೂರಿ ರವರಿಗೆ ಸುರಕ್ಷಿತ ಚಾಲಕ ಪ್ರಶಸ್ತಿ ದೊರೆತಿದೆ. ರೆಡ್ಡಿ ರವರು ಚಾಲಕರಾಗಿ ಈ ವರೆಗೆ ಯಾವುದೇ ಅಪಘಾತ

ಮಾಡಿಲ್ಲ, ಮೇಲಾಗಿ ವಿಮಾನ ನಿಲ್ದಾಣದ ಸಂಚಾರ ನಿಯಮವನ್ನು ಉಲ್ಲಂಘಿಸಲ್ಲ. ಆದ ಕಾರಣ ಈ ಪ್ರಶಸ್ತಿಯನ್ನು ನೀಡಲಾಗಿದೆ.

- **ಅರುಣಾಚಲ ಪ್ರದೇಶ ನೂತನ ರಾಜ್ಯಪಾಲರಾಗಿ "ನಿರ್ಭಯ್ ಶರ್ಮಾ":** ನಿವೃತ್ತ ಲೆಫ್ಟಿನೆಂಟ್ ಜನರಲ್ "ನಿರ್ಭಯ್ ಶರ್ಮಾ" ರವರನ್ನು ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿ ರಾಷ್ಟ್ರಪತಿ ಪ್ರಣಭ್ ಮುಖರ್ಜಿರವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಶರ್ಮಾರವರು ಭಾರತೀಯ ಸೇನೆಯಲ್ಲಿ ತಮ್ಮ ವಿಶಿಷ್ಟವಾದ ಕಾರ್ಯವೈಖರಿಯಿಂದ ಅಪಾರ ಗೌರವನ್ನು ಗಳಿಸಿದ್ದಾರೆ. ಕೇಂದ್ರ ಲೋಕ ಸೇವಾ ಆಯೋಗದ ಸದಸ್ಯರಾಗಿಯೂ "ಶರ್ಮಾ"ರವರು ಸೇವೆ ಸಲ್ಲಿಸಿದ್ದಾರೆ.

- **"ಸೇನ್ ಗುಪ್ತಾ" ಆಂಧ್ರ ಪ್ರದೇಶ ಮುಖ್ಯ ನ್ಯಾಯಮೂರ್ತಿ:** ಉತ್ತರಖಂಡ್ ಹೈಕೋರ್ಟ್ ನ ನ್ಯಾಯಾಧೀಶರಾದ "ಕಲ್ಯಾಣ್ ಜ್ಯೋತಿ ಸೇನ್ ಗುಪ್ತಾ" ರವರನ್ನು ಆಂಧ್ರ ಪ್ರದೇಶ ಹೈಕೋರ್ಟ್ ನ ಮುಖ್ಯ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ. ಸೇನ್ ಗುಪ್ತಾ ರವರು ಕೊಲ್ಕತ್ತಾ ಹೈಕೋರ್ಟ್ ನಲ್ಲಿ ಅಡ್ವೋಕೆಟ್ ಆಗಿ ವಕೀಲ ವೃತ್ತಿಯನ್ನು ಆರಂಭಿಸಿದ್ದರು.

- **"ಆರ್ಚರಿ: ಭಾರತದ ವನಿತೆಯರಿಗೆ ಕಂಚು:** ಶಾಂಘೈನಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ನಲ್ಲಿ ಭಾರತದ ವನಿತೆಯರ ತಂಡ ಕಂಚಿನ ಪದಕ ಗೆದ್ದುಕೊಂಡಿದೆ. ಭಾರತದ ತ್ರಿನಾ ದೇಬ್, ಗಗನ್ ದೀಪ್ ಕೌರ್ ಮತ್ತು ಲಿಲಿ ಚಾನುರವರನ್ನು ಒಳಗೊಂಡ ತಂಡ ಪ್ಲೈ ಆಫ್ ಸ್ಪರ್ಧೆಯಲ್ಲಿ ಇಟಲಿಯ "ಕಟಿಯಾ ಡಿ ಆಗೊಸ್ತಿನೊ" ಮತ್ತು ಲಾರಾ ಲಾಂಗೊ ರವರ ವಿರುದ್ಧ ಜಯ ಸಾಧಿಸುವ ಮೂಲಕ ಪದಕ ಗೆದ್ದರು.

- **ಎವರೆಸ್ಟ್ ಏರಿದ ಪಾಕಿಸ್ತಾನದ ಮೊದಲ ಮಹಿಳೆ "ಸಮೀನಾ ಬೇಗ್":** 22 ವರ್ಷದ "ಸಮೀನಾ ಬೇಗ್" ರವರು ಮೇ 19, 2013 ರಂದು ಮೌಂಟ್ ಎವರೆಸ್ಟ್ ಏರುವ ಮೂಲಕ ಈ ಸಾಧನೆ ಮಾಡಿದ ಪಾಕಿಸ್ತಾನದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

- **ಎವರೆಸ್ಟ್ ಏರಿದ ಮೊದಲ ಅವಳಿ ಸಹೋದರಿಯರು:** ಡೆಹ್ರಾಡನ್ ಮೂಲದ ಅವಳಿ ಸಹೋದರಿಯರಾದ "ನುಂಶಿ ಮಲ್ಲಿಕ್ ಮತ್ತು ತಂಶಿ ಮಲ್ಲಿಕ್" ರವರು ಎವರೆಸ್ಟ್ ಶಿಖರ ತಲುಪಿದ ಮೊದಲ ಅವಳಿ ಸಹೋದರಿಯರು ಎಂಬ ಖ್ಯಾತಿಯನ್ನು ಪಡೆದುಕೊಂಡರು.

- **"ಪೆನ್ನೆ ಹ್ಯಾಕ್ ಫೋರ್ತ್ ಜೋನ್ಸ್" ನಿಧನ:** ಆಸ್ಟ್ರೇಲಿಯಾದ ಹೆಸರಾಂತ ಸಿನಿಮಾ ನಟಿಯರಲ್ಲಿ ಒಬ್ಬರಾದ "ಪೆನ್ನೆ ಹ್ಯಾಕ್ ಫೋರ್ತ್ ಜೋನ್ಸ್" ರವರು ನಿಧನರಾದರು. ಜೋನ್ಸ್ ರವರು ಶ್ವಾಸಕೋಶ ಕ್ಯಾನ್ಸರ್ ನಿಂದ ಬಳಲುತ್ತಿದ್ದರು. ಟಿವಿ ಧಾರಾವಾಹಿ ನಟಿಯಾಗಿ 1969 ರಲ್ಲಿ ವೃತ್ತಿಯನ್ನು ಆರಂಭಿಸಿದ ಜೋನ್ಸ್, ಅನೇಕ ಸಿನಿಮಾಗಳಲ್ಲೂ ಅಭಿನಯಿಸಿದ್ದರು. "ಲಾಸ್ಟ್ ಡ್ಯಾನ್ಸರ್" ಮತ್ತು "ವೆಡ್ಡಿಂಗ್" ಚಿತ್ರಗಳಲ್ಲಿ ಅವರ ಅಭಿನಯ ಚಿರಂತನವಾದದ್ದು.

- **ವಿಶ್ವ 10 ಕೆ ಓಟ ಪ್ರಾಬಲ್ಯ ಮೆರೆದ ಕೀನ್ಯಾ ಅಥ್ಲೇಟ್ ಗಳು**: ನಿರೀಕ್ಷೆಯಂತೆಯೇ ಕೀನ್ಯಾದ ಅಥ್ಲೇಟ್ ಗಳು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ವಿಶ್ವ 10 ಕೆ ಓಟದಲ್ಲಿ ಪ್ರಥಮ ಸ್ಥಾನಗಳಿಸಿದರು. ಕೀನ್ಯಾದ ಅಲೆಕ್ಸ್ ಒಲೊಟಿಪ್ ಟಿಪ್ ರವರು 28 ನಿಮಿಷ ಏಳು ಸೆಕೆಂಡ್ ಗಳಲ್ಲಿ ಗುರಿ ಮುಟ್ಟವ ಮೂಲಕ ಪ್ರಥಮ ಸ್ಥಾನ ಪಡೆದರು. ಎರಡನೇ ಸ್ಥಾನವನ್ನು ಕೀನ್ಯಾದವರೆ ಆದ ನಿಕೊಲಸ್ ಕಿಪ್ಕೆಂಬಿಯೊ ಪಡೆದುಕೊಂಡರು. ಮಹಿಳೆಯರ ವಿಭಾಗದಲ್ಲಿ ಕೀನ್ಯಾದ ಗ್ಲಾಡಿಸೊ ಚೆರೊನೊ ಪ್ರಥಮ ಸ್ಥಾನಗಳಿಸಿದರು. ಎರಡನೇ ಸ್ಥಾನವನ್ನು ಇಥಿಯೊಪಿಯಾದ ಗುಟೇನ್ ಶೋನ್ ಪಡೆದುಕೊಂಡರು. ಭಾರತದ ಸ್ಪರ್ಧಿಗಳ ವಿಭಾಗದಲ್ಲಿ ಉತ್ತರಪ್ರದೇಶದ ಸುಧಾ ಸಿಂಗ್ ಮತ್ತು ಸುರೇಶ್ ಕೆ.ಆರ್.ಪಟೇಲ್ ಪ್ರಥಮ ಸ್ಥಾನ ಪಡೆದುಕೊಂಡರು.

- **ಅಂತರಿಕ್ಷದಿಂದ ಮರಳಿದ "ಬಯೋನ್-ಎಂ"**: ಇಲಿ, ಮೃದ್ವಂಗಿ ಮತ್ತು ವಿವಿಧ ಜಾತಿಯ ಸಸ್ಯಗಳನ್ನು ಹೊತ್ತು ಅಂತರಿಕ್ಷಕ್ಕೆ ತೆರಳಿದ್ದ ರಷ್ಯಾದ "ಬಯೋನ್-ಎಂ" ಗಗನನೌಕೆ ಸುರಕ್ಷಿತವಾಗಿ ಧರೆಗೆ ಇಳಿದಿದೆ. ಗುರುತ್ವಾಕರ್ಷಣೆ ಈ ಜೀವಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ಅಧ್ಯಯನ ನಡೆಸುವ ಸಲುವಾಗಿ ಈ ಗಗನನೌಕೆಯನ್ನು ಹಾರಿಸಲಾಗಿತ್ತು. ಬಾಹ್ಯಕಾಶಕ್ಕೆ ತೆರಳಿದ್ದ ಎಷ್ಟು ಪ್ರಾಣಿಗಳು ಸುರಕ್ಷಿತವಾಗಿ ಮರಳಿವೆ ಎಂಬುದರ ಬಗ್ಗೆ ಸದ್ಯಕ್ಕೆ ಮಾಹಿತಿ ಲಭ್ಯವಾಗಿಲ್ಲ. ಇಂದೊಮ್ಮೆ ಸುರಕ್ಷಿತವಾಗಿದ್ದರೆ, ಮಾನವನ ಮಂಗಳ ಯಾತ್ರೆ ಕನಸು ನನಸಾಗಲು ಇದು ಮುನ್ನುಡಿ ಬರೆಯಲಿದೆ.

- **"ಯುಚಿರೊ ಮಿರ (Yuichiro Miura)":** ಇವರು ಜಪಾನ್ ನ ಪರ್ವತರೋಹಿ. ಮೇ 23, 2013 ರಂದು ತಮ್ಮ 80 ನೇ ವಯಸ್ಸಿನಲ್ಲಿ ಎವರೆಸ್ಟ್ ಶಿಖರ ತಲುಪಿ ವಿಶ್ವ ದಾಖಲೆ ಬರೆದರು. ಇಷ್ಟು ಹಿರಿಯ ವಯಸ್ಸಿನಲ್ಲಿ ಎವರೆಸ್ಟ್ ಏರಿದ ಪ್ರಥಮ ವ್ಯಕ್ತಿ ಎನಿಸಿದರು. ಮಿರ ರವರು ತಮ್ಮ 70 ಮತ್ತು 75 ನೇ ವಯಸ್ಸಿನಲ್ಲಿಯೂ ಸಹ ಎವರೆಸ್ಟ್ ಏರಿದ್ದರು. 2008 ರಲ್ಲಿ ನೇಪಾಳದ "ಬಹದ್ದೂರ್ ಶೆರ್ಚನ್" ರವರು 76 ನೇ ವರ್ಷದಲ್ಲಿ ಎವರೆಸ್ಟ್ ತುದಿ ತಲುಪಿದ್ದು ಇದುವರೆಗೂ ವಿಶ್ವದಾಖಲೆ ಎನಿಸಿತ್ತು.

- **ಅರುಣಿಮಾ ಸಿನ್ಹಾ:** ಅರುಣಿಮಾ ಸಿನ್ಹಾ ರವರು ರಾಷ್ಟ್ರೀಯ ವಾಲಿಬಾಲ್ ತಂಡದ ಮಾಜಿ ಆಟಗಾರ್ತಿ. ರೈಲಿನಲ್ಲಿ ಪ್ರಯಾಣಿಸುವಾಗ ನಡೆದ ದುರ್ಘಟನೆಯಲ್ಲಿ ಒಂದು ಕಾಲು ಕಳೆದುಕೊಂಡಿರುವ ಇವರು ಮೌಂಟ್ ಎವರೆಸ್ಟ್ ಏರಿದ ಸಾಧನೆ ಮಾಡಿದ್ದಾರೆ. ಅಂಗವಿಕಲರೊಬ್ಬರು ಎವರೆಸ್ಟ್ ಏರಿದ್ದು ಇದೇ ಮೊದಲು. ಉತ್ತರ ಪ್ರದೇಶದವರಾದ ಅರುಣಿಮಾ, ಕಳೆದ ವರ್ಷ ಲಕ್ನೋ ದಿಂದ ದೆಹಲಿಗೆ ರೈಲಿನಲ್ಲಿ ಪ್ರಯಾಣಿಸುವ ವೇಳೆ ಸರಗಳ್ಳರಿಂದ ತಪ್ಪಿಸಲು ಹೋಗಿ ರೈಲಿನಿಂದ ತಳ್ಳಲ್ಪಟ್ಟಿದ್ದರು. ಈ ವೇಳೆ ಎದುರಿಗೆ ಬರುತ್ತಿದ್ದ ರೈಲಿಗೆ ಕಾಲು ಸಿಲುಕಿ ಕಾಲು ಕಳೆದುಕೊಂಡರು.

- **ಈಶಾ ಖರೆ:** ಈಶಾ ಖರೆ ಭಾರತ ಮೂಲದ 18 ವರ್ಷದ ಹುಡುಗಿ. ಈಕೆ ಕೇವಲ 30 ಸೆಕೆಂಡ್ ಗಳಲ್ಲಿ ಮೊಬೈಲ್ ಫೋನನ್ನು ಚಾರ್ಚ್ ಮಾಡುವ ಚಾರ್ಜರನ್ನು ಕಂಡುಹಿಡಿದಿದ್ದಾಳೆ. ಈಶಾ ಅವರ ಸಂಶೋಧನೆಗೆ "ಇಂಟೆಲ್ ಫೌಂಡೇಶನ್ ಯಂಗ್ ಸೈಂಟಿಸ್ಟ್ ಅವಾರ್ಡ್ ಕೂಡ ಲಭಿಸಿದೆ. ಫೋನಿನೊಳಗೆ ಸೂಪರ್ ಕ್ಯಾಪಸಿಟರ್ ಎಂಬ ಸಣ್ಣ ಗಾತ್ರದ

ಉಪಕರಣವನ್ನು ಅಳವಡಿಸಿದ್ದು, ಅದ ಕ್ಷಣರ್ಧದಲ್ಲಿ ಮೊಬೈಲ್ ನ್ನು ಚಾರ್ಜ್ ಮಾಡುತ್ತದೆ. ಅಲ್ಲದೇ ಚಾರ್ಜನ್ನು ದೀರ್ಘಕಾಲ ಹಿಡಿದಿಡುತ್ತದೆ.

- **ಸುದರ್ಶನ್ ಪಟ್ನಾಯಕ್ ಗೆ "ಗ್ರಾಂಡ್ ಪ್ರಶಸ್ತಿ":** ಡೆನ್ಮಾರ್ಕ್ನನಲ್ಲಿ ನಡೆದ 2 ನೇ ಅಂತರರಾಷ್ಟ್ರೀಯ ಮರಳು ಕಲಾಕೃತಿ ಸ್ಪರ್ಧೆಯಲ್ಲಿ ಭಾರತದ ಮರಳು ಶಿಲ್ಪಕಲಾವಿದ "ಸುದರ್ಶನ್ ಪಟ್ನಾಯಕ್" ರವರು ಪ್ರತಿಷ್ಠಿತ "ಡ್ಯಾನಿಶ್ ಗ್ರಾಂಡ್ ಪ್ರಶಸ್ತಿ"ಯನ್ನು ಪಡೆದುಕೊಂಡರು. ಅವರಿನ "ಹಸಿರಿನತ್ತ ನಡೆ, ಭೂಮಿ ಉಳಿಸಿ" ವಸ್ತು ಆಧಾರಿತ ಕಲಾಕೃತ್ತಿಗೆ ಈ ಪ್ರಶಸ್ತಿ ಲಭಿಸಿದೆ.

- **ಆನಂದ್ ಶೆಟ್ಟಿ ನಿಧನ:** ಆನಂದ್ ಶೆಟ್ಟಿ ರವರು ಭಾರತ ಕಂಡ ಅಪರೂಪದ ಅಥ್ಲೇಟ್. 80 ರ ದಶಕದಲ್ಲಿ ರಾಷ್ಟ್ರೀಯ ಅಥ್ಲೇಟಿಕ್ಸ್ ನ ವೇಗದ ಓಟದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಕರುನಾಡಿಗೆ ಹೆಮ್ಮೆ ತಂದಿದ್ದರು. 1982 ರಲ್ಲಿ ದೆಹಲಿಯಲ್ಲಿ, 1983 ರಲ್ಲಿ ಜೆಮ್ ಶೆಡ್ ಪುರದಲ್ಲಿ, 1985 ರಲ್ಲಿ ತಿರುವನಂತಪುರದಲ್ಲಿ ನಡೆದ 100 ಮೀಟರ್ ಮತ್ತು 200 ಮೀಟರ್ ಓಟದ ಸ್ಪರ್ಧೆಯಲ್ಲಿ ಬಂಗಾದದ ಪದಕ ಗೆದ್ದಿದ್ದರು. ಆನಂದ್ ರವರು ಮೇ 23, 2013 ರಂದು ಕಾಸರಗೋಡುವಿನ ಬಳಿ ನಡೆದ ರಸ್ತೆ ಅಪಘಾತದಲ್ಲಿ ದುರ್ಮರಣ ಹೊಂದಿದರು.
- **ಮಧುರ್ ಭಂಡಾರ್ಕರ್ ಗೆ ಪ್ರಶಸ್ತಿ:** ರಾಷ್ಟ್ರ ಪ್ರಶಸ್ತಿ ವಿಜೇತ ಸಿನಿಮಾ ನಿರ್ದೇಶಕ, ಚಿತ್ರಕಥೆಗಾರ ಮತ್ತು ನಿರ್ಮಾಪಕ "ಮಧುರ್ ಭಂಡಾರ್ಕರ್"ಗೆ ಪ್ರತಿಷ್ಠಿತ "ನ್ಯೂಯಾರ್ಕ್ ಸಿಟಿಜನ್ಸ್ ಅಚೀವ್ ಮೆಂಟ್" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 2012 ರಲ್ಲಿ ತೆರೆಕಂಡ ಕರೀನಾ ಕಪೂರ್ ಅಭಿನಯದ "ಹಿರೋಯಿನ್" ಚಿತ್ರ ಭಂಡಾರ್ಕರ್ ಅವರ ಕೊನೆಯ ಚಿತ್ರವಾಗಿದೆ.

- **"ಕೆವಿನ್ ಕೇರ್" ಉತ್ಪನ್ನಗಳ ರಾಯಭಾರಿಯಾಗಿ "ಆರ್. ಅಶ್ವಿನ್":** ಭಾರತ ಕ್ರಿಕೆಟ್ ತಂಡದ ಉದಯೋನ್ಮುಖ ಕ್ರಿಕೆಟ್ ಆಟಗಾರ ಆಫ್ ಸ್ಪಿನ್ನರ್ "ರವಿಚಂದ್ರನ್ ಅಶ್ವಿನ್" ಕೆವಿನ್ ಕೆರ್ ನ ಪ್ರಚಾರ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. 26 ವರ್ಷದ ಅಶ್ವಿನ್ "ಕೆವಿನ್ ಕೆರ್" ಸಂಸ್ಥೆ ಹೊರತಂದಿರುವ ಹಾಲು ಉತ್ಪನ್ನಗಳ ಪ್ರಚಾರ ರಾಯಭಾರಿಯಾಗಿ ನೇಮಕಗೊಂಡಿರುವುದಾಗಿ ಸಂಸ್ಥೆ ಪ್ರಕಟಿಸಿದೆ.

- **"ಮೇಜರ್ ಟಿಮ್ ಪಿಕೆ" ಬಾಹ್ಯಕಾಶಕ್ಕೆ ತೆರಳಿರುವ ಬ್ರಿಟನ್ ನ ಮೊದಲ ಗಗನಯಾನಿ:** ಮೇಜರ್ ಟಿಮ್ ಪಿಕೆ ರವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಲಿರುವ ಬ್ರಿಟನ್ ಮೊದಲ ಅಧಿಕೃತ ಗಗನಯಾನಿ ಎನಿಸಿದ್ದಾರೆ. ಸೇನಾ ಹೆಲಿಕಾಪ್ಟರ್ ನ ಮಾಜಿ ಫೈಲಟ್ ಆಗಿರುವ "ಪಿಕೆ" ಅವರು "ಯುರೋಪಿಯನ್ ಸ್ಪೇಸ್ ಏಜೆನ್ಸಿ" ಯಲ್ಲಿ ಎರಡು ವರ್ಷಗಳ ಹಿಂದೆಯೇ ತರಬೇತಿ ಪಡೆದಿದ್ದಾರೆ. ಮೇಜರ್ ಪಿಕೆ ಅವರು 2015 ರಲ್ಲಿ ರಷ್ಯಾದ "ಸೂಯಿಜ್" ರಾಕೆಟ್ ಮೂಲಕ ಅಂತರಿಕ್ಷಕ್ಕೆ ಪ್ರಯಾಣ ಬೆಳಸಲಿರುವುದಾಗಿ ಮಾಧ್ಯಮಗಳು ಪ್ರಕಟಿಸಿವೆ. ಈ ಹಿಂದೆ ಬಾಹ್ಯಕಾಶ ಪ್ರಯಾಣ ಬೆಳಸಿದ್ದ ಬ್ರಿಟಿಷ್ ಗಗನಯಾತ್ರಿಗಳು ಖಾಸಗಿ ಪ್ರಾಯೋಜಕತ್ವ ಅಥವಾ ಇತರೆ ದೇಶದ ನಾಗರೀಕತ್ವ ಪಡೆದುಕೊಂಡ

ಬಳಿಕ ಅಂತರಿಕ್ಷ ಪ್ರಯಾಣ ಮಾಡಿದ್ದರು. ಆಗಾಗಿ ಮೇಜರ್ ಪಿಕೆ ಅವರು ಅಂತರರಾಷ್ಟ್ರೀಯ ಬಾಹ್ಯಕಾಶಕ್ಕೆ ಪ್ರಯಾಣ ಮಾಡಲಿರುವ ಬ್ರಿಟನ್ ನ ಅಧಿಕೃತ ಗಗನಯಾತ್ರಿ ಎನಿಸಿದ್ದಾರೆ.

- **ಮೇರಿಕೋಮ್ ಪ್ರತಿಷ್ಠಾನಕ್ಕೆ ಅನುದಾನ:** ಮಣಿಪುರದ ಇಂಪಾಲ್ ನಲ್ಲಿ ಬಾಕ್ಸರ್ ಮೇರಿಕೋಮ್ ನೇತೃತ್ವದಲ್ಲಿ ನಿರ್ಮಿಸಲಾಗುತ್ತಿರುವ "ಜಿಮ್ನಾಸಿಯಂ ಭವನ ನಿರ್ಮಾಣ ಮತ್ತು ಸಲಕರಣೆಗಳ ಖರೀದಿ"ಗೆ ಕೇಂದ್ರ ಕ್ರೀಡಾ ಸಚಿವಾಲಯ ರೂ 3 ಕೋಟಿ ಅನುದಾನವನ್ನು ನೀಡುವುದಾಗಿ ಹೇಳಿದೆ. ಈ ಭವನ ನಿರ್ಮಾಣಕ್ಕೆ ಈಗಾಗಲೇ ಮಣಿಪುರ ಸರ್ಕಾರ ನಿವೇಶನ ಮಂಜೂರು ಮಾಡಿದೆ.

- **ಮಾವು ತಳಿಗೆ "ನಿರ್ಭಯ" ಹೆಸರು:** ಸಾಮೂಹಿಕ ಅತ್ಯಾಚಾರದಿಂದ ಮರಣ ಹೊಂದಿದ ದೆಹಲಿ ಯುವತಿ "ನಿರ್ಭಯ"ಳ ಹೆಸರನ್ನು ಮಾವಿನ ತಳಿಗೆ ನಾಮಕರಣ ಮಾಡಲಾಗಿದೆ .ಉತ್ತರಪ್ರದೇಶದ ಪ್ರಸಿದ್ಧ ಮಾವು ಕೇಂದ್ರ ಮಾಲಿಹಾಬಾದ್ ನಲ್ಲಿ ಬೆಳೆದ ಮಾವಿನ ತಳಿಗೆ ಪದ್ಮಶ್ರೀ ಪ್ರಶಸ್ತಿ ವಿಜೇತ ಮಾವು ಬೆಳೆಗಾರ ಕಲೀಮುಲ್ಲಾ ಖಾನ್ ರವರು ಇಂತಹದೊಂದು ಅಪರೂಪದ ಕಾರ್ಯವನ್ನು ಮಾಡಿದ್ದಾರೆ.

- **ಅನಾಥರಿಗೂ ಸೇನೆಯಲ್ಲಿ ಕೆಲಸ:** ಸೇನಾ ನೇಮಕಾತಿ ನಿಯಮಗಳಲ್ಲಿ ಸಡಿಲಕೆಯನ್ನು ಮಾಡಲಾಗಿದ್ದು, ಇನ್ನು ಮುಂದೆ ಅನಾಥರು ಸಹ ಸೇನೆಗೆ ಸೇರ್ಪಡೆಯಾಗಬಹುದು ಎಂದು ಸೇನಾ ಮುಖ್ಯಸ್ಥ "ಬಿಕ್ರಂ ಸಿಂಗ್" ಹೇಳಿದ್ದಾರೆ. ಸದ್ಯ ಸೇನೆಗೆ ಸೇರ ಬಯಸುವವರು ಹುಟ್ಟಿದ ದಿನಾಂಕ, ತಂದೆ, ತಾಯಿಯ ವಿವರಗಳನ್ನು ಒದಗಿಸಬೇಕು. ಆದರೆ ಅನಾಥರಿಗೆ ಅವರ ತಂದೆ ತಾಯಿ ಯಾರೆಂದು ತಿಳಿದೇ ಇರುವುದಿಲ್ಲ. ಆಗಾಗಿ ಈ ಅಂಶವನ್ನು ಮನದಲ್ಲಿಟ್ಟುಗೊಂಡು ನೇಮಕಾತಿ ನಿಯಮವನ್ನು ಸಡಿಲಗೊಳಿಸಲಾಗಿದೆ. ಆದ್ದರಿಂದ ಸೇನೆಯನ್ನು ಸೇರಲು ಇಚ್ಛಿಸುವ ಅನಾಥರು ಹುಟ್ಟಿದ ದಿನಾಂಕವಿರುವ ವಿದ್ಯಾರ್ಹತೆ ಪ್ರಮಾಣ ಪತ್ರವನ್ನು ನೀಡಿದರೆ ಸಾಕು.

- **ಹಿಮಾಚಲ ಪ್ರದೇಶ ರಾಜ್ಯ ವಿಧಾನಸಭೆಗೆ ಸುವರ್ಣ ಮಹೋತ್ಸವ ಸಂಭ್ರಮ**: ಮೇ 24, 2013 ರಂದು ಹಿಮಾಚಲ ಪ್ರದೇಶ ಅಸೆಂಬ್ಲಿ 50 ವರ್ಷ ಪೂರೈಸಿತು. ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ವಿಧಾನಸಭೆಯನ್ನು ಉದ್ದೇಶಿಸಿ ರಾಷ್ಟ್ರಪತಿಗಳಾದ ಪ್ರಣಭ್ ಮುಖರ್ಜಿ ರವರು ಶಿಮ್ಲಾದಲ್ಲಿ ಭಾಷಣ ಮಾಡಿದರು. 2004 ರಲ್ಲಿ ಅಂದಿನ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ರವರು ಸಹ ಹಿಮಾಚಲ ಪ್ರದೇಶ ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದ್ದರು.

- **ಕ್ರೀಡೆಗಳಲ್ಲಿ ಅಪ್ರಾಮಾಣಿಕ ನಡತೆ: ಶೀಘ್ರವೇ ಕಾನೂನು**: ಐಪಿಎಲ್ ಆರನೇ ಆವೃತ್ತಿಯಲ್ಲಿ ಸ್ಪಾಟ್ ಫಿಕ್ಸಿಂಗ್ ಮೋಸ ಆಟದಿಂದ ದಿಗ್ಭ್ರಮೆಗೊಂಡಿರುವ ಸರ್ಕಾರ ಕ್ರಿಕೆಟ್ ಸೇರಿದಂತೆ ಇತರೆ ಎಲ್ಲಾ ಕ್ರೀಡೆಗಳಲ್ಲಿ ಅಪ್ರಾಮಾಣಿಕ ನಡತೆಯನ್ನು ನಿಗ್ರಹಿಸಲು ಸೂಕ್ತ ಕಾನೂನು ಜಾರಿಗೊಳಿಸಲು ಸಿದ್ದತೆ ನಡೆಸಿದೆ. ಕ್ರೀಡೆಗಳಲ್ಲಿ ಮ್ಯಾಚ್ ಫಿಕ್ಸಿಂಗ್, ಸ್ಪಾಟ್ ಫಿಕ್ಸಿಂಗ್

ನಂತಹ ಪ್ರಕರಣಗಳ ವಿರುದ್ಧ ಹೋರಾಡಲು ಕಾನೂನು ಜಾರಿ ತರುವ ಸಲುವಾಗಿ ಅಟಾರ್ನಿ ಜನರಲ್ ಆದ ವಹನ್ವತಿ ರವರು ಈಗಾಗಲೇ ಸಲಹೆಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ.

- **NBSA ಅಧ್ಯಕ್ಷರಾಗಿ ರವೀಂದ್ರನ್ ನೇಮಕ**: ಬೆಂಗಳೂರು ಮೂಲದ ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ರವೀಂದ್ರನ್ ರವರನ್ನು "ವಾರ್ತಾ ಪ್ರಸಾರ ನಿಯಂತ್ರಣ ಪ್ರಾಧಿಕಾರ (NBSA) "ಯ ಅಧ್ಯಕ್ಷರಾಗಿ ನೇಮಕಮಾಡಲಾಗಿದೆ. ಈ ಮುಂಚೆ ಈ ಹುದ್ದೆಯನ್ನು ಅಲಂಕರಿಸಿದ್ದ ಜೆ.ಎಸ್.ವರ್ಮಾರವರು ನಿಧನರಾದ ಕಾರಣ ರವೀಂದ್ರನ್ ರವರನ್ನು ನೇಮಕ ಮಾಡಲಾಗಿದೆ. ವಾರ್ತಾ ವಾಚಕರ ಸಂಘದ ಕುಂದುಕೊರತೆಯನ್ನು ಆಲಿಸಲು NBSA ಯನ್ನು ಸ್ಥಾಪಿಸಲಾಗಿದೆ. ಪ್ರಖ್ಯಾತ ಟಿ.ವಿ ಚಾಲೆನ್ ಗಳ ಮಾಲೀಕರ ಇದರ ಸದಸ್ಯರಾಗಿರುತ್ತಾರೆ.

- **ಪ್ರಥಮ ಬಾರಿಗೆ ಚೀನಿ ಭಾಷೆಯಲ್ಲಿ ಮಹಾತ್ಮ ಗಾಂಧಿ ಪುಸ್ತಕ**: ಇದೇ ಮೊದಲ ಬಾರಿಗೆ ಗಾಂಧಿ ತತ್ವ ಕುರಿತಾದ ಪುಸ್ತಕವೊಂದು ಚೀನಿ (ಮಡರಿನ್) ಭಾಷೆಯಲ್ಲಿ ಪ್ರಕಟಗೊಂಡಿದ್ದು, ಚೀನಾದ ಪೆಕಿಂಗ್ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಬಿಡುಗಡೆಗೊಳಿಸಲಾಯಿತು. **"ಗಾಂಧಿ'ಸ್ ಔಟ್ ಸ್ಟಾಂಡಿಗ್ ಲೀಡರ್ ಷಿಪ್ (Gandhi's Outstanding Leadreship)"** ಎಂಬ ಪುಸ್ತಕವನ್ನು ಭಾರತದ ಮಾಜಿ ಚೀನಾ ರಾಯಭಾರಿ ಹಾಗೂ ಗಾಂಧಿವಾದಿ "ಪಾಸ್ಕಲ್ ಅಲನ್ ನಝುರೆತ್" ರವರು ಬರೆದಿದ್ದಾರೆ. ದಕ್ಷಿಣ ಚೀನಾ ವಿವಿಯ ಇತಿಹಾಸ ಪ್ರೊಫೆಸರ್ ಆಗಿರುವ "ಶಾಂಗ್ ಕ್ವನ್ಯು" ರವರು ಈ ಪುಸ್ತಕವನ್ನು ಚೀನಿ ಭಾಷೆಗೆ ಅನುವಾದಿಸಿದ್ದಾರೆ.

- **ಕಲಾಂ ಗೆ ಅಮೆರಿಕಾ ಬಾಹ್ಯಕಾಶ ಸೊಸೈಟಿ ಪ್ರಶಸ್ತಿ:** ಬಾಹ್ಯಕಾಶ ಕ್ಷೇತ್ರದಲ್ಲಿನ ಅಪಾರ ಸೇವೆಗಾಗಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ರವರಿಗೆ ಪ್ರತಿಷ್ಠಿತ "ವೆರ್ನರ್ ವೊನ್ ಬ್ರೌನ್" ಸ್ಮರಣಿಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಸ್ಯಾನ್ ಡಿಯೋಗದಲ್ಲಿ ನಡೆದ ಸಮಾರಂಭದಲ್ಲಿ ಕಲಾಂ ಅವರಿಗೆ ಈ ಪ್ರಶಸ್ತಿಯನ್ನು ಪ್ರಧಾನಮಾಡಲಾಯಿತು.

- **2019 ರ ವಿಶ್ವಕಪ್ ಕ್ರಿಕೆಟ್ ಅತಿಥ್ಯವಹಿಸಲಿರುವ ಇಂಗ್ಲೆಂಡ್ ಮತ್ತು ವೇಲ್ಸ್:** 2019 ರಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಅತಿಥ್ಯವನ್ನು ಇಂಗ್ಲೆಂಡ್ ಮತ್ತು ವೇಲ್ಸ್ ವಹಿಸಿಕೊಂಡಿವೆ. ಈ ಸಂಬಂಧ "ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ICC)" ಮತ್ತು ಇಂಗ್ಲೆಂಡ್ ಹಾಗೂ ವೇಲ್ಸ್ ಕ್ರಿಕೆಟ್ ಬೋರ್ಡ್ ನಡುವೆ ಅಧಿಕೃತ ಒಪ್ಪಂದಕ್ಕೆ ಸಹಿಹಾಕಲಾಗಿದೆ. ಸದ್ಯದ ಮಾಹಿತಿ ಪ್ರಕಾರ 10 ತಂಡಗಳು ವಿಶ್ವಕಪ್-2019 ರಲ್ಲಿ ಪಾಲ್ಗೊಳ್ಳಲಿದ್ದು, ಇಂಗ್ಲೆಂಡ್ ಮತ್ತು ವೇಲ್ಸ್ನ 10 ಸ್ಥಳಗಳಲ್ಲಿ ಪಂದ್ಯಗಳು ನಡೆಯಲಿವೆ.

- **ಎದೆಹಾಲು ಉಣಿಸುವುದರಿಂದ ಅಧಿಕ ರಕ್ತದೊತ್ತಡಕ್ಕೆ ಕಡಿವಾಣ**: ಎದೆಹಾಲು ಉಣಿಸುವುದರಿಂದ ಮಹಿಳೆಯರಲ್ಲಿ ಅಧಿಕ ರಕ್ತದೊತ್ತಡದ ಸಮಸ್ಯೆಯನ್ನು ನಿಯಂತ್ರಣಕ್ಕೆ ತರಬಹುದು ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. "ಸಿಡ್ನಿ ಸ್ಕೂಲ್ ಆಫ್ ಮೆಡಿಸಿನ್ "ವಿವಿಯ ಸಂಶೋಧಕ ನಡೆಸಿರುವ ಸಂಶೋಧನೆಯಲ್ಲಿ ಈ ಮಾಹಿತಿ ಬೆಳಕಿಗೆ ಬಂದಿದೆ.

ದೀರ್ಘಕಾಲ ಎದೆಹಾಲನ್ನು ಉಣಿಸಿದರೆ ಅಷ್ಟೇ ಪ್ರಮಾಣದಲ್ಲಿ ಅಧಿಕ ರಕ್ತದೊತ್ತಡ ಇಳಿಕೆಯಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ. 45 ವರ್ಷ ಮೇಲ್ಪಟ್ಟ 75000ಕ್ಕೂ ಅಧಿಕ ಮಹಿಳೆಯರನ್ನು ಸಂಶೋದನೆಗೆ ಒಳಪಡಿಸಲಾಗಿದ್ದು, ಎದೆಹಾಲು ಉಣಿಸುವುದರಿಂದ ಅಧಿಕ ರಕ್ತದೊತ್ತಡ ಕಡಿಮೆಯಾಗಲಿದೆ ಎಂದು ಧೃಡಪಟ್ಟಿದೆ.

- **ಭಲೇಶ್ವರ್ ಅಗರವಾಲ್ ನಿಧನ**: ಹಿರಿಯ ಪತ್ರಕರ್ತ ಹಾಗೂ ಅಂತರರಾಷ್ಟ್ರೀಯ ಸಹಯೋಗ್ ಪರಿಷದ್ ನ ಸೆಕ್ರಟರಿ ಜನರಲ್ ಆಗಿದ್ದ ಭಲೇಶ್ವರ್ ಅಗರವಾಲ್ ರವರು ಕೊನೆಯುಸಿರೆಳೆದರು. 1921 ರಲ್ಲಿ ಬಾಲಸೋರ್ ನಲ್ಲಿ ಜನಿಸಿದ ಅಗರವಾಲ್ ರವರು "ಹಿಂದೂಸ್ತಾನ್ ಸಮಾಚರ್" ಪ್ರತಿಕೆಯ ಸಂಪಾದಕರಾಗಿ ಬಹು ಕಾಲ ಸೇವೆ ಸಲ್ಲಿಸಿದ್ದರು.

- **"ನೆಸ್ಲೆ ಇಂಡಿಯಾ (Nestle India)" MD ಆಗಿ "ಬೆನೆಟ್"**: ನೆಸ್ಲೆ ಇಂಡಿಯಾದ ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ "ಇಟಿನ್ನೆ ಬೆನೆಟ್" ರವರನ್ನು ನೇಮಕ ಮಾಡಿರುವುದಾಗಿ ಕಂಪನಿ ತಿಳಿಸಿದ. ಬೆನೆಟ್ ರವರು "ಅಂಟೋನಿಯೊ ಹೆಲಿಯೊ ವಾಝಿಕ್" ರವರ ಉತ್ತರಾಧಿಕಾರಿಯಾಗಿ ಅಕ್ಟೋಬರ್ 1, 2013 ರಿಂದ ಅಧಿಕಾರ ವಹಿಸಿಕೊಳ್ಳಿದ್ದಾರೆ.

- **ಹಿಲರಿ ಕ್ಲಿಂಟನ್ ಗೆ ಪ್ರಶಸ್ತಿ**: ಅಮೆರಿಕಾದ ಮಾಜಿ ವಿದೇಶಾಂಗ ಕಾರ್ಯದರ್ಶಿ "ಹಿಲರಿ ಕ್ಲಿಂಟನ್" ರವರಿಗೆ ಹೆಲ್ಲೆನ್ ಕೆಲ್ಲೆನ್ ಇಂಟರ್ ನ್ಯಾಷನಲ್ ಸಂಸ್ಥೆ ನೀಡುವ "ಹೆಲ್ಲೆನ್ ಕೆಲ್ಲರ್ ಹ್ಯೂಮನೇಟರಿಯನ್" ಪ್ರಶಸ್ತಿಯನ್ನು ನೀಡಲಾಗಿದೆ.

- **ತಂಜಾವೂರಿನಲ್ಲಿ ಸುಖೋಯ್ ವಾಯುನೆಲೆ ಉದ್ಘಾಟನೆ:** ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ಯುದ್ದವಿಮಾನಗಳ ವಾಯುನೆಲೆಯನ್ನು "ತಮಿಳುನಾಡಿನ ತಂಜಾವೂರಿ"ನಲ್ಲಿ ರಕ್ಷಣಾ ಸಚಿವ ಎ.ಕೆ.ಆಂಟೋನಿ ರವರು ಉದ್ಘಾಟಿಸಿದರು. ಈ ವಾಯುನೆಲೆಯಲ್ಲಿ ಭಾರತೀಯ ವಾಯುಪಡೆಯ ಸುಖೋಯ್-30ಎಂಕೆಐ ಯುದ್ದವಿಮಾನಗಳನ್ನು ನೆಲೆಗೊಳಿಸಲಾಗುವುದು.

- **ಸ್ಪೋಟದ ಹಂತದಲ್ಲಿ "ಕೊಪಹು ಜ್ವಾಲಾಮುಖಿ (Copahue Volcano)" :** ಅರ್ಜೈಂಟೇನಾ ಮತ್ತು ಚಿಲಿ ಗಡಿಯ ದಕ್ಷಿಣ ಭಾಗದಲ್ಲಿರುವ "ಕೊಪಹು ಜ್ವಾಲಾಮುಖಿ" ಸ್ಪೋಟಗೊಳ್ಳುವ ಮುನ್ಸೂಚನೆ ದೊರೆತಿದ್ದು, ಮುಂಜಾಗ್ರತೆಯ ದೃಷ್ಟಿಯಿಂದ ಅರ್ಜೈಂಟೇನಾ ಮತ್ತು ಚಿಲಿಯ 3000ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಗೊಳಿಸಲು ಆದೇಶ ಹೊರಡಿಸಲಾಗಿದೆ. ಆಂಡೀಸ್ ಕಾರ್ಡಿಲ್ಲೆರ ಪರ್ವತದ ತುದಿಯಲ್ಲಿ ಸುಮಾರು 1000 ಅಡಿ ಎತ್ತರದಲ್ಲಿರುವ ಈ ಜ್ವಾಲಾಮುಖಿ ಅತ್ಯಂತ ಕ್ರಿಯಾಶೀಲ ಜ್ವಾಲಾಮುಖಿ ಎನಿಸಿದೆ.

- **ಸ್ಯಾಮಸಂಗ್ ನಿಂದ ಗೆಲಾಕ್ಸಿ ಮೆಗಾ ಬಿಡುಗಡೆ:** ಕೊರಿಯಾ ಮೂಲದ ಮೊಬೈಲ್ ತಯಾರಿಕಾ ಸಂಸ್ಥೆ "ಸ್ಯಾಮಸಂಗ್" ಗೆಲಾಕ್ಸಿ ಸರಣಿಯ ಹೊಸ ಮೊಬೈಲ್ ಮಾಡೆಲ್ "ಗೆಲಾಕ್ಸಿ ಮೆಗಾ"ವನ್ನು ಬಿಡುಗಡೆಗೊಳಿಸಿದೆ. ಗೆಲಾಕ್ಸಿ ಮೆಗಾ ಎರಡು ವಿಧದಲ್ಲಿ ದೊರೆಯಲ್ಲಿದ್ದು ಭಾರತದಲ್ಲಿ ಇವುಗಳ ಬೆಲೆ ರೂ 25100 ಹಾಗೂ ರೂ 31490 ಎನ್ನಲಾಗಿದೆ. ಆಂಡ್ರಾಯಿಡ್

ಜೆಲ್ಲಿ ಬೀನ್ ಆಪರೇಟಿಂಗ್ ಸಿಸ್ಟಮ್, 8 ಮೆಗಾ ಪಿಕ್ಸೆಲ್ ಕ್ಯಾಮೆರಾ ಸೇರಿದಂತೆ ಮುಂತಾದ ಆಕರ್ಷಣೆಗಳನ್ನು ಮೊಬೈಲ್ ಹೊಂದಿದೆ.

- **ಬಿಜೆಪಿ ಯಿಂದ ಜೇಠ್ಮಲಾನಿ ಉಚ್ಛಾಟನೆ**: ರಾಜ್ಯ ಸಭಾ ಸದಸ್ಯ ಹಾಗೂ ಹಿರಿಯ ವಕೀಲ "ರಾಮ್ ಜೇಠ್ಮಲಾನಿ" ರವರನ್ನು "ಶಿಸ್ತು ಉಲ್ಲಂಘನೆ" ಕಾರಣ ಭಾರತೀಯ ಜನತಾ ಪಾರ್ಟಿ ಆರು ವರ್ಷಗಳ ಕಾಲ ಪಕ್ಷದ ಪ್ರಾಥಮಿಕ ಸ್ಥಾನದಿಂದ ಉಚ್ಛಾಟನೆ ಮಾಡಿದೆ.

- **ಎವರೆಸ್ಟ್ ಮೇಲೆ ಮೊದಲ ಹೆಜ್ಜೆಗೆ 60 ವರ್ಷ:** ಗಗನವನ್ನು ಚುಂಬಿಸುವಂತೆ ಭಾಸವಾಗುವ, ಎಂತಹ ಗಟ್ಟಿವಂತರನ್ನು ಗುಂಡಿಗೆಯನ್ನು ನೀರಾಗಿಸುವ ಎವರೆಸ್ಟ್ ಶಿಖರವನ್ನು ಮಾನವ ಏರಿ ಸಾಧನೆಗೈದ ಅದ್ಭುತ ಕ್ಷಣಕ್ಕೆ ಮೇ 29, 2013 ರಂದು 60 ವರ್ಷ ತುಂಬಿತು. 1953 ಮೇ 29 ರಂದು ಪರ್ವತಾರೋಹಿಗಳಾದ ನೇಪಾಳದ ತೇನ್ಸಿಂಗ್ ನೋರ್ಗೆ ಮತ್ತು ನ್ಯೂಜಿಲ್ಯಾಂಡ್ ನ ಎಡ್ಮಂಡ್ ಹಿಲರಿ ರವರು ಮೊದಲ ಬಾರಿಗೆ ಎವರೆಸ್ಟ್ ನ್ನು ಏರಿ ದಾಖಲೆ ಬರೆದಿದ್ದರು. 1960, ಮೇ 20 ರಂದು ಭಾರತೀಯ ಸೇನೆಯ ಅವತಾರ್ ಸಿಂಗ್ ಚೀಮಾ ರವರು ಎವರೆಸ್ಟ್ ಏರಿದ ಮೊದಲ ಭಾರತೀಯ ಎಂಬ ಹಿರಿಮೆಗೆ ಪಾತ್ರರಾದರು. 1984 ರಲ್ಲಿ ಬಚೇಂದ್ರಿಪಾಲ್ ರವರು ಎವರೆಸ್ಟ್ ಏರಿದ ಮೊದಲ ಭಾರತೀಯ ಮಹಿಳೆ ಎನಿಸಿದರು.

- **ವೇಟ್ ಲಿಫ್ಟಿಂಗ್: ಜಮ್ ಜಂಗ್ ಗೆ ಮೂರು ಪದಕ**: ದೋಹಾದಲ್ಲಿ ನಡೆಯುತ್ತಿರುವ 15 ನೇ ಏಷ್ಯಾ ಯುವ ವೇಟ್ ಲಿಫ್ಟಿಂಗ್ ಚಾಂಪಿಯನ್ ಷಿಪ್ ನಲ್ಲಿ ಭಾರತದ "ಜಮ್ ಜಂಗ್ ದೆರು" ರವರು ಬಾಲಕರ 50 ಕೆ.ಜಿ ವಿಭಾಗದಲ್ಲಿ ಮೂರು ಪದಕ ಗೆದ್ದರು.

- **ಜಾರ್ಖಂಡ್ ನಲ್ಲಿ ಭೂಮಿ ಮಾರಾಟಕ್ಕೆ ಆಧಾರ್ ಕಡ್ಡಾಯ:** ಜಾರ್ಖಂಡ್ ನಲ್ಲಿ ಭೂಮಿ ಮಾರಾಟ ಮತ್ತು ಕೊಳ್ಳುವಿಕೆಗೆ ಆಧಾರ್ ಕಾರ್ಡ್ ನ್ನು ಕಡ್ಡಾಯಗೊಳಿಸಲಾಗಿಸುವಂತೆ ಆದೇಶವನ್ನು ಹೊರಡಿಸಲಾಗಿದೆ. ಜನವರಿ 1 ರಿಂದ ಈ ಆದೇಶ ಜಾರಿಗೆ ಬರಲಿದ್ದು, ಭೂಮಿ ಮಾರಾಟ ಮತ್ತು ಕೊಳ್ಳುವಿಕೆಗೆ ಆಧಾರ್ ಕಾರ್ಡನ್ನು ಕಡ್ಡಾಯವಾಗಿ ಹೊಂದಿರಬೇಕು.

- **ಜರೋಮನ್ ಕಿಮುರಾ:** ಜಪಾನ್ ನ ಜಿರೋಮನ್ ಕಿಮುರಾ (116) ರವರು ಇತ್ತೀಚೆಗಷ್ಟೇ ವಿಶ್ವದ ಅತ್ಯಂತ ಹಿರಿಯ ವ್ಯಕ್ತಿ ಎನಿಸಿದರು. ಇದರ ಜೊತೆಗೆ ಅವರೀಗ 19 ನೇ ಶತಮಾನದಲ್ಲಿ ಹುಟ್ಟಿ ಈಗಲೂ ಬದುಕಿರುವ ವಿಶ್ವದ ಏಕೈಕ ಪುರುಷ ಸಹ ಆಗಿದ್ದಾರೆ. ಕಳೆದ ವರ್ಷ ಬಾರ್ಬಡೋಸ್ ಎಮ್ಯಾನುಯೆಲ್ ಎಂಬ 113 ವರ್ಷದ ವೃದ್ಧ ನಿಧನರಾಗಿದ್ದರು. ಆ ಬಳಿಕ ಅಧಿಕೃತ ದಾಖಲೆಗಳ ಪ್ರಕಾರ ಯಾರೂ 11 ವರ್ಷಕ್ಕಿಂತ ಹೆಚ್ಚಿನ ಕಾಲ ಬದುಕಿ ಉಳಿದವರು ದಾಖಲಾಗಿಲ್ಲ. ಹೀಗಾಗಿ 1897 ಏ.19 ರಂದು, 19ನೇ ಶತಮಾನದಲ್ಲಿ ಹುಟ್ಟಿ ಬದುಕಿರುವ ಏಕೈಕ ಪುರುಷ ಕಿಮುರಾ.

- **IPL ಸ್ಪಾಟ್ ಫಿಕ್ಸಿಂಗ್: BCCI ನಿಂದ ಸಮಿತಿ ರಚನೆ**: ಐಪಿಎಲ್ ಆರನೇ ಆವೃತ್ತಿಯಲ್ಲಿ ಸ್ಪಾಟ್ ಫಿಕ್ಸಿಂಗ್ ನಲ್ಲಿ ಭಾಗಿಯಾಗಿರುವ ರಾಜಸ್ತಾನ ರಾಯಲ್ಸ್ ನ ಮೂರು ಆಟಗಾರರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನ ಸಿಇಒ ಗುರುನಾಥ್ ಮೆಯಪ್ಪನ್ ವಿರುದ್ಧ ತನಿಖೆ ನಡೆಸಿ ವರದಿ ಸಲ್ಲಿಸುವ ಸಲುವಾಗಿ ಬಿಸಿಸಿಐ ಮೂರು ಜನರ ಸಮಿತಿಯನ್ನು ರಚಿಸಿದೆ. ಕರ್ನಾಟಕ ಮತ್ತು ತಮಿಳುನಾಡು ಹೈಕೋರ್ಟ್ ನ ಮಾಜಿ ನ್ಯಾಯಾಧೀಶರಾದ ಜಯರಾಮ್ ಚೌಟ, ಆರ್.ಬಾಲಸುಬ್ರಮಣ್ಯಂ ಹಾಗೂ ಬಿಸಿಸಿಐ ನ ಸೆಕ್ರಟೆರಿ ಸಂಜಯ್ ಜಗದಾಳೆ ರವರನ್ನು ಸಮಿತಿ ಒಳಗೊಂಡಿದೆ.

- **ಅನನ್ಯ ಗುಪ್ತಾಗೆ ಕಂಚು:** ಗ್ರೀಸ್ ನ ಹಲ್ಡಿಕ್ಕಿಯಲ್ಲಿ ನಡೆದ "ವಿಶ್ವ ಶಾಲಾ ಚೆಸ್ ಚಾಂಪಿಯನ್ ಷಿಪ್" ನಲ್ಲಿ ಒಂಭತ್ತರ ಹರೆಯದ ಬಾಲಕಿ ಅನನ್ಯ ಗುಪ್ತಾ ಕಂಚಿನ ಪದಕ ಗೆದ್ದುಕೊಂಡರು. ಅನನ್ಯರವರು ಫ್ರಾನ್ಸ್ ನ ಯೋನ್ನೈ ಬೆಲ್ಲೈನ್ ಅವರನ್ನು ಸೋಲಿಸಿ ಪದಕವನ್ನು ಗೆದ್ದುಕೊಂಡರು.

- **ಕೋಲಾರ ನರಸಾಪುರದಲ್ಲಿ ಹೋಂಡಾ ಘಟಕ ಆರಂಭ:** ದೇಶದ ಪ್ರಮುಖ ದ್ವಿಚಕ್ರ ವಾಹನ ತಯಾರಿಕ ಕಂಪನಿಯಾದ "ಹೋಂಡಾ ಮೋಟಾರ್ ಸೈಕಲ್ ಅಂಡ್ ಸ್ಕೂಟರ್ ಇಂಡಿಯಾ" ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಿರುವ ಮೂರನೇ ತಯಾರಿಕಾ ಘಟಕವನ್ನು ಲೋಕಾರ್ಪಣೆ ಮಾಡಿತು. ದಕ್ಷಿಣ ಭಾರತದಲ್ಲಿ ಕಂಪನಿಯ ಮೊದಲ ತಯಾರಿಕ ಘಟಕ ಎನಿಸಿರುವ ಇದನ್ನು ರೂ 1,350 ಕೋಟಿ ಬಂಡವಾಳ ಹೂಡಿಕೆಯಲ್ಲಿ ಸ್ಥಾಪಿಸಲಾಗಿದೆ. ವಾರ್ಷಿಕ 12 ಲಕ್ಷ ವಾಹನಗಳನ್ನು ತಯಾರಿಸುವ ಸಾಮರ್ಥ್ಯವನ್ನು ಘಟಕ ಹೊಂದಿದೆ.

- **ಕರ್ನಾಟಕದಲ್ಲಿ ಗುಟ್ಕಾ ನಿಷೇಧ**: ಗುಟ್ಕಾ ಮತ್ತು ಪಾನ್ ಮಸಾಲ ಮುಂತಾದ ತಂಬಾಕು ಉತ್ಪನ್ನಗಳ ಉತ್ಪಾದನೆ ಹಾಗೂ ಮಾರಾಟದ ಮೇಲೆ ಕರ್ನಾಟಕ ಸರ್ಕಾರ ನಿಷೇಧ ಹೇರಿದೆ. ವಿಶ್ವ ತಂಬಾಕು ದಿನದ ಅಂಗವಾಗಿ ಈ ಮಹತ್ವದ ನಿರ್ಣಯವನ್ನು ಕೈಗೊಂಡಿದ್ದು, ತಂಬಾಕು ಮತ್ತು ಅದರ ಉತ್ಪನ್ನಗಳ ಮೇಲೆ ನಿಷೇಧ ಹೇರಿರುವ ಇತರೆ ರಾಜ್ಯಗಳ ಸಾಲಿಗೆ ಕರ್ನಾಟಕವೂ ಸೇರಿದಂತಾಗಿದೆ.

- **ಮನಮೋಹನ್ ಸಿಂಗ್ ರಾಜ್ಯಸಭೆಗೆ ಪುನರಾಯ್ಕೆ:** ಪ್ರಧಾನಿ ಮನಮೋಹನ್ ಸಿಂಗ್ ರವರು ಸತತ ಐದನೇ ಬಾರಿಗೆ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. 126 ಸದಸ್ಯರಿರುವ ಅಸ್ಸಾಂ ವಿಧಾನಸಭೆಯಲ್ಲಿ ಸಿಂಗ್ ಅವರು ಪ್ರಾಶಸ್ತ್ಯದ 49 ಮತಗಳನ್ನು ಪಡೆದರು.

- **ಸಿಡ್ನಿಯಲ್ಲಿ "ಪ್ರವಾಸಿ ಭಾರತೀಯ ದಿವಸ್":** ಪ್ರಾದೇಶಿಕ ಭಾರತೀಯ ಪ್ರವಾಸಿ ದಿವಸ್-2013 ರನ್ನು ಈ ಬಾರಿ ನವೆಂಬರ್ 11 ರಂದು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಆಯೋಜಿಸಲಾಗುವುದೆಂದು ಸಾಗರೋತ್ತರ ಸಚಿವ "ವಯಲಾರ್ ರವಿ" ಹೇಳಿದ್ದಾರೆ. ಭಾರತೀಯ ಸಮುದಾಯವರು ಸಿಡ್ನಿಯಲ್ಲಿ ಅಧಿಕ ಪ್ರಮಾಣದಲ್ಲಿದ್ದು, ಸಾಗರೋತ್ತರ ಭಾರತೀಯರನ್ನು ಒಂದುಗೂಡಿಸುವ ಸಲುವಾಗಿ ಸಿಡ್ನಿ ಅತಿಥ್ಯವಹಿಸಲಿದೆ.